ಮಂಗಳವಾರ, ಸೆಪ್ಟೆಂಬರ್ 6, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 247 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಕಾಯಿಲೆ ಮರೆಯಾದ ಮೇಲೆಯೂ ನಾವು ಚೇತರಿಸಿಕೊಳ್ಳಲು ಸ್ವಲ್ಪ ಸಮಯ ಬೇಕಾಗುತ್ತದೆ. ಈ ಅವಧಿಯಲ್ಲಿ ಕಾಳಜಿ ವಹಿಸುವುದು ಅತ್ಯಗತ್ಯ.

ಸಂಚೈ-ಸುದ್ದಿ: ರಸ್ತೆ ಅಪಘಾತಗಳಲ್ಲಿ ಸಾವು ದ್ವಿಚಕ್ರವಾಹನಗಳ ಸವಾರರೇ ಹೆಚ್ಚು ಬಲಿ
‘ಲೈಂಗಿಕ ದೌರ್ಜನ್ಯ: ಧರ್ಮಾತೀತ ಹೋರಾಟ ಅಗತ್ಯ’ 7
ಚಿತ್ರದುರ್ಗ ಕಾರಾಗೃಹಕ್ಕೆ ಮುರುಘಾಶ್ರೀ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,246	17,665	₹52,360 (ಬೆಂಗಳೂರು)	₹54,300 (ಬೆಂಗಳೂರು)	79.78

PARISHRAMA NEET ACADEMY
2020 88 Medical Seats out of 130 Students 2021 220 Medical Seats out of 240 Students
ಪರಿಶ್ರಮ ನೀಟ್ ಅಕಾಡೆಮಿ
ಈ ಉತ್ತರಗಳ ಆಧಾರದ ಮೇಲೆ, 2022ರಲ್ಲಿ 600ಕ್ಕೂ ಹೆಚ್ಚು
ಪರಿಶ್ರಮ ವಿದ್ಯಾರ್ಥಿಗಳು ವೈದ್ಯಕೀಯ ಕಾಲೇಜಿಗೆ ಪ್ರವೇಶ ಪಡೆಯಲಿದ್ದಾರೆ.
ಕರ್ನಾಟಕದ ನೀಟ್ ಫಲಿತಾಂಶದ ಇತಿಹಾಸದಲ್ಲೇ ಒಂದು ಹೊಸ ಮೈಲುಗಲ್ಲು
ಪ್ರದೀಪ್ ಈಶ್ವರ್ ಅವರ ಸಾರಥ್ಯದಲ್ಲಿ
ADMISSIONS OPEN
080 4591 2222 www.parishramaneetacademy.com
Visit us!

ಮುಳುಗಿದ ಬೆಂಗಳೂರು ‘ಪೂರ್ವ’

ವಲಸೆ ಕಾರ್ಮಿಕರ ದಯನೀಯ ಸ್ಥಿತಿ: ಕುಡಿಯುವ ನೀರಿಗೂ ಪರದಾಟ • ಜನರ ರಕ್ಷಣೆಗೆ ಬೋಟ್, ಟ್ರ್ಯಾಕ್ಟರ್ ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ವಾರದಿಂದ ಸುರಿಯುತ್ತಲೇ ಇರುವ ಮಳೆಯಿಂದಾಗಿ ಬೆಂಗಳೂರು ಪೂರ್ವ ವಲಯ ಬಹುತೇಕ ಮುಳುಗಿದ್ದು, ಭಾನುವಾರ ಮತ್ತು ಸೋಮವಾರ ರಾತ್ರಿ ಎಡಬಿಡದೇ ಬೋರ್ಗರೆದ ಮಳೆಯಿಂದಾಗಿ ಈ ಭಾಗದ ಜನ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಪ್ರವಾಹ ರೂಪದಲ್ಲಿ ಹರಿಯುತ್ತಿರುವ ನೀರಿನಿಂದ ರಸ್ತೆ, ಬಡಾವಣೆಗಳು ತುಂಬಿಹೋಗಿದ್ದು, ಜನ ಜೀವನ ದುಸ್ತರಗೊಂಡಿದೆ. ವಲಸೆ ಕಾರ್ಮಿಕರು ಸಾಲುಸಾಲಾಗಿ ಕಟ್ಟಿಕೊಂಡಿರುವ ತಾತ್ಕಾಲಿಕ ಶೆಡ್‌ಗಳ ತಲೆ ಎತ್ತರಕ್ಕೆ ನೀರು ನಿಂತಿದೆ. ಅಲ್ಲಿಂದ ಹೊರಬರಲೂ ಆಗದೇ ಉಳಿದುಕೊಳ್ಳಲೂ ಆಗದ ಪರಿಸ್ಥಿತಿಯಲ್ಲಿರುವ ಈ ಕಾರ್ಮಿಕ ಸಮುದಾಯ, ಕುಡಿಯುವ ನೀರು, ಊಟಕ್ಕೂ ಪರದಾಡುವ ದಯನೀಯ ಪರಿಸ್ಥಿತಿ ಸೃಷ್ಟಿಯಾಗಿದೆ.

ರಸ್ತೆಗಳಲ್ಲಿ ವಾಹನಗಳು ಎಲ್ಲೆಂದರೆ ಅಲ್ಲಿ ಕೆಟ್ಟು ನಿಂತಿದ್ದು, ಬಡಾವಣೆಗಳಲ್ಲಿ ಜನ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹೋಗಲು ಟ್ರ್ಯಾಕ್ಟರ್, ರಬ್ಬರ್ ಬೋಟ್ ಬಳಸಬೇಕಾದ ಅನಿವಾರ್ಯ ಎದುರಾಗಿದೆ. ಪೂರ್ವ ಭಾಗದ ಸರ್ಜಾಪುರ ರಸ್ತೆಯಲ್ಲಿರುವ ರೈನ್‌ಬೊ ಡ್ರೈವ್, ಸನ್ನಿ ಬ್ರೂಕ್ಸ್, ಕಂಟ್ರಿ ಸೈಡ್ ಐಷಾರಾಮಿ ಬಡಾವಣೆಗಳಲ್ಲಿದ್ದ ನಾಗರಿಕರನ್ನು ಬಿಬಿಎಂಪಿ, ಅಗ್ನಿಶಾಮಕ ದಳ, ರಾಜ್ಯ ವಿಪತ್ತು ನಿರ್ವಹಣ ದಳದ ವತಿಯಿಂದ ಟ್ರ್ಯಾಕ್ಟರ್ ಹಾಗೂ ಬೋಟ್‌ಗಳ ಸಹಾಯದಿಂದ ಹೊರ ತರಲಾಗಿದೆ. ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ಖರೀದಿಸಿದ ಮನೆಗಳಿಂದ ದೂರವಾಗುವ ಪರಿಸ್ಥಿತಿ ಇಲ್ಲಿದೆ.

ಬೆಂಗಳೂರಿನ ಯಮಲೂರು ಕೆರೆ ಸೋಮವಾರ ಕೋಡಿ ಹರಿದು ರಾಜಕಾಲುವೆ ಉಕ್ಕಿದ ಪರಿಣಾಮ ಮಾರತಹಳ್ಳಿ ಮುಖ್ಯರಸ್ತೆಯಿಂದ ಯಮಲೂರುವರೆಗಿನ ರಸ್ತೆಯಲ್ಲಿ ಹರಿಯುತ್ತಿದ್ದ ನೀರಿನ ಮಧ್ಯೆಯೇ ಟ್ರ್ಯಾಕ್ಟರ್‌ನಲ್ಲಿ ಜನರನ್ನು ಕರೆದೊಯ್ಯಲಾಯಿತು —ಪ್ರಜಾವಾಣಿ ಚಿತ್ರ/ರಂಜು ಪಿ.

4ನೇ ಪುಟ ನೋಡಿ
ಟಿ.ಜಿ. ಹಳ್ಳಿ ಜಲಾಶಯ ಭರ್ತಿ 3A

‘ಮಾತನಾಡಲು ಕಮಿಷನ್ ಕೊಡಬೇಕಾ?’

ಬೆಂಗಳೂರಿನ ನಗರ ಪ್ರತಿನಿಧಿಸುವ 7 ಸಚಿವರು ಜಟ್ಕಾ ಕಟ್- ಹಲಾಲ್ ಕಟ್ ವಿಚಾರ ಮಾತನಾಡಲು ಓಡೋಡಿ ಬರ್ತಾರೆ. ಸಾವರ್ಕರ್ ವಿಚಾರ ಮಾತಾಡಲು ಮುನ್ನುಗ್ಗುತ್ತಾರೆ. ಆದರೆ, ರಾಜಧಾನಿಯ ಮಳೆ ಅವಾಂತರಕ್ಕೆ ಮಾತ್ರ ಬಾಯಿ ಬಿಡದೆ ಬಿಲ ಸೇರಿಕೊಂಡಿದ್ದೇಕೆ? ಎಂದು ಕಾಂಗ್ರೆಸ್ ಕುಟುಕಿದೆ.

‘ಬೆಂಗಳೂರಿನ ಬಗ್ಗೆ ಮಾತನಾಡಲೂ ಸಹ ಸಚಿವರಿಗೆ ಶೇ 40 ಕಮಿಷನ್ ಕೊಡಬೇಕೆ?’ ಎಂದೂ ಟ್ವಿಟರ್‌ನಲ್ಲಿ ಪ್ರಶ್ನಿಸಿದೆ. ‘ನರೇಂದ್ರ ಮೋದಿ ಅವರು ಮಂಗಳೂರಿನಲ್ಲಿ ನಿಂತು ಡಬಲ್ ಎಂಜಿನ್ ಅಭಿವೃದ್ಧಿಯಾಗುತ್ತಿದೆ ಎಂದಿದ್ದು ಇದೇನಾ ಬಸವರಾಜ ಬೊಮ್ಮಾಯಿಯವರೇ? ರಸ್ತೆ ಮೇಲೆ ನೀರು, ನೀರಿನೊಳಗೆ ರಸ್ತೆಯ ಗುಂಡಿ, ಬೆಂಗಳೂರಲ್ಲಿ ಸಂಚರಿಸುವ ವಾಹನಗಳಿಗೆ ಸಿಂಗಲ್ ಎಂಜಿನ್ ಸಾಲದು, ಡಬಲ್ ಎಂಜಿನ್‌ಗಳೇ ಬೇಕು! ಇದೇ ಬಿಜೆಪಿಯ ಡಬಲ್ ಎಂಜಿನ್ ಅಭಿವೃದ್ಧಿ’ ಎಂದು ಕಾಂಗ್ರೆಸ್ ವ್ಯಂಗ್ಯವಾಡಿದೆ.‘ಇರುವ ಒಂದು ಬೆಂಗಳೂರನ್ನೇ ಸಮರ್ಪಕವಾಗಿ ನಿರ್ವಹಿಸಲಾಗದವರಿಗೆ 6 ಹೊಸ ನಗರವನ್ನು ನಿರ್ಮಿಸುವ ಯೋಗ್ಯತೆ ಇದೆಯೇ? ಗುರುವಿಗೆ ತಕ್ಕ ಶಿಷ್ಯ ಎಂಬಂತೆ ಮೋದಿಯವರ ರೀತಿ ಬೊಮ್ಮಾಯಿಯವರೂ ಸುಳ್ಳು ಹೇಳುವುದನ್ನು ಚೆನ್ನಾಗಿ ಕಲಿತಿದ್ದಾರೆ’ ಎಂದಿದೆ.

ಇಂದು ನೀರು ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು: ಕಾವೇರಿ ಜಲಾನಯದ ಪ್ರದೇಶದಲ್ಲಿ ವ್ಯಾಪಕ ಮಳೆಯಾಗಿದ್ದರಿಂದ ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡುವ ಜಲ ಮಂಡಳಿಯ ಟಿ. ಕೆ.ಹಳ್ಳಿ ಘಟಕಕ್ಕೆ ನೀರು ನುಗ್ಗಿದ್ದು, ಯಂತ್ರಗಳು ಮುಳುಗಡೆಯಾಗಿವೆ. ಇದರಿಂದ, ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಇದೇ 6ರಂದು ನಗರದ ಹಲವು ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಹಲಗೂರು ಬಳಿ ಇರುವ ಟಿ.ಕೆ. ಹಳ್ಳಿಯಲ್ಲಿರುವ ಈ ಘಟಕಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬೆಂಗಳೂರು ಜಲ ಮಂಡಳಿ ಅಧ್ಯಕ್ಷರು, ಎಂಜಿನಿಯರ್‌ಗಳು ಹಾಗೂ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳು ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು.

ಇನ್ನಷ್ಟು ಸುದ್ದಿಗಳು 3A,3B,4

ಪಿಎಸ್‌ಐ ನೌಕರಿ ಕೊಡಿಸುವ ಭರವಸೆ

₹15 ಲಕ್ಷ ಪಡೆದ ಬಿಜೆಪಿ ಶಾಸಕ?

ಪ್ರಜಾವಾಣಿ ವಾರ್ತೆ

ಕೊಪ್ಪಳ: ‘ಪಿಎಸ್‌ಐ ನೌಕರಿ ಕೊಡಿಸುವುದಾಗಿ ಹೇಳಿ ನಿವೃತ್ತ ಕಾನ್‌ಸ್ಟೆಬಲ್ ಒಬ್ಬರಿಂದ ₹ 15 ಲಕ್ಷ ಪಡೆದಿದ್ದಾರೆ’ ಎಂದು ಜಿಲ್ಲೆಯ ಕನಕಗಿರಿ ಕ್ಷೇತ್ರದ ಬಿಜೆಪಿ ಶಾಸಕ ಬಸವರಾಜ ದಢೇಸಗೂರು ವಿರುದ್ಧ ಆರೋಪ ಕೇಳಿಬಂದಿದೆ.

ಬಸವರಾಜ ದಢೇಸಗೂರು

ಕಾನ್‌ಸ್ಟೆಬಲ್ ಹುದ್ದೆಯಿಂದ ಸ್ವಯಂ ನಿವೃತ್ತಿ ಪಡೆದಿರುವ ಕುಷ್ಟಗಿ ತಾಲ್ಲೂಕಿನ ಬೇಗೂರು ಗ್ರಾಮದ ಪರಸಪ್ಪ ಮತ್ತು ದಢೇಸಗೂರು ನಡುವಿನ ಸಂಭಾಷಣೆಯು ಸೋಮವಾರ ವೈರಲ್ ಆಗಿದೆ. ಆಡಿಯೊ ವೈರಲ್ ಆಗುತ್ತಿದ್ದಂತೆ ಪರಸಪ್ಪ ಅವರ ಮೊಬೈಲ್ ಸ್ವಿಚ್ ಆಫ್ ಆಗಿದೆ.

ಶಾಸಕರಿಗೆ ಫೋನ್ ಮಾಡಿರುವ ಪರಸಪ್ಪ ‘ನನ್ನ ಮಗನ ಪಿಎಸ್‌ಐ ನೇಮಕಾತಿಗೆ ಕೊಟ್ಟಿದ್ದ ₹15 ಲಕ್ಷ ಹಣ ವಾಪಸ್ ಕೊಡಿ. ಕೈ ಮುಗಿತೀನಿ ಸರ್. ಹಣ ಕೊಟ್ಟು ಒಂದೂವರೆ ವರ್ಷವಾಯಿತು. ಬಹಳ ಕಷ್ಟದಲ್ಲಿದ್ದೇನೆ’ ಎಂದಿದ್ದಾರೆ.

ಧ್ವನಿ ನನ್ನದೇ: ದಢೇಸಗೂರು

ಕೊಪ್ಪಳ: ‘ವೈರಲ್ ಆಗಿರುವ ಆಡಿಯೊದಲ್ಲಿ ಇರುವ ಧ್ವನಿ ನನ್ನದೇ. ಆದರೆ, ನಾನು ಹಣ ಪಡೆದಿಲ್ಲ. ಇಬ್ಬರ ನಡುವೆ ಜಗಳವಾಗಿತ್ತು. ಪರಿಹರಿಸಲು ಕೋರಿ ನನ್ನ ಬಳಿ ಬಂದಿದ್ದರು. ಅವರಿಬ್ಬರನ್ನೂ ಒಟ್ಟುಗೂಡಿಸಿ ರಾಜಿ ಪಂಚಾಯಿತಿ ನಡೆಸಿದ್ದೆ. ಅದೇ ಸಂಭಾಷಣೆ ಈಗ ವೈರಲ್ ಮಾಡಿದ್ದಾರೆ‘ ಎಂದು ಬಸವರಾಜ ದಢೇಸಗೂರು ತಿಳಿಸಿದರು.

‘ಇದು, ಚುನಾವಣಾ ವರ್ಷವಿದ್ದು, ವಿರೋಧಿಗಳು ನನ್ನ ವಿರುದ್ಧ ಷಡ್ಯಂತ್ರ ನಡೆಸಿದ್ದಾರೆ. ಹೀಗಾಗಿ ಆಡಿಯೊ, ವಿಡಿಯೊ ವೈರಲ್ ಮಾಡುತ್ತಲೇ ಇರುತ್ತಾರೆ’ ಎಂದರು.

7ನೇ ಪುಟ ನೋಡಿ

6 Layer PLASTO GOLD
ಕುಡಿಯುವ ನೀರಿಗಾಗಿ ಸುರಕ್ಷಿತ
7767000180, 7420022293

ರಾಜ್ಯಮಟ್ಟದ ಉತ್ತಮ ಶಿಕ್ಷಕರ ಪ್ರಶಸ್ತಿ ಪ್ರದಾನ

ಶಿಕ್ಷಣ ಇಲಾಖೆ ಭ್ರಷ್ಟಾಚಾರ ತನಿಖೆಗೆ ಆಯೋಗ: ನಾಗೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿಕ್ಷಣ ಇಲಾಖೆಯಲ್ಲಿನ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಲು ಹಾಗೂ ತನಿಖೆ ನಡೆಸಲು ಪ್ರತ್ಯೇಕ ಆಯೋಗ ರಚಿಸಲು ಉದ್ದೇಶಿಸಲಾಗಿದೆ‘ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ವಿಧಾನಸೌಧದಲ್ಲಿ ಸೋಮವಾರ ನಡೆದ ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ‘ಆಯೋಗದ ರಚನೆ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಿ ಅಂತಿಮ ರೂಪುರೇಷೆಗಳನ್ನು ನೀಡಲಾಗುವುದು’ ಎಂದರು.

‘ಶಿಕ್ಷಕರಿಗೆ ಪ್ರಶಸ್ತಿ ನೀಡುವ ವ್ಯವಸ್ಥೆ ಅತ್ಯಂತ ಪಾರದರ್ಶಕವಾಗಿದೆ. ಯಾವುದೇ ಪ್ರಭಾವಕ್ಕೆ ಒಳಗಾಗಿಲ್ಲ. ಮುಖ್ಯಮಂತ್ರಿ ಕಚೇರಿಯಿಂದಲೂ ಹಸ್ತಕ್ಷೇಪ ನಡೆದಿಲ್ಲ’ ಎಂದು ಹೇಳಿದರು.

4ನೇ ಪುಟ ನೋಡಿ

ಖಾಲಿಯಾಗುವ ಶಿಕ್ಷಕ ಹುದ್ದೆಗಳಿಗೆ ತಕ್ಷಣವೇ ನೇಮಕ: ಬೊಮ್ಮಾಯಿ

‘ನಿವೃತ್ತಿಯಾಗುವ ಶಿಕ್ಷಕರ ಸಂಖ್ಯೆಯನ್ನು ವರ್ಷದ ಮುನ್ನವೇ ಲೆಕ್ಕ ಹಾಕಿ, ಹುದ್ದೆ ಖಾಲಿಯಾಗುತ್ತಿದ್ದಂತೆ ಬದಲಿ ನೇಮಕ ಮಾಡುವ ವ್ಯವಸ್ಥೆ ರೂಪಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಶಿಕ್ಷಣ ಕ್ಷೇತ್ರಕ್ಕೆ ಈ ವರ್ಷದ ಬಜೆಟ್‌ನಲ್ಲಿ ₹25 ಸಾವಿರ ಕೋಟಿ ಅನುದಾನ ಒದಗಿಸಲಾಗಿದೆ. ಇದರಲ್ಲಿ ಸುಮಾರು ₹19 ಸಾವಿರ ಕೋಟಿ ಶಿಕ್ಷಕರು ಮತ್ತು ಸಿಬ್ಬಂದಿ ವೇತನಕ್ಕೆ ಖರ್ಚಾಗುತ್ತದೆ. ಉಳಿದ ಅನುದಾನದಲ್ಲಿ ₹5 ಸಾವಿರ ಕೋಟಿ ಮೊತ್ತದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಬಳಸಲಾಗುತ್ತಿದೆ. ಈ ಮೊತ್ತದಲ್ಲಿ 23 ಸಾವಿರ ಶಾಲೆಗಳನ್ನು ಹೊಸದಾಗಿ ನಿರ್ಮಿಸಲು ಉದ್ದೇಶಿಸಲಾಗಿದ್ದು, ಮೊದಲ ಹಂತದಲ್ಲಿ 8,101 ಶಾಲೆಗಳ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಇದೇ ಮೊದಲ ಬಾರಿ ಒಂದೇ ವರ್ಷದಲ್ಲಿ ಇಷ್ಟೊಂದು ಶಾಲೆಗಳನ್ನು ನಿರ್ಮಿಸಿರುವುದು ದಾಖಲೆಯಾಗಿದೆ’ ಎಂದು ವಿವರಿಸಿದರು.

4ನೇ ಪುಟ ನೋಡಿ

ಸುದರ್ಶನ್ ಜ್ಯುವೆಲರ್ಸ್
ಚಿನ್ನ • ಬೆಳ್ಳಿ • ವಜ್ರದ ಆಭರಣಗಳು
ವಿಶೇಷ ಕೂಡುಗೆ ವೆಸ್ಟೇಜ್ 4% ಮಾತ್ರ
₹4810/-gm
ಬೆಳ್ಳಿ ₹ 50,000/- *CA
ಚಿಕ್ಕಪೇಟೆ: 41300355

ಸಿಇಟಿ ರ‍್ಯಾಂಕಿಂಗ್ ಮೇಲ್ಮನವಿಗೆ ನಿರ್ಧಾರ

ಬೆಂಗಳೂರು: ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಪಿಯು ತೇರ್ಗಡೆಯಾಗಿ, ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಈ ವರ್ಷವೂ ಸಿಇಟಿ ಬರೆದಿರುವ 24 ಸಾವಿರ ಅಭ್ಯರ್ಥಿಗಳ ದ್ವಿತೀಯ ಪಿಯು ಅಂಕಗಳನ್ನು ಪರಿಗಣಿಸಬೇಕು ಎನ್ನುವ ಹೈಕೋರ್ಟ್ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್. ಅಶ್ವತ್ಥನಾರಾಯಣ ಹೇಳಿದರು.

4

ಚಿನಕುರಳಿ

ಪ್ರಕಾಶ್ ಶೆಟ್ಟಿ

ರೀಡೂ: ಬದಲಿ ನಿವೇಶನ ಹಂಚಿಕೆ ಮುನ್ನೆಲೆಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅರ್ಕಾವತಿ ಬಡಾವಣೆಯಲ್ಲಿ ರೀಡೂವಿನಿಂದ ನಿವೇಶನ ಕಳೆದುಕೊಂಡ 36 ಮಂದಿಗೆ ಬದಲಿ ನಿವೇಶನಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹಂಚಿಕೆ ಮಾಡಿರುವ ಪ್ರಕರಣವು ಮುನ್ನೆಲೆಗೆ ಬಂದಿದೆ.

ಮರು ಸ್ವಾಧೀನ ಪಡೆದಿರುವ ಅಥವಾ ಪೂರ್ಣ ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಸಾರ್ವಜನಿಕ ಹರಾಜಿನ ಮೂಲಕ ಮಾತ್ರ ನಿವೇಶನಗಳನ್ನು ಹಂಚಿಕೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ 2021ರ ಅಕ್ಟೋಬರ್ 29ರಂದು ಆದೇಶಿಸಿತ್ತು.

ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲಂಘಿಸಿ ರಾಜಕೀಯ ನಾಯಕರಿಗೆ ಪ್ರಾಧಿಕಾರವು ಜಿ ಕೆಟಗರಿಯ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಿತ್ತು. ಶಿವರಾಮ ಕಾರಂತ ಬಡಾವಣೆ ಪ್ರಕರಣದ ವಿಚಾರಣೆಯನ್ನು ಆಗಸ್ಟ್ 24ರಂದು ನಡೆಸಿದ್ದ ಸುಪ್ರೀಂ ಕೋರ್ಟ್, ನಿಯಮ ಉಲ್ಲಂಘಿಸಿ ಬಹು ಜನರಿಗೆ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಿರುವುದಕ್ಕೆ ಪ್ರಾಧಿಕಾರವನ್ನು ತರಾಟೆಗೆ ತೆಗೆದುಕೊಂಡಿತ್ತು. ಪ್ರಾಧಿಕಾರದ ಆಯುಕ್ತ ಎಂ.ಬಿ. ರಾಜೇಶ ಗೌಡ ಅವರನ್ನು ಕೂಡಲೇ ವರ್ಗಾವಣೆ ಮಾಡುವಂತೆ ನಿರ್ದೇಶನ ನೀಡಿತ್ತು. ಮರುದಿನವೇ, ರಾಜೇಶ ಗೌಡ ಅವರನ್ನು ಕರ್ನಾಟಕ ಸರ್ಕಾರ ವರ್ಗಾವಣೆ ಮಾಡಿತ್ತು.

ಆಗಸ್ಟ್ 19ರಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ 84 ಪುಟಗಳ ಪ್ರಮಾಣಪತ್ರದಲ್ಲಿ ರಾಜೇಶ ಗೌಡ, ‘ಕಳೆದ 10 ತಿಂಗಳಲ್ಲಿ 96 ಜನರಿಗೆ ಬದಲಿ ನಿವೇಶನಗಳನ್ನು ನೀಡಲಾಗಿದೆ’ ಎಂದು ತಿಳಿಸಿದ್ದಾರೆ. ‘2004–05ರ ಅವಧಿಯಲ್ಲಿ ಅರ್ಕಾವತಿ ಬಡಾವಣೆಯಲ್ಲಿ 36 ಮಂದಿಗೆ ನಿವೇಶನ ಹಂಚಿಕೆ ಮಾಡಲಾಗಿತ್ತು. ಇದು ಅಧಿಸೂಚನೆಗೆ ವಿರುದ್ಧ ಆಗಿತ್ತು. ಆ ಬಳಿಕ ರೀಡೂ ಪ್ರಕ್ರಿಯೆ ನಡೆದಿತ್ತು. ಅವರಿಗೆ ಅರ್ಕಾವತಿ ಬಡಾವಣೆ ಹಾಗೂ ಕೆಂಪೇಗೌಡ ಬಡಾವಣೆಯಲ್ಲಿ ಬದಲಿ ನಿವೇಶನಗಳನ್ನು ನೀಡಲಾಗಿದೆ’ ಎಂದು ಅವರು ಪ್ರಮಾಣಪತ್ರದಲ್ಲಿ ಉಲ್ಲೇಖಿಸಿದ್ದಾರೆ.

10ನೇ ಪುಟ ನೋಡಿ

ಲಿಜ್ ಟ್ರಸ್ ಬ್ರಿಟನ್ ನೂತನ ಪ್ರಧಾನಿ

ಲಂಡನ್ (ಪಿಟಿಐ): ಬ್ರಿಟನ್ ವಿದೇಶಾಂಗ ಸಚಿವೆ ಲಿಜ್ ಟ್ರಸ್ ಅವರು ಕನ್ಸರ್ವೇಟಿವ್ ಪಕ್ಷದ ನೂತನ ನಾಯಕಿಯಾಗಿ ಆಯ್ಕೆಯಾಗಿದ್ದು, ಮಾರ್ಗರೇಟ್ ಥ್ಯಾಚರ್ ಮತ್ತು ಥೆರೆಸಾ ಮೇ ಅವರ ನಂತರ ದೇಶ ಮುನ್ನಡೆಸುವ ಮೂರನೇ ಮಹಿಳಾ ಪ್ರಧಾನಿ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ.

ಹಗರಣ ಮತ್ತು ಸಂಪುಟ ಸದಸ್ಯರ ಅವಿಶ್ವಾಸದಿಂದ ಅಧಿಕಾರ ಕಳೆದುಕೊಂಡಿರುವ ಬೋರಿಸ್ ಜಾನ್ಸನ್ ಅವರ ನಂತರ ಬ್ರಿಟನ್‌ನ ಮುಂದಿನ ಪ್ರಧಾನಿ ಯಾರು ಆಗಲಿದ್ದಾರೆಂಬ ಹಲವು ತಿಂಗಳುಗಳ ಕುತೂಹಲಕ್ಕೆ ಸೋಮವಾರ ಅಂತಿಮ ತೆರೆ ಬಿದ್ದಿತು.

11ನೇ ಪುಟ ನೋಡಿ

ಬೆಂಗಳೂರು ನಗರ

‘ತೇಜಸ್ವಿ ಲೋಕ–10 ಕಪ್ಪೆಲೋಕ’ ಸೆ.8ಕ್ಕೆ

ಬೆಂಗಳೂರು: ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಜನ್ಮದಿನದ ಪ್ರಯುಕ್ತ ‘ತೇಜಸ್ವಿ ಲೋಕ–10 ಕಪ್ಪೆಲೋಕ’ ಎಂಬ ಕಾರ್ಯಕ್ರಮವನ್ನು ಸೆಪ್ಟೆಂಬರ್ 8ರಿಂದ 18ರ ವರೆಗೆ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಲಾಗಿದೆ.

ಪ್ರತಿವರ್ಷ ಸೆಪ್ಟೆಂಬರ್ 8 ರಂದು ‘ತೇಜಸ್ವಿ ಲೋಕ’ ಹೆಸರಿನ ಛಾಯಾಚಿತ್ರ, ಸಾಕ್ಷ್ಯಚಿತ್ರ, ಸಚಿತ್ರ ಪ್ರದರ್ಶನ ಮತ್ತು ಸಂವಾದಗಳಿರುವ ಹಕ್ಕಿಲೋಕ, ಕೀಟಲೋಕ, ಪುಷ್ಪಲೋಕ, ಪರಾಗಸ್ಪರ್ಶಿಗಳು, ಜೇಡಲೋಕ, ಬಾವಲಿಲೋಕ, ಹದ್ದುಲೋಕ, ಕುರಿಂಜಿಲೋಕ ಸರಣಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಪರಿಸರ ನಿಸರ್ಗ ಸಂರಕ್ಷಣಾ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಎನ್‌ಸಿಆರ್‌ಬಿ ವರದಿ 2021 • ದಿನವೊಂದಕ್ಕೆ ಸರಾಸರಿ 18 ಪ್ರಕರಣ ದಾಖಲು

ಸೈಬರ್ ಕ್ರೈಂ: ನಗರದಲ್ಲೇ ಅತಿ ಹೆಚ್ಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿ ಹೆಚ್ಚು ಸೈಬರ್ ಅಪರಾಧ ಪ್ರಕರಣಗಳು ದಾಖಲಾದ ದೇಶದ ಮಹಾನಗರಗಳ ಪಟ್ಟಿಯಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದ್ದು, 2021ರಲ್ಲಿ ದಿನವೊಂದಕ್ಕೆ ಸರಾಸರಿ 18 ಪ್ರಕರಣಗಳು ವಿವಿಧ ಠಾಣೆಗಳಲ್ಲಿ ದಾಖಲಾಗಿವೆ.

2021ನೇ ಸಾಲಿನ ಅಪರಾಧಗಳ ಅಂಕಿ–ಅಂಶವನ್ನು ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯುರೊ (ಎನ್‌ಸಿಆರ್‌ಬಿ) ಬಿಡುಗಡೆ ಮಾಡಿದೆ. ಸೈಬರ್ ಅಪರಾಧಗಳ ಬಗ್ಗೆಯೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘20 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ದೇಶದ ಪ್ರಮುಖ 19 ಮಹಾನಗರಗಳಲ್ಲಿ ದಾಖಲಾದ ಸೈಬರ್ ಅಪರಾಧಗಳ ಮಾಹಿತಿಯನ್ನು ಪಡೆದು, ವರದಿ ಸಿದ್ಧಪಡಿಸಲಾಗಿದೆ’ ಎಂದು ಎನ್‌ಸಿಆರ್‌ಬಿ ಹೇಳಿದೆ.

ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಹಾಗೂ ಇತರೆ ಕ್ಷೇತ್ರಗಳ ಕಂಪನಿಗಳು ಅಧಿಕವಾಗಿವೆ. ಜೊತೆಗೆ, ವ್ಯಾಪಾರ ಹಾಗೂ ಉದ್ಯಮ ಕ್ಷೇತ್ರದ ವ್ಯಾಪ್ತಿಯೂ ಹೆಚ್ಚಿದೆ. ಇಂಥ ನಗರದಲ್ಲಿ ಜನರನ್ನು ವಂಚಿಸಲೆಂದೇ ಸೈಬರ್ ತಂಡಗಳು ಸಕ್ರಿಯವಾಗಿದ್ದು, ಅವುಗಳ ಕೃತ್ಯದ ಬಗ್ಗೆ ವರದಿಯಲ್ಲಿ ತಿಳಿಸಲಾಗಿದೆ.

6,423 ಪ್ರಕರಣ ದಾಖಲಾಗುವ ಮೂಲಕ ಬೆಂಗಳೂರು ಮೊದಲ ಸ್ಥಾನದಲ್ಲಿದ್ದರೆ, ತೆಲಂಗಾಣದ ಹೈದರಾಬಾದ್ ನಗರ (3,303 ಪ್ರಕರಣ) ಎರಡನೇ ಸ್ಥಾನದಲ್ಲಿದೆ. ದೇಶದ ವಾಣಿಜ್ಯ ರಾಜಧಾನಿ ಮುಂಬೈ ನಗರ (2,883 ಪ್ರಕರಣ) ಮೂರನೇ ಸ್ಥಾನದಲ್ಲಿದೆ.

ಸಮಾಧಾನ ತಂದ ಇಳಿಕೆ ಪ್ರಮಾಣ: ಹಿಂದಿನ ವರ್ಷಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ 2021ರಲ್ಲಿ ಸೈಬರ್ ಅಪರಾಧ ಪ್ರಕರಣ ಇಳಿಕೆಯಾಗಿದ್ದು, ಸಮಾಧಾನದ ಸಂಗತಿ.

‘2019ರಲ್ಲಿ 10,555 ಪ್ರಕರಣ ಹಾಗೂ 2020ರಲ್ಲಿ 8,892 ಪ್ರಕರಣಗಳು ದಾಖಲಾಗಿದ್ದವು’ ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ವಿಭಾಗವಾರು ಸೈಬರ್ ಕ್ರೈಂ ಠಾಣೆ: ‘ಆನ್‌ಲೈನ್ ಹಾಗೂ ಇತರೆ ಮಾರ್ಗದ ಮೂಲಕ ನಡೆಯುವ ಸೈಬರ್ ವಂಚನೆ ಪ್ರಕರಣಗಳನ್ನು ಭೇದಿಸಲು ಪೊಲೀಸರು ನಾನಾ ಕಸರತ್ತು ನಡೆಸುತ್ತಿದ್ದಾರೆ. ಬೆಂಗಳೂರಿನಲ್ಲಿ ವಲಯವಾರು ಸೈಬರ್ ಕ್ರೈಂ ಠಾಣೆಗಳನ್ನು ತೆರೆದು, ದೂರು ಸ್ವೀಕರಿಸುತ್ತಿದ್ದಾರೆ. ಆದರೆ, ಬಹುತೇಕ ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಲು ಪೊಲೀಸರಿಂದ ಸಾಧ್ಯವಾಗುತ್ತಿಲ್ಲ’ ಎಂದು ದೂರುದಾರರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿದ ಪೊಲೀಸ್ ಅಧಿಕಾರಿಯೊಬ್ಬರು, ‘ನಿಯಂತ್ರಣ ಕೊಠಡಿ 112 ಸಂಖ್ಯೆ ಮೂಲಕ ಬರುವ ಸೈಬರ್ ಅಪರಾಧ ದೂರುಗಳನ್ನು ಗಂಭೀರವಾಗಿ ಪರಿಗಣಿಸಿ, ಇತ್ಯರ್ಥಪಡಿಸಲಾಗುತ್ತಿದೆ. ತ್ವರಿತವಾಗಿ ದೂರು ನೀಡಿದರೆ, ಹಣವನ್ನು ವಾಪಸು ಕೊಡಿಸುವ ವ್ಯವಸ್ಥೆ ಇದೆ’ ಎಂದರು.

ದುಶ್ಚಟಕ್ಕಾಗಿ 60 ಸೈಕಲ್ ಕದ್ದು ಮಾರಾಟ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಾರ್ವಜನಿಕ ಸ್ಥಳ ಹಾಗೂ ಮನೆಗಳ ಮುಂದೆ ನಿಲ್ಲಿಸುತ್ತಿದ್ದ ಸೈಕಲ್‌ಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪದಡಿ ನವೀನ್ (38) ಎಂಬುವರನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ನವೀನ್ ಕೆಲಸಕ್ಕೆಂದು ನಗರಕ್ಕೆ ಬಂದಿದ್ದ. ಕಾಡುಬೀಸನಹಳ್ಳಿಯಲ್ಲಿ ಶೆಡ್‌ನಲ್ಲಿ ವಾಸವಿದ್ದ. ಈತನನ್ನು ಬಂಧಿಸಿ, ₹ 9 ಲಕ್ಷ ಮೌಲ್ಯದ 60 ಸೈಕಲ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಎ. ನಾರಾಯಣಪುರ ಕೆರೆ ಬಳಿ ಆಗಸ್ಟ್ 11ರಂದು ನಿಲ್ಲಿಸಿದ್ದ ಸೈಕಲ್ ಕಳ್ಳತನವಾಗಿತ್ತು. ಈ ಬಗ್ಗೆ ಮಾಲೀಕರು ದೂರು ನೀಡಿದ್ದರು. ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದ’ ಎಂದು ತಿಳಿಸಿದರು.

ಲಾಕ್ ಕತ್ತರಿಸಿ ಕಳ್ಳತನ: ‘ನಗರದಲ್ಲಿ ಹಗಲು–ರಾತ್ರಿ ಸುತ್ತಾಡುತ್ತಿದ್ದ ಆರೋಪಿ ಸೈಕಲ್‌ಗಳನ್ನು ಗುರುತಿಸುತ್ತಿದ್ದ. ಕಟ್ಟಿಂಗ್ ಪ್ಲೇಯರ್‌ನಿಂದ ಲಾಕ್ ಕತ್ತರಿಸಿ ಸೈಕಲ್‌ಗಳನ್ನು ಕದ್ದೊಯ್ಯುತ್ತಿದ್ದ. ಇದನ್ನೇ ವೃತ್ತಿ ಮಾಡಿಕೊಂಡಿದ್ದ’ ಎಂದು ಪೊಲೀಸರು ಹೇಳಿದರು.

‘ವೈಟ್‌ಫೀಲ್ಡ್ ಹಾಗೂ ಸುತ್ತಮುತ್ತಲಿನ ಕಂಪನಿಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಯನ್ನು ಆರೋಪಿ ಪರಿಚಯ ಮಾಡಿಕೊಂಡಿದ್ದ. ಕದ್ದ ಸೈಕಲ್‌ಗಳನ್ನು ಸಿಬ್ಬಂದಿಗೆ ಕಡಿಮೆ ಬೆಲೆಗೆ ಮಾರುತ್ತಿದ್ದ. ಬಂದ ಹಣವನ್ನು ದುಶ್ಚಟ ಹಾಗೂ ಐಷಾರಾಮಿ ಜೀವನಕ್ಕೆ ಖರ್ಚು ಮಾಡುತ್ತಿದ್ದ’ ಎಂದು ತಿಳಿಸಿದರು.

‘ಎಚ್‌ಎಎಲ್, ಮಾರತ್ತಹಳ್ಳಿ, ಎಚ್‌ಎಸ್‌ಆರ್ ಲೇಔಟ್, ಬೆಳ್ಳಂದೂರು, ಮಹದೇವಪುರ, ಕೆ.ಆರ್.ಪುರ, ಕೋರಮಂಗಲ, ಬೈಯಪ್ಪನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಆರೋಪಿ ಸೈಕಲ್ ಕಳ್ಳತನ ಮಾಡಿರುವ ಮಾಹಿತಿ ಇದೆ. ಕೆಲವರು ಮಾತ್ರ ದೂರು ನೀಡಿದ್ದು, ಬಹುತೇಕರು ದೂರು ಕೊಟ್ಟಿಲ್ಲ. ಸೈಕಲ್ ಮಾಲೀಕರ ಪತ್ತೆ ಕೆಲಸವೂ ನಡೆಯುತ್ತಿದೆ’ ಎಂದು ಹೇಳಿದರು.

ಯೂತ್ ಗೇಮ್ಸ್ ಕೌನ್ಸಿಲ್, ಯೂತ್ ಇಂಡೋ–ನೇಪಾಳ ಅಂತರರಾಷ್ಟ್ರೀಯ ಕ್ರೀಡಾಕೂಟದಲ್ಲಿ 9 ಚಿನ್ನ ಮತ್ತು 7 ಬೆಳ್ಳಿ ಪದಕ ಗೆದ್ದ ಚಿತ್ರಕೂಟ ಶಾಲೆಯ 16 ಮಕ್ಕಳನ್ನು ಶಾಲೆಯಿಂದ ಅಭಿನಂದಿಸಲಾಯಿತು

ಸುದ್ದಿ 2 ನಿಮಿಷ

ವಸತಿ ಸಚಿವ ಸೋಮಣ್ಣ ವಿರುದ್ಧದ ಸಮನ್ಸ್ ರದ್ದುಪಡಿಸಿದ ಹೈಕೋರ್ಟ್

ಬೆಂಗಳೂರು: ಆದಾಯ ಮೀರಿ ಆಸ್ತಿಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ವಸತಿ ಸಚಿವ ವಿ.ಸೋಮಣ್ಣ ವಿರುದ್ಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾರಿಗೊಳಿಸಿದ್ದ ಸಮನ್ಸ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ’ ಹೊರಡಿಸಿದ್ದ ಸಮನ್ಸ್ ರದ್ದುಗೊಳಿಸುವಂತೆ ಕೋರಿ ಸೋಮಣ್ಣ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ತ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಪ್ರಕರಣವನ್ನು ಪುನಃ ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಿದ ನ್ಯಾಯಪೀಠ ಹೊಸದಾಗಿ ವಿಚಾರಣೆ ನಡೆಸಿ ಕಾನೂನು ಪ್ರಕಾರ ನಿರ್ಣಯ ಕೈಗೊಳ್ಳುವಂತೆ ನಿರ್ದೇಶಿಸಿದೆ.

ಪ್ರಕರಣವೇನು?: ಸೋಮಣ್ಣ ಆದಾಯ ಮೀರಿ ಆಸ್ತಿ ಗಳಿಸಿದ್ದಾರೆ ಎಂದು ಆರೋಪಿಸಿ ನಗರದ ರಾಮಕೃಷ್ಣ ಎಂಬುವರು 2013ರಲ್ಲಿ ಲೋಕಾಯುಕ್ತ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು. ದೂರಿನ ವಿಚಾರಣೆ ನಡೆಸಿದ ನ್ಯಾಯಾಲಯ ತನಿಖೆಗೆ ಆದೇಶಿಸಿತ್ತು. ಆರೋಪದಲ್ಲಿ ಯಾವುದೇ ಹುರಳಿಲ್ಲ ಎಂದು ಪೊಲೀಸರು ರಿಪೋರ್ಟ್ ಸಲ್ಲಿಸಿದ್ದರು. ‘ಬಿ’ ರಿಪೋರ್ಟ್ ರದ್ದುಗೊಳಿಸಿದ್ದ ನ್ಯಾಯಾಲಯ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ಜಾರಿಗೊಳಿಸಿತ್ತು.

ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣ: ವಿಚಾರಣೆ 26ಕ್ಕೆ ಮುಂದಕ್ಕೆ

ಬೆಂಗಳೂರು: ಮಾಜಿ ಸಚಿವ ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆ ಮಾಡಿದ್ದನ್ನು ಪ್ರಶ್ನಿಸಿ ಹಾಗೂ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಜಾರಕಿಹೊಳಿ ದಾಖಲಿಸಿರುವ ಬ್ಲ್ಯಾಕ್‌ಮೇಲ್ ಪ್ರಕರಣದ ಎಫ್‌ಐಆರ್ ರದ್ದು ಕೋರಿ ಸಂತ್ರಸ್ತೆ ಹಾಗೂ ಮತ್ತಿಬ್ಬರು ಆರೋಪಿಗಳು ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಹೈಕೋರ್ಟ್ ಇದೇ 26ಕ್ಕೆ ಮುಂದೂಡಿದೆ.

ಸಂತ್ರಸ್ತ ಯುವತಿ ಮತ್ತಿಬ್ಬರು ಆರೋಪಿಗಳಾದ ಎಸ್. ಶ್ರವಣ್ ಕುಮಾರ್ ಹಾಗೂ ಬಿ.ಎಂ. ನರೇಶ್ ಸಲ್ಲಿಸಿರುವ ಪ್ರತ್ಯೇಕ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಸಂತ್ರಸ್ತೆ ಪರ ಹಾಜರಾಗಿದ್ದ ಸುಪ್ರೀಂ ಕೋರ್ಟ್ ಹಿರಿಯ ವಕೀಲೆ ಇಂದಿರಾ ಜೈಸಿಂಗ್, ‘ಪ್ರತಿವಾದಿಗಳು ಈತನಕ ನಮಗೆ ಆಕ್ಷೇಪಣೆಯನ್ನು ತಲುಪಿಸಿಲ್ಲ. ಹಾಗಾಗಿ, ವಾದ ಮಂಡನೆಗೆ ಸಿದ್ಧವಾಗಲು ಸಾಧ್ಯವಾಗಿಲ್ಲ. ಆದ್ದರಿಂದ, ವಿಚಾರಣೆ ಮುಂದೂಡಬೇಕು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಸೋಮಣ್ಣ ಪರ ಹೇಳಿಕೆ ಬಳಗಾವಿಗೆ ನೋಟಿಸ್

ಬೆಂಗಳೂರು: ಕುರುಬ ಸಮಾಜದ ಮುಖಂಡ ಸಿದ್ದರಾಮಯ್ಯ ವಿರುದ್ಧ, ಸಚಿವ ವಿ.ಸೋಮಣ್ಣ ಪರ ಹೇಳಿಕೆ ನೀಡಿದ ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕ ಟಿ.ಬಿ. ಬಳಗಾವಿ ಅವರಿಗೆ ಸಂಘ ನೋಟಿಸ್ ನೀಡಿದೆ.

ಸೆ.2ರಂದು ನಡೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಬಳಗಾವಿ ಅವರು ಸೋಮಣ್ಣ ಅವರ ಬಳಿ ಕ್ಷಮೆಯಾಚಿಸುವಂತೆ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದರು. ಬೈಲಾ ಪ್ರಕಾರ ಸ್ವಾಯತ್ತ ಸಂಸ್ಥೆಯಾಗಿರುವ ಸಂಘ ಯಾವುದೇ ಪಕ್ಷದ ಜತೆ ಗುರುತಿಸಿಕೊಳ್ಳುವಂತಿಲ್ಲ. ಆದರೆ, ನಿರ್ದೇಶಕ ಬಳಗಾವಿ ಅವರು ಅನುಮತಿ ಪಡೆಯದೇ ಒಂದು ಒಂದು ಪಕ್ಷದ ನಾಯಕರ ಪರ ಹೇಳಿಕೆ ನೀಡಿದ್ದಾರೆ. ಸಮಾಜದ ಮುಖಂಡ ಸಿದ್ದರಾಮಯ್ಯ ಅವರನ್ನು ಟೀಕಿಸಿದ್ದಾರೆ. ಹಾಗಾಗಿ, ನಿರ್ದೇಶಕ ಸ್ಥಾನದಿಂದ ಏಕೆ ವಜಾಗೊಳಿಸಬಾರದು ಎಂದು ಕಾರಣ ಕೇಳಿ ನೋಟಿಸ್ ನೀಡಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಡಿ. ವೆಂಕೇಶ್ ಮೂರ್ತಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದರು.

‘ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ವಿರುದ್ಧ ಬಳಗಾವಿ ಅವರು ಹೇಳಿಕೆ ನೀಡಿರುವುನ್ನು ಕರ್ನಾಟಕ ಪ್ರದೇಶ ಕುರುಬರ ಸಂಘ ತೀವ್ರವಾಗಿ ಖಂಡಿಸುತ್ತದೆ. ಟಿ.ಬಿ. ಬಳಗಾವಿ ಅವರು ಮೂರು ದಿನಗಳೊಳಗೆ ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ಪ್ರತಿಭಟನೆ ಮಾಡಲಾಗುವುದು’ ಎಂದು ಅವರು ಎಚ್ಚರಿಕೆ ನೀಡಿದರು.

ಪಿಎಸ್‌ಐ ಅಕ್ರಮ: ಪೌಲ್ 8 ದಿನ ಸಿಐಡಿ ಕಸ್ಟಡಿಗೆ

ಬೆಂಗಳೂರು: 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಅಕ್ರಮ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಎಡಿಜಿಪಿ ಅಮ್ರಿತ್ ಪೌಲ್ ಅವರನ್ನು ಹೆಚ್ಚಿನ ವಿಚಾರಣೆಗಾಗಿ ಸಿಐಡಿ ಅಧಿಕಾರಿಗಳು ಮತ್ತೆ 8 ದಿನ ಕಸ್ಟಡಿಗೆ ಪಡೆದಿದ್ದಾರೆ.

ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಪೌಲ್ ಅವರನ್ನು ಬಂಧಿಸಿದ್ದ ಅಧಿಕಾರಿಗಳು, ವಿಚಾರಣೆ ನಡೆಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ಇದೀಗ ಹಲಸೂರು ಗೇಟ್ ಠಾಣೆಯಲ್ಲಿ ದಾಖಲಾಗಿರುವ ಪ್ರತ್ಯೇಕ ಪ್ರಕರಣದ ವಿಚಾರಣೆಗಾಗಿ ಪುನಃ ಎಡಿಜಿಪಿ ಅವರನ್ನು ಕಸ್ಟಡಿಗೆ ಪಡೆಯಲಾಗಿದೆ.

‘ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಜುಟ್ಟನಹಳ್ಳಿಯ ಅಭ್ಯರ್ಥಿ ಜೆ. ಕುಶಾಲ್‌ಕುಮಾರ್, ಒಎಂಆರ್ ಪ್ರತಿ ತಿದ್ದಿಸಿ ಪಿಎಸ್‌ಐ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಮೊದಲ ರ‍್ಯಾಂಕ್ ಪಡೆದಿದ್ದ. ಈತನ ಅಕ್ರಮ ಪತ್ತೆ ಮಾಡಿ ಬಂಧಿಸಲಾಗಿತ್ತು. ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಅಭ್ಯರ್ಥಿ ಕುಶಾಲ್‌ಕುಮಾರ್, ಅಕ್ರಮದಿಂದ ಆಯ್ಕೆಯಾಗಲು ಪೊಲೀಸ್ ನೇಮಕಾತಿ ವಿಭಾಗದ ಸಿಬ್ಬಂದಿಗೆ ಲಕ್ಷ ಲಕ್ಷ ಹಣ ನೀಡಿದ್ದ. ಅದರಲ್ಲಿ ಎಡಿಜಿಪಿ ಅವರಿಗೂ ಪಾಲು ಸಂದಾಯವಾಗಿದ್ದ ಮಾಹಿತಿ ಲಭ್ಯವಾಗಿತ್ತು. ಈ ಬಗ್ಗೆ ವಿಚಾರಣೆ ನಡೆಸಬೇಕಿತ್ತು. ಹೀಗಾಗಿ, ಎಡಿಜಿಪಿ ಅವರನ್ನು ಕಸ್ಟಡಿಗೆ ನೀಡುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿತ್ತು.’

‘ಅರ್ಜಿ ಮನ್ನಿಸಿದ ನ್ಯಾಯಾಲಯ, ಎಡಿಜಿಪಿ ಅವರನ್ನು ಕಸ್ಟಡಿಗೆ ನೀಡಿದೆ. ಎಡಿಜಿಪಿ ಅವರನ್ನು ವಿಚಾರಣೆ ನಡೆಸಿದ ನಂತರ ಪ್ರಕರಣದ ಬಗ್ಗೆ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ’ ಎಂದು ಮೂಲಗಳು ತಿಳಿಸಿವೆ.

ಪಣತ್ತೂರು ವಿದ್ಯುತ್ ಚಿತಾಗಾರ ಸ್ಥಗಿತ

ಬೆಂಗಳೂರು: ಮಹದೇವಪುರ ವಲಯ ವ್ಯಾಪ್ತಿಯ ಪಣತ್ತೂರು ವಿದ್ಯುತ್ ಚಿತಾಗಾರದಲ್ಲಿ ತುರ್ತು ನಿರ್ವಹಣಾ ಕೆಲಸಗಳನ್ನು ಕೈಗೊಳ್ಳಬೇಕಾಗಿರುವುದರಿಂದ ಸೆ. 9ರವರೆಗೆ ಸ್ಥಗಿತಗೊಳಿಸಲಾಗಿದೆ ಎಂದು ಬಿಬಿಎಂಪಿ ಮಹದೇವಪುರ ವಲಯದ ವಿದ್ಯುತ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

ಅನಿರ್ದಿಷ್ಟಾವಧಿ ಧರಣಿ ಇಂದು

ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಖಿಲ ಕರ್ನಾಟಕ ಗ್ರಾಮ ವಿದ್ಯುತ್ ಪ್ರತಿನಿಧಿಗಳ ಕ್ಷೇಮಾಭಿವೃದ್ಧಿ ಸಂಘ ಮತ್ತು ಶ್ರಮ ಜೀವಿಗಳ ವೇದಿಕೆ ಸೆ.6ರಂದು ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಲಿದೆ.

‘ರಾಜ್ಯ ಸರ್ಕಾರದ ಅಧೀನದಲ್ಲಿರುವ ಐದು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 15 ವರ್ಷಗಳಿಂದ ಗ್ರಾಮ ಪಂಚಾಯಿತಿಗೆ ಒಬ್ಬರಂತೆ ಗ್ರಾಮ ವಿದ್ಯುತ್ ಪ್ರತಿನಿಧಿಗಳಾಗಿ (ಜಿವಿಪಿ) ಕಾರ್ಯನಿರ್ವಹಿಸುತ್ತಿರುವ ಸುಮಾರು 3,700 ಜನರನ್ನು ಕಾಯಂ ಗೊಳಿಸಬೇಕು’ ಎಂದು ಸಂಘದ ಅಧ್ಯಕ್ಷ ಎಚ್. ಎಸ್. ಕಾಂತರಾಜು ಒತ್ತಾಯಿಸಿದರು.

‘ಜಿವಿಪಿಗಳನ್ನು ವಿದ್ಯುತ್ ಇಲಾಖೆಯ ಕಿರಿಯ ಮೀಟರ್ ಅಥವಾ ತತ್ಸಮಹುದ್ದೆ ರಚಿಸಿ ಕಾಯಂಗೊಳಿಸುವಂತೆ ಆಗಸ್ಟ್ 2020ರಲ್ಲಿ ಹೈಕೋರ್ಟ್ ಆದೇಶಿಸಿತ್ತು. ಆದರೆ ರಾಜ್ಯ ಸರ್ಕಾರ ಇದನ್ನು ಅನುಷ್ಠಾನಗೊಳಿಸದೇ ಮೇಲ್ಮನವಿ ಸಲ್ಲಿಸಿದೆ. ಇಂಧನ ಸಚಿವ ವಿ.ಸುನಿಲ್ ಕುಮಾರ್ ಅವರು ಅಧಿಕಾರಿಗಳ ಸಭೆ ನಡೆಸಿ ಕಾಯಂಗೊಳಿಸುವ ಭರವಸೆ ನೀಡಿ, ಮೇಲ್ಮನವಿ ಸಲ್ಲಿಸಿರುವುದು ಆಶ್ಚರ್ಯ ತಂದಿದೆ’ ಎಂದು ಶ್ರಮಜೀವಿಗಳ ವೇದಿಕೆ ಅಧ್ಯಕ್ಷ ಚಂದ್ರಶೇಖರ ಎಸ್. ಹಿರೇಮಠ ಅವರು ಬೇಸರ ವ್ಯಕ್ತಪಡಿಸಿದರು.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್
ಕಾರ್ಪೋರೇಟ್ ಐಡೆಂಟಿಫಿಕೇಶನ್ ನಂಬರ್ (ಸಿಐಎನ್): L18101KA2004PLC033475
ನೋಂದಾಯಿತ ಕಛೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು – 560022
ದೂ: +91 80 68951000 ಫ್ಯಾಕ್ಸ್: +91 80 68951001 ಇಮೇಲ್: info@gokaldasexports.com ವೆಬ್‌ಸೈಟ್: www.gokaldasexports.com

19ನೇ ವಾರ್ಷಿಕ ಸಾಮಾನ್ಯ ಸಭೆ, ಪುಸ್ತಕ ಮುಚ್ಚುವಿಕೆಯ ನೋಟೀಸ್ ಮತ್ತು ರಿಮೋಟ್ ಇ–ಮತದಾನ ಮಾಹಿತಿ

ಕಂಪನಿಯ ಸದಸ್ಯರ 19ನೇ ವಾರ್ಷಿಕ ಸಾಮಾನ್ಯ ಸಭೆ (‘ಎಜಿಎಂ’) **ಗುರುವಾರ, ಸೆಪ್ಟೆಂಬರ್ 29, 2022ರಂದು** ಭಾರತೀಯ ಕಾಲಮಾನ (“ಐಎಸ್‌ಟಿ”) **ಮಧ್ಯಾಹ್ನ 2:30ಕ್ಕೆ** ಕಂಪನಿಗಳ ಕಾಯಿದೆ, 2013 ರ ಅನ್ವಯವಾಗುವ ನಿಯಮಗಳ ಅನುಸಾರವಾಗಿ ಸಾಮಾನ್ಯ ಸ್ಥಳದಲ್ಲಿ ಷೇರುದಾರರ ದೈಹಿಕ ಉಪಸ್ಥಿತಿಯಿಲ್ಲದೆ ವಿಡಿಯೋ ಕಾನ್ಫರೆನ್ಸಿಂಗ್ / ಅದರ್ ಆಡಿಯೋ ವಿಷುವಲ್ ಮೀನ್ಸ್ ಮೂಲಕ (“ವಿಸಿ/ಒಎವಿಎಂ”) ಮೂಲಕ ನಡೆಯಲಿದ್ದು, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದಿಂದ (“ಎಂಸಿಎ”) ಹೊರಡಿಸಲಾದ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ದಿನಾಂಕ 8 ಏಪ್ರಿಲ್, 2020, ಸಾಮಾನ್ಯ ಸುತ್ತೋಲೆ ಸಂಖ್ಯೆ 17/2020 13 ಏಪ್ರಿಲ್, 2020 ಸಾಮಾನ್ಯ ಸುತ್ತೋಲೆ ಸಂಖ್ಯೆ 20/2020 ದಿನಾಂಕ 5 ಮೇ, 2020, ಸಾಮಾನ್ಯ ಸುತ್ತೋಲೆ ಸಂಖ್ಯೆ 22/2020 ದಿನಾಂಕ 15, ಜೂನ್ 2020, ಸಾಮಾನ್ಯ ಸುತ್ತೋಲೆ ಸಂಖ್ಯೆ 33/2020 ದಿನಾಂಕ 28, ಸೆಪ್ಟೆಂಬರ್ 2020, ಸಾಮಾನ್ಯ ಸುತ್ತೋಲೆ ಸಂಖ್ಯೆ 39/2020 ದಿನಾಂಕ 31, ಡಿಸೆಂಬರ್ 2020, ಸುತ್ತೋಲೆ ಸಂಖ್ಯೆ 02/2021 ದಿನಾಂಕ 13, ಜನವರಿ 2021 ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 02/2022 ದಿನಾಂಕ 5, ಮೇ 2022 ಹಾಗೂ ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (“ಸೆಬಿ ಸುತ್ತೋಲೆಗಳು”) ಹೊರಡಿಸಲಾದ ಸುತ್ತೋಲೆ ಸಂಖ್ಯೆ SEBI/HO/CFD/CMD2/CIR/P/2021/11 ದಿನಾಂಕ 15 ಜನವರಿ, 2021 ಮತ್ತು ಸುತ್ತೋಲೆ ಸಂಖ್ಯೆ SEBI/HO/CFD/CMD2/CIR/P/2022/62 ದಿನಾಂಕ 13 ಮೇ, 2022 ಮತ್ತು ಕಾಯ್ದೆಯ ನಿಬಂಧನೆಗಳನುಸಾರ ಹಾಗೂ ಸೆಬಿ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್‌ಕ್ಲೋಷರ್ ರಿಕ್ವಾಯರ್‌ಮೆಂಟ್ಸ್) ನಿಯಂತ್ರಣಗಳು, 2015 (“ಲಿಸ್ಟಿಂಗ್ ರೆಗ್ಯುಲೇಷನ್ಸ್)ರಂತೆ ದಿನಾಂಕ 26ನೇ ಆಗಸ್ಟ್, 2022ರ ಎಜಿಎಂ ನೋಟೀಸ್‌ನಲ್ಲಿ ತಿಳಿಸಲಾದ ವ್ಯವಹಾರವನ್ನು ವ್ಯವಹಾರ ಮಾಡಲಾಗುವುದು.

ಕಂಪನಿ ಅಥವಾ ಡೆಪಾಸಿಟರಿ ಪಾರ್ಟಿಸಿಪೆಂಟ್(ಗಳ) ರವರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಎಜಿಎಂ ನೋಟೀಸ್ ಮತ್ತು 2021–22ರ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳನ್ನು ಮಾತ್ರ ವಿದ್ಯುನ್ಮಾನ ಮೂಲಕವಾಗಿ 5ನೇ ಸೆಪ್ಟೆಂಬರ್ 2022ರಂದು ರವಾನಿಸಲಾಗಿದೆ. 19ನೇ ಎಜಿಎಂನ ನೋಟೀಸ್ ಮತ್ತು ಆರ್ಥಿಕ ವರ್ಷ 2021–22ರ ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ **www.gokaldasexports.com**ನ ವಾರ್ಷಿಕ ವರದಿಯ ವಿಭಾಗದ ಟ್ಯಾಬ್ ಮತ್ತು ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳು ಅಂದರೆ, **www.bseindia.com** ಮತ್ತು **www.nseindia.com** ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಕೆಫಿನ್‌ಟೆಕ್)ನ ವೆಬ್‌ಸೈಟ್ **https://evoting.kfintech.com**ನಲ್ಲಿ ಸಹ ಲಭ್ಯವಿದೆ.

ಸದಸ್ಯರು ವಿಸಿ/ಒಎವಿಎಂ ಮೂಲಕ ಎಜಿಎಂಗೆ ಹಾಜರಾಗಲು ಸೂಚನೆಗಳಿಗಾಗಿ ಎಜಿಎಂನ ಸೂಚನೆಯನ್ನು ಗಮನಿಸುವಂತೆ ಕೋರಲಾಗಿದೆ.

ಎ. **ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ ಇಮೇಲ್ ಐಡಿಯ ಶಾಶ್ವತ ನೋಂದಣಿ:** ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಡಿಪಾಸಿಟರಿ ಭಾಗವಹಿಸುವವರು ಸೂಚಿಸಿರುವ ವಿಧಾನವನ್ನು ಅನುಸರಿಸುವ ಮೂಲಕ ತಮ್ಮ ಡಿಪಾಸಿಟರಿ ಭಾಗವಹಿಸುವವರೊಂದಿಗೆ ನವೀಕರಿಸಲು ವಿನಂತಿಸಲಾಗಿದೆ.

ಬಿ. **ಭೌತಿಕ ಷೇರುಗಳನ್ನು ಹೊಂದಿರುವ ಷೇರುದಾರರಿಗೆ ಇಮೇಲ್ ಐಡಿಯ ನೋಂದಣಿ:** ಇ–ಮೇಲ್ ವಿಳಾಸ ನೋಂದಾಯಿಸದ ಸದಸ್ಯರು ತಾತ್ಕಾಲಿಕವಾಗಿ ತಮ್ಮನ್ನು ಕೆಫಿನ್‌ಟೆಕ್ / ಡಿಪಾಸಿಟರಿ ಪಾರ್ಟಿಸಿಪೆಂಟ್ಸ್‌ರವರೊಂದಿಗೆ **https://ris.kfintech.com/clientservices/mobilereg/mobileemailreg.aspx** ಲಿಂಕ್ ಅನ್ನು ಕ್ಲಿಕ್ ಮಾಡುವುದರ ಮೂಲಕ ನೋಂದಾಯಿಸಿಕೊಳ್ಳುವಂತೆ ಕೋರಲಾಗಿದೆ ಅಥವಾ ಪರ್ಯಾಯವಾಗಿ ಇ–ಮೇಲ್ ಐಡಿ **einward.ris@kfintech.com** ನಲ್ಲಿ ಇ–ಮೇಲ್ ವಿಳಾಸದ ನೋಂದಣಿಗಾಗಿ ಮತ್ತು ಎಜಿಎಂ ಸೂಚನೆ ಪಡೆಯಲು ಇ–ಮೇಲ್ ವಿನಂತಿಯನ್ನು ಕಳುಹಿಸಿ ಹೆಸರು (ಗಳು), ಇ–ಮೇಲ್ ವಿಳಾಸ, ಮೊಬೈಲ್ ಸಂಖ್ಯೆ, ಸ್ವಯಂ ದೃಢೀಕೃತ ಪ್ಯಾನ್ ಕಾರ್ಡ್‌ನ ನಕಲು, ಎಲೆಕ್ಟ್ರಾನಿಕ್ ಫೋಲಿಯೋ ಆಗಿದ್ದಲ್ಲಿ ಕ್ಲೈಂಟ್ ಮಾಸ್ಟರ್ ಪ್ರತಿ ಮತ್ತು ಷೇರು ಪ್ರಮಾಣಪತ್ರದ ಪ್ರತಿಗಳನ್ನು ವಾರ್ಷಿಕ ವರದಿ ಮತ್ತು ಇ–ಮತದಾನದ ಸೂಚನೆಗಳನ್ನು ಸ್ವೀಕರಿಸಬಹುದಾಗಿರುತ್ತದೆ. ಎಜಿಎಂ ಸಮಯದಲ್ಲಿ ರಿಮೋಟ್ ಮತಚಲಾಯಿಸಲು ಅಥವಾ ಇ–ಮತದಾನ ಮಾಡುವ ವಿವರವಾದ ಕಾರ್ಯವಿಧಾನಕ್ಕಾಗಿ, ಮೇಲಿನ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುವ ಎಜಿಎಂ ಪ್ರಕಟಣೆಯನ್ನು ಗಮನಿಸಲು ಸದಸ್ಯರನ್ನು ಕೋರಲಾಗಿದೆ.

ಸಿ. **ಭೌತಿಕ ಷೇರುದಾರರಿಗೆ ಬ್ಯಾಂಕ್ ವಿವರಗಳ ನೋಂದಣಿ:** ಭೌತಿಕ ರೂಪದಲ್ಲಿ ಕಂಪನಿಯ ಇಕ್ವಿಟಿ ಷೇರುಗಳನ್ನು ಹೊಂದಿರುವ ಕಂಪನಿಯ ಸದಸ್ಯರು ತಮ್ಮ ಬ್ಯಾಂಕ್ ವಿವರಗಳನ್ನು ನವೀಕರಿಸಲು ಕೆಫಿನ್‌ಟೆಕ್‌ಗೆ ಅಗತ್ಯ ದಾಖಲೆಗಳೊಂದಿಗೆ ಫಾರ್ಮ್ ISR-1ರ ಭೌತಿಕ ಪ್ರತಿಯನ್ನು ಕಳುಹಿಸಲು ವಿನಂತಿಸಲಾಗಿದೆ. ಹೇಳಲಾದ ನಮೂನೆಯು ಕಂಪನಿಯ ವೆಬ್‌ಸೈಟ್‌ನಲ್ಲಿ www.gokaldasexports.com ನಲ್ಲಿ ಲಭ್ಯವಿದೆ.

ಸದಸ್ಯರು ವಿಸಿ/ಒಎವಿಎಂ ಮೂಲಕ ಮಾತ್ರ ಎಜಿಎಂನಲ್ಲಿ ಹಾಜರಾಗಬಹುದು ಮತ್ತು ಭಾಗವಹಿಸಬಹುದು. ಎಜಿಎಂನಲ್ಲಿ ಭಾಗವಹಿಸುವ ಸೂಚನೆಗಳು ಮತ್ತು ಎಜಿಎಂ ಸಮಯದಲ್ಲಿ ರಿಮೋಟ್ ಇ–ಮತದಾನ ಅಥವಾ ಇ–ಮತದಾನ ವ್ಯವಸ್ಥೆಯ ಮೂಲಕ ಮತ ಚಲಾಯಿಸುವ ವಿಧಾನವನ್ನು ಎಜಿಎಂ ನೋಟಿಸ್‌ನಲ್ಲಿ ನೀಡಲಾಗಿದೆ.

ಕಂಪೆನಿ ಕಾಯ್ದೆ, 2013ರ ಸೆಕ್ಷನ್ 91 ಮತ್ತು ಲಿಸ್ಟಿಂಗ್ ರೆಗ್ಯುಲೇಷನ್‌ಗಳ ರೆಗ್ಯುಲೇಷನ್ 42ರ ಪ್ರಕಾರ 31.03.2022ಕ್ಕೆ ಕೊನೆಗೊಂಡ ವರ್ಷದ ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಯ ಉದ್ದೇಶಕ್ಕಾಗಿ ಕಂಪನಿಯ ಸದಸ್ಯ / ಷೇರು ವರ್ಗಾವಣೆ ಪುಸ್ತಕಗಳ ರಿಜಿಸ್ಟರ್ **ಶುಕ್ರವಾರ, 23ನೇ ಸೆಪ್ಟೆಂಬರ್ 2022 ರಿಂದ ಗುರುವಾರ, 29ನೇ ಸೆಪ್ಟೆಂಬರ್ 2022ರ ವರೆಗೆ (ಎರಡೂ ದಿನಗಳನ್ನು ಒಳಗೊಂಡಂತೆ)** ಮುಚ್ಚಿರುತ್ತದೆ ಎಂದು ನೋಟಿಸ್ ನೀಡಲಾಗಿದೆ.

ಕಂಪನಿಗಳ ಕಾಯ್ದೆಯ ಸೆಕ್ಷನ್ 108ರ ಜೊತೆಗೆ ನಿಯಮಗಳು, 2014ರ ನಿಯಮ 20 (ಮ್ಯಾನೇಜ್‌ಮೆಂಟ್ ಅಂಡ್ ಅಡ್ಮಿನಿಸ್ಟ್ರೇಷನ್) ನ್ನು ಓದಿಕೊಂಡಂತೆ ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ, ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾದಿಂದ ಹೊರಡಿಸಲಾದ ಸಾಮಾನ್ಯ ಸಭೆಗಳ ಸೆಕ್ರೆಟರಿಯಲ್ ಸ್ಟ್ಯಾಂಡರ್ಡ್ (‘ಎಸ್‌ಎಸ್–2’) ಮತ್ತು ಲಿಸ್ಟಿಂಗ್ ನಿಯಮಗಳ ನಿಯಮ 44ರ ನಿಬಂಧನೆಗಳಿಗೆ ಅನುಸಾರವಾಗಿ ಕಂಪನಿಯು ತನ್ನ ಸದಸ್ಯರಿಗೆ ಭೌತಿಕ ರೂಪದಲ್ಲಿ ಅಥವಾ ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸೌಲಭ್ಯವನ್ನು ಒದಗಿಸಲು **ಸೆಪ್ಟೆಂಬರ್ 22, 2022 (ಕಟ್–ಆಫ್ ದಿನಾಂಕ)** ದಿನಾಂಕದಂದು ಇ–ವೋಟಿಂಗ್ ಪ್ಲಾಟ್‌ಫಾರ್ಮ್ ಮೂಲಕ ಪ್ರತಿ ಐಟಂಗೆ ವಿದ್ಯುನ್ಮಾನವಾಗಿ ಮತ ಚಲಾಯಿಸಲು 19ನೇ ಎಜಿಎಂನ ಸೂಚನೆಯಲ್ಲಿ ತಿಳಿಸಲಾಗಿದೆ. ಇ–ಮತದಾನದ ವಿವರವಾದ ವಿಧಾನ/ಸೂಚನೆಗಳು 19ನೇ ಎಜಿಎಂನ ಸೂಚನೆಯು ಒಳಗೊಂಡಿವೆ.

ಎಲ್ಲಾ ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ:

1. ಎಜಿಎಂ ನೋಟಿಸ್‌ನಲ್ಲಿ ಸೂಚಿಸಿರುವ ಸಾಮಾನ್ಯ ಮತ್ತು ವಿಶೇಷ ವ್ಯವಹಾರವನ್ನು ವಿದ್ಯುನ್ಮಾನ ವಿಧಾನದಿಂದ ಮತದಾನದ ಮೂಲಕ ವಹಿವಾಟು ಮಾಡಬಹುದು;
2. ಸದಸ್ಯರ ನೋಂದಣಿ ಪುಸ್ತಕ / ಫಲಾನುಭವಿ ಮಾಲೀಕರ ರಿಜಿಸ್ಟರ್‌ನಲ್ಲಿ ಕಟ್–ಆಫ್ ದಿನಾಂಕದಂದು ಅಂದರೆ ಗುರುವಾರ, ಸೆಪ್ಟೆಂಬರ್ 22, 2022ರಂದು ಹೆಸರು ದಾಖಲಾಗಿರುವ ವ್ಯಕ್ತಿ ಮಾತ್ರ ರಿಮೋಟ್ ಇ–ಮತದಾನ / ಎಜಿಎಂನಲ್ಲಿ ಇ–ಮತದಾನದ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.
3. ಒಂದು ವೇಳೆ ಸೂಚನೆ ರವಾನೆಯಾದ ನಂತರ ಆದರೆ, ರಿಮೋಟ್ ಇ–ಮತದಾನದ ಕಟ್–ಆಫ್ ದಿನಾಂಕದಂದು ಅಥವಾ ಮೊದಲು ಯಾವುದೇ ವ್ಯಕ್ತಿ ಕಂಪನಿಯ ಸದಸ್ಯರಾದಲ್ಲಿ ಅಥವಾ ಸೂಚನೆಯು ರವಾನೆಯಾದ ನಂತರ ಇಮೇಲ್ ವಿಳಾಸವನ್ನು ನೋಂದಾಯಿಸಿಕೊಂಡಲ್ಲಿ, ಅಂತಹ ಸದಸ್ಯರು ಇ–ಮತದಾನದ ವಿಧಾನ ಮತ್ತು ಸೂಚನೆಯಲ್ಲಿ ಒದಗಿಸಿದ ರೀತಿಯಲ್ಲಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಅನ್ನು ಪಡೆಯಬಹುದು. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಎಜಿಎಂನ ಸೂಚನೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಎಂದು ಪರಿಗಣಿಸಬೇಕು.
4. ರಿಮೋಟ್ ಇ–ಮತದಾನವು **26ನೇ ಸೆಪ್ಟೆಂಬರ್, 2022ರಂದು (ಬೆಳಿಗ್ಗೆ 9.00 ಐಎಸ್‌ಟಿ) ಪ್ರಾರಂಭವಾಗುತ್ತದೆ ಮತ್ತು 28ನೇ ಸೆಪ್ಟೆಂಬರ್, 2022ರಂದು (ಸಂಜೆ 5.00 ಐಎಸ್‌ಟಿ) ಕೊನೆಗೊಳ್ಳುತ್ತದೆ.** ರಿಮೋಟ್ ಇ–ಮತದಾನವನ್ನು ಮೇಲಿನ ದಿನಾಂಕ ಮತ್ತು ಸಮಯದ ನಂತರ ಅನುಮತಿಸಲಾಗುವುದಿಲ್ಲ. ಕಟ್–ಆಫ್ ದಿನಾಂಕ ಅಂದರೆ, 22ನೇ ಸೆಪ್ಟೆಂಬರ್, 2022ರಂದು ಸದಸ್ಯರ ನೋಂದಣಿ ಪುಸ್ತಕದಲ್ಲಿ ಅಥವಾ ಡೆಪಾಸಿಟರೀಸ್‌ರವರು ನಿರ್ವಹಿಸುವ ಫಲಾನುಭವಿ ಮಾಲೀಕರ ನೋಂದಣಿ ಪುಸ್ತಕದಲ್ಲಿ ಹೆಸರನ್ನು ದಾಖಲಿಸಿರುವ ವ್ಯಕ್ತಿಯು ರಿಮೋಟ್ ಇ–ಮತದಾನ ಅಥವಾ ಎಜಿಎಂ ಸಂದರ್ಭದಲ್ಲಿ ಇ–ಮತದಾನ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಒಮ್ಮೆ ನಿರ್ಣಯಕ್ಕೆ ಅನುಸಾರ ಮತಚಲಾಯಿಸಿದ ಸದಸ್ಯರು ತದನಂತರ ಬದಲಾಯಿಸಲು ಅವಕಾಶವಿರುವುದಿಲ್ಲ.
5. ಎಜಿಎಂಗೆ ಮುಂಚಿತವಾಗಿ ರಿಮೋಟ್ ಇ–ಮತದಾನದ ಮೂಲಕ ಮತ ಚಲಾಯಿಸಿದ ಸದಸ್ಯರು ಎಜಿಎಂಗೆ ವಿಸಿ / ಒಎವಿಎಂ ಮೂಲಕ ಹಾಜರಾಗಬಹುದು ಆದರೆ ಸಭೆಯಲ್ಲಿ ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ. ಆದಾಗ್ಯೂ, ರಿಮೋಟ್ ಇ–ಮತದಾನದ ಮೂಲಕ ನಿರ್ಣಯಗಳ ಮೇಲೆ ತಮ್ಮ ಮತಗಳನ್ನು ಚಲಾಯಿಸದ ಸದಸ್ಯರು ಮತ್ತು ಹಾಗೆ ಮಾಡುವುದನ್ನು ನಿರ್ಬಂಧಿಸದಿದ್ದರೆ, ಎಜಿಎಂ ಸಮಯದಲ್ಲಿ ಇ–ಮತದಾನದ ವ್ಯವಸ್ಥೆಯ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.
6. ಇ–ಮತದಾನದ ಕುರಿತಾಗಿ ವಿಚಾರಣೆಗಾಗಿ:

ಎ. ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ನಾನ್ ಇಂಡಿವಿಜುವಲ್ ಸದಸ್ಯರು ಮತ್ತು ಭೌತಿಕ ರೂಪದಲ್ಲಿ ಸೆಕ್ಯೂರಿಟಿಗಳನ್ನು ಹೊಂದಿರುವ ಸದಸ್ಯರು ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಅವರನ್ನು ಟೋಲ್ ಫ್ರೀ ಸಂಖ್ಯೆ 1–800–309–4001 ಮೂಲಕ ಸಂಪರ್ಕಿಸುವುದು ಅಥವಾ **einward.ris@kfintech.com** ಮತ್ತು **evoting@ kfintech.com**ಗೆ ಬರೆಯುವುದು. ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ ಸದಸ್ಯರು ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ನ ಶ್ರೀ ಶಿವಕುಮಾರ್‌ರವರನ್ನು **shivakumar.n@kfintech.com** ಅಥವಾ 040–67162222ನಲ್ಲಿ ಸಂಪರ್ಕಿಸಬಹುದು.

ಬಿ. NSDL ಮೂಲಕ ಷೇರುಗಳನ್ನು ಹೊಂದಿರುವ ಇಂಡಿವಿಜುವಲ್ ಸದಸ್ಯರು **evoting@nsdl.co.in**ಗೆ ಬರೆಯುವ ಮೂಲಕ ಅಥವಾ ಟೋಲ್ ಫ್ರೀ ಸಂಖ್ಯೆ 1800 1020 990 ಮತ್ತು 1800 22 44 30ಕ್ಕೆ ಕರೆಮಾಡುವ ಮೂಲಕ NSDL ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು.

ಸಿ. CDSL ಮೂಲಕ ಷೇರುಗಳನ್ನು ಹೊಂದಿರುವ ಇಂಡಿವಿಜುವಲ್ ಸದಸ್ಯರು **helpdesk.evoting@cdslindia.com**ಗೆ ಬರೆಯುವ ಮೂಲಕ ಅಥವಾ 022– 23058738 ಅಥವಾ 022–23058542–43ಕ್ಕೆ ಕರೆಮಾಡುವ ಮೂಲಕ CDSL ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು.

ವಕ್ತಾರರ ನೋಂದಣಿ ಪಡೆಯುವ ವಿಧಾನ:

ಎಜಿಎಂ ಸಂದರ್ಭದಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅಥವಾ ಪ್ರಶ್ನೆಗಳನ್ನು ಕೇಳಲು ಬಯಸುವ ಸದಸ್ಯರು ತಮ್ಮ ಹೆಸರು, ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ/ಫೋಲಿಯೋ ಸಂಖ್ಯೆ, ಪ್ಯಾನ್, ಮೊಬೈಲ್ ಸಂಖ್ಯೆಯನ್ನು https://emeetings.kfintech.com ನಲ್ಲಿ ನಮೂದಿಸಿ ಸೆಪ್ಟೆಂಬರ್ 25, 2022 (ಬೆಳಿಗ್ಗೆ 9:00 ಗಂಟೆ ಐಎಸ್‌ಟಿ) ನಿಂದ ಸೆಪ್ಟೆಂಬರ್ 26, 2022 (ಸಂಜೆ 5:00 ಗಂಟೆ ಐಎಸ್‌ಟಿ) ವರೆಗೆ ತಮ್ಮ ನೋಂದಾಯಿತ ಇಮೇಲ್ ವಿಳಾಸದಿಂದ ವಕ್ತಾರರಾಗಿ ನೋಂದಾಯಿಸಿಕೊಳ್ಳಬಹುದು. ತಮ್ಮನ್ನು ವಕ್ತಾರರಾಗಿ ನೋಂದಾಯಿಸಿಕೊಂಡ ಸದಸ್ಯರಿಗೆ ಮಾತ್ರ ಎಜಿಎಂ ಸಂದರ್ಭದಲ್ಲಿ ತಮ್ಮ ಅಭಿಪ್ರಾಯಗಳನ್ನು / ಪ್ರಶ್ನೆಗಳನ್ನು ಕೇಳಲು ಅನುಮತಿಸಲಾಗುತ್ತದೆ. ಎಜಿಎಂಗಾಗಿ ಲಭ್ಯವಿರುವ ಸಮಯವನ್ನು ಅವಲಂಬಿಸಿ ವಕ್ತಾರರ ಸಂಖ್ಯೆಯನ್ನು ನಿರ್ಬಂಧಿಸುವ ಹಕ್ಕನ್ನು ಕಂಪನಿ ಹೊಂದಿದೆ.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಶ್ರೀತಿ ಎಂ ಎಸ್
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 5ನೇ ಸೆಪ್ಟೆಂಬರ್ 2022

PUBLIC NOTICE

The General Public are hereby informed that, our client intends to purchase the immovable property bearing Old Survey Number 17, New Survey Number 41, measuring 2 Acres 30 ½ Guntas on the Southern Side out of 4 Acres situated at Venkatapura Village, Kundana Hobli, Devanahalli Taluk Bangalore Rural District, which is morefully described hereunder and hereinafter referred to as **Schedule Property** belonging to **Mr.Praveen Kumar Roddam,** S/o. Mr.Surendra Babu Roddam residing at No.A-1002 Bairavi Cruz Luxor Apartment, Opp. St.Rocks church, Chellekeri Main Road, Kalyannagar, Bengaluru 560 046.

Any person or persons asserting any right, title, interest or claim in the Schedule Property should write to the undersigned within **11 DAYS** from the date of issuance of this notice with all documentary proof on which they are basing and asserting their rights with regard to Schedule Property or any part thereof, after which period we shall proceed on the basis that there are no claims of whatsoever nature with regard to the said property.

SCHEDULE PROPERTY

All that piece and parcel of the immovable property bearing Old Survey Number 17, New Survey Number 41 measuring 2 Acres 30 ½ Guntas on southern side out of 4 Acres situated at Venkatapura Village Kundana Hobli, Devanahalli Taluk, Bangalore Rural District and bounded on :
East by : Government Road
West by : Property Belonging to Mayasandra Krishnappa and Rajanna
North by : Retained Portion of Mr.Manjunath S.V in Sy.No. 41
South by : Lingadeeragollahalli Village Boundary.

M.P. Jagannatha
For **Sundaramurthy & Sundaramurthy**
Advocates and Legal Consultants
5/1, Crescent Heights, Cunningham Crescent Road
Bangalore-560 052. Ph No.080-41513222/ 41514222,
Email: law@sundaramurthylegalconsultants.com

ಲೋಕೋಪಯೋಗಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್, ಚಿಕ್ಕಬಳ್ಳಾಪುರ ವಿಭಾಗ,
ಚಿಕ್ಕಬಳ್ಳಾಪುರ

ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 13/2022–23, ದಿನಾಂಕ: 23.08.2022

(ರಸ್ತೆ ಕಾಮಗಾರಿಗಾಗಿ--ಸ್ಟಾಂಡರ್ಡ್ ಬಿಡ್ಡಿಂಗ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–2, 3 ಮತ್ತು 4ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **ದಿನಾಂಕ: 29.08.2022ರಿಂದ 07.09.2022ರ ಸಂಜೆ 4.00 ಘಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. (1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: **30.08.2022 (ಮಧ್ಯಾಹ್ನ 3.00 ಘಂಟೆಗೆ ಕಛೇರಿ ವೇಳೆಯಲ್ಲಿ).** (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: **07.09.2022 (ಸಂಜೆ 4.00 ಘಂಟೆಯವರೆಗೆ).** (3) ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **09.09.2022 ಬೆಳಿಗ್ಗೆ 11.00 ಘಂಟೆಗೆ.** ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ
ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 242/ಎಂಸಿಎ/2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೈಋತ್ಯ ರೈಲ್ವೆ
ಟೆಂಡರ್ ಸೂಚನೆ ಸಂ. Y/E. 29/2022-23/14
ದಿನಾಂಕ: 26.08.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
22 ಎಲ್‌ಸಿ ಗೇಟ್‌ಗಳಲ್ಲಿ ಸಮಗ್ರ ವಿದ್ಯುತ್ ಪೂರೈಕೆಯನ್ನು, 15 ಇಂಟರ್‌ಲಾಕ್‌ಡ್ ಎಲ್‌ಸಿ ಗೇಟ್‌ಗಳಿಗೆ ಆರ್‌ಟಿಯು ಒದಗಿಸುವುದು – ವಿದ್ಯುತ್ ವ್ಯವಸ್ಥೆಗಳು.	ರೂ. 23,00,545/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16-09-2022, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನೀಯರ್
ಮೈಸೂರು
PUB/336/AAV/PRB/SWR/2022-23
S.W.Railways SWRRLY SWRRLY

ನೈಋತ್ಯ ರೈಲ್ವೆ
ಟೆಂಡರ್ ಸೂಚನೆ ಸಂ. SBC-GSU-WELD-02
ದಿನಾಂಕ: 26.08.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ವಿವರಣೆ	ಅಂದಾಜು ಮೌಲ್ಯ
1	ಸಿಪಿಎಂ/ಜಿಎಸ್/ಬೆಂಗಳೂರು ಅಡಿಯಲ್ಲಿ 1. ಪ್ರಸ್ತಾವಿತ ಬೆಂಗಳೂರು ಕಂಟೋನ್ಮೆಂಟ್ – ವೈಟ್‌ಫೀಲ್ಡ್ ಚತುಷ್ಪಥ. 2. ಬೆಂಗಳೂರು ಕಂಟೋನ್ಮೆಂಟ್ ಯಾರ್ಡ್ 3. ಹೊಸೂರು ಯಾರ್ಡ್ 4. ಬೆಂಗಳೂರು ಸಿಟಿ ಯಾರ್ಡ್ ಮತ್ತು ಇತರ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಲ್ಯುಮಿನೊ ಥರ್ಮಿಟ್ ಎಸ್‌ಕೆವಿ ಪ್ರಕ್ರಿಯೆಯಿಂದ 60 ಕೆಜಿ /52 ಕೆಜಿ ಹಳಿಗಳ ಪ್ರಸ್ತಾವಿತ ವೆಲ್ಡಿಂಗ್, ಬಿಜಿ ಟ್ರ್ಯಾಕ್‌ನಲ್ಲಿ ಸಂಯೋಜಿತ ರೈಲು ಜಾಯಿಂಟ್ ಮತ್ತು ಫ್ಲಾಶ್ ಬಟ್ ವೆಲ್ಡಿಂಗ್.	ರೂ. 2,42,77,500/-
2	ಸಿಪಿಎಂ/ಜಿಎಸ್/ಬೆಂಗಳೂರು ಅಡಿಯಲ್ಲಿ 1. ಪ್ರಸ್ತಾವಿತ ಬೆಂಗಳೂರು ಕಂಟೋನ್ಮೆಂಟ್ – ವೈಟ್‌ಫೀಲ್ಡ್ ಚತುಷ್ಪಥ 2. ಬೆಂಗಳೂರು ಕಂಟೋನ್ಮೆಂಟ್ ಯಾರ್ಡ್ 3. ಹೊಸೂರು ಯಾರ್ಡ್ 4. ಬೆಂಗಳೂರು ಸಿಟಿ ಯಾರ್ಡ್ ಮತ್ತು ಇತರ ಕೆಲಸಗಳಿಗೆ ಸಂಬಂಧಿಸಿದಂತೆ 52 ಕೆಜಿ ಮತ್ತು 60 ಕೆಜಿ ಇನ್ ಸಿಟು ಗ್ಲೂಡ್ ಜಾಯಿಂಟ್‌ಗಳ ಫ್ಯಾಬ್ರಿಕೇಷನ್.	ರೂ. 2,14,68,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21-09-2022, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಇಂಜಿನೀಯರ್/ಕೋ–ಆರ್ಡ್
ಬೆಂಗಳೂರು
PUB/334/AAV/PRB/SWR/2022-23
S.W.Railways SWRRLY SWRRLY

‘ತನಿಖೆಯಾದರೆ ವ್ಯಾಪಾರ ಸೌಧದ ಚಿತ್ರಣ ಬಯಲು’

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಹಗರಣದ ತನಿಖೆ ಸರಿಯಾಗಿ ನಡೆದರೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ವಿಧಾನಸೌಧವು ವ್ಯಾಪಾರ ಸೌಧವಾಗಿ ಬದಲಾಗಿರುವುದರ ಸ್ಪಷ್ಟ ಚಿತ್ರಣ ಹೊರಬೀಳಲಿದೆ ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಹೇಳಿದರು.

ಶಾಸಕ ಬಸವರಾಜ ದಡೇಸೂಗೂರ್ ಅವರ ಮೊಬೈಲ್ ಸಂಭಾಷಣೆ ಕುರಿತು ಪ್ರತಿಕ್ರಿಯಿಸಿದರು. ‘ಅಭ್ಯರ್ಥಿಯೊಬ್ಬರಿಂದ ₹ 15 ಲಕ್ಷ ಪಡೆದಿರುವುದಾಗಿ ದಡೇಸೂಗೂರ್ ಒಪ್ಪಿಕೊಂಡಿದ್ದಾರೆ. ಆದರೆ, ‘ನಾನು ಕೊಲೆ ಮಾಡಿಲ್ಲ, ಕೊಲೆ ಯತ್ನ ಮಾಡಿದ್ದೆ’ ಎಂಬ ಅರ್ಥದಲ್ಲಿ ಮಾತನಾಡುತ್ತಿದ್ದಾರೆ. ಪಿಎಸ್‌ಐ ನೇಮಕಾತಿ ಅಕ್ರಮದ ಹಗರಣವನ್ನು ಪರೀಕ್ಷಾ ಕೇಂದ್ರಕ್ಕೆ ಸೀಮಿತಗೊಳಿಸಲು ಸರ್ಕಾರ ಯತ್ನಿಸುತ್ತಿದೆ ಎಂದು ಹಿಂದೆಯೇ ಹೇಳಿದ್ದೆ. ಪ್ರಕರಣದಲ್ಲಿ ಬಂಧಿತರಾಗಿರುವ ಐಪಿಎಸ್ ಅಧಿಕಾರಿಗೆ ಸತ್ಯ ಬಹಿರಂಗಪಡಿಸಲು ಅವಕಾಶ ನೀಡಬೇಕು’ ಎಂದರು.

ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ ಪ್ರಾಥಮಿಕ, ಪ್ರೌಢಶಾಲೆ ಶಿಕ್ಷಕರು

ತವರು ಜಿಲ್ಲೆಗೆ ವರ್ಗಾವಣೆ: ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸುಮಾರು ವರ್ಷಗಳಿಂದ ಕುಟುಂಬ ಹಾಗೂ ಸಂಬಂಧಿಕರಿಂದ ದೂರವಿದ್ದುಕೊಂಡು ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ತವರು ಜಿಲ್ಲೆಗೆ ವರ್ಗಾವಣೆಯಾಗಲು ಅವಕಾಶ ನೀಡಬೇಕು’ ಎಂದು ಆಗ್ರಹಿಸಿ ಪ್ರಾಥಮಿಕ ಹಾಗೂ ಪ್ರೌಢಶಾಲೆ ಶಿಕ್ಷಕರು ನಗರದಲ್ಲಿ ಸೋಮವಾರದಿಂದ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದಾರೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ ನಗರಕ್ಕೆ ಬಂದಿರುವ ಶಿಕ್ಷಕರು, ಸ್ವಾತಂತ್ರ್ಯ ಉದ್ಯಾನದಲ್ಲಿ ಕುಳಿತು ರಾಜ್ಯ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ‘ತವರು ಜಿಲ್ಲೆಗೆ ವರ್ಗಾವಣೆ ಕೊಡಿ. ಮಾನಸಿಕ ಕಿರಿಕಿರಿ ತಪ್ಪಿಸಿ’ ಸೇರಿ ಹಲವು ಘೋಷಣಾ ಫಲಕಗಳನ್ನು ಸೋಮವಾರ ಪ್ರದರ್ಶಿಸಿದರು. ಕೆಲ ಶಿಕ್ಷಕರು, ತಮ್ಮ ಮಕ್ಕಳನ್ನು ಪ್ರತಿಭಟನಾ ಸ್ಥಳಕ್ಕೆ ಕರೆ ತಂದಿದ್ದು ಕಂಡುಬಂತು.

‘ರಾಜ್ಯದ 2,500ಕ್ಕೂ ಹೆಚ್ಚು ಶಿಕ್ಷಕರು, 10ರಿಂದ 20 ವರ್ಷಗಳಿಂದ ಸ್ವಂತ ಜಿಲ್ಲೆಯಿಂದ ಸುಮಾರು 500 ಕಿ.ಮೀ. ದೂರವಿದ್ದುಕೊಂಡು ಕೆಲಸ ಮಾಡುತ್ತಿದ್ದಾರೆ. ಹಲವು ವರ್ಷ ಕಳೆದರೂ ವರ್ಗಾವಣೆ ಸಿಗದಿದ್ದರಿಂದ, ಮಾನಸಿಕವಾಗಿ ಶಿಕ್ಷಕರು ಸಾಕಷ್ಟು ನೋವುಗಳನ್ನು ಅನುಭವಿಸುತ್ತಿದ್ದಾರೆ’ ಎಂದು ಪ್ರತಿಭಟನಕಾರರು ಅಳಲು ತೋಡಿಕೊಂಡರು.

‘ತಂದೆ–ತಾಯಿ, ಅತ್ತೆ–ಮಾವ, ಪತಿ–ಪತ್ನಿ, ಮಕ್ಕಳು... ಹೀಗೆ ಕುಟುಂಬದ ಸದಸ್ಯರ ಜೊತೆ ಕಾಲ ಕಳೆಯಲು ಸಾಧ್ಯವಾಗುತ್ತಿಲ್ಲ. ಕೆಲ ಶಿಕ್ಷಕರ ಕೌಟುಂಬಿಕ ಜೀವನವೇ ಹಾಳಾಗಿದ್ದು, ಒಂಟಿಯಾಗಿ ಜೀವಿಸುವ ಸ್ಥಿತಿ ಬಂದಿದೆ’ ಎಂದು ಹೇಳಿದರು.

‘ನಮ್ಮ ಸೇವಾವಧಿಯಲ್ಲೇ ತವರು ಜಿಲ್ಲೆಗೆ ವರ್ಗಾವಣೆ ಪಡೆಯಲು ಅವಕಾಶ ಕೋರಿ ಎರಡು ಬಾರಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗಿತ್ತು. ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದ ಶಿಕ್ಷಣ ಇಲಾಖೆ, ಇದುವರೆಗೂ ಸ್ಪಂದಿಸಿಲ್ಲ. ಹೀಗಾಗಿ, ಮೂರನೇ ಬಾರಿ ಧರಣಿ ಆರಂಭಿಸುತ್ತಿದ್ದೇವೆ. ಬೇಡಿಕೆ ಈಡೇರಿಸುವವರೆಗೂ ಧರಣಿ ಮುಂದುವರಿಯಲಿದೆ’ ಎಂದರು.

‘ತವರು ಜಿಲ್ಲೆಗೆ ವರ್ಗಾವಣೆ ನೀಡಬೇಕು’ ಎಂದು ಒತ್ತಾಯಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಧರಣಿ ಆರಂಭಿಸಿದ ಪ್ರಾಥಮಿಕ, ಪ್ರೌಢಶಾಲೆ ಶಿಕ್ಷಕರು, ತಮ್ಮೊಂದಿಗೆ ಮಕ್ಕಳನ್ನೂ ಕರೆತಂದು ಧರಣಿ ಸ್ಥಳದಲ್ಲಿ ಕುಳಿತಿದ್ದರು. –ಪ್ರಜಾವಾಣಿ ಚಿತ್ರ

ಗೂಗಲ್ ಗುರು, ಶಿಕ್ಷಕರ ಮಧ್ಯೆ ಸ್ಪರ್ಧೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂತ್ರಜ್ಞಾನ ವಿಶ್ವವನ್ನೇ ಆಳುತ್ತಿದೆ. ಬದಲಾದ ಜಗತ್ತಿನಲ್ಲಿ ಬುದ್ಧಿಜೀವಿಗಳಾದ ಪ್ರಾಧ್ಯಾಪಕರೂ ಗೂಗಲ್ ಗುರುವಿನ ಸ್ಪರ್ಧೆ ಎದುರಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಸೋಮವಾರ ಇಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮನುಷ್ಯರ ಮೌಲ್ಯಗಳೂ ತಂತ್ರಜ್ಞಾನದಿಂದಲೇ ನಿರ್ದೇಶಿತವಾಗುತ್ತಿವೆ. ವಿಜ್ಞಾನ, ತಂತ್ರಜ್ಞಾನದ ಜತೆಗೆ ನೈತಿಕ ಮೌಲ್ಯಗಳು ಬೆರೆತಾಗ ಸನ್ಮಾರ್ಗದ ಉನ್ನತಿ ಸಾಧ್ಯವಾಗುತ್ತದೆ. ಹಾಗಾಗಿ, ಶಿಕ್ಷಕರು ಜೀವನಕ್ಕೆ ಹತ್ತಿರವಾದ ಬೋಧನೆಯಲ್ಲಿ ತಮ್ಮನ್ನು ತೊಡಗಿಸಿ ಕೊಳ್ಳಬೇಕು. ಬೋಧನೆಯನ್ನು ಬದುಕಿನ ಜತೆ ಬೆಸೆಯಬೇಕು. ಚಿಂತನಾ ಪ್ರಕ್ರಿಯೆಗೆ ಶಿಸ್ತು, ಮಕ್ಕಳ ಮುಗ್ಧತೆ ಮತ್ತು ಕುತೂಹಲ ಉಳಿಸಿಕೊಳ್ಳುವುದೇ ಈಗಿರುವ ಸವಾಲು ಎಂದು ಪ್ರತಿಪಾದಿಸಿದರು.

ಮೂರು ವರ್ಷಗಳ ಪರಿಶ್ರಮದಿಂದ ರೂಪಿಸಿರುವ ಎನ್‌ಇಪಿ ಪಠ್ಯಕ್ರಮ ಜಾರಿಯಲ್ಲಿ ಶಿಕ್ಷಕರು ನಿರ್ಣಾಯಕ ಪಾತ್ರ ವಹಿಸಬೇಕು. ಪರಿಣತರು, ವಿಷಯ ತಜ್ಞರು, ಉದ್ಯಮಿಗಳು ಒಂದೆಡೆ ಕೂತು ಪಠ್ಯಗಳನ್ನು ರೂಪಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ರಾಜ್ಯ ಸರ್ಕಾರ ಹೊಸ ಕಾಲೇಜುಗಳಿಗೆ ಅನುಮತಿ ನೀಡುತ್ತಿಲ್ಲ. ಇರುವ ಕಾಲೇಜುಗಳಲ್ಲೇ ಶಿಕ್ಷಣದ ಗುಣಮಟ್ಟ ಹೆಚ್ಚಿಸುತ್ತಿದೆ. ಉನ್ನತ ಶಿಕ್ಷಣದಲ್ಲಿ ವಿಕೇಂದ್ರೀಕರಣ, ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ ತರಲು ಸದ್ಯದಲ್ಲೇ ಸೂಕ್ತ ಶಾಸನ ಜಾರಿಗೆ ತರಲಾಗುತ್ತಿದೆ ಎಂದು ಹೇಳಿದರು.

ಶಿಕ್ಷಣ ಕ್ಷೇತ್ರದಲ್ಲಿ ಹಿಂದೆ ಇದ್ದ ವಿಐಪಿ ಸಂಸ್ಕೃತಿ ಕೊನೆಗೊಳಿಸಿ, ಪ್ರತಿಭೆಗೆ ಮನ್ನಣೆ ಕೊಡಲಾಗುತ್ತಿದೆ. ಪದವಿ ಕಾಲೇಜು ಅಧ್ಯಾಪಕರಿಗೂ ಪ್ರಾಧ್ಯಾಪಕ ಸ್ಥಾನ ನೀಡಲಾಗುತ್ತಿದ್ದು, ಕುಲಪತಿಗಳಾಗುವ ಅವಕಾಶ ಕಲ್ಪಿಸಲಾಗಿದೆ. ವಿಶ್ವವಿದ್ಯಾಲಯಗಳ ಆಡಳಿತದಲ್ಲೂ ಪಾರದರ್ಶಕತೆ ತರಲಾಗಿದೆ ಎಂದು ವಿವರ ನೀಡಿದರು. ಗದಗಿನ ರಾಮಕೃಷ್ಣ- ವಿವೇಕಾನಂದ ಆಶ್ರಮದ ನಿರ್ಭಯಾನಂದ ಸರಸ್ವತಿ ಮಹಾರಾಜ್ ಆಶಯ ಭಾಷಣ ಮಾಡಿದರು.

‘ಶತ್ರುವಿನಂತೆ ಕಂಡ ಲಜ್ಜೆಗೆಟ್ಟ ಸಮಾಜ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜವಾಹರಲಾಲ್ ನೆಹರೂ ಹಾಗೂ ಮಹಾತ್ಮ ಗಾಂಧಿ ಅವರ ಹೋರಾಟಗಳನ್ನೇ ಸುಳ್ಳಾಗಿಸುವ ಪ್ರಯತ್ನಗಳು ನಡೆಯುತ್ತಿವೆ’ ಎಂದು ಶಾಸಕ ಕೆ.ಆರ್.ರಮೇಶ್‌ಕುಮಾರ್ ವಿಷಾದಿಸಿದರು.

ಸೋಮವಾರ ನಡೆದ ಕಲಾ ಗಂಗೋತ್ರಿಯ 50ನೇ ವರ್ಷದ ರಂಗಹಬ್ಬದಲ್ಲಿ ‘ಮುಖ್ಯಮಂತ್ರಿ’ ಚಂದ್ರು ಅವರು ರಚಿಸಿರುವ ತಮ್ಮ ಜೀವನ ಪಯಣದ ‘ರಂಗವನದ ಚಂದ್ರತಾರೆ’ ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು. ‘ರಾಜಕಾರಣಿಗಳು ಸುಳ್ಳನ್ನೇ ಸತ್ಯವೆಂದು ಪ್ರತಿಪಾದಿಸುತ್ತಿದ್ದರೂ ಜನರು ಮಾತ್ರ ನಿದ್ರಾವಸ್ಥೆಯಲ್ಲೇ ಇದ್ದಾರೆ’ ಎಂದು ಬೇಸರಿಸಿದರು.

ನಗರದಲ್ಲಿ ಸೋಮವಾರ ನಡೆದ ಕಲಾ ಗಂಗೋತ್ರಿಯ 50ನೇ ವರ್ಷದ ರಂಗಹಬ್ಬದಲ್ಲಿ ‘ಮುಖ್ಯಮಂತ್ರಿ’ ಚಂದ್ರು ಅವರನ್ನು ಅಭಿನಂದಿಸಲಾಯಿತು.

‘ರಾಜ್ಯದಲ್ಲಿ ಆಸ್ಪತ್ರೆಗಳಲ್ಲಿನ ಅವ್ಯವಸ್ಥೆ ಸುಧಾರಿಸಲು ಮುಂದಾಗಿದ್ದಕ್ಕೆ ನಾನೇ ಶತ್ರುವಾದೆ. ಯಾರೂ ನನ್ನ ಪರವಾಗಿ ಮಾತನಾಡಲಿಲ್ಲ. ಇದು ಲಜ್ಜೆಗೆಟ್ಟ ಸಮಾಜ. ನೋವು ವ್ಯಕ್ತಪಡಿಸುತ್ತಿಲ್ಲ. ಸ್ಪಂದಿಸುತ್ತಿಲ್ಲ. ಮಹಾತ್ಮ ಗಾಂಧಿಯನ್ನೇ ಹತ್ಯೆ ಮಾಡಿದ ಮೇಲೆ ಮತ್ತೇನು ಉಳಿದಿದೆ’ ಎಂದು ಹೇಳಿದರು.

‘ಇಂದಿನ ಸ್ಥಿತಿಯಲ್ಲಿ ಹೃದಯಹೀನರದ್ದೇ ಮೇಲುಗೈಯಾಗಿದೆ. ಪ್ರಜಾಸತ್ತಾತ್ಮಕ ಮೌಲ್ಯಗಳು ಕುಸಿದಿವೆ. ಕಣ್ಣೆದುರಿಗೇ ಅಚಾತುರ್ಯಗಳು ಘಟಿಸಿದರೂ ಪ್ರಶ್ನಿಸುವ ಮನೋಭಾವ ಕಳೆದುಕೊಂಡಿದ್ದೇವೆ’ ಎಂದರು.

ಮೈಕ್ ಕಂಡರೆ ಭಯ: ‘ವಿಧಾನಸಭೆ ಸಭಾಪತಿಯಾಗಿದ್ದ ವೇಳೆ ಕಾನೂನು ಪಾಲಿಸಿದ್ದಕ್ಕೆ ಬಟ್ಟೆ ಒಗೆದಂತೆ ಜನರು ನನ್ನನ್ನು ಒಗೆದುಬಿಟ್ಟರು. ಜನರೂ ಸತ್ಯ ಹೇಳುವುದಕ್ಕೆ ಭಯ ಬೀಳುತ್ತಿದ್ದಾರೆ. ಸಾವಿರ ನಾಗರಹಾವುಗಳು ಬಂದರೂ ಹೆದರುವುದಿಲ್ಲ. ಮಾಧ್ಯಮಗಳ ಮೈಕ್ ಕಂಡರೆ ಭಯ’ ಎಂದರು.

ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್ ಮಾತನಾಡಿ, ‘ಮುಖ್ಯಮಂತ್ರಿ’ ಚಂದ್ರು ಅವರು ರಂಗಭೂಮಿ ಹಾಗೂ ಚಲನಚಿತ್ರ ಕ್ಷೇತ್ರವನ್ನು ಶ್ರೀಮಂತಗೊಳಿಸಿದವರು. ಅನೇಕ ಪ್ರಯೋಗ ಮಾಡಿದ್ದಾರೆ. ತಮ್ಮ ಕೃತಿಯಲ್ಲಿ ಯಾವುದನ್ನೂ ಬಚ್ಚಿಡದೇ ಎಲ್ಲ ವಿಚಾರವನ್ನೂ ದಾಖಲಿಸಿದ್ದಾರೆ’ ಎಂದು ಹೇಳಿದರು.ಜಯದೇವ ಆಸ್ಪತ್ರೆ ನಿರ್ದೇಶಕ ಡಾ.ಮಂಜುನಾಥ್ ಅವರು ಮಾತನಾಡಿ, ‘ನಿಜವಾದ ಭಾರತದ ದರ್ಶನ ಆಗಬೇಕಿದ್ದರೆ ರೈಲಿನಲ್ಲಿ ಪ್ರಯಾಣ ಮಾಡಬೇಕು. ಅಲ್ಲಿ ಕಾಣುವ ಭಾರತ ಹಸಿವು, ಬಡತನದ್ದು’ ಎಂದು ವಿಷಾದಿಸಿದರು.

ಮಾಜಿ ಶಾಸಕ ವೈ.ಎಸ್.ವಿ.ದತ್ತ ಅವರು ರಾಜಕೀಯ ಕ್ಷೇತ್ರವು ಹೊರಗಿನಿಂದ ಕಾಣಲು ಚೆನ್ನಾಗಿದೆ. ಒಳಗಿನ ವ್ಯವಸ್ಥೆ ಅಸಹ್ಯ ಹುಟ್ಟಿಸುತ್ತಿದೆ ಎಂದು ಹೇಳಿದರು. ಆಮ್ ಆದ್ಮಿ ಪಕ್ಷದ ರಾಜ್ಯ ಅಧ್ಯಕ್ಷ ಪೃಥ್ವಿ ರೆಡ್ಡಿ, ‘ಮುಖ್ಯಮಂತ್ರಿ’ ಚಂದ್ರು, ದೆಹಲಿ ಶಾಸಕ ದಿಲೀಪ್ ಪಾಂಡೆ, ಡಾ.ಬಿ.ವಿ.ರಾಜಾರಾಂ ಅವರು ಹಾಜರಿದ್ದರು.

ಭೀಮನಾಯ್ಕರಿಂದ ಶಿಕ್ಷಕರಿಗೆ ಬೆಳ್ಳಿ ನಾಣ್ಯ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಕಾಂಗ್ರೆಸ್ ಶಾಸಕ ಎಲ್.ಬಿ.ಪಿ. ಭೀಮನಾಯ್ಕ ಅವರು ಶಿಕ್ಷಕರ ದಿನಾಚರಣೆಯಂದು ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಶಿಕ್ಷಕರಿಗೆ ಬೆಳ್ಳಿ ನಾಣ್ಯ ಕಾಣಿಕೆಯಾಗಿ ನೀಡಿದ್ದಾರೆ.

ತಾಲ್ಲೂಕು ಆಡಳಿತವು ಸೋಮವಾರ ಶಿಕ್ಷಕರ ದಿನಾಚರಣೆ ಏರ್ಪಡಿಸಿತ್ತು. ಕಾರ್ಯಕ್ರಮದಲ್ಲೇ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಸಿಬ್ಬಂದಿ, ನಿವೃತ್ತ ಶಿಕ್ಷಕರಿಗೆ ಶಾಸಕರು ಏಳು ಗ್ರಾಂ ತೂಕದ ನಾಣ್ಯ ವಿತರಿಸಿದ್ದಾರೆ. ನಾಣ್ಯದ ಒಂದು ಬದಿಯಲ್ಲಿ ಮಾಜಿ ರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್ ಚಿತ್ರವಿದೆ. ಇನ್ನೊಂದು ಬದಿಯಲ್ಲಿ ಶಾಸಕರ ಹೆಸರಿದೆ.

‘ಶಿಕ್ಷಕರಿಗೆ ಗೌರವ ಸಲ್ಲಿಸಲು ಕ್ಷೇತ್ರದ ಎಲ್ಲ ಶಿಕ್ಷಕರಿಗೆ ಬೆಳ್ಳಿ ನಾಣ್ಯ ನೀಡಲಾಗಿದೆ. ಇದರಲ್ಲಿ ಬೇರೆ ಉದ್ದೇಶ ಇಲ್ಲ’ ಎಂದು ಭೀಮ ನಾಯ್ಕ ಪ್ರತಿಕ್ರಿಯಿಸಿದ್ದಾರೆ.

‘ದೇಣಿಗೆ, ಕಾಣಿಕೆ ಕೊಡುವುದು ಇದ್ದರೆ ಅನುಮತಿ ಪಡೆಯಬೇಕು. ರಾಜ್ಯ ಸರ್ಕಾರಿ ನೌಕರರು ₹5 ಸಾವಿರಕ್ಕಿಂತ ಮೇಲಿನ ಕಾಣಿಕೆ ಪಡೆಯಲು ಅನುಮತಿ ಪಡೆಯಬೇಕಾಗುತ್ತದೆ’ ಎಂದು ಜಿಲ್ಲಾಧಿಕಾರಿ ಅನಿರುದ್ಧ್ ಶ್ರವಣ್ ಪಿ. ತಿಳಿಸಿದರು.

‘ನಾಣ್ಯ ವಿತರಿಸಿರುವುದು ನನಗೆ ಗೊತ್ತಿಲ್ಲ. ಅನುಮತಿ ಪಡೆದಿಲ್ಲ’ ಎಂದು ಡಿಡಿಪಿಐ ಜೆ.ಕೊಟ್ರೇಶ್ ಹೇಳಿದ್ದಾರೆ.

ನಗರದಲ್ಲಿ ಇಂದು

2022ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ, 2021ನೇ ಸಾಲಿನ ಪುಸ್ತಕ ಬಹುಮಾನ ವಿತರಣೆ, ಪ್ರಾಧಿಕಾರದ ವಿವಿಧ ಪುಸ್ತಕಗಳ ಬಿಡುಗಡೆ ಸಮಾರಂಭ: ಪ್ರಶಸ್ತಿ ಪ್ರದಾನ: ವಿ.ಸುನಿಲ್ ಕುಮಾರ್, ಅತಿಥಿಗಳು: ಶಾ.ಮಂ. ಕೃಷ್ಣರಾಯ, ಎನ್. ಮಂಜುಳಾ, ಪ್ರಕಾಶ್. ಜಿ.ಟಿ. ನಿಟ್ಟಾಲಿ, ಅಧ್ಯಕ್ಷತೆ: ಅಜಕ್ಕಳ ಗಿರೀಶ ಭಟ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಸ್ಥಳ: ನಯನ ಸಭಾಂಗಣ, ಬೆಳಿಗ್ಗೆ 11

‘ಒನ್ ಬಿಲಿಯನ್ ಡ್ರಾಪ್ಸ್’ ಅಭಿಯಾನಕ್ಕೆ ಚಾಲನೆ: ಅತಿಥಿಗಳು: ರಾಜೇಶ್ ಕೃಷ್ಣನ್, ಕೆ. ನಾಗೇಂದ್ರ ಪ್ರಸಾದ್, ಶ್ರೀಕಾಂತ್ ಕರ್ರಾ, ಸ್ಥಳ: ಲಾಲ್‌ಬಾಗ್, ಬೆಳಿಗ್ಗೆ 11

ಆಹಾರ, ಆರೋಗ್ಯ ಮತ್ತು ಅಧ್ಯಾತ್ಮ: ಉದ್ಘಾಟನೆ: ಡಾ.ನೀರಜ ನಾಗೇಂದ್ರ ಕುಮಾರ್, ಉಪಸ್ಥಿತಿ: ಧರ್ಮಸ್ಥಳ ಸುರೇಂದ್ರ ಕುಮಾರ್, ಅನಿತಾ ಸುರೇಂದ್ರ ಕುಮಾರ್, ಅತಿಥಿಗಳು: ಡಾ.ವಿಜಯಲಕ್ಷ್ಮಿ ಬಾಳೇಕುಂದ್ರಿ, ಅಧ್ಯಕ್ಷತೆ: ಡಾ. ರತ್ನಾತ್ರೇಯಾ, ಆಯೋಜನೆ: ತ್ಯಾಗಿ ಸೇವಾ ಸಮಿತಿ ಟ್ರಸ್ಟ್, ಸ್ಥಳ: ರಾಯ ರಾಯ ಕಲ್ಯಾಣ ಮಂಟಪ, ಶಂಕರಪುರ, ಸಂಜೆ 5



ನೆಮ್ಮದಿ ಕಸಿದ ಮಹಾಮಳೆ

ಪ್ರಜಾವಾಣಿ
ಮಂಗಳವಾರ • ಸೆಪ್ಟೆಂಬರ್ 6, 2022

24 ವರ್ಷದ ಬಳಿಕ ತಿಪ್ಪಗೊಂಡನಹಳ್ಳಿ ಭರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಕ್ಕೆ ಮೊದಲ ಬಾರಿಗೆ ನೀರು ಕೊಟ್ಟ ಜಲಾಶಯಗಳಲ್ಲಿ ಒಂದಾದ ತಿಪ್ಪಗೊಂಡನ ಹಳ್ಳಿ ಜಲಾಶಯ 24 ವರ್ಷದ ನಂತರ ಸಂಪೂರ್ಣ ತುಂಬಿದ್ದು, ಗೇಟ್‌ಗಳನ್ನು ತೆರೆದು ನೀರು ಹೊರಬಿಡಲಾಗಿದೆ. ಹೆಸರಘಟ್ಟ ಜಲಾಶಯ ದಾಖಲೆ ಮಟ್ಟದಲ್ಲಿ ನೀರು ಸಂಗ್ರಹ ಕಂಡಿದೆ.

ತಿಪ್ಪಗೊಂಡಹಳ್ಳಿ ಜಲಾಶಯ 1998ರಲ್ಲಿ ತುಂಬಿದ ನಂತರ ಬೃಹತ್ ನೀರಿನ ಹರಿವು ಕಂಡಿರಲಿಲ್ಲ. ಒಂದು ವಾರದಿಂದೀಚೆಗೆ ಅರ್ಕಾವತಿ ನದಿ ಹಾಗೂ ಅದರ ಉಪನದಿ ಕುಮುದ್ವತಿ ಜಲಾನಯನ ಪ್ರದೇಶದಲ್ಲಿ ಅತಿ ಹೆಚ್ಚು ಮಳೆಯಾಗಿದ್ದರಿಂದ ನೀರಿನ ಹರಿವು ಹೆಚ್ಚಾಗಿದೆ. ಹೀಗಾಗಿ ಜಲಾಶಯ 70 ಅಡಿ ನೀರಿನ ಸಂಗ್ರಹವನ್ನು ಸೋಮವಾರ ತಲುಪಿದೆ.

ಜಲಾಶಯದ ಒಟ್ಟಾರೆ ಸಂಗ್ರಹದ 74 ಅಡಿಯಾಗಿದ್ದರೂ, 70 ಅಡಿಯ ಮೇಲಿನ ಸಂಗ್ರಹ ಕಾರ್ಯಸಾಧುವಲ್ಲ ಎಂದು ನೀರನ್ನು ಹೊರಹರಿಸಲಾಗುತ್ತಿದೆ. ಬೆಂಗಳೂರು, ಶಿವಗಂಗೆ ಭಾಗದಿಂದ ನೀರಿನ ಅರಿವು ಹೆಚ್ಚಾಗಿದೆ. ಹೀಗಾಗಿ ನೀರನ್ನು ಜಲಾಶಯದಿಂದ ಹೊರಬಿಡಲಾಗುತ್ತಿದೆ ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದರು.

ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಗೇಟ್ ತೆರೆದು ನೀರು ಹರಿಸಲಾಗುತ್ತಿದೆ

ಮಳೆಗಾಲದ ಅಂತ್ಯ ಹಾಗೂ ನಂತರದ ತಿಂಗಳಲ್ಲಿ ಹೆಚ್ಚಿನ ಮಳೆಯಾದ ನಂತರ ಸುಮಾರು 60 ಅಡಿಯಷ್ಟು ನೀರನ್ನು ತಿಪ್ಪಗೊಂಡನಹಳ್ಳಿ ಜಲಾಶಯ ಕಾಣುತ್ತಿತ್ತು. ಆದರೆ ಈ ಬಾರಿ ಸೆಪ್ಟೆಂಬರ್ ಮೊದಲ ವಾರದಲ್ಲೇ ತುಂಬಿಹೋಗಿದೆ. ತಿಪ್ಪಗೊಂಡನಹಳ್ಳಿಯಿಂದ ಬೆಂಗಳೂರು ನಗರಕ್ಕೆ ದಶಕದ ನಂತರ ಕುಡಿಯುವ ನೀರು ಪೂರೈಕೆ ಯೋಜನೆ ಮುಂದಿನ ಮಾರ್ಚ್‌ನಲ್ಲಿ ಸಾಕಾರಗೊಳ್ಳುವ ನಿರೀಕ್ಷೆ ಇದೆ.

ಇನ್ನು ನಾಲ್ಕು ದಶಕಗಳಿಂದ ನೀರಿನ ಸಂಗ್ರಹ ಕಾಣದೆ, ಅರ್ಕಾವತಿ ನದಿಯ ಹರಿವನ್ನೇ ಅವಲಂಬಿಸಿರುವ ಹೆಸರಘಟ್ಟ ಜಲಾಶಯವೂ ದಾಖಲೆ ಪ್ರಮಾಣದಲ್ಲಿ ನೀರಿನ ಸಂಗ್ರಹ ಕಂಡಿದೆ. 71 ಅಡಿ ಗರಿಷ್ಠ ಸಂಗ್ರಹ ಸಾಮರ್ಥ್ಯ ಹೊಂದಿರುವ ಹೆಸರಘಟ್ಟದಲ್ಲಿ ಸೋಮವಾರ ಸಂಜೆ 62 ಅಡಿ ನೀರು ದಾಖಲಾಗಿದೆ. ಇಷ್ಟೊಂದು ನೀರಿನ ಸಂಗ್ರಹ 40 ವರ್ಷಗಳಿಂದೀಚೆಗೆ ಇದೇ ಮೊದಲು ಎಂದು ಸ್ಥಳೀಯರು ಹೇಳುತ್ತಿದ್ದಾರೆ.

ನದಿಪಾತ್ರಕ್ಕೆ ನೀರು: ಎಚ್ಚರಿಕೆ

ತಿಪ್ಪಗೊಂಡನಹಳ್ಳಿ ಜಲಾಶಯ ತುಂಬಿದ್ದು, ನೀರನ್ನು ಹೊರಬಿಡಲಾಗುತ್ತಿದೆ. ಒಳಹರಿವಿನ ಪ್ರಮಾಣ ಹೆಚ್ಚಾಗುತ್ತಿರುವುದರಿಂದ ಗೇಟ್‌ಗಳನ್ನು ತೆರೆದು ನೀರನ್ನು ಅರ್ಕಾವತಿ ನದಿಗೆ ಹರಿಸಲಾಗುತ್ತಿದೆ. ನದಿ ಪಾತ್ರದ ಜನರು ಎಚ್ಚರಿಕೆ ವಹಿಸಬೇಕು. ಈ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು ಎಂದು ರಾಮನಗರ ಜಿಲ್ಲಾಧಿಕಾರಿಯವರಿಗೆ ಜಲಮಂಡಳಿ ಕಾವೇರಿ–ಕಾರ್ಯಾಚರಣೆ ಮತ್ತು ನಿರ್ವಹಣೆ ಕಾರ್ಯನಿರ್ವಾಹಕ ಎಂಜಿನಿಯರ್ ಪತ್ರ ಬರೆದಿದ್ದಾರೆ.

ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರದ ನಂದಿ ಭಾಗದಲ್ಲಿ ಮಳೆ ಹೆಚ್ಚಾದರೆ, ಕೆಲವೇ ದಿನಗಳಲ್ಲಿ ಹೆಸರಘಟ್ಟ ಕೂಡ ಕೋಡಿ ಬೀಳುವ ಸಾಧ್ಯತೆ ಇದೆ ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದರು.

ಕೇಂದ್ರ ರೇಷ್ಮೆ ಮಂಡಳಿ ಬಳಿ ಹೊರ ವರ್ತುಲ ರಸ್ತೆಯಲ್ಲಿ ನೀರು ನಿಂತಿದ್ದರಿಂದ ಸವಾರರು ಪರದಾಡಿದರು. –ಪ್ರಜಾವಾಣಿ ಚಿತ್ರ

ಬೆಂಗಳೂರು ನಗರಕ್ಕೆ ನೀರು ಸರಬರಾಜಿನಲ್ಲಿ ವ್ಯತ್ಯಯ

‘ಅಡುಗೆ, ಕುಡಿಯಲು ನೀರು ಬಳಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರು ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ ಲಭ್ಯ ಇರುವ ನೀರನ್ನು ಅಡುಗೆ ಮತ್ತು ಕುಡಿಯಲು ಮಾತ್ರ ಬಳಸಬೇಕು ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ಕೋರಿದೆ.

ಭಾನುವಾರ ರಾತ್ರಿ ಸುರಿದ ಭಾರಿ ಮಳೆಯಿಂದ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ತೊರೆಕಾಡನಹಳ್ಳಿ (ಟಿ.ಕೆ. ಹಳ್ಳಿ) ಪಂಪ್ ಹೌಸ್ ಬಳಿಯ ಭೀಮೇಶ್ವರ ನದಿ ಹಾಗೂ ಕೆರೆ ತುಂಬಿ ಜಲಮಂಡಳಿಯ ಎರಡು ಪಂಪ್ ಹೌಸ್‌ಗೆ ನುಗ್ಗಿ ಅಪಾರ ಹಾನಿಯಾಗಿದೆ.

ಇದರಿಂದ, ಕಾವೇರಿ ನೀರು ಸರಬರಾಜು ಯೋಜನೆಯ ಮೂರನೇ ಹಂತ ಹಾಗೂ ನಾಲ್ಕನೇ ಹಂತದ ಎರಡನೇ ಘಟ್ಟದಿಂದ ನೀರು ಸರಬರಾಜು ಮಾಡುವ ಯಂತ್ರಾಗಾರವು ನೀರಿನಲ್ಲಿ ಮುಳುಗಡೆಯಾಗಿವೆ. ಈ ಯಂತ್ರಗಳನ್ನು ದುರಸ್ತಿಗೊಳಿಸಲು ಸಾಕಷ್ಟು ಕಾಲಾವಕಾಶ ಬೇಕಾಗಿದೆ. ಹೀಗಾಗಿ, ಬೆಂಗಳೂರು ನಗರಕ್ಕೆ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ತಿಳಿಸಿದೆ.

ಸಾರ್ವಜನಿಕರು ಪ್ರಸ್ತುತ ತಮ್ಮ ಮನೆಗಳಲ್ಲಿ ಲಭ್ಯವಿರುವ ನೀರನ್ನು ದಿನನಿತ್ಯ ಬಳಕೆಗಳಾದ ಅಡುಗೆ ಹಾಗೂ ಕುಡಿಯಲು ಮಾತ್ರ ಬಳಸಿ ಕೊಳ್ಳಬೇಕು. ಇನ್ನಿತರ ಅವಶ್ಯಕತೆ ಗಳಿಗೆ ಅನುಕೂಲವಾಗುವ ಇತರೆ ಮೂಲ ಗಳಿಂದ ವ್ಯವಸ್ಥೆ ಮಾಡಿ ಕೊಳ್ಳಬೇಕು. ತುರ್ತು ಸಂದರ್ಭದಲ್ಲಿ ನೀರಿನ ಅವಶ್ಯಕತೆಯನ್ನು ಪೂರೈಸಲು ಮಂಡಳಿಯು ಸಾರ್ವಜನಿಕರಿಗೆ ಸಮೀಪದ ಸೇವಾ ಠಾಣೆಗಳಿಂದ ಟ್ಯಾಂಕರ್‌ಗಳ ಮೂಲಕ ನೀರನ್ನು ಸರಬರಾಜು ಮಾಡಲು ಸರ್ವಸನ್ನದ್ಧವಾಗಿದೆ ಎಂದು ತಿಳಿಸಿದೆ.

ಟಿ.ಕೆ. ಹಳ್ಳಿಯಲ್ಲಿ ಐದು ಘಟಕ ಗಳಿವೆ. ಇದರಲ್ಲಿನ ಎರಡು ಪಂಪ್‌ಹೌಸ್‌ಗಳಿಗೆ ನೀರು ನುಗ್ಗಿದ್ದು, ಹಾನಿಯಾಗಿರುವ ಯಂತ್ರಾಗಾರದ ದುರಸ್ತಿ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಜಲಮಂಡಳಿ ಕೈಗೊಂಡಿದೆ.

ಮಳವಳ್ಳಿ ತಾಲ್ಲೂಕಿನ ಟಿ.ಕೆ. ಹಳ್ಳಿ ಪಂಪ್ ಹೌಸ್ ಜಲಾವೃತಗೊಂಡಿರುವುದು.

‘3 ದಿನಗಳಲ್ಲಿ ಸಮರ್ಪಕ ನೀರು’

ಹಲಗೂರು (ಮಂಡ್ಯ): ‘ಮಳೆಯಿಂದ ಹಾನಿಗೊಳಗಾದ ಪಂಪ್ ಸ್ಟೇಷನ್ ಸರಿಪಡಿಸಿ ಮೂರು ದಿನಗಳಲ್ಲಿ ಬೆಂಗಳೂರಿಗೆ ಸಮರ್ಪಕವಾಗಿ ನೀರು ಸರಬರಾಜು ಮಾಡಲು ಕ್ರಮ ವಹಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಳವಳ್ಳಿ ತಾಲ್ಲೂಕಿನ ತೊರೆಕಾಡನಹಳ್ಳಿ ಬಳಿ ಚಿಕ್ಕ ತೊರೆ (ಭೀಮಾ ನದಿ) ಉಕ್ಕಿ ಹರಿದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಪಂಪ್ ಸ್ಟೇಷನ್ ಜಲಾವೃತವಾದ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿದರು.

‘ರಾಜ್ಯದಲ್ಲಿ ಕೆರೆಗಳು ತುಂಬಿದ್ದು, ಮಳೆ ನೀರು ಸೇರಿ ಪ್ರವಾಹ ಪರಿಸ್ಥಿತಿ ಎದುರಿಸುವಂತಾಗಿದೆ. ನದಿ ಪಾತ್ರದಲ್ಲಿ ಹೆಚ್ಚು ಮಳೆಯಾಗಿ ಜಲರೇಚಕ ಯಂತ್ರಾಗಾರಗಳಲ್ಲಿ ನೀರು ತುಂಬಿದೆ. ಮಳೆ ಹೀಗೆ ಮುಂದುವರಿದರೆ ನದಿಯ ಹರಿವನ್ನು ಬೇರೆಡೆ ತಿರುಗಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಪ್ರವಾಹ ಪರಿಸ್ಥಿತಿ ತಡೆಗಟ್ಟಲು ಕಾಂಕ್ರೀಟ್ ತಡೆ ಗೋಡೆ ನಿರ್ಮಾಣ ಮಾಡಲಾಗುವುದು’ ಎಂದರು.

‘ಬೆಂಗಳೂರು ಜಲಮಂಡಳಿ ಅಧ್ಯಕ್ಷ ಜಯರಾಮ್ ನೇತೃತ್ವದಲ್ಲಿ ಯಂತ್ರಾಗಾರಗಳಲ್ಲಿ ಸೋಮವಾರ ಬೆಳಿಗ್ಗೆಯಿಂದಲೂ ನೀರನ್ನು ಹೊರ ಹಾಕಲಾಗುತ್ತಿದೆ. ಪಂಪ್ ಮತ್ತು ಮೋಟಾರುಗಳನ್ನು ಸರಿಪಡಿಸಿ ನೀರು ಸರಬರಾಜಿಗೆ ಕ್ರಮ ವಹಿಸಲಾಗುವುದು. ಬೆಂಗಳೂರು ನಿವಾಸಿಗಳು ಅತಂಕ ಪಡಬೇಕಾದ ಅವಶ್ಯಕತೆ ಇಲ್ಲ’ ಎಂದು ತಿಳಿಸಿದರು.

ವಾಜರಹಳ್ಳಿಯಲ್ಲಿ ಶಾಲೆಗೆ ನುಗ್ಗಿದ ನೀರು

ನೆಲಮಂಗಲ: ಮಳೆಯಿಂದ ನೆಲಮಂಗಲ, ಬಿನ್ನಮಂಗಲ, ಕೆಂಪಲಿಂಗನಹಳ್ಳಿ, ಸಮೀಪದ ದಾಸನಪುರ ಕೆರೆಗಳು ಕೋಡಿ ಹರಿದಿವೆ.

ವಾಜರಹಳ್ಳಿಯಲ್ಲಿ ಮನೆ ಮತ್ತು ಶಾಲೆ ಗಳಿಗೆ ನೀರು ನುಗ್ಗಿದ್ದು, ರಾಜಕಾಲುವೆ ತಡೆ ಗೋಡೆಗಳು ಬಿದ್ದು ಹೋಗಿದೆ. ಪಟ್ಟಣದ ಎಂ.ಜಿ.ರಸ್ತೆ, ಭೈರವೇಶ್ವರ ಬಡಾವಣೆ, ಶೇಷು ಬಡಾವಣೆ, ಪಟೇಲ್ ಚೆನ್ನಪ್ಪ ಬಡಾವಣೆ, ಎಲೆ ತೋಟ, ಗಜಾರಿಯಾ ಬಡಾವಣೆ ರಸ್ತೆಗಳು ಜಲಾವೃತವಾಗಿತ್ತು.

ವಾಜರಹಳ್ಳಿ ಶಾಲೆಯ ಕಾಂಪೌಂಡ್ ಬಿದ್ದು ಮಳೆ ನೀರು ಮಿಶ್ರಿತ ಕಸ, ಮಣ್ಣು ಕಲ್ಲುಗಳು ಕೊಠಡಿಗಳಿಗೆ ನುಗ್ಗಿದ್ದು, ಪಠ್ಯ ಸಾಮಗ್ರಿಗಳು ನೀರುಪಾಲಾಗಿವೆ.

ವಾಜರಹಳ್ಳಿ ಸರ್ಕಾರಿ ಶಾಲಾ ಕೊಠಡಿಗೆ ನೀರು ನುಗ್ಗಿರುವುದು.

ದಾಸನಪುರ ಕೆರೆ ಕೋಡಿ ಹರಿದು ರಾಷ್ಟ್ರೀಯ ಹೆದ್ದಾರಿಯ ಅಕ್ಕಪಕ್ಕದ ಕೈಗಾರಿಕೆಗಳು, ಗೋದಾಮುಗಳು, ಜನವಸತಿ ಪ್ರದೇಶಗಳಿಗೆ ನೀರು ನುಗ್ಗಿದೆ. ಹಾನಿ ಪ್ರದೇಶ ವೀಕ್ಷಿಸಿದ ಶಾಸಕ ಡಾ.ಕೆ.ಶ್ರೀನಿವಾಸಮೂರ್ತಿ ಸರ್ವೆ ನಡೆಸಿ ರಾಜಕಾಲುವೆ ಒತ್ತುವರಿ ತೆರವಿಗೆ ಸೂಚಿಸಲಾಗುವುದು ಎಂದರು.

ಶ್ರೀಸಾಯಿ ಬಡಾವಣೆ ಜಲಾವೃತ

ಕೆ.ಆರ್.ಪುರ: ಗುಡುಗು ಸಹಿತ ಧಾರಾಕಾರವಾಗಿ ಮಳೆ ಸುರಿದ ಪರಿಣಾಮ ಹೊರ ಮಾವು ವಾರ್ಡಿನ ಸಾಯಿ ಬಡಾವಣೆ, ಎಚ್.ಎ.ಎಲ್‌ನ ಕಾಳಪ್ಪ ಬಡಾವಣೆಯಲ್ಲಿ ಮೂರು ಅಡಿಗೂ ಹೆಚ್ಚು ನೀರು ನಿಂತಿದ್ದರಿಂದ ತೊಂದರೆ ಅನುಭವಿಸಿದರು.

ಮಹದೇವ ಪುರ ವಲಯದ ಕೆ.ಆರ್.ಪುರ ಕ್ಷೇತ್ರದ ಹೊರಮಾವು ಸಾಯಿ ಬಡಾವಣೆ, ಎಚ್.ಎ.ಎಲ್ ಕಾಳಪ್ಪ ಬಡಾವಣೆ, ಎಲ್.ಬಿ.ಶಾಸ್ತ್ರೀನಗರ, ನಾಗಪ್ಪರೆಡ್ಡಿ ಬಡಾವಣೆ, ರಾಮಮೂರ್ತಿನಗರ ಮುಖ್ಯರಸ್ತೆ, ಹೆಚ್‌ಎಎಲ್ ಭಾಗದ ತಗ್ಗು ಪ್ರದೇಶ ಜಲಾವೃತವಾಗಿದ್ದವು.

ಹೊರಮಾವು ವಾರ್ಡಿನ ಶ್ರೀಸಾಯಿ ಬಡಾವಣೆ ಜಲಾವೃತಗೊಂಡಿದೆ.

ಸೋಂಪುರ ಹೋಬಳಿ: ಧಾರಾಕಾರ ಮಳೆ

ದಾಬಸ್ ಪೇಟೆ: ಸೋಂಪುರ ಹೋಬಳಿಯಾದ್ಯಂತ ನಿನ್ನೆ ಸಂಜೆ ಸುರಿದ ಭಾರಿ ಮಳೆಯಿಂದ ಹೊಲಗದ್ದೆಗಳಲ್ಲಿ ನೀರು ತುಂಬಿಕೊಂಡಿದ್ದು, ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ಇದರಿಂದ ಗ್ರಾಮೀಣ ಭಾಗದ ಜನರ ಜೀವನ ಅಸ್ತವ್ಯಸ್ತಗೊಂಡಿದೆ.

ಸಂಜೆ 5.30ಕ್ಕೆ ಆರಂಭವಾದ ಮಳೆ 7 ಗಂಟೆಯವರೆಗೆ ಎಡೆಬಿಡದೆ ಸುರಿಯಿತು.

ಹಲವು ದಿನಗಳಿಂದ ಎಡೆಬಿಡದೆ ಸುರಿಯುತ್ತಿರುವ ಮಳೆಯು ಹೋಬಳಿಯ ರೈತರ ಬದುಕಿನ ಮೇಲೆ ಭಾರಿ ಪೆಟ್ಟು ನೀಡಿದೆ.

ತಗ್ಗು ಪ್ರದೇಶದಲ್ಲಿ ಬೆಳೆದ ಬೆಳೆಗಳು ನೀರಿನಿಂದ ಕೊಳೆಯಲಾರಂಭಿಸಿವೆ.

ಮುಂಗಾರು ಹಂಗಾಮಿನಿಂದಲೂ ಹೋಬಳಿಯುದ್ದಕ್ಕೂ ಹೇರಳವಾದ ಮಳೆ ಸುರಿಯುತ್ತಿದ್ದು ಅದು ಬಿತ್ತನೆ ಮೇಲೂ ಪರಿಣಾಮ ಬೀರಿತ್ತು.

ಮಳೆ ಬಿಡುವು ಕೊಟ್ಟಾಗ ರೈತರು ರಾಗಿ, ಜೋಳ, ಅಲಸಂಡೆ ತೊಗರಿ, ಅವರೆ ಬಿತ್ತನೆ ಮಾಡಿದ್ದರು. ಮಳೆ ಹೀಗೆ ನಿರಂತರವಾಗಿ ಬಿದ್ದರೆ ಅರ್ಧಕ್ಕರ್ಧ ಕೈಗೆಟಕುವುದು ಸಂದೇಹವಾಗಿದೆ ಎನ್ನುತ್ತಾರೆ ರೈತ ಶಿವಲಿಂಗಯ್ಯ.

ಮಳೆ ನೀರು: ಪಾದಚಾರಿ ಅನುಮಾನಾಸ್ಪದ ಸಾವು

ಬೆಂಗಳೂರು: ಧಾರಾಕಾರ ಮಳೆಯಿಂದಾಗಿ ರಸ್ತೆಯಲ್ಲಿ ಹರಿಯುತ್ತಿದ್ದ ನೀರಿನಲ್ಲಿ ನಡೆದುಕೊಂಡು ಹೊರಟಿದ್ದ ರಾಮಸ್ವಾಮಿ (40) ಎಂಬುವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಈ ಸಂಬಂಧ ಕಮರ್ಷಿಯಲ್ ಸ್ಟ್ರೀಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸ್ಥಳೀಯ ನಿವಾಸಿ ರಾಮಸ್ವಾಮಿ ಅವರು ಭಾನುವಾರ ರಾತ್ರಿ 11ರ ಸುಮಾರಿಗೆ ವೀರಪಿಳ್ಳೈ ರಸ್ತೆಯಲ್ಲಿ ಹೊರಟಿದ್ದಾಗ ಅವಘಡ ಸಂಭವಿಸಿದೆ. ಅವರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆಂದು ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಭಾನುವಾರ ರಾತ್ರಿ ನಗರದಲ್ಲಿ ಧಾರಾಕಾರ ಮಳೆ ಆಗಿತ್ತು. ವೀರಪಿಳ್ಳೈ ರಸ್ತೆಯಲ್ಲಿ ನೀರು ಹರಿಯುತ್ತಿತ್ತು. ಇದೇ ರಸ್ತೆಯಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಸಹ ಇದೆ.’

‘ರಾಮಸ್ವಾಮಿ ಅವರು ಟ್ರಾನ್ಸ್‌ಫಾರ್ಮರ್ ಸಮೀಪದಲ್ಲೇ ನೀರಿನಲ್ಲಿ ನಡೆದುಕೊಂಡು ಹೊರಟಿದ್ದರು. ಏಕಾಏಕಿ ಕುಸಿದು ಬಿದ್ದಿದ್ದರು. ಸ್ಥಳಕ್ಕೆ ಹೋಗಿದ್ದ ಪೊಲೀಸರು, ಪರಿಶೀಲನೆ ನಡೆಸಿದಾಗ ರಾಮಸ್ವಾಮಿ ಮೃತಪಟ್ಟಿದ್ದು ಗೊತ್ತಾಯಿತು’ ಎಂದು ತಿಳಿಸಿದರು.

‘ವಿದ್ಯುತ್ ತಗುಲಿ ರಾಮಸ್ವಾಮಿ ಮೃತಪಟ್ಟಿರುವ ಅನುಮಾನವಿದೆ. ಆದರೆ, ಅದಕ್ಕೆ ಸಂಬಂಧಪಟ್ಟ ಪುರಾವೆ ಗಳು ಸದ್ಯಕ್ಕೆ ಸಿಕ್ಕಿಲ್ಲ. ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ, ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು.

’ರಾಮಸ್ವಾಮಿ ಅವರು ಒಂಟಿಯಾಗಿ ನೆಲೆಸಿದ್ದರೆಂದು ಗೊತ್ತಾಗಿದೆ. ಅವರ ಸಂಬಂಧಿಕರ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

THIS IS TO INFORM THE GENERAL PUBLIC THAT my client M/s. Omkar Engineering & Fabrication, a private company registered under the Companies Act, having its Registered office at Plot No 111-H-2, Bommasandra Industrial Area, Attibele Hobli, Anekal Taluk, Bengaluru-560099, represented by its Partners 1. Mr. Devaraj N., 2. Mr. Sethararna, 3.Mr. C. Krishna Murthy, 4. Mr. Prasanth Kumar., stating that they are going to/proposed to purchase the land known as Plot No. 90 & 91, Hebbagodi CMC Khatha Assessment No. 30, Sy. No. 70/176 & 177/Plot No. 90 & 91, the Industrial layout formed by Karnataka Industrial Areas development Board (KIADB) at Bommasandra Industrial Area, in Sy. No. 70,176 & 177 which comes within the limits of Hebbagodi Village, Attibele Hobli, Anekal Taluk Bengaluru Rural District, admeasuring about 3171 Sq. mtrs (34,132 Sq.ft.), of land from M/s. Raghu Enterprises represented by its who acquired the same through the Regd. Sale Deed Doc. No. 1786/2004-05 dated 07.05.2004 of SRO Anekal. The proposed purchaser M/s. Omkar Engineering & Fabrication represented by its Partners 1. Mr. Devaraj N . 2. Mr. Setharama, 3. Mr. C. Krishna Murthy, 4. Mr. Prasanth Kumar., have applied for availing loan from Union Bank of India, Bommasandra Branch by mortgaging the said property in favour of Union Bank of India, Bommasandra Branch., If any person/ institution has any objection/ claim or charge in respect of the schedule mentioned properties, such objection or claim shall be intimated to the undersigned in writing with sufficient proof of his /their claim **WITHIN 7 DAYS** of this publication. If no such claim or objection is received within the stipulated period mentioned above, it shall be construed that the above properties proposed to be mortgaged in favour of Union Bank of India, Bommasandra Branch are free from all encumbrances, charges, claims and litigations whatsoever and my client will proceed with the transaction/alienation as bonafide mortgagee with the Bankers. No claim or objection will be entertained in future with any reasons.

K. Velayudham M.Sc., M.L.,
Advocate & Notary Public
(Govt.Of India)
Attibele,Bengaluru.
Ph: 9443093345, 8220574334.
Date: 02.09.2022
Place: Attibele

BUSINESS

Business Offers

Finance

NRI'S INVESTMENT
And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

To place your ad in Deccan Herald & Prajavani Classifieds

DH Classifieds
More value, more impact

For details contact:
Vishal : 9845114560
Jerry : 9731810277
Tanveer : 9886213331
Ravichandra : 9901641752
E-mail:
dhclassifieds@deccanherald.co.in

WANTED BUSINESS
Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

AUTOMOTIVE

2 / 3 Wheelers Selling

Mobikes

DISPOSAL ACCIDENT
KA04-JG1697 Enfield classic 350/2016/Black Without RC Contact: #9845621119 sharan292008@gmail.com ch67@newindia.co.in

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Part-Time Jobs

GOVERNMENT RECOGNISED Data Entry Typing Work From Home, Daily Payment, No Target, No Accuracy, With Govt Bond. For details M: 9742344447

PERSONAL

Lost

LOST OF DOCUMENT
I, Shanmuka D.R. residing at No. 66, Sree Manjunatha Swamy Nilaya, Kavery L/O H.A. Farm (P), Dasarahalli, Bangalore - 560024, have lost G.P.A. of the property located at the above address. Document Reg. No. 334, Sy.No. 16/2, Site No. 66, Volume No. IV, Book No. 15, Page No. 47-48. dtd 30.11.1992, Reg. G.P.A. to T. Goruvaiah, S/o. T. Chinnagoruvaiah during transit. Finders please contact: **94802 15912.**

Change of Name

I, SHILPA SALVI W/o. Shailesh Salvi R/a #B/503, Salarpuria Splendor, 20 Old Airport Road, Jeevan Bima Nagar, Bengaluru- 560017 Have Changed My Name to SHILPA SHAILESH SALVI vide Affidavit Dated 29-08-2022 Before Notary Gangaraju B.N Bengaluru.

I, KHUSHI KUMARI, R/at S-1, 2nd Floor SMS Building, Makkah Masjid, Shikari Palya, Electronic City Bengaluru Rural 560100 have changed my name to AYESHA SIDDIQA vide affidavit dated 01-09-2022 sworn before notary B.M. Chandrashekar Bangalore

I, SACHIN NANDA, residing at No. SF-6, Majestic Garden Phase-1, behind Metro Cash and Carry, Kanakapura Road, Doddakallasandra, Bangalore- 560062, have changed my name to SACHIN N SHETTY, vide affidavit dated 02.09.2022 before Notary Ratna N., Bangalore.

I, NIRMALA, Spouse of No. 1349987P, Ex HAV. K. Rajendran, residing at No. 29, 1st main, 4th cross, Venkataswamy Reddy Layout, Udaynagar, Bangalore- 560016, have changed my name from NIRMALA to NIRMALA RAJENDRAN, my correct D.O.B is 09.10.1949, vide affidavit dated 02.09.2022 before Notary C. Sasikala, Bangalore.

I, JYOTI CHHABRA, R/at J-904, Pride Pristine, Vasundhra Layout, Anantha Nagara Phase-2 Electronic City, Bengaluru Rural 560100 have changed my minor daughter's name from KAAVYA to KAAVYA CHHABRA vide affidavit dated 01-09-2022 sworn before notary B.M. Chandrashekar Bangalore

I, BAGYALAKSHMI MEKALA GOPICHAND R/a #302, Swami Krupa Apartment 2nd Block Dasappa Layout, Ramamurthy Nagar, Food Corner Shop, Bengaluru-16, Have changed Name to BHAGYALAKSHMI MEKALA vide Affidavit 04-09-2022 Before Notary Hemalatha, Bangalore.

I, LUBNA SHIRAZ, R/at No. 17, 4th Cross, 42nd Main, BTM Layout 2nd Stage, Bengaluru 560068 have changed my minor son's name from OMAR NASEER AHMED to OMAR AHMED vide affidavit dated 01-09-2022 sworn before notary B.M. Chandrashekar Bangalore

I, JYOTI, R/at J-904, Pride Pristine Vasundhra Layout, Anantha Nagara Phase-2, Electronic City, Bengaluru Rural 560100 have changed my name to JYOTI CHHABRA vide affidavit dated 01-09-2022 sworn before notary B.M. Chandrashekar Bangalore

I, BHAVANI PATGAR Residing #154, 3rdCross Near K.T.G. Hospital, Sanjivininagara, Hegganahalli Cross, Bangalore North, Bengaluru, Karnataka-91 have changed my name from BHAVANI B PATGAR To BHAVANI PATGAR vide affidavit dated: 05.09.2022 Sworn before Notary R. Shivanna Chari, Bangalore. Henceforth I shall be called BHAVANI PATGAR Only.

I, BHASKAR PATGAR Residing #154, 3rd Cross Near K.T.G. Hospital, Sanjivininagara, Hegganahalli Cross, Bangalore North, Bengaluru, Karnataka-91 have changed my name from BHASKAR J PATGAR To BHASKAR PATGAR vide affidavit dated: 05.09.2022 Sworn before Notary R. Shivanna Chari, Bangalore. Henceforth I shall be called BHASKAR PATGAR Only

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

CONNECT ಕ್ಲಾಸಿಫೈಡ್ಸ್

EDUCATION CORNER



ಹೊಳೆಯಾದ ರಸ್ತೆಗಳು, ಬಡಾವಣೆಗಳು

ಮಳೆ: ಸಮಸ್ಯೆ 'ಗೋಳು'

ಸಿಲಿಕಾನ್ ಸಿಟಿಯಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ಜಲಾವೃತವಾಗಿರುವ ಪ್ರದೇಶಗಳಲ್ಲಿ ಪ್ರಯಾಣಕ್ಕೆ ಟ್ರ್ಯಾಕ್ಟರ್‌ಗಳೇ ಅನಿವಾರ್ಯವಾದವು... –ಪ್ರಜಾವಾಣಿ ಚಿತ್ರಗಳು/ ರಂಜು ಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ರಾತ್ರಿ ಸುರಿದ ಭಾರಿ ಮಳೆಯಿಂದ ರಸ್ತೆಗಳು ಹೊಳೆಯಂತಾಗಿವೆ. ಪೂರ್ವಭಾಗದಲ್ಲಿನ ಬಡಾವಣೆಗಳು ಕೆರೆಗಳಂತಾಗಿದ್ದು, ಕೆರೆಗಳ ಕೋಡಿ ಹರಿದು ಹೋಗಲು ಜಾಗವಿಲ್ಲದ ಕಾರಣ ಮಳೆ ನಿಂತರೂ ಬಡಾವಣೆಗಳಿಗೆ ನೀರು ನುಗ್ಗುವುದು ನಿಂತಿಲ್ಲ. ರಸ್ತೆಗಳಲ್ಲಿ ಕಿಲೋಮೀಟರ್‌ಗಟ್ಟಲೆ ವಾಹನಗಳ ದಟ್ಟಣೆ ಇತ್ತು.

ಭಾನುವಾರ ರಾತ್ರಿ ಪೂರ್ತಿ ಸುರಿದಿದ್ದು, ನಗರದಲ್ಲಿ 140 ಮಿ.ಮೀ. ಮಳೆಯಾಗಿದೆ. ನಗರದ ಎಲ್ಲ ಭಾಗಗಳಲ್ಲೂ ಮಳೆಯಾಗಿದೆ. ಆದರೆ ಪೂರ್ವ ಭಾಗ ಮಾತ್ರ ನಲುಗಿಹೋಗಿದೆ. ಇಲ್ಲಿನ ರಸ್ತೆ, ಬಡಾವಣೆ, ಕೆರೆ, ರಾಜಕಾಲುವೆಗಳ ಎಲ್ಲೆಲ್ಲೂ ನೀರೋ ನೀರು. ರಸ್ತೆ, ಬಡಾವಣೆ ಸೇರಿ ಮನೆಗಳ ಪಾರ್ಕಿಂಗ್ ಸ್ಥಳದಲ್ಲಿರುವ ಬೈಕ್, ಕಾರುಗಳು ನೀರಿನಲ್ಲಿ ಮುಳುಗಿಹೋಗಿವೆ.

ಮಹದೇವಪುರ ಭಾಗದ ಮಾರತ್ ಹಳ್ಳಿ, ಬೆಳ್ಳಂದೂರು, ಯಮಲೂರು, ಸರ್ಜಾಪುರ ಸುತ್ತಮುತ್ತಲಿನ ಪ್ರದೇಶಗಳು ಮಳೆಯಿಂದ ಹೆಚ್ಚು ಸಂಕಷ್ಟಕ್ಕೆ ಒಳಗಾಗಿವೆ. ನೀರು ಯಾವ ಭಾಗಕ್ಕೆ ಹರಿಯುತ್ತದೆ, ಇಲ್ಲಿಂದ ಯಾವ ಭಾಗಕ್ಕೆ ಹೋಗುತ್ತದೆ ಎಂಬುದರ ಅರಿವೇ ಇಲ್ಲದಂತಾಗಿತ್ತು. ರಸ್ತೆಯ ಇಕ್ಕೆಲಗಳು, ಚರಂಡಿಗಳು, ರಾಜಕಾಲುವೆಗಳು ಎಲ್ಲವೂ ನೀರಿನಲ್ಲಿ ಮುಳುಗಿಹೋಗಿದ್ದು, ಎಲ್ಲಿ ಯಾವುದು ಇದೆ ಎಂದೇ ಅಂದಾಜಿಸಲಾಗದೆ ಜನರು ಸಂಚರಿಸಿ ಸಂಕಷ್ಟ ಎದುರಿಸಿದರು. ದ್ವಿಚಕ್ರ ವಾಹನ ಸವಾರರಂತೂ ಬಿದ್ದು ಎದ್ದು ಸಂಚರಿಸಿದರು.

'ಪೂರ್ವಭಾಗದ ನಿವಾಸಿಗಳು ಸ್ಥಳೀಯ ಆಡಳಿತವನ್ನು ಎಷ್ಟು ತರಾಟೆಗೆ ತೆಗೆದುಕೊಂಡರೂ ಯಾವುದೇ ಪ್ರಯೋಜನವಾಗಿಲ್ಲ. ಮಳೆ ಬಂದಕೂಡಲೇ ಇಲ್ಲಿ ಸಮಸ್ಯೆ ಹೆಚ್ಚಾಗುತ್ತದೆ. ಕೆರೆ ಕೋಡಿ ನಿಲ್ಲದೆ ಬಡಾವಣೆಗಳಿಗೆ ನೀರು ಬರುವುದೂ ದಿನಗಟ್ಟಲೆ ನಿಲ್ಲುವುದಿಲ್ಲ. ಮನೆ ಬಿಟ್ಟು ಬೇರೆಲ್ಲೋ ಇರುವಂತಾಗಿದೆ' ಎಂದು ನಿವಾಸಿ ರಾಜಮೋಹನ್ ಅಳಲು ತೋಡಿಕೊಂಡರು.

ಯಮಲೂರು ಕೆರೆ ತುಂಬಿಹೋಗಿ ಕೋಡಿ ಹರಿಯುತ್ತಿದೆ. ಯಮಲೂರು ಹಾಗೂ ಮಾರತ್‌ಹಳ್ಳಿ ಮುಖ್ಯರಸ್ತೆಯ ಮೇಲ್ಭಾಗದಲ್ಲಿರುವ ಈ ಕೆರೆಯಿಂದ ಅತಿ ಹೆಚ್ಚು ನೀರು ಹೊರಬರುತ್ತಿದೆ. ರಾಜಕಾಲುವೆ ಉಕ್ಕಿಹರಿಯುತ್ತಿದೆ. ಹೀಗಾಗಿ ಐಟಿ ಕಂಪನಿಗಳಿರುವ 77 ಡಿಗ್ರಿ ಟೌನ್ ಸೆಂಟರ್, ಎಚ್‌ಎಎಲ್ ತೇಜಸ್ ವಿಭಾಗದ ಕಟ್ಟಡ ಹಾಗೂ ಪಾರ್ಕಿಂಗ್ ಸ್ಥಳ ನೀರಿನಿಂದ ಜಲಾವೃತವಾಗಿವೆ. ಮಾರತ್‌ಹಳ್ಳಿ ಮುಖ್ಯರಸ್ತೆಯಲ್ಲಿ ಸುಮಾರು 75 ಅಡಿ ಇರುವ ರಾಜಕಾಲುವೆ ಒಂದು ಸ್ಥಳದಲ್ಲಿ ಕಿರಿದಾಗಿ, ಚರಂಡಿಯಂತೆ ಕಾಣುತ್ತಿದೆ. ಕೊನೆಯಲ್ಲಿ ಅದು ಹೂಳು, ಕಾಂಕ್ರೀಟ್‌ನಿಂದ ತುಂಬಿಹೋಗಿದೆ. ಹೀಗಾಗಿ ನೀರು ರಸ್ತೆ, ಸಂಕೀರ್ಣಗಳಲ್ಲಿ ತುಂಬಿಹೋಗಿದೆ. ಈ ನೀರು ಮತ್ತಷ್ಟು ಐಟಿ ಕಂಪನಿಗಳಿರುವ ಬೆಳ್ಳಂದೂರು ಭಾಗದ ಇಕೊ ಸ್ಪೇಸ್ ಕಡೆಗೆ ನುಗ್ಗುತ್ತಿದೆ.

ಮಾರತ್‌ಹಳ್ಳಿ, ದೊಡ್ಡನೆಕ್ಕುಂದಿ, ವರ್ತೂರು, ಮಾರತ್‌ಹಳ್ಳಿ, ಬೆಳ್ಳಂದೂರು, ಪುಲಕೇಶಿನಗರ, ರಾಜಮಹಲ್ ಗುಟ್ಟಹಳ್ಳಿ, ಸಂಪಂಗಿರಾಮನಗರದಲ್ಲಿ ಭಾನುವಾರ ರಾತ್ರಿ, ಸೋಮವಾರ ರಾತ್ರಿ ಭಾರಿ ಮಳೆಯಾಗಿದೆ. ಇದರಿಂದ ಬಡಾವಣೆಗಳತ್ತ ಸಾಗುವ ನೀರಿನ ರಭಸವೂ ಹೆಚ್ಚಾಗಿದೆ.

ಟ್ರ್ಯಾಕ್ಟರ್‌ಗಳಿಂದ ವಸೂಲಿ!

ರಸ್ತೆಗೆ ತಾಕೀತೇನೋ ಎಂಬಂತೆ ಹಾರುತ್ತಿದ್ದ ವಿಮಾನಗಳ ಕೆಳಗೆ ಎಚ್‌ಎಎಲ್ ತೇಜಸ್ ವಿಭಾಗದ ಕಟ್ಟಡ ಮಳೆ ನೀರಿನಿಂದ ತುಂಬಿಹೋಗಿತ್ತು. ಹೊಳೆಯಂತಾಗಿದ್ದ ರಸ್ತೆಯಲ್ಲಿ ಐಟಿ ಉದ್ಯೋಗಿಗಳು, ಸ್ಥಳೀಯರು ಟ್ರ್ಯಾಕ್ಟರ್‌ನಲ್ಲಿ ಸಾಗುತ್ತಿದ್ದದ್ದು, ಅಭಿವೃದ್ಧಿಗಾಗಿ ಪ್ರಕೃತಿಯನ್ನು ಹಾಳುಗೆಡವಿದ ಫಲ ಎನ್ನುವುದನ್ನು ಸಾರುವಂತಿತ್ತು.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಮಾರತ್‌ಹಳ್ಳಿ ಮುಖ್ಯರಸ್ತೆಯಿಂದ ಯಮಲೂರಿಗೆ ಹೋಗುವ ಮಾರ್ಗ ಜಲಾವೃತವಾಗಿದ್ದು, ಕಾರು, ಬೈಕುಗಳಲ್ಲಿ ಸಂಚರಿಸುವುದು ಸಾಧ್ಯವಿರಲಿಲ್ಲ. ಭಾನುವಾರ ಬೆಳಿಗ್ಗೆಯಿಂದ ಟ್ರ್ಯಾಕ್ಟರ್‌ಗಳನ್ನೇ ಅವಲಂಬಿಸಬೇಕಾಗಿತ್ತು. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಬಹುತೇಕ ಟ್ರ್ಯಾಕ್ಟರ್‌ಗಳಲ್ಲೂ ಉಚಿತ ಪ್ರಯಾಣವಿತ್ತು. ಬಿಸಿಲೇರುತ್ತಿದ್ದಂತೆ ಕೆಲವು ಟ್ರ್ಯಾಕ್ಟರ್‌ನವರು ತಲಾ ₹50 ಶುಲ್ಕ ವಿಧಿಸಲು ಆರಂಭಿಸಿದರು. 'ಕೊಡಲ್ಲ, ಅಷ್ಟೊಂದಾ, ಬೇಡ ಬಿಡಿ' ಎನ್ನುವವರು ಇರಲಿಲ್ಲ. 'ಸುತ್ತಿ ಬಳಸಿ ಹೋದರೆ ನೂರಾರು ರೂಪಾಯಿ ವೆಚ್ಚವಾಗುತ್ತದೆ. ಟ್ರ್ಯಾಕ್ಟರ್‌ನವರಿಗೆ ಡೀಸಲ್ ಖರ್ಚಿಗಾದರೂ ಆಗಲಿ ಬಿಡಿ. ಏನೂ ಸಮಸ್ಯೆ ಇಲ್ಲ' ಎಂದು ಕೆಲವರು ಸಮಾಧಾನದ ಮಾತನಾಡಿದರು. ಕೆಲ ಸ್ಥಳೀಯ ಮುಖಂಡರು ಉಚಿತವಾಗಿ ಟ್ರ್ಯಾಕ್ಟರ್ ಸೇವೆ ಒದಗಿಸಿದರು.

ಬೆಂಗಳೂರು ಪೂರ್ವದಲ್ಲಿ ಉಕ್ಕಿ ಹರಿದ ರಾಜಕಾಲುವೆ ನೀರು, ತತ್ತರಿಸಿದ ಜನ

ಎಲ್ಲೆಲ್ಲಿ ಎಷ್ಟು ಮಳೆ...

ಸೋಮವಾರ ರಾತ್ರಿ 11ರವರೆಗೆ (ಸೆಂ. ಮೀ. ನಲ್ಲಿ)

ದೊಡ್ಡನೆಕ್ಕುಂದಿ	9.6	ರಾಜಮಹಲ್‌ಗುಟ್ಟಹಳ್ಳಿ	1.9
ಎಚ್‌ಎಎಲ್ ವಿಮಾನ ನಿಲ್ದಾಣ	5.7	ಸಂಪಂಗಿರಾಮನಗರ	3.7
ಹಗದೂರು	5.1	ವಿದ್ಯಾಪೀಠ	4.1
ವರ್ತೂರು	4.7	ಯಶವಂತಪುರ	2.6
ಮಾರತಹಳ್ಳಿ	4.2	ನಾಯಂಡಹಳ್ಳಿ	1.5
ಬೆಳ್ಳಂದೂರು	3.0	ನಾಗರಬಾವಿ	2.3
ಪುಲಕೇಶಿನಗರ	1.9	ಯಲಹಂಕ	2.4
		ರಾಜರಾಜೇಶ್ವರಿನಗರ	1.5

ವರುಣಾಘಾತ... ನಗರದ ರೇನ್‌ಬೋ ಡ್ರೈವ್ ಬಡಾವಣೆಯು ಜಲಾವೃತಗೊಂಡಿದ್ದು ನಿವಾಸಿಗಳಿಗೆ ನಿರಂತರ ಮಳೆ ಅಕ್ಷರಶಃ ಆಘಾತ ನೀಡಿದೆ ಪಿಟಿಐ ಚಿತ್ರ

ನಿವಾಸಿಗಳಿಲ್ಲದ ವಿಲಾಸಿ ಬಡಾವಣೆಗಳು..

ಸರ್ಜಾಪುರ–ಬೆಳ್ಳಂದೂರು ಮುಖ್ಯರಸ್ತೆಯಲ್ಲಿರುವ ಕೆಲವು ಐಷಾರಾಮಿ ಬಡಾವಣೆಗಳು ಜನರಹಿತವಾಗಿದ್ದವು. ಆದರೆ, ಮನೆ, ಕ್ಲಬ್, ಮಳಿಗೆ ಹಾಗೂ ವಾಹನಗಳಲ್ಲಿ ನೀರು ತುಂಬಿಹೋಗಿದೆ. ಹೀಗಾಗಿ ಅಧಿಕಾರಿಗಳು ಅಗ್ನಿಶಾಮಕ ದಳದ ಸಹಾಯದಿಂದ ಬೋಟ್ ಹಾಗೂ ಟ್ರ್ಯಾಕ್ಟರ್‌ಗಳಲ್ಲಿ ಜನರನ್ನು ಅಲ್ಲಿಂದ ಹೊರತಂದಿದ್ದಾರೆ.

ರೈನ್‌ಬೊ ಡ್ರೈವ್, ಸನ್ನಿ ಬ್ರೂಕ್ಸ್, ಕಂಟ್ರಿ ಸೈಡ್ ಐಷಾರಾಮಿ ಬಡಾವಣೆಗಳಲ್ಲಿದ್ದ ಜನರನ್ನು ಹೊರತಲಾಗಿದೆ. ಆದರೆ ನೀರನ್ನು ಅಲ್ಲಿಂದ ಹೊರಹಾಕುವ ಸಾಹಸಕ್ಕೆ ಯಾರೂ ಕೈಹಾಕಿರಲಿಲ್ಲ. 'ನೀರು ಎಷ್ಟಿದೆ? ಎಲ್ಲಿ ಹಳ್ಳವಿದೆ ಎಂಬುದು ಗೊತ್ತಾಗುವುದಿಲ್ಲ. ಕಾಲುವೆಗಳು ಇಲ್ಲದ್ದರಿಂದ ನೀರು ಹೋಗಲು ಸ್ಥಳವಿಲ್ಲ' ಎಂದು ಅಗ್ನಿಶಾಮಕ ದಳ ಹಾಗೂ ಸಂಚಾರ ಪೊಲೀಸರು ತಿಳಿಸಿದರು.

ಬೆಳ್ಳಂದೂರು ಯಮಲೂರು ಕೆರೆ ಕೋಡಿ ಒಡೆದು, ಯಮಲೂರು ಮುಖ್ಯರಸ್ತೆ ಸೋಮವಾರ ಜಲಾವೃತಗೊಂಡಿರುವುದು

'ಇವರಿಗೆಲ್ಲ ಗೊತ್ತಾಗಬೇಕು. ಈ ಮಳೆ ಸರಿಯಾಗಿ ಪಾಠ ಕಲಿಸಿದೆ. ರಾಜಕಾಲುವೆ ಒತ್ತುವರಿ ಮಾಡಿಕೊಂಡು ಐಷಾರಾಮಿ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದಾರೆ. ಕೆರೆ ಕೋಡಿ ಹಾಗೂ ಮಳೆ ನೀರು ಎಲ್ಲಿ ಹೋಗಬೇಕು? ಈಗ ಮಳೆ ನೀರು ಅದರ ಜಾಗ ಕಂಡುಕೊಂಡಿದೆ. ಅವರಿಂದ ಸುತ್ತಮುತ್ತಲಿನವರಿಗೂ ತೊಂದರೆ' ಎಂದು ಸರ್ಜಾಪುರದ ನಿವಾಸಿ ರಾಜಶೇಖರ ರೆಡ್ಡಿ ಅಸಮಾಧಾನ ವ್ಯಕ್ತಪಡಿಸಿದರು.

ಆಹಾರ ವಿತರಿಸದಿದ್ದರೆ ₹500 ದಂಡ

'ಯಮಲೂರಿನಲ್ಲಿರುವ ಮಾರತ್‌ಹಳ್ಳಿ ಮುಖ್ಯರಸ್ತೆಗೆ ಆಹಾರ ತಂದುಕೊಡದಿದ್ದರೆ ₹500 ದಂಡ ಹಾಕುತ್ತಾರೆ. ಅದಕ್ಕೇ ಈ ನೀರಿನಲ್ಲಾದರೂ ಹೋಗಲೇಬೇಕು. ಆದರೆ ಈ ಟ್ರ್ಯಾಕ್ಟರ್‌ನವರು ಕರೆದುಕೊಂಡು ಹೋಗುತ್ತಿದ್ದಾರೆ. ಇವರಿಗೆ ಒಳ್ಳೆಯದಾಗಲಿ' ಎಂದು ಆಹಾರವನ್ನು ಮನೆಗೆ ಡಿಲಿವರಿ ಮಾಡುವ ವ್ಯಕ್ತಿ ಅಳಲಿನ ನಡುವೆಯೂ ಪ್ರತಿಕ್ರಿಯಿಸಿದರು.

'ರಸ್ತೆ ತುಂಬಾ ನೀರಿದೆ, ಆ ರೆಸ್ಟೊರೆಂಟ್‌ನಿಂದ ಆಹಾರ ತಂದು ಕೊಡಲು ಸಾಧ್ಯವಾಗುವುದಿಲ್ಲ ಎಂದು ನಾನು ನಮ್ಮ ಸಂಸ್ಥೆಯವರಿಗೆ ಹೇಳಿದೆ. ಆದರೆ, ತಂದುಕೊಡಲೇಬೇಕು. ಇಲ್ಲದಿದ್ದರೆ ₹500 ಫೈನ್ ಹಾಕುವುದಾಗಿ ಎಚ್ಚರಿಸಿದರು. ಹೀಗಾಗಿ ಟ್ರ್ಯಾಕ್ಟರ್‌ನಲ್ಲಿ ಹೋಗುತ್ತಿದ್ದೇನೆ' ಎಂದರು.

ಇದಲ್ಲದೆ ಈ ಭಾಗದಲ್ಲಿ ಫುಡ್ ಡಿಲಿವರಿ ಬಾಯ್ಸ್ 'ಯುಲು' ಬ್ಯಾಟರಿ ವಾಹನಗಳ ಮೊರೆಹೋಗಿದ್ದರು.

ತೂಬರಹಳ್ಳಿ, ಮುನ್ನೇಕೊಳಲು ಬಳಿ ವಲಸೆ ಕಾರ್ಮಿಕರು ಬೀದಿಪಾಲು

ತೇಲಿದ ಜೋಪಡಿ: ಮುಳುಗಿದ ಬದುಕು

● ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ತುತ್ತು ಅನ್ನ ಅರಸಿ ಬೆಂಗಳೂರಿಗೆ ಬಂದಿರುವ ವಲಸೆ ಕಾರ್ಮಿಕರ ಬದುಕು ರಾಜಕಾಲುವೆ ನೀರಿನಲ್ಲಿ ಕೊಚ್ಚಿಹೋಗಿದೆ. ಹೊರ ವಲಯದಲ್ಲಿ ಅಲ್ಲಲ್ಲಿ ಬೀಡು ಬಿಟ್ಟಿರುವ ಕಾರ್ಮಿಕರ ಜೋಪಡಿಗಳು ನೀರಿನಲ್ಲಿ ತೇಲುತ್ತಿದ್ದರೆ, ಅವರ ಬದುಕು ಸಂಪೂರ್ಣ ಮುಳುಗಿಹೋಗಿದೆ.

ಬಿಬಿಎಂಪಿಯಲ್ಲಿ ಕಸ ನಿರ್ವಹಣೆ ಕೆಲಸ ಮಾಡುವ ವಲಸೆ ಕಾರ್ಮಿಕರು ನಗರದ ಸುತ್ತ ಅಲ್ಲಲ್ಲಿ ಜೋಪಡಿಗಳಲ್ಲಿ ಜೀವನ ನಡೆಸುತ್ತಿದ್ದಾರೆ. ಪ್ರಮುಖವಾಗಿ ತೂಬರಹಳ್ಳಿ, ಮುನ್ನೇಕೊಳಲು ಬಳಿ ರಾಜಕಾಲುವೆ ಪಕ್ಕದಲ್ಲೇ ಎರಡು ಸಾವಿರಕ್ಕೂ ಹೆಚ್ಚು ಕುಟುಂಬಗಳು ಜೋಪಡಿಗಳಲ್ಲಿ ವಾಸ ಇವೆ. ಭಾನುವಾರದ ಜೋರು ಮಳೆ ಅವರ ಬದುಕಿಗೆ ದೊಡ್ಡ ಸವಾಲೊಡ್ಡಿದೆ.

ತೂಬರಹಳ್ಳಿ, ಮುನ್ನೇಕೊಳಲು ಬಳಿಯ ವಲಸೆ ಕಾರ್ಮಿಕರ ಜೋಪಡಿಗಳು ನೀರಿನಲ್ಲಿ ಮುಳುಗಿ ಜನಜೀವನ ಅಸ್ತವ್ಯಸ್ತಗೊಂಡಿರುವುದು –ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್‌.ಜಿ.

ರಾಜಕಾಲುವೆಗೆ ಸ್ವಲ್ಪ ದೂರದಲ್ಲಿರುವ ಜೋಪಡಿಗಳಲ್ಲಿ ಸೋಮವಾರ ಮೊಣಕಾಲೆತ್ತರದ ನೀರಿದ್ದರೆ, ಕಾಲುವೆ ಪಕ್ಕದಲ್ಲೇ ಇರುವ ಜೋಪಡಿಗಳಲ್ಲಿ ಎದೆಮಟ್ಟಕ್ಕೆ ನೀರು ತುಂಬಿಕೊಂಡಿದೆ. ಜೀವ ಉಳಿಸಿಕೊಳ್ಳಲು ಮಕ್ಕಳೊಂದಿಗೆ ಕಾರ್ಮಿಕರು ರಸ್ತೆಗೆ ಬಂದು ನಿಲ್ಲಬೇಕಾಯಿತು.

'ಮಧ್ಯರಾತ್ರಿ ಒಂದು ಗಂಟೆ ಸುಮಾರಿಗೆ ನೀರು ನುಗ್ಗಿದ ಕೂಡಲೇ ಮಕ್ಕಳೊಂದಿಗೆ ಹೊರಗೆ ಓಡಿ ಬಂದು ರಸ್ತೆಗೆ ನಿಂತೆವು. ಜೋಪಡಿಯಲ್ಲಿದ್ದ ದಿನಸಿ ಪದಾರ್ಥ, ಬಟ್ಟೆಗಳೆಲ್ಲ ನೀರು ಪಾಲಾಗಿವೆ. ಏನು ಮಾಡಬೇಕೋ ದಿಕ್ಕೇ ತೋಚದಾಗಿದೆ' ಎಂದು ಕಾರ್ಮಿಕರು ಬೇಸರ ವ್ಯಕ್ತಪಡಿಸಿದರು.

'ದುಡಿದು ಹೊಟ್ಟೆ ತುಂಬಿಸಿಕೊಳ್ಳಬೇಕೆಂದು ಬೆಂಗಳೂರಿಗೆ ಬಂದಿದ್ದೇವೆ. ರಾಜಕಾಲುವೆ ನೀರು ಕ್ಷಣಾರ್ಧದಲ್ಲೇ ನಮ್ಮನ್ನು ಭಿಕ್ಷುಕರನ್ನಾಗಿ ಮಾಡಿದೆ.

ಗುಳೆ ಬಂದವರ ಗೋಳು

ದೊಡ್ಡವರು ಹೇಗೋ ಹಸಿವು ತಡೆಯುತ್ತೇವೆ. ಮಕ್ಕಳಿಗೆ ಊಟ ಕೊಡಲಾಗದ ಸ್ಥಿತಿಗೆ ತಲುಪಿರುವುದು ನಮ್ಮ ದುರಂತ' ಎಂದು ನಿವಾಸಿ ಮಮ್ತಾಜ್ ಅರ್ಧ ಮುಳುಗಿರುವ ಜೋಪಡಿಗೆ ಒರಗಿ ಗದ್ಗದಿತರಾದರು.

'ಸೋಮವಾರ ಹಗಲು ಮಳೆ ಬಂದಿಲ್ಲ, ಎತ್ತರದ ಜಾಗದಲ್ಲೇ ಕಾಲ ಕಳೆದಿದ್ದೇವೆ. ರಾತ್ರಿ ಹೇಗೆ ಕಾಲ ತಳ್ಳುವುದೋ ಗೊತ್ತಿಲ್ಲ. ಮಳೆ ಬಂದರೆ ಏನು ಮಾಡಬೇಕು, ಮಕ್ಕಳನ್ನು ಹೇಗೆ ರಕ್ಷಣೆ ಮಾಡಿಕೊಳ್ಳಬೇಕು ಗೊತ್ತಿಲ್ಲ. ಅಕ್ಕ–ಪಕ್ಕದಲ್ಲಿ ದೊಡ್ಡ ಅಪಾರ್ಟ್‌ಮೆಂಟ್ ಸಮುಚ್ಚಯಗಳಿವೆ. ಮಳೆಯಿಂದ ರಕ್ಷಣೆ ಪಡೆಯಲು ಅಲ್ಲಿ ಅವಕಾಶ ಸಿಗುವ ಸಾಧ್ಯತೆ ಇಲ್ಲ' ಎಂದು ಕಣ್ಣೀರಿಟ್ಟರು.

ಗುಡಿಸಿಲಲ್ಲೇ ಉಳಿದ ರೋಗಪೀಡಿತ

ಜೋಪಡಿಯಲ್ಲಿ ಮಕ್ಕಳು, ವೃದ್ಧರು, ಅನಾರೋಗ್ಯಕ್ಕೆ ತುತ್ತಾದವರ ಸ್ಥಿತಿ ಚಿಂತಾಜನಕವಾಗಿದೆ.

ಪಪ್ಪು ಎಂಬ ಯುವಕನೊಬ್ಬ ಕೆಲಸ ಮಾಡುವಾಗ ಮಹಡಿ ಮೇಲಿನಿಂದ ಬಿದ್ದು ಸೊಂಟ ಮುರಿದುಕೊಂಡಿದ್ದಾರೆ. ಎದ್ದೇಳಲು ಆಗದ ಸ್ಥಿತಿಯಲ್ಲಿ ಹಾಸಿಗೆಯಲ್ಲೇ ಮಲಗಿದ್ದಾರೆ.

ಜೋಪಡಿಗೆ ನೀರು ತುಂಬಿಕೊಂಡು ಎಲ್ಲರೂ ಓಡಿಹೋದರೂ ಅವರು ಅಲ್ಲೇ ಮಲಗಿದ್ದಾರೆ. ಮರದ ಹಲಗೆಯೊಂದನ್ನು ಸ್ವಲ್ಪ ಎತ್ತರಕ್ಕೆ ಹಾಕಲಾಗಿದ್ದು, ಅದರ ಮೇಲೆಯೇ ಮಲಗಿದ್ದಾರೆ.

ಜೋರು ಮಳೆ ಬಂದು ಜೋಪಡಿ ಮುಳುಗಿದರೆ ಅವರನ್ನು ಹೊತ್ತೊಯ್ಯುವುದು ಹೇಗೆ ಎಂಬ ಚಿಂತೆ ಕುಟುಂಬದವರನ್ನು ಕಾಡುತ್ತಿದೆ. ಮಳೆ ಎಂಬುದು ಈ ನಿವಾಸಿಗಳ ಪಾಲಿಗೆ ದುಸ್ವಪ್ನವಾಗಿ ಕಾಡುತ್ತಿದೆ.

ನೀರಿನಲ್ಲಿ ಮುಳುಗಿರುವ ಜೋಪಡಿಗಳ ಮುಂದೆ ಕಾರ್ಮಿಕರು (ಎಡಚಿತ್ರ). ಜಲಾವೃತಗೊಂಡಿರುವ ಜೋಪಡಿಗಳಲ್ಲಿದ್ದ ಪರಿಕರಗಳು ನೀರಿನಲ್ಲಿ ತೇಲಿ ಹೋಗುತ್ತಿರುವುದು

51 ವರ್ಷಗಳಲ್ಲಿ ದಾಖಲೆ ಮಳೆ

ಇಕೊಸ್ಪೇಸ್, ಆರ್‌ಎಂಝೆಡ್‌ನಲ್ಲಿ ಒತ್ತುವರಿ ತೆರವಿಗೆ ಕ್ರಮ: ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ 1971ರಲ್ಲಿ ಮಳೆಗಾಲದಲ್ಲಿ 725 ಮಿ.ಮೀ. ಮಳೆಯಾಗಿತ್ತು. ಈ ವರ್ಷ ಸೆಪ್ಟೆಂಬರ್‌ನಲ್ಲಿ 709 ಮಿ.ಮೀ. ಮಳೆಯಾಗಿದ್ದು, ಇದು 51 ವರ್ಷಗಳಲ್ಲಿ ಎರಡನೇ ದಾಖಲೆ ಮಳೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಆಗಸ್ಟ್ 31ರ ರಾತ್ರಿಯಿಂದ ನಿರಂತರ ಮಳೆಯಾಗುತ್ತಿದೆ. ಭಾನುವಾರ ರಾತ್ರಿ ಅತಿಹೆಚ್ಚು ಪ್ರಮಾಣದಲ್ಲಿ ಮಳೆಯಾಗಿದೆ. ಪೂರ್ವ ಹಾಗೂ ಬೊಮ್ಮನಹಳ್ಳಿ ಭಾಗದಲ್ಲಿ ಹೆಚ್ಚಾಗಿ ಮಳೆಯಾಗಿದೆ. ಸೆಪ್ಟೆಂಬರ್‌ವರೆಗೆ ಸಾಮಾನ್ಯವಾಗಿ ಈ ಭಾಗದಲ್ಲಿ 313 ಮಿ.ಮೀ. ಮಳೆಯಾಗುತ್ತಿತ್ತು. ಆದರೆ, 709 ಮಿ.ಮೀ. ಮೀಟರ್ ಆಗಿದೆ. 1998 ಹೊರತುಪಡಿಸಿದರೆ ನಗರದಲ್ಲಿ ಅತಿ ಹೆಚ್ಚು ಮಳೆಯಾಗಿದೆ. 1975ರಲ್ಲಿ ಒಟ್ಟಾರೆ 725 ಮಿ.ಮೀ. ಮಳೆಯಾಗಿತ್ತು. 1971ರ ನಂತರ ಅತಿಹೆಚ್ಚು ಮಳೆ ಇದಾಗಿದೆ ಎಂದರು.

2017 ಬಿಟ್ಟರೆ ಇದೀಗ ಮಹದೇವಪುರ, ಪೂರ್ವವಲಯದಲ್ಲಿ ಅತಿ ಹೆಚ್ಚು ಮಳೆಯಾಗಿದೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ 700 ಮಿ.ಮೀ. ಹೆಚ್ಚು ಮಳೆಯಾಗಿದೆ. ಹೀಗಾಗಿ, ಸಮಸ್ಯೆ ಹೆಚ್ಚಾಗಿದೆ. ನಾಲ್ಕು ಪಟ್ಟು ಹೆಚ್ಚು ಮಳೆ ಆಗಸ್ಟ್ 30ರಿಂದ ಸೆಪ್ಟೆಂಬರ್ 5ರವರೆಗೆ ಆಗಿದೆ. ಬೊಮ್ಮನಹಳ್ಳಿಯಲ್ಲಿ 9 ಪ್ರದೇಶಗಳಲ್ಲಿ ಸಾಕಷ್ಟು ಸಮಸ್ಯೆ ಆಗಿದೆ. ಪೂರ್ವ ಭಾಗದಲ್ಲಿ 24 ಕಡೆ ಹಾಗೂ ಮಹದೇಪುರದಲ್ಲಿ 22 ಕಡೆ ಸಮಸ್ಯೆ ಆಗಿದೆ ಎಂದು ವಿವರಿಸಿದರು.

ಸವಳು ಕೆರೆಯಿಂದ ನೀರು ಹರಿಯುತ್ತಿದ್ದು, ಇದರಿಂದ ಬೆಳ್ಳಂದೂರು–ಸರ್ಜಾಪುರ ರಸ್ತೆಯಲ್ಲಿ ನೀರು ಹರಿಯುತ್ತಿದೆ. ನಗರದ ಬಹುತೇಕ ಎಲ್ಲ ಕೆರೆಗಳು ತುಂಬಿದ್ದು ಅದರಿಂದ ನೀರು ಹರಿಯುತ್ತಿದೆ. ನೀರು ಹೋಗಲು ರಾಜಕಾಲುವೆ ಒತ್ತುವರಿ ಆಗಿರುವುದರಿಂದ ನೀರು ನಿಧಾನಗತಿಯಲ್ಲಿ ಹೋಗುತ್ತಿದೆ. ಒತ್ತುವರಿ ಹೆಚ್ಚಾಗಿರುವುದರಿಂದ ನೀರು ಹೋಗುತ್ತಿಲ್ಲ. ಅದರ ತೆರುವಿಗೆ ಕ್ರಮ ಕೈಗೊಳ್ಳಲಾಗುತ್ತದೆ. ರಾಜ್ಯ ವಿಪತ್ತು ನಿರ್ವಹಣೆ ದಳ, ಅಗ್ನಿಶಾಮಕ ದಳ ರಕ್ಷಣೆ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದರು.

ದಕ್ಷಿಣ, ಪಶ್ಚಿಮ, ದಾಸರಹಳ್ಳಿ, ರಾಜರಾಜೇಶ್ವರಿನಗರ ವಲಯದಲ್ಲಿ ಅಷ್ಟೇನೂ ತೊಂದರೆ ಆಗಿಲ್ಲ. ದಕ್ಷಿಣದಲ್ಲಿ ಮೂರು ಕಡೆ ಹಾಗೂ ಆರ್.ಆರ್. ನಗರದಲ್ಲಿ ನಾಲ್ಕು ಮನೆಗಳಲ್ಲಿ ನೀರು ನುಗ್ಗಿದೆ ಎಂದರು.

'ಎಚ್‌ಎಎಲ್ ಬಳಿ ದಿವ್ಯಶ್ರೀ ಅಪಾರ್ಟ್‌ಮೆಂಟ್ ಅಪಾರ್ಟ್‌ಮೆಂಟ್‌ನವರು ರಾಜಕಾಲುವೆಯನ್ನು ತಿರುಗಿಸಿದ್ದಾರೆ. ಅದನ್ನು ಸಂಪೂರ್ಣ ಮುಚ್ಚಿದ್ದಾರೆ. ಹೀಗಾಗಿ ನೀರು ಹೊರಹೋಗದೆ ಉಕ್ಕಿ ಹರಿಯುತ್ತಿದೆ. ಅಲ್ಲಿ ಡಿಎನ್‌ಎ, ಅಪ್ಸರಾ, ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ಗಳಿಗೆ ತೊಂದರೆಯಾಗಿದೆ. ಒತ್ತುವರಿ ತೆರವು ಮಾಡಿ ನೀರ ಹರಿವಿಗೆ ಅನುವು ಮಾಡಿಕೊಡಲಾಗುತ್ತದೆ' ಎಂದರು.

'ಆರ್.ಎಂ.ಝಡ್ ಹಾಗೂ ಇಕೊಸ್ಪೇಸ್‌ನಲ್ಲೂ ರಾಜಕಾಲುವೆ ಒತ್ತುವರಿಯಾಗಿದೆ. ಅವುಗಳನ್ನು ಒಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಹೀಗಾಗಿ ನೀರು ಹರಿವಿಗೆ ಜಾಗವಿಲ್ಲ. ಸವಳು ಕೆರೆ ಕೋಡಿ ಹರಿವು ಎಲ್ಲೆಡೆ ನುಗ್ಗುತ್ತಿದೆ. ಇದು ಹೊರವರ್ತುಲ ರಸ್ತೆಗೂ ಬರುತ್ತಿದೆ.

ಬಿಡಿಎಗೆ ತರಾಟೆ

'ಯಮಲೂರು ಕೆರೆ ಕೋಡಿ ಬಳಿ ಹೆಚ್ಚಿನ ನೀರು ಬರುತ್ತಿದ್ದು, ಇದನ್ನು ತಡೆಯಬೇಕು. ಏನು ಕೆಲಸ ಮಾಡುತ್ತಿದ್ದೀರೋ ಗೊತ್ತಿಲ್ಲ. ಯಾರು ಮಾಡುತ್ತಿದ್ದೀರೋ ಗೊತ್ತಿಲ್ಲ. ಇಕೊಸ್ಪೇಸ್ ಕಡೆಗೆ ನೀರು ಹೆಚ್ಚಾಗಿ ಹರಿಯಬಾರದು. ಕೂಡಲೇ ಕ್ರಮ ಕೈಗೊಳ್ಳಿ ಎಂದು ಸಿ.ಎಂ ಹೇಳಿದ್ದಾರೆ. ನೀವೂ ಕೆಲಸ ಮಾಡಿ' ಎಂದು ಬಿಡಿಎ ಎಂಜಿನಿಯರ್ ಸದಸ್ಯ ಶಾಂತ ರಾಜಣ್ಣ ಅವರನ್ನು ಬಿಬಿಎಂಪಿ ಆಯುಕ್ತ ತರಾಟೆಗೆ ತೆಗೆದುಕೊಂಡರು.

'ಬಿಡಿಎ ಮಾಡಿರುವ ಕೆಲವು ಕಾಮಗಾರಿಗಳಿಂದ ಸಾಕಷ್ಟು ಸಮಸ್ಯೆ ಆಗಿದೆ. ನೀವು ಕೂಡಲೇ ಸ್ಥಳಕ್ಕೆ ಬಂದು ಕೆಲಸ ಮಾಡಿ' ಎಂದು ಯಮಲೂರಿನಲ್ಲಿ ತಪಾಸಣೆ ನಡೆಸುತ್ತಿದ್ದ ಸಂದರ್ಭದಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಸೌಧದ ಕ್ಯಾಂಟೀನ್‌ಗೂ ನುಗ್ಗಿದ ಮಳೆ ನೀರು

ಬೆಂಗಳೂರು: ಭಾನುವಾರ ರಾತ್ರಿ ಸುರಿದ ಮಳೆಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ಪಕ್ಕದಲ್ಲಿರುವ ಕ್ಯಾಂಟೀನ್‌ಗೂ ನೀರು ನುಗ್ಗಿದೆ. ಕ್ಯಾಂಟೀನ್‌ನಲ್ಲಿ ಸುಮಾರು ಮೂರು ಅಡಿಗಳಿಗೂ ಹೆಚ್ಚು ನೀರು ನಿಂತಿತ್ತು ಎಂದು ಸಿಬ್ಬಂದಿ ತಿಳಿಸಿದರು.

ಸೋಮವಾರ ಸಿಬ್ಬಂದಿ ನೀರು ತೆಗೆಯಲು ಹರಸಾಹಸ ಮಾಡಿದರು.

IN HINDI AT:- PVR CINEMAS {Bangalore} | INOX CINEMAS {Bangalore} | CINEPOLIS CINEMAS {Bangalore} | GOPALAN {Bangalore} | INNOVATIVE MULTIPLEX {Marathahalli} | ROCKLINE MALL {Jalahalli Cross} | KINO CINEMAS {Seegehalli Road} | SWAGATH SHANKARNAG {M. G. Road} | ABHINAY {KG Road} | AKASH {Laggere} | AMRUTH {Bangalore} | ANAND {Tannary Road} | ANJAN {Magadi Road} | BALAJI {Chikalsandra} | BRUNDHA {Hongasandra} | CAUVERY {Sankey Road} | HMT {Jalahalli} | LAKSHMI {Tavarekere} | LAKSHMI {Ramamurthy Nagar} | MANASA {Konankunte} | MUKUNDA {Maruti Seva Nagar} | NAVRANG {Rajaji Nagar} | POORNIMA {Lalbagh} | PRASANNA {Magadi Road} | PRITHVI {Nagavara} | PUSHPANJALI {Sultan Palaya} | RADHAKRISHNA {RT Nagar} | RAVI {Sarjapura} | RENUKA PRASANNA {J P Nagar} | SANDHYA {Madiwala} | SANTOSH {RPC Layout} | SHREE MAHADESHWARA {Bangalore} | VINAYAKA {DJ Halli} | TIRUMALA {Agrha} | URVASHI {Lalbagh} | VAIBHAV {Sanjay Nagar} | SIDDESHWARA {J P Nagar} | VENKATESHWARA {Kona Agrahara} | VINAYAKA {Marathahalli} | VICTORY {Kamakshipalaya} | COORG {Kushallnagar} | SOUNDARYAMAHAL {Dodbelapur} | SRI LEKHA {Chikmangalore} | PRITHVI {Hassan} | MAHAVEER {Mandya} | JAI BHARAT {Tumkur} | DIANA {Udupi} | PVR CINEMAS {Mysore} | INOX CINEMAS {Mysore} | DRC CINEMAS {Mysore} | VISION CINEMAS {Mysore} | BALAJI DELUXE {Mysore} | SANGAM {Mysore} | PVR CINEMAS {Mangalore} | CINEPOLIS CINEMAS {Mangalore} | BHARATH CINEMAS {Mangalore | Manipal | Shivamoga | Kundapura} | BHARATH CINEMAS {Padubidri - Udupi} | LAKSHMI {Shivamoga} | CINE GALAXY {Mangalore} | MOVIETIME {Davanagere} | TRINETRA {Davangere} | NETHRAVATI {Bhadravathi}.

IN TAMIL AT:- AMRUTH {Lingarajpuram} | VINAYAKA {Mysore Road} | VAINIDHI {Singapur Lay Out } | LAXMI {KGF}.

IN KANNADA AT:- POORNIMA {Turuvekere} | VEERBHADRESHWARA {Shivamoga} | VEERBHADRESHWARA {Bhadravathi} | VIJAY LAKSMI {Kadur} | VINAYAKA {Thirtahalli} | MALTESHA {Shikaripura} | SRI SHAILA {Nyamathi} | MARUTHI {Shiralakoppa} | MAHAVEER {Maddur} | MARUTHI {Tumkur} | LAKSHMI {Tiptur} | BRAMARAMBA {Chamarajanagar} | VENKTESHWARA {Chitradurga} | JAI MARUTHI {Sakleshpura} | RAVI {Halgur} | SRI VEERBHADRESHWARA {Ram Pura} | DHANALAXMI {Channarayanapatna} | LAXMI {Pandupura} | BHARATHI {Babu Koppala} | YAJAMANA {Hullahally} | SCVDS {K R Nagar} | SRI VEERBHADRESHWARA {D. M. Kurke} | SRIKANTH {Harihara} | JYOTHI {Mallebennur} | GAYATHRI {Hoovina Hadagali} | SRI GURU {Hassan} | SHREE {Sagar} | BHARATH {Kampli}.

IN TELUGU AT:- BHAVANI {Kolar} | NATARAJA {Mulbagilu} | ADARSHA {Chintamani} | KRISHNA {Chickabalapura} | ALANKAR {Pavgada} | PADMA {Challkere} | SRINIVASA {Kadugudi} | RAGHAVENDRA {Bellary} | KRISHNA {Hagaribomanahalli} | BHARATH {Jagalur} | BALA PICTURE PALACE {Hospet} | BALAJI {Siriguppa} | VASAVI {Sandur} | BHARATH {Kampli} | SHOBHA {Bapujinagar} | CHANDRODAYA {Vidhyapeet Circle}.

farnaz

ಚಾಮರಾಜನಗರ ತಾಲ್ಲೂಕಿನ ಕೋಡಿಮೋಳೆ ಕೆರೆ ಉಕ್ಕಿದ ಪರಿಣಾಮ ಕೋಡಿಮೋಳೆಯಲ್ಲಿ ಮನೆಗಳು ಜಲಾವೃತವಾಗಿವೆ (ಎಡಚಿತ್ರ) ಮಳೆಯಿಂದಾಗಿ ಹಾಸನ ಹೊರವಲಯದ ಬಡಾವಣೆ ಜಲಾವೃತವಾಗಿದೆ — ಪ್ರಜಾವಾಣಿ ಚಿತ್ರಗಳು

ಮಳೆ ವಿವರ ಸೆಂ.ಮೀ.	
ಚೇಳೂರು(ಗುಬ್ಬಿ)	13.8
ದಂಡಿನಶಿವರ(ತುರುವೇಕೆರೆ)	12
ಮಾಯಸಂದ್ರ	10.8
ಕೋಳಾಲ(ಕೊರಟಗೆರೆ)	10.9
ಸಾರಗೋಡು (ಚಿಕ್ಕಮಗಳೂರು)	13
ಕಾಚಿಗಟ್ಟ ಹೋಬಳಿ (ಅರಸೀಕೆರೆ ತಾಲ್ಲೂಕು)	14.5
ಕಸಬಾ ಹೋಬಳಿ (ಚಾಮರಾಜನಗರ)	12.7
ಗೋಣಿಕೊಪ್ಪಲು (ಕೊಡಗು)	10.15

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಚಾಮರಾಜನಗರದಲ್ಲಿ ಗೋಡೆ ಕುಸಿದು ಯುವಕ ಸಾವು, ಕೊರಟಗೆರೆ ಹಳ್ಳದಲ್ಲಿ ಕೊಚ್ಚಿ ಹೋದ ಚಾಲಕ, ಟೆಂಪೊ

ಮಳೆ: ಜನವಸತಿ, ಜಮೀನು ಜಲಾವೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಭಾನುವಾರ ರಾತ್ರಿ ಮತ್ತು ಸೋಮವಾರ ಧಾರಾಕಾರ ಮಳೆಯಾಗಿದೆ. ಹಲವೆಡೆ ಮನೆಗಳು ಕುಸಿದು ಬಿದ್ದಿವೆ. ಮನೆಗಳು ಮತ್ತು ಜಮೀನುಗಳಿಗೆ ನೀರು ನುಗ್ಗಿ ಅಪಾರ ಹಾನಿಯಾಗಿದೆ.

ಚಾಮರಾಜನಗರ ತಾಲ್ಲೂಕಿನ ದಡದಹಳ್ಳಿಯಲ್ಲಿ ಸಿಡಿಲು ಬಡಿದು ಮನೆಯ ಗೋಡೆ ಕುಸಿದು ಮೂರ್ತಿ (33) ಮೃತಪಟ್ಟಿದ್ದಾರೆ. ಕುಷ್ಟಗಿ ತಾಲ್ಲೂಕಿನ ಹನುಮಸಾಗರ ಸಮೀಪದ ಕಾಟಾಪುರ ಗ್ರಾಮದ ರೈತ ಸಣ್ಣನೀಲಪ್ಪ ಹಾದಿಮನಿ (64) ಹೊಲದ ಕೆಲಸ ಮುಗಿಸಿ, ಮನೆಗೆ ಮರಳುವಾಗ ಸಿಡಿಲು ಬಡಿದು ಸಾವನ್ನಪ್ಪಿದ್ದಾರೆ.

ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಮಲ್ಲಪ್ಪನಹಳ್ಳಿ ಸಮೀಪದ ಹಳ್ಳದ ನೀರಿನಲ್ಲಿ ಮುಂಜಾನೆ ಮಿನಿ ಟೆಂಪೊ ಮತ್ತು ಚಾಲಕ ಆಂಧ್ರಪ್ರದೇಶದ ತಿಪ್ಪೇರಾಯ ಕೊಚ್ಚಿಕೊಂಡು ಹೋಗಿದ್ದಾರೆ. ಶವಕ್ಕಾಗಿ ಶೋಧ ಮುಂದುವರಿದಿದೆ. ಕೋಳಿ ಆಹಾರ ಸಾಗಿಸುತ್ತಿದ್ದ ಟೆಂಪೊದಲ್ಲಿ ಇಬ್ಬರು ಇದ್ದರು. ಟೆಂಪೊ ಕೊಚ್ಚಿಕೊಂಡು ಹೋಗುತ್ತಿದ್ದಂತೆ ಒಬ್ಬರು ಮರದ ಕೊಂಬೆ ಸಹಾಯದಿಂದ ಈಜಿ ದಡ ಸೇರಿದ್ದಾರೆ.

ಚಿಕ್ಕಮಗಳೂರು ತಾಲ್ಲೂಕಿನ ಸಾರಗೋಡು ಭಾಗದಲ್ಲಿ ತೋಟ, ಗದ್ದೆ, ಮನೆಗಳಿಗೆ ನೀರು ನುಗ್ಗಿದೆ. ಹುಲಿಗೆ ಹಳ್ಳದ ನೀರು ನುಗ್ಗಿ ಮಡೆಗದ್ದೆ ಭಾಗದಲ್ಲಿ ಗದ್ದೆಗಳಲ್ಲಿನ ಭತ್ತದ ಸಸಿಗಳು ನೆಲಕಚ್ಚಿವೆ.

ಗದಗ ಜಿಲ್ಲೆಯ ಲಕ್ಷ್ಮೇಶ್ವರ ಪಟ್ಟಣದಲ್ಲಿ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿದೆ. ಶಿಗ್ಗಿ-ದೊಡ್ಡೂರು, ದೊಡ್ಡೂರು-ಲಕ್ಷ್ಮೇಶ್ವರ, ದೊಡ್ಡೂರು-ಉಂಡೇನಹಳ್ಳಿ ರಸ್ತೆಗಳ ಸಂಚಾರ ಬಂದ್ ಆಗಿತ್ತು.

ಕೊಪ್ಪಳ ತಾಲ್ಲೂಕಿನ ಬೆಟಗೇರಿ ಗ್ರಾಮದಲ್ಲಿ ಮನೆಯ ಗೋಡೆ ಕುಸಿದು ಇಬ್ಬರು ಮಕ್ಕಳಿಗೆ ಗಾಯವಾಗಿದೆ.

ತುಮಕೂರು ಜಿಲ್ಲೆಯ ಜಯಮಂಗಲಿ, ಗರುಡಾಚಲ, ಸುವರ್ಣಮುಖಿ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಜಯಮಂಗಲಿ ನದಿ ನೀರು ನುಗ್ಗಿ ಮಧುಗಿರಿ ತಾಲ್ಲೂಕಿನ ಚೆನ್ನಸಾಗರ ಗ್ರಾಮ ಜಲಾವೃತವಾಗಿದೆ. 35 ಮನೆಗಳಿಗೆ ನೀರು ನುಗ್ಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಜಯಪುರದ ಅಮಾನಿಕೆರೆ ಮೂರು ದಶಕದ ನಂತರ ಭರ್ತಿಯಾಗಿದೆ. ಕೆರೆ ಕೋಡಿ ತುಂಬಿ ಹರಿಯುತ್ತಿದ್ದು, ಮನೆಗಳೆಲ್ಲವೂ ಮುಳುಗಡೆಯಾಗಿವೆ. ಶಿಡ್ಲಘಟ್ಟ-ವಿಜಯಪುರ ಮುಖ್ಯರಸ್ತೆಯಲ್ಲಿ ನೀರು ಹರಿಯುತ್ತಿದ್ದು ಸಂಚಾರ ಬಂದ್ ಮಾಡಲಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹೊಲ, ತೋಟಗಳಿಗೆ ನೀರು ನುಗ್ಗಿದ್ದು ದ್ರಾಕ್ಷಿ, ಹಿಪ್ಪು ನೇರಳೆ, ತರಕಾರಿ ಬೆಳೆಗಳು ಜಲಾವೃತವಾಗಿವೆ. ಗೌರಿಬಿದನೂರು ತಾಲ್ಲೂಕಿನ ತಿಪ್ಪಗಾನಹಳ್ಳಿ ಕೆರೆಯ ಕೋಡಿಯಿಂದ ಕೆಲವು ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ.

ಬಾಗೇಪಲ್ಲಿ ತಾಲ್ಲೂಕಿನ ಹೊಸಕೋಟೆ ಗ್ರಾಮದ ಬಳಿ ಚಿತ್ರಾವತಿ ಸೇತುವೆ ಕೆಳಭಾಗದಲ್ಲಿ ನೀರಿನ ಒಳಹರಿವು ಹೆಚ್ಚಾಗಿ ಮೇಲ್ಸೇತುವೆ ಕುಸಿದಿದೆ. ಒಟ್ಟು 11 ಮನೆಗಳ ಗೋಡೆ ಕುಸಿದಿದೆ.

ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಕೊಡಗಿನಲ್ಲಿ ಮಳೆಯಿಂದ ನೂರಾರು ಮನೆಗಳಿಗೆ ಹಾನಿಯಾಗಿದೆ. ಸಾವಿರಾರು ಎಕರೆ ಕೃಷಿ ಭೂಮಿ ಹಾಗೂ ಹಲವು ಗ್ರಾಮಗಳು ಜಲಾವೃತವಾಗಿದ್ದು, ಸಂಪರ್ಕವೂ ಕಡಿತಗೊಂಡಿದೆ.

ಚಾಮರಾಜನಗರ ಜಿಲ್ಲೆಯ ಸುವರ್ಣಾವತಿ ನದಿಯ ಅಚ್ಚುಕಟ್ಟು ಪ್ರದೇಶಗಳಲ್ಲಿ ಪ್ರವಾಹ ಉಂಟಾಗಿದೆ. ತೆಂಗಿನ ತೋಟದಲ್ಲಿ ಸಾವಿರಾರು ತೆಂಗಿನಕಾಯಿಗಳು ಕೊಚ್ಚಿ ಹೋಗಿವೆ.

ಸಂತೇಮರಹಳ್ಳಿ ಹೋಬಳಿಯ ಹೊಂಗನೂರು ಗ್ರಾಮದಲ್ಲಿ ಜಲಾವೃತಗೊಂಡ ಸೇತುವೆ ಮೇಲೆ ಹೋಗುತ್ತಿದ್ದಾಗ ನೀರಿನ ಸೆಳೆತಕ್ಕೆ ಕೊಚ್ಚಿ ಹೋಗುತ್ತಿದ್ದ ಬೈಕ್ ಸವಾರರಾದ ಚಾಮರಾಜನಗರ ತಾಲ್ಲೂಕಿನ ಸಿದ್ದಯ್ಯನಪುರದ ಮಲ್ಲಿಕಾರ್ಜುನ ಮತ್ತು ಶಂಕರ ಮಹದೇವಯ್ಯ ಅವರನ್ನು ಅದೇ ಗ್ರಾಮದ ಯುವಕ ಶಿವು ಜೀವದ ಹಂಗು ತೊರೆದು ರಕ್ಷಿಸಿದ್ದಾರೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಹಲಗೂರು ಸಮೀಪದ ಚಿಕ್ಕತೊರೆ (ಭೀಮಾ ನದಿ) ಉಕ್ಕಿ ಹರಿದು ನದಿ ದಂಡೆಯ ಗೋದಾಮಿನಲ್ಲಿದ್ದ 39 ಮೇಕೆಗಳು ಕೊಚ್ಚಿ ಹೋದವು.

ಮೈಸೂರು ತಾಲ್ಲೂಕಿನ ಹುಯಿಲಾಳುವಿನ ದೊಡ್ಡಗೌಡನ ಕಟ್ಟೆ ಕೆರೆ ತುಂಬಿ ಗದ್ದಿಗೆ- ಮಾಣಿಕ್ಯಪುರ ರಸ್ತೆ ಕೊಚ್ಚಿ ಹೋಗಿತ್ತು. ನಂಜನಗೂಡಿನ ಎಡತಲೆಯಲ್ಲಿ ನೂರಾರು ಮನೆಗಳಿಗೆ ನೀರು ನುಗ್ಗಿದ್ದು, ಮೂರು ಮನೆಗಳು ಕುಸಿದಿವೆ.

ಎಚ್‌.ಡಿ.ಕೋಟೆ ತಾಲ್ಲೂಕಿನ ವಡ್ಡರಗುಡಿ ಸಮೀಪ ಗದ್ದಿಗೆ ಸಂಪರ್ಕಿಸುವ ರಸ್ತೆಯ ಸೇತುವೆಯ ಮೇಲೆ ಹೆಬ್ಬಳ್ಳ ಜಲಾಶಯದ ನೀರು ಹರಿದು 50ಕ್ಕೂ ಹೆಚ್ಚು ಗ್ರಾಮದ ಸಂಪರ್ಕ ಕಡಿತಗೊಂಡಿತ್ತು.

ಚಾಮರಾಜನಗರ ತಾಲ್ಲೂಕಿನ 12ಕ್ಕೂ ಹೆಚ್ಚು ಗ್ರಾಮಗಳ ನೂರಾರು ಎಕರೆ ಕೃಷಿ ಭೂಮಿ, ಯಳಂದೂರು ತಾಲ್ಲೂಕಿನ ಅಂಬಳೆ, ಮದ್ದೂರು, ಯರಿಯೂರು, ಗಣಿಗನೂರು, ಅಗರ -ಮಾಂಬಳ್ಳಿ, ಮಲ್ಲಿಗೆಹಳ್ಳಿ ಜಲಾವೃತವಾಗಿದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಹೊಸ ಆನಂದೂರು ಬಳಿ ಕೆಆರ್‌ಎಸ್ ಬಲದಂಡೆ ನಾಲೆ (ಆರ್‌ಬಿಎಲ್‌ಎಲ್‌)ಯ ಏರಿ ಒಡೆದು ಕೃಷಿ ಜಮೀನು ಮುಳುಗಡೆಯಾಗಿದೆ. ಬೆಳಗೊಳ, ಮಜ್ಜಿಗೆಪುರ ಮತ್ತು ಹೊಸ ಆನಂದೂರು ವ್ಯಾಪ್ತಿಯಲ್ಲಿ 100 ಎಕರೆಯಷ್ಟು ಭತ್ತ ಇತರ ಬೆಳೆಗಳಿಗೆ ಹಾನಿಯಾಗಿದೆ.

ಹಾಸನ ತಾಲ್ಲೂಕಿನ ನಿಡೂಡಿ ಕೆರೆಯ ಕೋಡಿ ಒಡೆದು ಗ್ರಾಮಕ್ಕೆ ನೀರು ನುಗ್ಗಿತ್ತು. ಸತ್ಯಮಂಗಲ ಕೆರೆ ತುಂಬಿ ರಿಂಗ್ ರಸ್ತೆ ಹಾಗೂ ಪಕ್ಕದ ಬಡಾವಣೆ ಜಲಾವೃತವಾಗಿತ್ತು. ನುಗ್ಗೇಹಳ್ಳಿ ಬಳಿ ಹಿರೀಸಾವೆ-ಸಮುದ್ರವಳ್ಳಿ ರಸ್ತೆ, ಶ್ರವಣಬೆಳಗೊಳ-ಹಿರೀಸಾವೆ ರಾಜ್ಯ ಹೆದ್ದಾರಿ ಜಲಾವೃತವಾಗಿತ್ತು. ಹಿರೀಸಾವೆ ಹೋಬಳಿಯಲ್ಲಿ 2 ಮನೆಗೆ ಹಾನಿಯಾಗಿದೆ.

ಗೋಣಿಕೊಪ್ಪಲು ಪಟ್ಟಣದಲ್ಲಿ ಕೀರೆಹೊಳೆ, ಬೈಪಾಸ್ ರಸ್ತೆಯ ಕೈಕೇರಿ ತೋಡು ತುಂಬಿ ಹರಿಯಿತು. ಸುಳ್ಯ ತಾಲ್ಲೂಕಿನ ಪೈಚಾರು- ಸೋಣಂಗೇರಿ ರಸ್ತೆಯ ಆರ್ತಾಜೆ ಎಂಬಲ್ಲಿ ಮೋರಿ ಜಲಾವೃತಗೊಂಡು ಸಂಪರ್ಕ ಕಡಿತಗೊಂಡಿತ್ತು.

ಬೆಂಗಳೂರಿನಲ್ಲಿ ಬೆಳ್ಳಂದೂರು ಯಮಲೂರು ಕೆರೆ ಕೋಡಿ ಒಡೆದು ಯಮಲೂರು ಮುಖ್ಯರಸ್ತೆ ಜಲಾವೃತವಾಗಿರುವ ದೃಶ್ಯ ಸೋಮವಾರ ಕಂಡು ಬಂತು

ಹೆದ್ದಾರಿಯಲ್ಲಿ ಕುಸಿದ ಗುಡ್ಡ

ಬೆಳಗಾವಿ ಜಿಲ್ಲೆಯ ಗೋಕಾಕ ಫಾಲ್ಸ್‌ನಲ್ಲಿ ಜತ್ತ-ಗೊಡಚಿನಮಲ್ಕಿ ಹೆದ್ದಾರಿ ಪಕ್ಕದ ಗುಡ್ಡ ಕುಸಿದಿದೆ. ಈ ಮಾರ್ಗ ಗೋಕಾಕದಿಂದ ಗೊಡಚಿನಮಲ್ಕಿಗೆ ಸಂಪರ್ಕ ಕಲ್ಪಿಸುತ್ತದೆ. ಗುಡ್ಡ ಕುಸಿತದಿಂದಾಗಿ ಕೆಲಕಾಲ ವಾಹನ ಸಂಚಾರ ಸ್ಥಗಿತಗೊಂಡು ಸ್ಥಳೀಯರ ಜೊತೆಗೆ ಪ್ರವಾಸಿಗರು ಪರದಾಡಿದರು. ಅಗ್ನಿಶಾಮಕ ದಳ, ಗೋಕಾಕ ನಗರಸಭೆ ಸಿಬ್ಬಂದಿ ಹಾಗೂ ಪೊಲೀಸರು ಕಾರ್ಯಾಚರಣೆ ನಡೆಸಿ, ಹೆದ್ದಾರಿ ಮೇಲೆ ಬಿದ್ದಿದ್ದ ಕಲ್ಲುಗಳನ್ನು ತೆರವುಗೊಳಿಸಿದರು. ಸತತ ಮಳೆಯಿಂದಾಗಿ ಗುಡ್ಡದ ಮೇಲಿಂದ ನೀರು ರಭಸವಾಗಿ ಹರಿದು ಬಂದಿದ್ದರಿಂದ ಕೊಣ್ಣೂರ ಮತ್ತು ಗೋಕಾಕ ಫಾಲ್ಸ್ ಮಧ್ಯೆ ಇರುವ ಮಾಣಿಕವಾಡಿಯಲ್ಲಿ ಹಲವು ಮನೆಗಳಿಗೆ ನೀರು ನುಗ್ಗಿತು.

ಜಲಾಶಯದಿಂದ ನೀರು

ರಾಮನಗರ ಜಿಲ್ಲೆಯಲ್ಲಿ ಸಂಜೆ ಒಂದು ಗಂಟೆಗೂ ಹೆಚ್ಚು ಕಾಲ ಜೋರು ಮಳೆ ಸುರಿದ ಪರಿಣಾಮ ರಸ್ತೆಗಳಲ್ಲಿ ನೀರು ಪ್ರವಾಹದಂತೆ ಹರಿಯಿತು. ಮಂಚನಬೆಲೆ ಜಲಾಶಯ ಭರ್ತಿಯಾದ ಹಿನ್ನೆಲೆಯಲ್ಲಿ ಅರ್ಕಾವತಿ ನದಿಗೆ ಆರು ಸಾವಿರ ಕ್ಯುಸೆಕ್ ಗೂ ಹೆಚ್ಚು ನೀರನ್ನು ಹರಿ ಬಿಡಲಾಗಿದೆ. ಕಣ್ವ ನದಿ ಹರಿವೂ ಹೆಚ್ಚಿದ್ದು, ಹಲವು ಸೇತುವೆಗಳು ಭಾಗಶಃ ಮುಳುಗಡೆ ಆಗಿವೆ.

ಸೇತುವೆ ಮಧ್ಯೆ ಸಿಲುಕಿದ ಬಸ್

ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ದಾಸಾಲುಕುಂಟೆ ಗ್ರಾಮದ ಬಳಿ ಸೇತುವೆ ಮೇಲೆ ಹರಿಯುತ್ತಿದ್ದ ನೀರಿನಲ್ಲಿ ಹೊರಟಿದ್ದ ಖಾಸಗಿ ಬಸ್ ನಡುವೆ ನಿಂತಿದೆ. ಇದರಿಂದ ಕೆಲಹೊತ್ತು ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಸುತ್ತಮುತ್ತಲಿನ ಗ್ರಾಮಸ್ಥರು ಪ್ರಯಾಣಿಕರನ್ನು ಬಸ್‌ನಿಂದ ಸುರಕ್ಷಿತವಾಗಿ ಹೊರಗೆ ಕರೆತಂದರು. ನಂತರ ಟ್ರ್ಯಾಕ್ಟರ್ ಸಹಾಯದಿಂದ ಬಸ್ ಎಳೆದು ತಂದರು.

ತೆಂಗಿನಮರ ಏರಿ ಕುಳಿತ ರೈತ

ಸಂತೇಮರಹಳ್ಳಿ (ಚಾಮರಾಜನಗರ): ಪ್ರವಾಹದಿಂದ ರಕ್ಷಿಸಿಕೊಳ್ಳಲು ಹೋಬಳಿಯ ಕಣ್ಣೇಗಾಲ ಗ್ರಾಮದ ರೈತ ರಂಗಸ್ವಾಮಿ ನಾಯಕ (60) ತೆಂಗಿನ ಮರ ಏರಿ ಕುಳಿತಿದ್ದಾರೆ. ಸೋಮವಾರ ಸಂಜೆ ಅಗ್ನಿಶಾಮಕ ದಳದ ಸಿಬ್ಬಂದಿಗೆ ಅವರನ್ನು ಸುರಕ್ಷಿತ ಸ್ಥಳಕ್ಕೆ ಕರೆತರಲು ಸಾಧ್ಯವಾಗಿಲ್ಲ. 'ಬೆಳಿಗ್ಗೆ 6 ಗಂಟೆಗೆ ರಂಗಸ್ವಾಮಿ ಜಮೀನಿಗೆ ಹೋಗಿದ್ದರು. ಆಗ ನೆರೆ ಇರಲಿಲ್ಲ. 11 ಗಂಟೆಗೆ ವಾಪಸ್ ಬರುವ ಹೊತ್ತಿಗೆ ಪ್ರವಾಹ ಉಂಟಾಯಿತು. ನೀರು ಇಳಿದ ನಂತರ ಹೋಗೋಣ ಎಂದು ಅಲ್ಲೇ ಕುಳಿತಿದ್ದರು. ಆದರೆ, ಮಧ್ಯಾಹ್ನ, ಸಂಜೆಯ ಹೊತ್ತಿಗೆ ನೆರೆಯ ಮಟ್ಟ ಹೆಚ್ಚಾಗಿ ಅವರಿಗೆ ವಾಪಸ್ ಬರಲು ಆಗಿಲ್ಲ' ಎಂದು ಸ್ಥಳೀಯರು ಹೇಳಿದರು.

ಬೆಂಗಳೂರಿನ ಐಟಿ-ಬಿಟಿ ಕ್ಷೇತ್ರದವರಿಗೆ ಸರಿಯಾದ ಮೂಲಸೌಕರ್ಯ ಬೇಕು. ಸರ್ಕಾರ ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಕಂಪನಿಗಳು ಬೇರೆಡೆ ಹೋಗುತ್ತಿವೆ.

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ, ಮಾಹಿತಿ ಕಲೆಹಾಕುವಂತೆ ಸೂಚಿಸಲಾಗಿದೆ. ಮನೆ ಕಳೆದುಕೊಂಡಿರುವವರಿಗೆ ಹೆಚ್ಚುವರಿ ನೆರವು ನೀಡಲು ಕಂದಾಯ ಸಚಿವರು ಒಪ್ಪಿಗೆ ಸೂಚಿಸಿದ್ದಾರೆ

ಎಸ್‌.ಟಿ. ಸೋಮಶೇಖರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ

ತಂತಿ ತಗುಲಿ ಇಬ್ಬರು ಸಾವು

ಬೆಳಗಾವಿ: ತಾಲ್ಲೂಕಿನ ಸುಳಗಾ ಗ್ರಾಮದಲ್ಲಿ ಸೋಮವಾರ ಸಂಜೆ ಮಳೆ ನೀರು ಸೋರದಂತೆ ಮನೆ ಮಾಳಿಗೆ ಮನೆಯ ಮೇಲೆ ತಗಡಿನ ಪತ್ರಾಗಳನ್ನು ಹಾಕುವ ವೇಳೆ ವಿದ್ಯುತ್ ತಂತಿ ತಗುಲಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇನ್ನೊಬ್ಬರ ಸ್ಥಿತಿ ಚಿಂತಾಜನಕವಾಗಿದೆ.

ಸುಳಗಾ ನಿವಾಸಿ ವಿನಾಯಕ ಕೃಷ್ಣ ಕಾಲಖಾಂಬಕರ (25), ಬೆನಕನಹಳ್ಳಿ ನಿವಾಸಿ ವಿಲಾಸ ಗೋಪಾಲ ಅಗಸಗೇಕರ (57) ಮೃತಪಟ್ಟವರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)				
ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.66	12,693	10,018
ಹಾರಂಗಿ	2,859	2,856.59	1,600	1,650
ಕಬಿನಿ	2284	2,283.51	9,242	5,000
ಹೇಮಾವತಿ	2,922	2,921.95	6,707	4,410
ಲಿಂಗನಮಕ್ಕಿ	1,819	1,814	6,474	6,310
ಸೂಪಾ (ಮೀ)	564	550.76	3,073	704
ಮಾಣಿ	595	588	361	-
ತುಂಗಭದ್ರಾ	1,633	1,632.45	46,810	54,336
ಮಲಪ್ರಭಾ	2079.5	2,079.50	3,544	3,044
ಘಟಪ್ರಭಾ	2175	2,175	2,341	2,341
ಭದ್ರಾ	186	185	9,188	4,351
ಆಲಮಟ್ಟಿ (ಮೀ)	519.6	519.60	29,582	15,000
ನಾರಾಯಣಪುರ (ಮೀ)	492.25	492.03	20,000	6,000

* ನೆಲಮಟ್ಟದಿಂದ

ಅಧ್ಯಯನಕ್ಕೆ ಕೇಂದ್ರ ತಂಡ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ನಾಲ್ಕು ತಿಂಗಳಲ್ಲಿ ಮಳೆ, ಪ್ರವಾಹ ಮತ್ತು ಭೂಕುಸಿತದಿಂದ ಆಗಿರುವ ಹಾನಿಯನ್ನು ಅಧ್ಯಯನ ಮಾಡಲು ಕೇಂದ್ರದ ತಂಡ ಮಂಗಳವಾರ ರಾಜ್ಯಕ್ಕೆ ಬರಲಿದೆ.

ಕೇಂದ್ರ ಗೃಹ ಇಲಾಖೆ ಜಂಟಿ ಕಾರ್ಯದರ್ಶಿ ಆಶಿಶ್ ಕುಮಾರ್ ಅವರ ನೇತೃತ್ವದ ಮೂರು ತಂಡಗಳು ಬುಧವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕಂದಾಯ ಸಚಿವ ಆರ್. ಅಶೋಕ ಅವರ ಜತೆ ಚರ್ಚೆ ನಡೆಸಿದ ನಂತರ ಸೆ. 9 ರವರೆಗೆ ವಿವಿಧ ಜಿಲ್ಲೆಗಳ ಮಳೆ-ಪ್ರವಾಹ ಬಾಧಿತ ಪ್ರದೇಶಗಳಿಗೆ ಭೇಟಿ ನೀಡಲಿವೆ.

ಕೇಂದ್ರ ಜಲ ಆಯೋಗದ ಹಿರಿಯ ಅಧಿಕಾರಿ ಅಶೋಕ್ ಕುಮಾರ್ ಮತ್ತು ಕೃಷಿ ಹಾಗೂ ರೈತರ ಕಲ್ಯಾಣ ಇಲಾಖೆ ನಿರ್ದೇಶಕ ಡಾ.ಕೆ. ಮನೋಹರನ್ ಅವರು ಇನ್ನೆರಡು ತಂಡಗಳಲ್ಲಿ ಇರಲಿದ್ದಾರೆ. ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ಧಾರವಾಡ, ಗದಗ, ಹಾವೇರಿ, ಬೀದರ್, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ತಂಡಗಳು ನೀಡಲಿವೆ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ಮುಳುಗಿದ ಬೆಂಗಳೂರು 'ಪೂರ್ವ'

ಒಂದನೇ ಪುಟದಿಂದ...

ಯಮಲೂರಿನ 70 ಡಿಗ್ರಿ ಟೌನ್ ಸೆಂಟರ್ ಮುಳುಗಡೆಯಾಗಿದೆ. ಎಚ್‌ಎಎಲ್ ತೇಜಸ್ ವಿಭಾಗವೂ ಜಲಾವೃತವಾಗಿದೆ. ಭಾನುವಾರ ಐಟಿ ಸಂಸ್ಥೆಗಳಿಗೆ ರಜೆ ಇದ್ದುದರಿಂದ ಸಾಕಷ್ಟು ಅನಾಹುತ ತಪ್ಪಿದಂತಾಗಿದೆ.

ಮಳೆ ನಿಂತರೂ ಇನ್ನೂ ಮೂರ್ನಾಲ್ಕು ದಿನ ಇಲ್ಲಿನ ನೀರು ತೆರವು ಮಾಡಲು ಸಾಧ್ಯವಾಗುವುದಿಲ್ಲ ಎಂಬುದು ಅಧಿಕಾರಿಗಳ ಮಾತು.

ತೂಬರಹಳ್ಳಿ, ಮುನ್ನೇಕೊಳಲು, ಕಗ್ಗದಾಸನಪುರ, ಬಿಇಎಂಎಲ್ ಲೇಔಟ್ ಸುತ್ತಮುತ್ತಲ ಜೋಪಡಿಗಳಲ್ಲಿ ನೆಲೆಸಿರುವ ವಲಸೆ ಕಾರ್ಮಿಕರ ಬದುಕು ರಾಜಕಾಲುವೆ ನೀರಿನಲ್ಲಿ ಕೊಚ್ಚಿಹೋಗಿದೆ. ಮನೆಯಲ್ಲಿದ್ದ ದಿನಸಿ ನೀರುಪಾಲಾಗಿದ್ದು, ಊಟ ಮತ್ತು ಕುಡಿಯುವ ನೀರಿಗೂ ಪರದಾಡುತ್ತಿದ್ದಾರೆ. ಬರಿಗೈ ಆಗಿರುವ ಕಾರ್ಮಿಕರು ಊಟಕ್ಕಾಗಿ ಬಿಬಿಎಂಪಿ ಅಧಿಕಾರಿಗಳ ಬಳಿ ಅಂಗಲಾಚುತ್ತಿದ್ದಾರೆ. ಕಾರ್ಮಿಕ ಸಂಘಟನೆಗಳ ಮುಖಂಡರ ಒತ್ತಡದ ಮೇರೆಗೆ ಸೋಮವಾರ ಮಧ್ಯಾಹ್ನ ಆಹಾರದ ಪೊಟ್ಟಣಗಳನ್ನು ಪಾಲಿಕೆ ಅಧಿಕಾರಿಗಳು ಕಳುಹಿಸಿದ್ದಾರೆ. ಇನ್ನೂ ಒಂದು ವಾರ ಮಳೆ ನೀರು ಇಳಿಯುವ ಸಾಧ್ಯತೆ ಇಲ್ಲ.

ನೆಲಮಂಗಲ, ಬಿನ್ನಮಂಗಲ, ಕೆಂಪಲಿಂಗನಹಳ್ಳಿ, ದಾಸನಪುರ ಕೆರೆಗಳ ಕೋಡಿ ಹರಿದಿವೆ. ವಾಜರಹಳ್ಳಿ ಶಾಲೆಗೆ ನೀರು ನುಗ್ಗಿದ್ದು, ಹೊರ ಹಾಕಲು ಶಿಕ್ಷಕರು ಪರದಾಡಿದರು. ಪುಸ್ತಕಗಳು ಮತ್ತು ಪೀಠೋಪಕರಣ ನೀರು ಪಾಲಾಗಿವೆ.

ಸಂಕ್ಷಿಪ್ತ ಸುದ್ದಿ

ಸಿಇಟಿ ರ‍್ಯಾಂಕಿಂಗ್ ಮೇಲ್ಮನವಿಗೆ ನಿರ್ಧಾರ

ಬೆಂಗಳೂರು: ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಪಿಯು ತೇರ್ಗಡೆಯಾಗಿ, ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಈ ವರ್ಷವೂ ಸಿಇಟಿ ಬರೆದಿರುವ 24 ಸಾವಿರ ಅಭ್ಯರ್ಥಿಗಳ ದ್ವಿತೀಯ ಪಿಯು ಅಂಕಗಳನ್ನು ಪರಿಗಣಿಸಬೇಕು ಎನ್ನುವ ಹೈಕೋರ್ಟ್ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್ ಅಶ್ವತ್ಥನಾರಾಯಣ ಹೇಳಿದರು.

ಕೋರ್ಟ್ ತೀರ್ಪನ್ನು ಪಾಲಿಸಿದರೆ ಈ ವರ್ಷ ಸಿಇಟಿ ಬರೆದಿರುವ 1.50 ಲಕ್ಷ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಅವರ ರ‍್ಯಾಂಕ್ ಪಟ್ಟಿ ದೊಡ್ಡ ಪ್ರಮಾಣದಲ್ಲಿ ಏರುಪೇರಾಗುತ್ತದೆ. ಹಾಗಾಗಿ, ತೀರ್ಪು ನೀಡಿರುವ ಏಕ ಸದಸ್ಯ ಪೀಠದ ಮುಂದೆ ಪುನರ್ ಪರಿಶೀಲನಾ ಅರ್ಜಿ ಅಥವಾ ಮೇಲ್ಮನವಿ ಸಲ್ಲಿಸಲು ಸೂಚಿಸಲಾಗಿದೆ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕೋರ್ಟ್ ಮೆಟ್ಟಿಲೇರಿದ್ದವರು ತಾಂತ್ರಿಕ ಅಂಶಕ್ಕೆ ಅಂಟಿಕೊಂಡಿದ್ದಾರೆ. ಕಳೆದ ವರ್ಷ ಕೋವಿಡ್ ಹಿನ್ನೆಲೆಯಲ್ಲಿ ಕೈಗೊಂಡ ತೀರ್ಮಾನವನ್ನು ಅವರು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಿತ್ತು. ಯಾರಿಗೂ ಅನ್ಯಾಯ ಆಗದಂತೆ ಸರ್ಕಾರ ಸಮಸ್ಯೆಗಳನ್ನು ಬಗೆಹರಿಸುತ್ತದೆ. ಎಲ್ಲವೂ ನಿಗದಿತ ಕಾಲಮಿತಿಯಲ್ಲೇ ಮುಗಿಯಲಿವೆ ಎಂದರು.

ಕೆಪಿಎಸ್‌ಸಿ: ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: 2017ನೇ ಸಾಲಿನ ಗೆಜೆಟೆಡ್ ಪ್ರೊಬೆಷನರಿ 106 ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಯನ್ನು ಕೆಪಿಎಸ್‌ಸಿ ಸೋಮವಾರ ರಾತ್ರಿ ಪ್ರಕಟಿಸಿದೆ.

2021ರ ಫೆಬ್ರುವರಿಯಲ್ಲಿ ಮುಖ್ಯ ಪರೀಕ್ಷೆ ನಡೆದಿತ್ತು. ಒಂದು ವರ್ಷ ಎಂಟು ತಿಂಗಳ ಬಳಿಕ ಫಲಿತಾಂಶ ಪ್ರಕಟಿಸಿದ್ದ ಕೆಪಿಎಸ್‌ಸಿ, ಇತ್ತೀಚೆಗಷ್ಟೇ ಸಂದರ್ಶನ ನಡೆಸಿತ್ತು. ಒಂದೇ ವಾರದಲ್ಲಿ ತಾತ್ಕಾಲಿಕ ಪಟ್ಟಿ ಪ್ರಕಟಿಸಿದೆ.

'ಸಂಪುಟದ ಒಪ್ಪಿಗೆ ಪಡೆದೇ ಬೇಗ್‌ಗೆ ಕ್ರಯಪತ್ರ'

ನವದೆಹಲಿ: 'ಕರ್ನಾಟಕ ಸರ್ಕಾರದ ಸಚಿವ ಸಂಪುಟದ ಒಪ್ಪಿಗೆ ಪಡೆದೇ ಆರ್.ರೋಷನ್ ಬೇಗ್ ಮಾಲೀಕತ್ವದ ಡ್ಯಾನಿಷ್ ಪಬ್ಲಿಕೇಷನ್ ಸಂಸ್ಥೆಗೆ ಬೆಂಗಳೂರಿನಲ್ಲಿ 10 ಸಾವಿರ ಚದರ ಅಡಿ ಜಾಗಕ್ಕೆ ಕ್ರಯಪತ್ರ ಮಾಡಿಕೊಡಲಾಗಿದೆ. ಇದು ನನ್ನೊಬ್ಬನ ತೀರ್ಮಾನ ಅಲ್ಲ' ಎಂದು ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜೆ.ಜೈರಾಜ್ ಅವರು ತಿಳಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಪ್ರಕಟವಾದ 'ರೋಷನ್ ಭೂ ಅಕ್ರಮಕ್ಕೆ ಜೈರಾಜ್ ಸಹಕಾರ' ವರದಿಗೆ ಪ್ರತಿಕ್ರಿಯೆ ನೀಡಿರುವ ಅವರು, 'ಜಾಗಕ್ಕೆ ಕ್ರಯಪತ್ರ ಮಾಡಿಕೊಡುವ ಬಗ್ಗೆ ಕಂದಾಯ ಅಧಿಕಾರಿಗಳು ಸಮೀಕ್ಷೆ ನಡೆಸಿ ವರದಿ ನೀಡಿದ್ದರು. ಬಿಬಿಎಂಪಿ ಕೌನ್ಸಿಲ್ ಸಭೆಯಲ್ಲಿ ಈ ಬಗ್ಗೆ ವಿಸ್ತೃತ ಚರ್ಚೆ ಆಗಿ ನಿರ್ಣಯ ತೆಗೆದುಕೊಳ್ಳಲಾಗಿತ್ತು. ಆಗಿನ ಮಾರುಕಟ್ಟೆ ಮೌಲ್ಯಕ್ಕೆ ತಕ್ಕಂತೆ ದರ ನಿಗದಿ ಮಾಡಿ ಕ್ರಯಪತ್ರ ಮಾಡಿಕೊಡಲಾಗಿತ್ತು. ನಾನು ಅಕ್ರಮ ಎಸಗಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಮಳೆ ನಷ್ಟ: ಪರಿಷ್ಕೃತ ವರದಿಗೆ ಸಿಎಂ ಸೂಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- **ಜಿಲ್ಲಾಧಿಕಾರಿಗಳ ಜೊತೆ ಮುಖ್ಯಮಂತ್ರಿ ವಿಡಿಯೊ ಸಂವಾದ**
- **₹600 ಕೋಟಿ ಬಿಡುಗಡೆಗೆ ಆದೇಶ**

ಬೆಂಗಳೂರು: ಮಳೆ, ಪ್ರವಾಹ ಮತ್ತು ಭೂಕುಸಿತದಿಂದ ಉಂಟಾಗಿರುವ ನಷ್ಟದ ಕುರಿತು ಮಂಗಳವಾರ ರಾತ್ರಿಯೊಳಗೆ ಪರಿಷ್ಕೃತ ವರದಿಯನ್ನು ಸಲ್ಲಿಸುವಂತೆ ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ ನೀಡಿದ್ದಾರೆ.

ಅತಿವೃಷ್ಟಿಯಿಂದ ಹೆಚ್ಚು ಹಾನಿಯಾಗಿರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜತೆ ಸೋಮವಾರ ಸಂಜೆ ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದ ಅವರು, 'ಮಳೆಹಾನಿ ಕುರಿತು ತಿಂಗಳ ಹಿಂದೆ ವರದಿ ಪಡೆಯಲಾಗಿತ್ತು. ಈಗ ಕೇಂದ್ರ ಸರ್ಕಾರದಿಂದ ಹೆಚ್ಚಿನ ಪರಿಹಾರ ಕೋರಲು ಪರಿಷ್ಕೃತ ವರದಿ ಸಲ್ಲಿಸಬೇಕು. ಅದಕ್ಕೆ ಪೂರಕವಾಗಿ ಎಲ್ಲರೂ ತಕ್ಷಣ ವರದಿ ಸಲ್ಲಿಸಬೇಕು' ಎಂದು ಸೂಚಿಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ, 'ಮಳೆಹಾನಿ ಕುರಿತು ಪರಿಶೀಲನೆ ನಡೆಸಲು ಕೇಂದ್ರ ಸರ್ಕಾರ ನೇಮಿಸಿರುವ ಅಧಿಕಾರಿಗಳ ತಂಡವು ಮಂಗಳವಾರ ಬೆಂಗಳೂರಿಗೆ ಬರಲಿದೆ. ಹೆಚ್ಚುವರಿ ಪರಿಹಾರ ಕೋರಲು ಈ ತಂಡಕ್ಕೆ ಹೊಸ ಪ್ರಸ್ತಾವ ಸಲ್ಲಿಸಬೇಕಿದೆ. ಅದಕ್ಕೆ ಪೂರಕವಾಗಿ ಪರಿಷ್ಕೃತ ವರದಿಗಳನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದರು.

ಜಿಲ್ಲಾಧಿಕಾರಿಗಳ ವೈಯಕ್ತಿಕ ಖಾತೆಗಳಲ್ಲಿ ಸಾಕಷ್ಟು ಹಣವಿದೆ. ಈಗ ಮಳೆಯಿಂದ ಹಾನಿಯಾಗಿರುವ ಮೂಲಸೌಕರ್ಯಗಳ ದುರಸ್ತಿಗೆ ಹೆಚ್ಚುವರಿಯಾಗಿ ₹ 600 ಕೋಟಿ ಬಿಡುಗಡೆಗೆ ಆದೇಶಿಸಲಾಗಿದೆ. ಅದರಲ್ಲಿ ₹ 300 ಕೋಟಿಯನ್ನು ಬೆಂಗಳೂರಿಗೆ ಮತ್ತು ₹ 300 ಕೋಟಿಯನ್ನು ಇತರ ಜಿಲ್ಲೆಗಳಿಗೆ ವೆಚ್ಚ ಮಾಡಲು ನಿರ್ದೇಶನ ನೀಡಲಾಗಿದೆ. ಮಳೆಯಿಂದ ಸಂತ್ರಸ್ತರಾಗಿರುವ ಜನರಿಗೆ ತ್ವರಿತವಾಗಿ ಪರಿಹಾರ ಒದಗಿಸಲು ಸೂಚಿಸಲಾಗಿದೆ. ಪರಿಹಾರ ಕಾರ್ಯಕ್ಕೆ ಹಣದ ಕೊರತೆ ಉದ್ಭವಿಸುವ ಪ್ರಶ್ನೆಯೇ ಇಲ್ಲ ಎಂದು ಹೇಳಿದರು.

ತೊರೆಕಾಡನಹಳ್ಳಿಯಲ್ಲಿ ಉಂಟಾಗಿರುವ ಸಮಸ್ಯೆಯಿಂದ ಬೆಂಗಳೂರು ನಗರದಲ್ಲಿ ನೀರು ಪೂರೈಕೆಯಲ್ಲಿ ತೊಂದರೆ ಆಗದಂತೆ ಎಚ್ಚರಿಕೆ ವಹಿಸಲಾಗುವುದು. ಕೊರತೆ ಉಂಟಾದ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಬಳಕೆ ಮಾಡಿಕೊಂಡು ನೀರು ಪೂರೈಕೆಗೆ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನಿರ್ದೇಶನ ನೀಡಲಾಗಿದೆ ಎಂದರು.

ಬೆಂಗಳೂರಿಗೆ ರಾಜ್ಯ ವಿಪತ್ತು ನಿರ್ವಹಣಾ ಪಡೆಯ ಮತ್ತೊಂದು ಕಂಪನಿ ಆರಂಭಿಸಲು ₹ 9.5 ಕೋಟಿ ಮಂಜೂರು ಮಾಡಲಾಗಿದೆ. ರಾಜ್ಯದ ಇತರೆಡೆಗೆ ಇನ್ನೊಂದು ಹೆಚ್ಚುವರಿ ತಂಡ ಆರಂಭಿಸಲಾಗುವುದು. ನಿವೃತ್ತ ಸೈನಿಕರನ್ನು ಈ ತಂಡಗಳಿಗೆ ನೇಮಕ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು.

ಸಚಿವರಾದ ಆರ್. ಅಶೋಕ, ವಿ. ಸೋಮಣ್ಣ, ಹಾಲಪ್ಪ ಆಚಾರ್, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್ ಸಭೆಯಲ್ಲಿ ಪಾಲ್ಗೊಂಡಿದ್ದರು.

ನಿಯಮ ಪಾಲಿಸುವುದು ಅವ್ಯವಹಾರವೇ?: ಶಿಕ್ಷಣ ಇಲಾಖೆ

ಬೆಂಗಳೂರು: ಶೈಕ್ಷಣಿಕ ಗುಣಮಟ್ಟಕ್ಕಾಗಿ ಕೆಲವು ನಿಯಮಗಳನ್ನು ಅನುಸರಿಸಿ, ಕ್ರಮ ಕೈಗೊಳ್ಳಬೇಕಾಗುತ್ತದೆ. ಅದನ್ನೇ ಖಾಸಗಿ ಶಿಕ್ಷಣ ಸಂಸ್ಥೆಗಳು ಬಾಧಕ ಎಂದುಕೊಂಡರೆ ಹೇಗೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಆಯುಕ್ತರು ಪ್ರಶ್ನಿಸಿದ್ದಾರೆ.

ಕಟ್ಟಡ ಸುರಕ್ಷತೆ, ಸಂಭವನೀಯ ಅಗ್ನಿ ದುರಂತದ ಸಮಯದಲ್ಲಿನ ಮುಂಜಾಗ್ರತಾ ಕ್ರಮಗಳ ಕುರಿತು ಸರ್ಕಾರ 2018ರಲ್ಲಿ ನಿಯಮಗಳನ್ನು ಜಾರಿಗೆ ತಂದಿದೆ. ಶಾಲಾ ನವೀಕರಣಕ್ಕೆ ಸಲ್ಲಿಕೆಯಾದ ಅರ್ಜಿಗಳ ಪರಿಶೀಲನೆಯ ವೇಳೆ ಪ್ರಮಾಣಪತ್ರ ಲಗತ್ತಿಸುವುದು ಕಡ್ಡಾಯ. ಇಲ್ಲದಿದ್ದರೆ ನವೀಕರಣ ವಿಳಂಬವಾಗುವುದು ಸಹಜ. ಅದನ್ನೇ ಅವ್ಯವಹಾರ ಎಂದು ಬಿಂಬಿಸಿರುವುದು ಸರಿಯಲ್ಲ ಎಂದಿದ್ದಾರೆ.

ಬಿಇಒ, ಡಿಡಿಪಿಐ ಮತ್ತಿತರ ಅಧಿಕಾರಿಗಳು ತಮಗೆ ಬೇಕಾದ ಸ್ಥಳಗಳಿಗೆ ವರ್ಗಾವಣೆ ಮಾಡಿಸಿಕೊಳ್ಳಲು ಹಣ ನೀಡುತ್ತಾರೆ ಎಂಬ ಆರೋಪವೂ ಸತ್ಯಕ್ಕೆ ದೂರವಾಗಿದೆ. ಅಲ್ಲದೇ, ಒಂದು ಸ್ಥಳದಲ್ಲಿ ಕಾರ್ಯನಿರ್ವಹಿಸುವ ಗರಿಷ್ಠ ಸೇವಾ ಅವಧಿಯನ್ನು ಎರಡು ವರ್ಷಗಳಿಂದ ಒಂದು ವರ್ಷಕ್ಕೆ ಇಳಿಸುವ ಯಾವ ಆದೇಶವನ್ನೂ ಇಲಾಖೆ ಹೊರಡಿಸಿಲ್ಲ ಎಂದು ಸ್ಪಷ್ಟೀಕರಣ ನೀಡಿದ್ದಾರೆ.

ನಿವೃತ್ತಿಯ ನಂತರ ಶಿಕ್ಷಕರು ನಿವೃತ್ತಿ ವೇತನ, ಪರಿಹಾರ, ಪಿಂಚಣಿ ಪಡೆಯಲು ಲಂಚ ನೀಡಬೇಕು ಎನ್ನುವ ಆರೋಪಗಳಲ್ಲೂ ಹುರುಳಿಲ್ಲ. ನೌಕರರು ನಿವೃತ್ತಿಯಾಗುವ ಮೂರು ತಿಂಗಳ ಮೊದಲೇ ಮಹಾಲೇಖಪಾಲಕರಿಗೆ ವರದಿ ಸಲ್ಲಿಸಲಾಗಿರುತ್ತದೆ. ಶಿಸ್ತು ಪ್ರಕರಣ ಎದುರಿಸುತ್ತಿರುವ ಅಧಿಕಾರಿಗಳು, ಸಿಬ್ಬಂದಿಯ ಪ್ರಕರಣಗಳು ಇತ್ಯರ್ಥವಾದ ನಂತರ ಅರ್ಜಿಗಳು ವಿಲೇವಾರಿಯಾಗುತ್ತವೆ ಎಂದು ಪ್ರತಿಕ್ರಿಯಿಸಿದ್ದಾರೆ.

ಇಲಾಖೆಯ ಅಧಿಕಾರಿಗಳು ನಿಯಮದ ಪ್ರಕಾರ ಖಾಸಗಿ ಶಾಲೆಗಳಿಗೆ ಭೇಟಿ ನೀಡುತ್ತಾರೆ. ಅಗತ್ಯ ದಾಖಲೆಗಳನ್ನು ನೀಡಬೇಕಾದ ಖಾಸಗಿ ಸಂಸ್ಥೆಗಳು ಹಾಗೆ ಮಾಡದೆ ವಸೂಲಿಗಾಗಿ ಎಂದು ಆರೋಪ ಮಾಡುವುದು, ಎನ್‌ಒಸಿ ಪಡೆಯಲು ಭರಿಸುವ ಶುಲ್ಕವನ್ನೇ ಲಂಚ ಎಂದು ಬಿಂಬಿಸುವುದು ಸರಿಯಲ್ಲ. ಲೋಪಗಳ ನಿರ್ದಿಷ್ಟ ಪ್ರಕರಣಗಳನ್ನು ಗಮನಕ್ಕೆ ತಂದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದಾರೆ.

ಶಿಕ್ಷಣ ಇಲಾಖೆ ಭ್ರಷ್ಟಾಚಾರ ತನಿಖೆಗೆ ಆಯೋಗ: ನಾಗೇಶ್

ಒಂದನೇ ಪುಟದಿಂದ...

'ಅನುದಾನರಹಿತ ಖಾಸಗಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉತ್ತಮ ಶಿಕ್ಷಕರನ್ನು ಪ್ರಶಸ್ತಿಗೆ ಪರಿಗಣಿಸಬೇಕು ಎಂದು ಹಲವರು ಸಲಹೆ ನೀಡಿದ್ದಾರೆ. ಈ ಬಗ್ಗೆ ಮುಂದಿನ ದಿನಗಳಲ್ಲಿ ನಿರ್ಧಾರ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

'15 ಸಾವಿರ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದ್ದು, ಈಗಾಗಲೇ ಫಲಿತಾಂಶ ಪ್ರಕಟಿಸಲಾಗಿದೆ. ಶೀಘ್ರ 1:2 ಅನುಪಾತದಲ್ಲಿ ಪಟ್ಟಿ ಪ್ರಕಟಿಸಲಾಗುವುದು. 778 ಪಿಯು ಉಪನ್ಯಾಸಕರ ನೇಮಕಕ್ಕೂ ಮುಖ್ಯಮಂತ್ರಿಗಳು ಒಪ್ಪಿಗೆ ಸೂಚಿಸಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪರೀಕ್ಷೆ ಬದಲು ಜ್ಯೇಷ್ಠತೆ ಆಧಾರದ ಮೇಲೆ ಪದೋನ್ನತಿ ನೀಡಲು ಕ್ರಮ ಕೈಗೊಳ್ಳಲಾಗಿದ್ದು, ಶೀಘ್ರ ಪಟ್ಟಿ ಬಿಡುಗಡೆ ಮಾಡಲಾಗುತ್ತದೆ' ಎಂದು ಮಾಹಿತಿ ನೀಡಿದರು.

'ವೇದ, ಪುರಾಣ, ಉಪನಿಷತ್‌ಗಳು ಸುಳ್ಳಿನ ಕಂತೆ ಎಂದೂ ಮತ್ತು ಮಠಮಾನ್ಯಗಳು ನಗಣ್ಯ ಎನ್ನುವಂತೆ ಬಿಂಬಿಸಿ ನಮ್ಮ ಸಂಸ್ಕೃತಿ, ಪರಂಪರೆಯನ್ನು ಮರೆಮಾಚುವ ಪ್ರಯತ್ನಗಳು ನಡೆದಿವೆ. ಸ್ವಾತಂತ್ರ್ಯ ಹೋರಾಟಗಾರರ ವಿಚಾರಗಳನ್ನು ಪಠ್ಯಕ್ಕೆ ಸೇರಿಸಿದರೆ ವಿರೋಧಿಸುವ ಮನಸ್ಥಿತಿ ಇರುವುದು ದುರದೃಷ್ಟಕರ. ಇಂತಹ ಸನ್ನಿವೇಶ ಬದಲಾಯಿಸಿ, ನೈಜ ಇತಿಹಾಸದ ಬಗ್ಗೆ ಬೋಧನೆ ಮಾಡಲಾಗುವುದು' ಎಂದು ಪ್ರತಿಪಾದಿಸಿದರು.

ರಾಜ್ಯ ಮಟ್ಟದ ಉತ್ತಮ ಶಿಕ್ಷಕರ ಪ್ರಶಸ್ತಿಗೆ ಪ್ರಾಥಮಿಕ ಶಾಲೆಗಳ 20 ಮತ್ತು ಪ್ರೌಢಶಾಲೆಗಳ 11 ಶಿಕ್ಷಕರು ಹಾಗೂ ಸ್ವಾಭಿಮಾನಿ ಶಾಲೆಯ ಎಂಟು ಶಿಕ್ಷಕರಿಗೆ ರಾಜ್ಯ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಖಾಲಿಯಾಗುವ ಶಿಕ್ಷಕ ಹುದ್ದೆಗಳಿಗೆ ತಕ್ಷಣವೇ ನೇಮಕ: ಬೊಮ್ಮಾಯಿ

ಒಂದನೇ ಪುಟದಿಂದ...

'ಎಲ್ಲ ಸರ್ಕಾರಿ ಶಾಲೆಗಳಲ್ಲಿ ಹೆಣ್ಣುಮಕ್ಕಳಿಗೆ ಮತ್ತು ಗಂಡಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸುವ ಯೋಜನೆ ರೂಪಿಸಲಾಗಿದೆ. ಮುಂದಿನ ವರ್ಷದ ಆಗಸ್ಟ್ 15ರ ಒಳಗೆ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು' ಎಂದು ತಿಳಿಸಿದರು.

'ಶಿಕ್ಷಕರಿಗೆ ಕಿರುಕುಳ ತಪ್ಪಿಸಲು ನಿಯಮಗಳನ್ನು ಸರಳಗೊಳಿಸಲಾಗಿದೆ. ಯಾವುದೇ ಪರಿಶೀಲನೆ ಇಲ್ಲದೆ ಹೊಸ ಶಾಲೆಗಳ ಸ್ಥಾಪನೆಗೆ ನಿರಾಕ್ಷೇಪಣಾ ಪತ್ರ ನೀಡುತ್ತಿರುವ ಪ್ರಕರಣಗಳನ್ನು ಗಮನಿಸಲಾಗಿದೆ. ಸರ್ಕಾರದ ನಿಯಮಗಳನ್ನು ಪಾಲಿಸದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ತಿಳಿಸಿದರು.

14ರವರೆಗೆ ನ್ಯಾಯಾಂಗ ಬಂಧನ • ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣ

ಚಿತ್ರದುರ್ಗ ಜೈಲಿಗೆ ಮುರುಘಾಶ್ರೀ

ಪ್ರಜಾವಾಣಿ ವಾರ್ತೆ



ಶಿವಮೂರ್ತಿ ಮುರುಘಾಶ್ರೀ

ಚಿತ್ರದುರ್ಗ: ಇಬ್ಬರು ಪ್ರೌಢಶಾಲಾ ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದ ಆರೋಪಿ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರನ್ನು ಜಿಲ್ಲಾ ನ್ಯಾಯಾಲಯವು ಸೆ.14ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ನಂತರ ಪೊಲೀಸರು ಆರೋಪಿಯನ್ನು ಜಿಲ್ಲಾ ಕಾರಾಗೃಹಕ್ಕೆ ಕರೆದೊಯ್ದರು. ಕಾರಾಗೃಹ ಸಿಬ್ಬಂದಿ ಆರೋಪಿ ತಪಾಸಣೆ ನಡೆಸಿ ಒಳಗೆ ಕರೆದೊಯ್ದರು. ಈ ಸಂದರ್ಭದಲ್ಲಿ ಕಾರಾಗೃಹದ ಬಳಿ ಭಕ್ತರು ಜಮಾಯಿಸಿದ್ದರು.

ಪೊಲೀಸ್ ಕಸ್ಟಡಿ ಅವಧಿ ಪೂರ್ಣಗೊಂಡಿದ್ದರಿಂದ ತನಿಖಾ ತಂಡ ಆರೋಪಿಯನ್ನು ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್‌ಗೆ ಸೋಮವಾರ ಹಾಜರುಪಡಿಸಿತು. ನ್ಯಾಯಾಧೀಶರಾದ ಬಿ.ಕೆ. ಕೋಮಲಾ ಆರೋಪಿಯನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಿ ಆದೇಶಿಸಿದರು.

ನ್ಯಾಯಾಲಯಕ್ಕೆ ಆರೋಪಿಯನ್ನು ಬಿಗಿ ಭದ್ರತೆಯಲ್ಲಿ ಕರೆತಂದ ಪೊಲೀಸರು, ಮರುಹಾಜರಿ ಅರ್ಜಿಸಲ್ಲಿಸಲು ವಿಳಂಬ ಮಾಡಿದರು. ಕಟಕಟೆಯಲ್ಲಿದ್ದ ಆರೋಪಿ, ನ್ಯಾಯಾಧೀಶರ ಅನುಮತಿ ಪಡೆದು ಬೆಂಚಿನ ಮೇಲೆ ಕುಳಿತರು. ಈ ವೇಳೆ ಸ್ಥಳ ಮಹಜರು, ವೈದ್ಯಕೀಯ ಪರೀಕ್ಷೆಯ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ಪೊಲೀಸ್ ಕಸ್ಟಡಿ ಅವಧಿ ವಿಸ್ತರಿಸುವಂತೆ ತನಿಖಾಧಿಕಾರಿ ಮನವಿ ಸಲ್ಲಿಸಲಿಲ್ಲ.

‘ಜೈಲು ಸೇರಿದ ಆರೋಪಿ ಕೆಲಹೊತ್ತು ಏಕಾಂತದ ಮೊರೆ ಹೋಗಿದ್ದರು. ಇತರೆ ಕೈದಿಗಳಂತೆ ಸರತಿಯಲ್ಲಿ ನಿಂತು ಊಟ ಪಡೆದರು. ಅನ್ನ, ಸಾಂಬಾರ್ ಸೇವಿಸಿ, ಮಧ್ಯಾಹ್ನ ಕೆಲ ಹೊತ್ತು ನಿದ್ರೆ ಮಾಡಿದರು. ಪತ್ರಿಕೆ ಓದಿ ಇತರ ಕೈದಿಗಳೊಂದಿಗೆ ಮಾತನಾಡಿದರು’ ಎಂದು ಮೂಲಗಳು ಮಾಹಿತಿ ನೀಡಿವೆ.

ಸೆ.1ರಂದು ಬಂಧಿತರಾಗಿರುವ ಆರೋಪಿಯನ್ನು ತನಿಖಾ ತಂಡ ಸೆ.2ರಂದು ಪೊಲೀಸ್ ವಶಕ್ಕೆ ಪಡೆದಿತ್ತು. ಜಿಲ್ಲಾ ಆಸ್ಪತ್ರೆಯಲ್ಲಿ ಆರೋಪಿಯ ಪುರುಷತ್ವ ಪರೀಕ್ಷೆ ಹಾಗೂ ಮುರುಘಾ ಮಠದಲ್ಲಿ ತಂಗುತ್ತಿದ್ದ ಕೊಠಡಿಯ ಮಹಜರು ಪ್ರಕ್ರಿಯೆಯನ್ನು ತನಿಖಾ ತಂಡ ಕೈಗೊಂಡಿತ್ತು.

ಜಾಮೀನು: ತಕರಾರು ಸಲ್ಲಿಕೆಗೆ ಅವಕಾಶ

ಶಿವಮೂರ್ತಿ ಮುರುಘಾ ಶರಣರು ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ತಕರಾರು ಸಲ್ಲಿಸಲು ಕೋರ್ಟ್ ಸಂತ್ರಸ್ತರು ಹಾಗೂ ದೂರುದಾರರಿಗೆ ಅವಕಾಶ ಕಲ್ಪಿಸಿದ್ದು, ಸೆ.7ರಂದು ಸಲ್ಲಿಸಬಹುದು ಎಂದು ತಿಳಿಸಿದೆ.

ಪ್ರಕರಣದ ಮೂರನೇ ಆರೋಪಿ, 17 ವರ್ಷದ ಬಾಲಕ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಗೆ ಸಂಬಂಧಿಸಿ ತಕರಾರು ಸಲ್ಲಿಸಲು ಸೆ.7ರವರೆಗೆ ಅವಧಿ ನೀಡಲಾಗಿದೆ.

ನಾಲ್ಕನೇ ಆರೋಪಿ ಪರಮಶಿವಯ್ಯ ಹಾಗೂ ಐದನೇ ಆರೋಪಿ ಗಂಗಾಧರಯ್ಯ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆಯನ್ನೂ ಅಂದೇ ಕೈಗೆತ್ತಿಕೊಳ್ಳುವ ಸಾಧ್ಯತೆ ಇದೆ.

ವಾರ್ಡನ್ ವಶಕ್ಕೆ ಕೋರಿ ಅರ್ಜಿ

ಪ್ರಕರಣದ ಎರಡನೇ ಆರೋಪಿ, ಹಾಸ್ಟೆಲ್‌ನ ಮಹಿಳಾ ವಾರ್ಡನ್ ಅನ್ನು ಪೊಲೀಸ್ ವಶಕ್ಕೆ ನೀಡುವಂತೆ ಕೋರಿ ತನಿಖಾ ತಂಡ ಸೋಮವಾರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದೆ.

ಅರ್ಜಿ ಪುರಸ್ಕರಿಸಿದ ನ್ಯಾಯಾಧೀಶರು, ಆರೋಪಿಯನ್ನು ಖುದ್ದು ಹಾಜರುಪಡಿಸಲು ಸೂಚಿಸಿದರು.

ಭದ್ರತೆ ದೃಷ್ಟಿಯಿಂದ ಶಿವಮೊಗ್ಗ ಜೈಲಿನಲ್ಲಿರುವ ಆರೋಪಿಯನ್ನು ಮಂಗಳವಾರ ನ್ಯಾಯಾಲಯಕ್ಕೆ ಹಾಜರುಪಡಿಸುವ ಸಾಧ್ಯತೆ ಇದೆ.

ದಾಂಪತ್ಯಕ್ಕೆ ಆರು ಜೋಡಿ

ಮುರುಘಾ ಮಠದಲ್ಲಿ ಸೋಮವಾರ ಪ್ರಭಾರ ಪೀಠಾಧಿಪತಿ ಮಹಾಂತ ರುದ್ರೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಮಾಸಿಕ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಆರು ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

‘ಏಳು ಜೋಡಿ ವಿವಾಹಕ್ಕೆ ನೋಂದಣಿ ಮಾಡಿಕೊಂಡಿದ್ದರು. ಕೊನೆಗಳಿಗೆಯಲ್ಲಿ ಒಂದು ಜೋಡಿ ಬರಲಿಲ್ಲ’ ಎಂದು ಮಠದ ಅಧಿಕಾರಿಯೊಬ್ಬರು ಸಮಜಾಯಿಷಿ ನೀಡಿದರು.

ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ವಿದ್ಯಾರ್ಥಿನಿಯರಿಗೆ ಅನ್ಯಾಯ ವಾಗುವುದಿಲ್ಲ. ತನಿಖೆ ಬಳಿಕ ಪ್ರಕರಣದ ಸತ್ಯಾಸತ್ಯತೆ ಹೊರಬರಲಿದೆ. ತಪ್ಪಿತಸ್ಥರಿಗೆ ಶಿಕ್ಷೆಯೂ ಆಗಲಿದೆ

ಎ. ನಾರಾಯಣಸ್ವಾಮಿ
ಕೇಂದ್ರ ಸಚಿವ

ನಾರಾಯಣ ಗುರು ಜಯಂತಿ 10ಕ್ಕೆ

ಮಂಗಳೂರು: ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತಿಯ ರಾಜ್ಯಮಟ್ಟದ ಕಾರ್ಯಕ್ರಮವನ್ನು ಬೆಂಗಳೂರು ಬದಲು, ಸೆ.10ರಂದು ಮಂಗಳೂರಿನಲ್ಲಿ ಆಚರಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಸೋಮವಾರ ಹೇಳಿದರು.

ಅಂದು ಸಂಜೆ 4 ಗಂಟೆಗೆ ವಿವಿಧ ಕಲಾ ತಂಡಗಳ ಮೆರವಣಿಗೆ, ನಾರಾಯಣ ಗುರುಗಳ ಚರಿತ್ರೆ ಬಿಂಬಿಸುವ ಚಿತ್ರಪ್ರದರ್ಶನ ನಡೆಯಲಿದೆ. ಸಂಜೆ 6 ಗಂಟೆಗೆ ಟಿ.ಎಂ.ಎ.ಪೈ ಸಭಾ ಭವನದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನೂ ಆಹ್ವಾನಿಸಲಾಗುವುದು ಎಂದರು.

ಸ್ಪರ್ಧಾತ್ಮಕ ಪರೀಕ್ಷೆ: ಉಚಿತ ತರಬೇತಿ

ಬೆಂಗಳೂರು: ಕೆಎಎಸ್, ಪಿಎಸ್‌ಐ, ಎಫ್‌ಡಿಎ ಮತ್ತು ಎಸ್‌ಡಿಎ ಪರೀಕ್ಷೆಗಳಿಗೆ ನಾಲ್ಕು ತಿಂಗಳ ಉಚಿತ ತರಬೇತಿಯನ್ನು ಆರ್.ಎಲ್. ಜಾಲಪ್ಪ ಅಕಾಡೆಮಿ ಅಕ್ಟೋಬರ್ 5ರಿಂದ ಆರಂಭಿಸಲಿದೆ.

ಹಿಂದುಳಿದ ಪ್ರವರ್ಗ 1 ಮತ್ತು ಪ್ರವರ್ಗ 2ಕ್ಕೆ ಸೇರಿದವರು ಸೆ.25ರೊಳಗೆ www:rljacademy.in ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ 8660495498/ 9902004438/ 9900606042 ಸಂಪರ್ಕಿಸಿ.

ಬೆಳಗಾವಿ ಗುರು ಮಡಿವಾಳೇಶ್ವರ ಮಠದ ಪೀಠಾಧಿಪತಿ

ಮಠದಲ್ಲೇ ಸ್ವಾಮೀಜಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ನೇಗಿನಹಾಳ (ಬೆಳಗಾವಿ ಜಿಲ್ಲೆ): ಬೈಲಹೊಂಗಲ ತಾಲ್ಲೂಕಿನ ನೇಗಿನಹಾಳದ ಗುರು ಮಡಿವಾಳೇಶ್ವರ ಮಠದ ಪೀಠಾಧಿಪತಿ ಬಸವಸಿದ್ಧಲಿಂಗ ಸ್ವಾಮೀಜಿ (53) ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಠದಲ್ಲಿ ತಾವು ಮಲಗುವ ಕೋಣೆಯಲ್ಲಿ ನೇಣು ಹಾಕಿಕೊಂಡಿದ್ದಾರೆ. ಬೆಳಿಗ್ಗೆ ಅವರ ಸೇವಕ ಶ್ರೀಗಳನ್ನು ಎಬ್ಬಿಸಲು ಹೋದಾಗ ಘಟನೆ ಗೊತ್ತಾಗಿದೆ.

ಭಾನುವಾರ ರಾತ್ರಿ 12ರವರೆಗೆ ಭಕ್ತರೊಂದಿಗೆ ಮಾತನಾಡಿದ್ದ ಸ್ವಾಮೀಜಿ ನಂತರ ಕೋಣೆಗೆ ಹೋಗಿ ಮಲಗಿದ್ದರು. ಸೋಮವಾರ ನಸುಕಿನಲ್ಲಿ ಮಠದ ಆವರಣದಲ್ಲಿ ವಾಯುವಿಹಾರ ಮಾಡಿದ್ದರು. 6 ಗಂಟೆ ಸುಮಾರಿಗೆ ವಿಶ್ರಾಂತಿ ತೆಗೆದುಕೊಳ್ಳುವುದಾಗಿ ಹೇಳಿ ಮತ್ತೆ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡರು. ಎರಡು ತಾಸಿನ ನಂತರವೂ ಶ್ರೀಗಳು ಹೊರಬರದಿದ್ದಾಗ ಅವರ ಸೇವಕ ಬಾಗಿಲು ಬಡಿದರು. ಒಳಗಡೆಯಿಂದ ಚಿಲಕ ಹಾಕಿತ್ತು. ಕಿಟಕಿಗಳನ್ನು ನೂಕಿ ನೋಡಿದಾಗ ಸ್ವಾಮೀಜಿ ನೇಣಿನಲ್ಲಿ ನೇತಾಡುತ್ತಿರುವುದು ಗೊತ್ತಾಯಿತು.

‘ಬಸವಸಿದ್ಧಲಿಂಗ ಸ್ವಾಮೀಜಿ 2007ರಲ್ಲಿ ಪೀಠ ಅಲಂಕರಿಸಿದ್ದರು. ಗ್ರಾಮದ ಜನರನ್ನು ಮಕ್ಕಳಂತೆ ಕಾಣುತ್ತಿದ್ದ ಅವರ ಸಾವು ದಿಗಿಲುಗೊಳಿಸಿದೆ’ ಎಂದು ಶ್ರೀಗಳ ಆಪ್ತರೊಬ್ಬರು ಹೇಳಿದರು.



ಬಸವಸಿದ್ಧಲಿಂಗ ಸ್ವಾಮೀಜಿ

ಬಸವಸಿದ್ಧಲಿಂಗರ ಶಿಕ್ಷಣ ಹಾಗೂ ಅಧ್ಯಾತ್ಮ ಬೋಧನೆ ಚಿತ್ರದುರ್ಗದ ಮುರುಘಾ ಮಠದಲ್ಲಿ ಆಗಿದೆ. ಸೆ. 6ರಂದು ಮಧ್ಯಾಹ್ನ ಅವರ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಹಿರಿಯರು ತಿಳಿಸಿದ್ದಾರೆ.

ಮಹಿಳೆಯರ ಬಂಧನಕ್ಕೆ ಪಟ್ಟು: ‘ಹಲವು ಸ್ವಾಮೀಜಿಗಳು ಲೈಂಗಿಕ ಸಂಬಂಧ ಹೊಂದಿದ್ದಾರೆ’ ಎಂದು ಇಬ್ಬರು ಮಹಿಳೆಯರು ಮಾತನಾಡಿದ್ದ ಆಡಿಯೊ ಈಚೆಗೆ ವೈರಲ್ ಆಗಿತ್ತು. ಅದರಲ್ಲಿ ನೇಗಿನಹಾಳದ ಶ್ರೀಗಳ ಹೆಸರೂ ಇತ್ತು. ಇದರಿಂದ ಶ್ರೀಗಳು ನೊಂದಿದ್ದರೆಂದು ಅವರ ಶಿಷ್ಯರು ಹೇಳಿದ್ದಾರೆ.

‘ಆಡಿಯೊ ಕುರಿತು ಬೈಲಹೊಂಗಲ ಡಿವೈಎಸ್ಪಿ ಕಚೇರಿಯಲ್ಲಿ ಮಹಿಳೆಯರ ವಿರುದ್ಧ ದೂರು ನೀಡಿದ್ದೇವೆ. ಶ್ರೀಗಳು ಮೃದು ಸ್ವಭಾವದವರು. ಇಂಥ ವಿಷಯದಲ್ಲಿ ಹೆಸರು ಪ್ರಸ್ತಾಪವಾಯಿತು ಎಂದು ಜೀವವನ್ನೇ ಕೊಟ್ಟಿದ್ದಾರೆ. ಈ ಸಾವಿಗೆ ಆ ಇಬ್ಬರು ಮಹಿಳೆಯರೇ ಕಾರಣ. ತಕ್ಷಣ ಅವರನ್ನು ಬಂಧಿಸಬೇಕು. ಅಲ್ಲಿಯವರೆಗೆ ಶ್ರೀಗಳನ್ನು ಮುಟ್ಟಲು ಬಿಡುವುದಿಲ್ಲ’ ಎಂದು ಗ್ರಾಮದ ಮಹಿಳೆಯರು ಧರಣಿ ಕುಳಿತರು. ನಂತರ ಊರಿನ ಹಿರಿಯರು, ಪೊಲೀಸ್ ಅಧಿಕಾರಿಗಳು, ವಿವಿಧ ಮಠಾಧೀಶರು ಸಮಾಧಾನ ಮಾಡಿದರು.

ಶ್ರೀಗಳ ದೇಹವನ್ನು ಮಧ್ಯಾಹ್ನ ಮರಣೋತ್ತರ ಪರೀಕ್ಷೆಗೆ ತೆಗೆದುಕೊಂಡು ಹೋಗಲಾಯಿತು.

ಡೆತ್‌ನೋಟ್ ಪತ್ತೆ

ಬಸವಸಿದ್ಧಲಿಂಗ ಸ್ವಾಮೀಜಿ ಮೃತಪಟ್ಟಿದ್ದ ಕೋಣೆಯಲ್ಲಿ ಅವರು ಬರೆದಿದ್ದಾರೆ ಎನ್ನಲಾದ ಡೆತ್‌ನೋಟ್ ಪತ್ತೆಯಾಗಿದೆ.

‘ಕ್ಷಮಿಸಿಬಿಡಿ ಭಕ್ತರೆ. ನಾನು ಯಾವುದೇ ತಪ್ಪು ಮಾಡಿಲ್ಲ. ನನ್ನ ಸಾವಿಗೆ ನಾನೇ ಕಾರಣ. ಯಾರನ್ನೂ ವಿಚಾರಣೆಗೆ ಒಳಪಡಿಸಬೇಡಿ. ಲೋಕದ ಗೊಡವೆ ಸಾಕು. ನಾ ಈ ದಾರಿ ಹಿಡಿದಿದ್ದೇನೆ. ಶ್ರೀಮಠದ ಭಕ್ತರು ಹಾಗೂ ನೇಗಿನಹಾಳ ಗ್ರಾಮಸ್ಥರು ಸೇರಿ ಶ್ರೀಮಠವನ್ನು ಮುನ್ನಡೆಸಿ. ಹಡೆದ ತಾಯಿ ನನ್ನನ್ನು ಕ್ಷಮಿಸಿಬಿಡು. ಶ್ರೀಮಠದ ಮಕ್ಕಳೇ ನನ್ನನ್ನು ಕ್ಷಮಿಸಿ. ನನ್ನ ಪಯಣ ಬಸವ ಮಡಿವಾಳೇಶ್ವರನೆಡೆಗೆ. ಜೈ ಬಸವೇಶ, ಜೈ ಮಡಿವಾಳೇಶ. ಶರಣು ಶರಣಾರ್ಥಿ’ ಎಂದು ಇದರಲ್ಲಿ ಬರೆದಿದೆ. ಆದರೆ, ಇದರಲ್ಲಿ ಶ್ರೀಗಳ ಸಹಿ ಇಲ್ಲ.

ರಾಮನಗರ ಜಿಲ್ಲಾ ಪಂಚಾಯತ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ರಾಮನಗರ ವಿಭಾಗ, ರಾಮನಗರ.

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 24/ಕಾಅ/ಗ್ರಾ.ಕು.ನೀ.&ನೈ.ವಿ/ರಾ/ಟೆಂಡರ್/ಸ.ಇಂ.–1/ಜೆಜೆಎಂ/1230/2022–23/ಕರೆ–2 ದಿನಾಂಕ : 05–09–2022

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ ಜೆಜೆಎಂ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ವಿವರಗಳು ಕಾಮಗಾರಿಗಳನ್ನು ನಿರ್ವಹಿಸಲು ಈ ಕೆಳಕಂಡಂತಿವೆ.

1) ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 80.01 ಲಕ್ಷಗಳು. ಇ.ಎಂ.ಡಿ. ಮೊತ್ತ : ರೂ. 1.60 ಲಕ್ಷಗಳು. 2) ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 36.12 ಲಕ್ಷಗಳು. ಇ.ಎಂ.ಡಿ. ಮೊತ್ತ : ರೂ. 0.725 ಲಕ್ಷಗಳು. 3) ಕಾಲಾವಧಿ : 06 ತಿಂಗಳು. 4) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸಲು ಕೊನೆಯ ದಿನಾಂಕ : 17–09–2022 ರ ಸಂಜೆ 5.30 ಗಂಟೆಯವರೆಗೆ. 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 19–09–2022 ರ ಬೆಳಿಗ್ಗೆ 11.00 ಗಂಟೆಯ ನಂತರ. 6) ಆರ್ಥಿಕ ಬಿಡ್ ತೆರೆಯುವ ದಿನಾಂಕ : 21–09–2022 ರ ಬೆಳಿಗ್ಗೆ 11.00 ಗಂಟೆಯ ನಂತರ.

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. **ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ ವೆಬ್‌ಸೈಟ್ : www.eproc.karnataka.gov.in** ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ,
ರಾಮನಗರ ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/205/ಮಣಿಪಾಲ್/2022–23

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)

ನಂ.4. ಡಿ.ಎಸ್.ಇ.ಆರ್.ಟಿ. ಕಟ್ಟಡ, 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು–560085. ಇ–ಮೇಲ್: mdktbs.tender@gmail.com
ವೆಬ್‌ಸೈಟ್: http://www.ktbs.kar.nic.in ದೂ: 080–26422238/ 45

ಸಂ: ಎ3/ಕ.ಪ.ಪು.ಸಂ/ಕ.ಚೇ.ಟೆಂ.ಕ.ಬ/27/2022–23 ದಿ: 05.09.2022

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2022–23 ನೇ ಸಾಲಿಗೆ ಕಲಿಕಾ ಚೇತರಿಕೆ ಉಪಕ್ರಮದಡಿ ಸಿದ್ಧಪಡಿಸಿರುವ 4 ಹಾಗೂ 5ನೇ ತರಗತಿಗಳ ಅಭ್ಯಾಸ ಪುಸ್ತಕಗಳ ಭಾಗ–2ನ್ನು ಸರ್ಕಾರಿ ಶಾಲೆಗಳಿಗೆ ಹಾಗೂ 1 ರಿಂದ 3ನೇ ತರಗತಿಯ ಉರ್ದು ಮಾಧ್ಯಮದ ದ್ವಿಭಾಷಾ ತರಗತಿಯ ಆಂಗ್ಲ ಶಿಕ್ಷಕರ ತರಬೇತಿ ಕೈಪಿಡಿಗಳನ್ನು ಈ ಕಛೇರಿ ವತಿಯಿಂದ ನೀಡಲಾಗುವ ವಿತರಣಾ ಪಟ್ಟಿಯಂತೆ ಮುದ್ರಿಸಿ ಸರಬರಾಜು ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವ ಮೂಲಭೂತ ಸೌಲಭ್ಯವುಳ್ಳ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನು ಇ–ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು **ದಿನಾಂಕ: 13.09.2022 ರಂದು ಸಂಜೆ 5.30**ರ ವರೆಗೂ ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ.

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ: https://eproc.karnataka.gov.in
ಸಹಾಯವಾಣಿ: 080–46010000 / 080–22631200
ಇಲಾಖೆಯ ವೆಬ್‌ಸೈಟ್: http://www.ktbs.kar.nic.in

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ದೇವರಾಜ ಅರಸು ಭವನ, 4ನೇ ಮಹಡಿ, ನಂ. 16–ಡಿ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052.

ಸಂಖ್ಯೆ: ದೇಹಿನಿ/ಸ/ಕ್ರಿ.ಯೋ./ಸಿಆರ್–6/2022–23 ದಿನಾಂಕ: 05.09.2022

ಪ್ರಕಟಣೆ

2022–23ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಗಂಗಾ ಕಲ್ಯಾಣ ನೀರಾವರಿ ಯೋಜನೆಯಲ್ಲಿ ಸೌಲಭ್ಯ ಒದಗಿಸಲು ಅರ್ಜಿಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ.

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮಗಳ ವ್ಯಾಪ್ತಿಗೆ ಒಳಪಡುವ ಹಿಂದುಳಿದ ವರ್ಗಗಳ **ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಗಂಗಾ ಕಲ್ಯಾಣ ನೀರಾವರಿ ಯೋಜನೆಯಲ್ಲಿ ಸೌಲಭ್ಯ ಒದಗಿಸಲು** ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಸಲ್ಲಿಸಬಯಸುವ ಫಲಾಪೇಕ್ಷಿಗಳು ದಿನಾಂಕ: 06–09–2022 ರಿಂದ 20–10–2022ರವರೆಗೆ ಸೇವಾಸಿಂಧು ಪೋರ್ಟಲ್ ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾಕೇಂದ್ರಗಳಲ್ಲಿ ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ.

ಈ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಅರ್ಜಿದಾರರು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

1. **ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ, ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮಗಳ ವ್ಯಾಪ್ತಿಗೆ ಒಳಪಡುವ** ಜಾತಿ/ಸಮುದಾಯಗಳಿಗೆ ಸೇರಿದ **ಸಣ್ಣ ಮತ್ತು ಅತಿ ಸಣ್ಣ ರೈತರಾಗಿದ್ದು ಹಾಲಿ ಜಮೀನುಗಳು ಖುಷ್ಕಿಯಾಗಿದ್ದು ಯಾವುದೇ ಮೂಲದಿಂದ ನೀರಾವರಿ ಸೌಲಭ್ಯ ಹೊಂದಿರಬಾರದು.**
2. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
3. ಅರ್ಜಿದಾರರ ವಯಸ್ಸು 18 ರಿಂದ 60 ವರ್ಷದ ಒಳಗಿರಬೇಕು.
4. ಅರ್ಜಿದಾರರ ಕುಟುಂಬ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ. 98,000/– ಹಾಗೂ ಪಟ್ಟಣ ಪ್ರದೇಶದವರಿಗೆ ರೂ. 1,20,000/–ಗಳ ಒಳಗಿರಬೇಕು.
5. ಅರ್ಜಿದಾರರು ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಕನಿಷ್ಠ 02 ಎಕರೆ ಜಮೀನು ಹೊಂದಿರಬೇಕು, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 01 ಎಕರೆ ಜಮೀನು ಹೊಂದಿರಬೇಕು.
6. ವೈಯಕ್ತಿಕ ಕೊಳವೆ ಬಾವಿ ಯೋಜನೆಯಲ್ಲಿ ಘಟಕ ವೆಚ್ಚ ರೂ. 2.50 ಲಕ್ಷಗಳು, ಇದರಲ್ಲಿ ರೂ. 2.00 ಲಕ್ಷ ಸಹಾಯಧನ ಹಾಗೂ ರೂ. 50,000/– ನಿಗಮದಿಂದ ಶೇ.4ರ ಬಡ್ಡಿದರದಲ್ಲಿ ನೀಡುವ ಸಾಲದ ಮೊತ್ತ ಒಳಗೊಂಡಿದೆ.
7. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ತುಮಕೂರು ಜಿಲ್ಲೆಗಳಿಗೆ ವೈಯಕ್ತಿಕ ಕೊಳವೆ ಬಾವಿ ಘಟಕ ವೆಚ್ಚ ರೂ. 4.00ಲಕ್ಷಗಳು ಇದರಲ್ಲಿ ರೂ. 3.50ಲಕ್ಷ ಸಹಾಯಧನ ಹಾಗೂ ರೂ. 50,000/– ನಿಗಮದಿಂದ ಶೇ. 4ರ ಬಡ್ಡಿದರದಲ್ಲಿ ನೀಡುವ ಸಾಲದ ಮೊತ್ತ ಒಳಗೊಂಡಿದೆ.
8. ರೈತರು ಆಧಾರ್ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಆಧಾರ್ ಕಾರ್ಡ್‌ನಲ್ಲಿರುವಂತೆ ರೈತರ ಹೆಸರು, (ಶ್ರೀ/ಶ್ರೀಮತಿ, ಕುಮಾರಿ ಮುಂತಾದ ಮಾಹಿತಿಗಳೆಲ್ಲವು) ಬ್ಯಾಂಕ್ ಖಾತೆಯ ಪುಸ್ತಕದಲ್ಲಿಯೂ ಇದ್ದು, ಇತರೆ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ,ದಲ್ಲಿಯೂ ಆಧಾರ್ ಕಾರ್ಡ್‌ನಲ್ಲಿರುವಂತೆ ಹೆಸರು ಹೊಂದಾಣಿಕೆಯಾಗಬೇಕು.
9. ಈ ಹಿಂದೆ ನಿಗಮದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
10. ಅರ್ಜಿದಾರರು ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್ ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

: ಸೂಚನೆ :

ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್ https://www.dbcdc.karnataka.gov.in ನಲ್ಲಿ ಸಂಪರ್ಕಿಸಿ ಅಥವಾ ನಿಗಮದ ದೂರವಾಣಿ/ ಸಹಾಯವಾಣಿ ಸಂಖ್ಯೆ080–22374832 ಮತ್ತು 9606066389 ಅಥವಾ 8824300400 ಸಂಪರ್ಕಿಸುವುದು.

ಸಹಿ/–
(ವಿ. ರವಿ)
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ವಾಪ್ರ/ಜೆಎ/2082/2022–23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ

ನಂ: ನಪ್ರಾವಿ/ಸಾಉನಿವಿ/ಪ್ರಕಟಣೆ–2022–23/885 ದಿನಾಂಕ:29.08.2022

ನಾಗರೀಕ ಸೌಲಭ್ಯದ ನಿವೇಶನಗಳನ್ನು ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವ ಕುರಿತು ಪ್ರಕಟಣೆ

ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರವು ಕಾಯ್ದಿರಿಸಿದ ಈ ಕೆಳಕಾಣಿಸಿದ ನಾಗರೀಕ ಸೌಲಭ್ಯದ ನಿವೇಶನಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯದ ನಿವೇಶನಗಳ ಹಂಚಿಕೆ) ನಿಯಮಗಳು 1991ರ ಅನುಗುಣವಾಗಿ ವಿವಿದ ಸಂಘ ಸಂಸ್ಥೆಗಳಿಗೆ ಹಾಗೂ ಸರ್ಕಾರಿ ಕಚೇರಿಗಳಿಗೆ ಮೂವತ್ತು ವರ್ಷಗಳ ಗುತ್ತಿಗೆ ಆಧಾರದ ಮೇಲೆ ವಿತರಿಸಲಾಗುವದು. ಸದರಿ ನಿವೇಶನಗಳನ್ನು ಪಡೆಯಲು ಇಚ್ಚಿಸುವ ಸಂಘ/ಸಂಸ್ಥೆಗಳು, ಹಾಗೂ ಸರ್ಕಾರಿ/ಅರೆ ಸರ್ಕಾರಿ ಇಲಾಖೆಗಳು, ವಿವಿಧ ಅಳತೆಯ ನಿವೇಶನಗಳಿಗಾಗಿ ಕಟ್ಟಬೇಕಾದ ನೋಂದಣಿ ಶುಲ್ಕ ಮತ್ತು ಪ್ರಾರಂಭಿಕ ಠೇವಣಿಯೊಂದಿಗೆ ನಿಗದಿತ ನಮೂನೆಯಲ್ಲಿ ಪ್ರಕಟಣೆಯಲ್ಲಿ ತೋರಿಸಿದ ಉದ್ದೇಶಗಳಿಗಾಗಿ ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.

ನಾಗರೀಕ ನಿವೇಶನದ ಶೇ.50% ರಷ್ಟು ಪ್ರಾರಂಭಿಕ ಠೇವಣಿಯೊಂದಿಗೆ ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆಗಾಗಿ ನಿಗಧಿತ ಫಾರ್ಮ 1 & 2 ರಲ್ಲಿ ಅರ್ಜಿ ಸಲ್ಲಿಸಬಹುದು. ನಿವೇಶನಗಳಿಗಾಗಿ ಸಲ್ಲಿಸಬೇಕಾದ ಪ್ರಾರಂಭಿಕ ಠೇವಣಿ ಶುಲ್ಕವನ್ನು ಕಾಲಂ (7) ರಲ್ಲಿ ಕೊಡಲಾಗಿದೆ.

ಸಂಘ / ಸಂಸ್ಥೆ, ಅಸ್ತಿತ್ವತೆಯ ಬಗ್ಗೆ ದಾಖಲೆಗಳನ್ನು ಪ್ರಾಧಿಕಾರದಲ್ಲಿ ಪರಿಶೀಲನೆ ಮಾಡಿಕೊಂಡ ನಂತರವೇ ನಿಗದಿತ ನಮೂನೆ ಫಾರ್ಮ 1 & 2 ನ್ನು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ವಿಜಯಪುರ. ಇವರ ಕಚೇರಿಯಲ್ಲಿ **ದಿನಾಂಕ:30–08–2022 ರಿಂದ 14–09–2022**ರ ಒಳಗಾಗಿ ಬೆಲೆ ರೂ: **200/–**ಗಳನ್ನು ಸಂದಾಯಮಾಡಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ.

ಭರ್ತಿ ಮಾಡಿದ **1 ಹಾಗೂ 2** ಇವುಗಳನ್ನು ನಿಗಧಿತ ನೋಂದಣಿ ಶುಲ್ಕ ಹಾಗೂ ಪ್ರಾರಂಭಿಕ ಠೇವಣಿಯೊಂದಿಗೆ **ದಿನಾಂಕ:26–09–2022** ರಂದು ಸಾಯಂಕಾಲ **5.00 ಗಂಟೆಯ** ಒಳಗಾಗಿ ತಲುಪುವಂತೆ ಸಲ್ಲಿಸಬಹುದು. ಒಂದು ವೇಳೆ ಅರ್ಜಿ ಸಲ್ಲುಸುವ ಕಡೆಯ ದಿನ ಸರ್ಕಾರದಿಂದ ಆಕಸ್ಮಿಕ ರಜೆ ದಿನವೆಂದು ಘೋಷಿಸಿದಲ್ಲಿ ಮುಂದಿನ ದಿನವನ್ನು ಅರ್ಜಿ ಸಲ್ಲಿಸುವ ಕೊನೆಯ ದಿನವೆಂದು ಪರಿಗಣಿಸಲಾಗುತ್ತದೆ. ನಿಗದಿತ ಸಮಯದ ನಂತರ ಕಳುಹಿಸಲಾದ ಅಥವಾ ದೋಷಪೂರಿತ ಹಾಗೂ ಸರಿಯಾದ ಮಾಹಿತಿ ನೀಡದ ಅರ್ಜಿಗಳನ್ನು ತಿರಸ್ಕರಿಸಲಾಗುವದು. ಹೆಚ್ಚಿನ ಮಾಹಿತಿ ಹಾಗೂ ವಿವರಗಳುಳ್ಳ ಪ್ರತಿಯನ್ನು ಪ್ರಾಧಿಕಾರದ ಕಾರ್ಯಾಲಯದಲ್ಲಿ ಸಂಪರ್ಕಿಸಿ ಕಚೇರಿಯ ವೇಳೆಯಲ್ಲಿ ಪಡೆಯಬಹುದು. ನಿವೇಶನಗಳ ಹಂಚಿಕೆಯ ಅಂತಿಮ ತೀರ್ಮಾನವು ಪ್ರಾಧಿಕಾರದ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

ನಗರಾಭಿವೃದ್ಧಿ ಪ್ರಾಧಿಕಾರ ವಿಜಯಪುರ.

ನಾಗರೀಕ ಸೌಲಭ್ಯಕ್ಕೆ ಕಾಯ್ದಿರಿಸಿದ ನನಿವೇಶನಗಳನ್ನು ಮೂವತ್ತು ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವ ನಿವೇಶನಗಳ ವಿವರ

ಕ.ಸಂ	ಸರ್ವೆ ನಂಬರ	ನಿ.ಸಂ	ಚ.ಮೀ	ಚ.ಅಡಿ	ನೋಂದಣಿ ಶುಲ್ಕ.ರೂ:	ಪ್ರಾರಂಭಿಕ ಠೇವಣಿ ಶೇ.50%	ಗುತ್ತಿಗೆಯ ಒಟ್ಟು ಮೊಬಲಗು	ಉದ್ದೇಶ	ನಿವೇಶನ ಇರುವ ಸ್ಥಳ
1	2	3	4	5	6	7	8	9	10
1	ಮ.ಬಾ. 688/*/1ಅ ಕಜಪ. 688/ಕ	20	417.51	4494.07	7,000	10,11,000	20,22,000	ಶೈಕ್ಷಣಿಕ	ಅತಾಲಟ್ಟಿ ರಸ್ತೆ ಬಲಭಾಗ
2	ಮ.ಬಾ.961/*/2 ಕ.ಜ.ಪ.961/ಬ	92	2055.64	22126.90	7,000	49,78,500	99,57,000	ಶೈಕ್ಷಣಿಕ	ಸಾಯಿಪಾರ್ಕ
3	ಮ.ಬಾ.961/*/3 ಕ.ಜ.ಪ.961/ಕ	99	477.00	5134.42	7,000	11,55,250	23,10,500	ಬ್ಯಾಂಕ	ಸಾಯಿಪಾರ್ಕ
4	ಮ.ಬಾ.1033/ಬ	15	1356.18	14597.92	7,000	32,84,500	65,69,000	ಕಚೇರಿ ಕಟ್ಟಡ	ಸೆಂಟ್‌ಜೊಸೆಫ್ ಸ್ಕೂಲ ಹತ್ತಿರ
5	ಭೂತನಾಳ 130/ಡ	43	654.00	7039.65	7,000	15,84,000	31,68,000	ಶೈಕ್ಷಣಿಕ	ಅರಕೇರಿ ರಸ್ತೆ ಎಡಭಾಗ
6	ರಂಭಾಪೂರ 117/1 ಕ.ಜ.ಪ. 117/ಬ	05	406.13	4371.58	7,000	9,83,600	19,67,200	ಸಮುದಾಯ ಭವನ	ಉಕ್ಕಲಿ ರಸ್ತೆ ಎಡಭಾಗ
7	ಇಟ್ಟಂಗಿಹಾಳ 64/*	80	1727.09	18590.39	7,000	41,83,000	83,66,000	ಕಲ್ಯಾಣ ಮಂಟಪ	ಯತ್ನಾಳ ರಸ್ತೆ ಎಡಭಾಗ
8	ಭೂತನಾಳ 169/ಬ	28	470.00	5059.08	7,000	11,38,300	22,76,600	ಧಾರ್ಮಿಕ	ಹಳೆಪಂಡರಪೂರ ರಸ್ತೆ ಬಲಭಾಗ
9	ನವರಸಪೂರ 37/ಅ/10 ಕೆಜಿಪಿ 37/ಓ	02	611.19	6578.85	7,000	14,80,000	29,60,000	ವಸತಿ ನಿಲಯ	ಅಥಣಿ ರಸ್ತೆ ಬಲಭಾಗ
10	ನವರಸಪೂರ 33/ಆರ್ ಕೆಜಿಪಿ 33/ಎಕ್ಸ್	01	871.07	9376.19	7,000	21,10,000	42,20,000	ಶೈಕ್ಷಣಿಕ	ಅಥಣಿ ರಸ್ತೆ ಬಲಭಾಗ
11	ಹಂಚಿನಾಳ ಪಿ.ಎಚ್160/*/1 ಕ.ಜ.ಪ. 160/ಬ	138	949.99	10225.99	7,000	23,01,000	46,02,000	ಸಮುದಾಯ ಭವನ	ಬರಟಗಿ ಅಥಣಿ ರಸ್ತೆ ಬಲಭಾಗ
12	ರಂಭಾಪೂರ 111/5 ಕೆಜಿಪಿ 111/ಬ	49	694.97	7480.65	7,000	16,83,000	33,66,000	ಆಸ್ಪತ್ರೆ	ಉಕ್ಕಲಿ ರಸ್ತೆ ಎಡಭಾಗ
13	ರಂಭಾಪೂರ 106/ಬ	01	2531.72	27251.43	7,000	61,31,500	1,22,63,000	ಶೈಕ್ಷಣಿಕ	ಉಕ್ಕಲಿ ರಸ್ತೆ ಎಡಭಾಗ
14	ರಂಭಾಪೂರ 105/ಬ	220	874.68	9411.56	7,000	21,17,600	42,35,000	ಧಾರ್ಮಿಕ & ಸಾಂಸ್ಕೃತಿಕ ಚಟುವಟಿಕೆ	ಉಕ್ಕಲಿ ರಸ್ತೆ ಎಡಭಾಗ
15	ಭೂತನಾಳ 147/ಇ	27	358.20	3855.66	7,000	8,67,500	17,35,000	ಕಚೇರಿ ಕಟ್ಟಡ	ಸುಕೂನ್ ಲೇಔಟ ಹತ್ತಿರ
16	ಭೂತನಾಳ 151/ಡ	20	439.39	4729.60	7,000	10,64,000	21,28,000	ಧಾರ್ಮಿಕ	ರಿಂಗ ರಸ್ತೆ ಎಡಭಾಗ ಅಡವಿ ಶಂಕರ
17	ಕಸಬಾ 298/2 ಕ.ಜ.ಪ.298/ಕ	36	610.00	6566.04	7,000	14,77,500	29,55,000	ಆಸ್ಪತ್ರೆ	ಬೆಂಗಳೂರು ರಸ್ತೆ ಎಡಭಾಗ
18	ಭೂತನಾಳ 151/ಎಮ್ 151/ಎನ್	02 01	319.00 319.00	3433.71 3433.71	7,000 7,000	7,72,500 7,72,500	15,45,000 15,45,000	ಶೈಕ್ಷಣಿಕ	ರಿಂಗ ರಸ್ತೆ ಖಣಿ ಎದುರು
19	ಭೂತನಾಳ 168/ಬ, 168/ಕ	131 01	1314.45 953.27	14148.73 10261.00	7000	3183500 2309000	6367000 4618000	ಶೈಕ್ಷಣಿಕ	ರಿಂಗ ರಸ್ತೆ ಎಡಭಾಗ
20	ಭೂತನಾಳ 166/ಡ	22	576.79	6208.56	7000	13,97,000	27,94,000	ಶೈಕ್ಷಣಿಕ	ಸ್ಫೂರ್ತಿರೇಸಾರ್ಟ ಹಿಂಭಾಗ
21	ಮ.ಬಾ. 644/ಕ	21	417.95	4497.23	7000	10,12,000	20,24,000	ಶೈಕ್ಷಣಿಕ	ರೆಡಿಯೊ ಕೆಂದ್ರ ಹತ್ತಿರ
22	ಮ.ಬಾ. 639/ಅ/3 ಕಜಪ.639/ಡ	57	861.76	9275.44	7000	20,87,000	41,74,000	ಶೈಕ್ಷಣಿಕ	Ukp-Layout ರಿಂಗ ರಸ್ತೆ ಎಡಭಾಗ
23	ಐನಾಪುರ 55/2/1+2 ಕಜಪ. 55/ಬ	31	867.97	9339.41	7000	21,01,000	42,02,000	ಸಮುದಾಯ ಭವನ	ಸಿಂದಗಿ ರಸ್ತೆ ಬಲಭಾಗ
24	ಮ.ಬಾ 955/ಬ	39	987.98	10630.75	7000	23,92,000	47,84,000	ಕಚೇರಿ ಕಟ್ಟಡ	ಸಾಯಿ ಪಾರ್ಕ
25	ಮ.ಬಾ. 952/ಜಿ	42	506.00	5444.56	7000	12,25,000	24,50,000	ಸಮುದಾಯ ಭವನ	ಸಾಯಿ ಪಾರ್ಕ
26	ಮ.ಬಾ. 954/ಇ ಮ.ಬಾ. 954/ಫ	34 08	126.33 692.00	1359.81 7448.68	7000	3,06,000 16.76.000	6,12,000 33,52,000	ಶೈಕ್ಷಣಿಕ	ಸಾಯಿ ಪಾರ್ಕ
27	ಕಸಬಾ 302/ಬ	24	500.00	5382.00	7000	12,11,000	24,22,000	ಧಾರ್ಮಿಕ	ಹಳೆ ಜುಮನಾಳ ರಸ್ತೆ
28	ಹಿಟ್ನಳ್ಳಿ 5/ಬ	01	319.12	3433.71	7,000	7,72,600	15,45,200	ಬ್ಯಾಂಕ	ಬೆಂಗಳೂರ ರಸ್ತೆ ಬಲಭಾಗ
29	ಮ.ಬಾ 923/ಫ 923/ಆಯ್	2 62	947.07 259.56	10190.55 2792.86	7,000 7,000	11,46,500 6,28,500	45,86,000 12,57,000	ಶೈಕ್ಷಣಿಕ	ಶ್ರೀಅಡವಿ ಶಂಕರಲಿಂಗ ದೇವಸ್ಥಾನ ಹತ್ತಿರ
30	ಮ.ಬಾ. 961/ಇ ಮ.ಬಾ.961/ಡ	01 64	1184.89 1837.68	12749.42 19773.54	7,000 7,000	28,68,500 44,49,000	57,37,000 88,98,000	ಕಚೇರಿ ಕಟ್ಟಡ	ಸಾಯಿ ಪಾರ್ಕ
31	ಭೂತನಾಳ 150/ಆಯ್	15	371.72	3461.71	7,000	7,79,000	15,58,000	ಬ್ಯಾಂಕ	ಸುಕುನ್ ಬಡಾವಣೆ
32	ಮ.ಬಾ 947/ಬ	02	607.82	6540.12	7,000	14,71,500	29,43,000	ನಗರ ಆರೋಗ್ಯ ಕೇಂದ್ರ	ಬೆಂಗಳೂರು ರಸ್ತೆ ಬಲಭಾಗ

ಸಹಿ/– ಆಯುಕ್ತರು, ಶಂಕರಗೌಡ ಎಸ್ ಸೋಮನಾಳ,
ನಗರಾಭಿವೃದ್ಧಿ ಪ್ರಾಧಿಕಾರ,ವಿಜಯಪುರ

ಸಹಿ/– ಅಧ್ಯಕ್ಷರು, ಶ್ರೀಹರಿ ಅರವಿಂದರಾವ ಗೊಳಸಂಗಿ,
ನಗರಾಭಿವೃದ್ಧಿ ಪ್ರಾಧಿಕಾರ,ವಿಜಯಪುರ

ವಾಸಾಸಂಇ/ವಿಜಯಪುರ/398/ಎಂಸಿಎ/2022–23

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ರೋಗ ಹೋಯ್ತು ಸುಸ್ತು ಬಂತು!



> ಕಾಯಿಲೆ ಮರೆಯಾದ ಮೇಲೆಯೂ ನಾವು ಚೇತರಿಸಿಕೊಳ್ಳಲು, ಮತ್ತೆ ಸಹಜ ಸ್ಥಿತಿಗೆ ಮರುಳಲು ಒಂದಿಷ್ಟು ಸಮಯ ಬೇಕಾಗುತ್ತದೆ. ಈ ಅವಧಿಯಲ್ಲಿ ಕಾಳಜಿ ವಹಿಸುವುದು ಅತ್ಯಗತ್ಯ.

ಡಾ. ವಿನಯ ಶ್ರೀನಿವಾಸ್

ಕೋವಿಡ್ ಸೋಂಕಿನಿಂದ ಬಳಲಿದ ಅನೇಕರು ಗುಣಮುಖರಾದ ನಂತರ ಸಾಕಷ್ಟು ದಿನಗಳವರೆಗೆ ದಿನನಿತ್ಯದ ಕೆಲಸ ಮಾಡುವಾಗಲೂ ಆಯಾಸ ಎಂದು ದೂರುತ್ತಿದ್ದುದನ್ನು ನಾವು ಗಮನಿಸಿದ್ದೇವೆ. ಅಷ್ಟೇ ಅಲ್ಲ, ರುಚಿ ಮತ್ತು ವಾಸನೆಯನ್ನು ಗ್ರಹಿಸಲು ಕಷ್ಟ ಪಡುತ್ತಿದ್ದುದನ್ನು, ಹಸಿವು ಕಡಿಮೆಯಾಗಿದೆ ಎಂದು ಆಹಾರ ಸೇವನೆಯನ್ನೇ ಮಿತಿಗೊಳಿಸಿದ್ದನ್ನು ಸಹ ನಾವು ಕಂಡಿದ್ದೇವೆ. ಚಿಕುನ್‌ಗುನ್ಯಾ ಕಾಯಿಲೆಯಿಂದ ಗುಣಮುಖರಾದ ಪರಿಚಿತರು ಬಹಳಷ್ಟು ಕಾಲ ನಡೆಯಲು, ಮೆಟ್ಟಿಲುಗಳನ್ನು ಏರಲು ಕಷ್ಟ ಪಟ್ಟಿದ್ದನ್ನು ನಾವು ನೋಡಿದ್ದೇವೆ. ಅಷ್ಟೇ ಏಕೆ, ಸಾಮಾನ್ಯ ನೆಗಡಿಯಾದಾಗಲೂ ಸುಧಾರಿಸಿಕೊಳ್ಳಲು ಕೆಲವರು ಅನೇಕ ದಿನಗಳವರೆಗೆ ಪ್ರಯಾಸ ಪಡುತ್ತಾರೆ. ಹೌದು, ಅನಾರೋಗ್ಯದಿಂದ ಬಳಲುವ ವ್ಯಕ್ತಿಯನ್ನು ವೈದ್ಯರ ಸಲಹೆಯ ಮೇರೆಗೆ ಆಸ್ಪತ್ರೆಗೆ ದಾಖಲಿಸಿ ಅಥವಾ ಮನೆಯಲ್ಲಿಯೇ ಆರೈಕೆಯನ್ನೇನೋ ಮಾಡುತ್ತೇವೆ. ಆದರೆ, ಚಿಕಿತ್ಸೆಯ ಬಳಿಕ ಅಂದರೆ, ಕಾಯಿಲೆಯ ಮುಖ್ಯ ಲಕ್ಷಣಗಳು ಮರೆಯಾದ ಮೇಲೆಯೂ ಆತ ಚೇತರಿಸಿಕೊಳ್ಳಲು, ಮತ್ತೆ ಸಹಜ ಸ್ಥಿತಿಗೆ ಮರುಳಲು ಒಂದಿಷ್ಟು ಸಮಯ ಬೇಕಾಗುತ್ತದೆ. ಈ ಅವಧಿಯಲ್ಲಿಯೂ ತುಸು ಕಾಳಜಿ ವಹಿಸುವುದು ಅತ್ಯಗತ್ಯ.

ಕಾಯಿಲೆಗಳನ್ನು ಮುಖ್ಯವಾಗಿ ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ಎಂದು ವಿಂಗಡಿಸಬಹುದು. ಸಾಂಕ್ರಾಮಿಕ ಕಾಯಿಲೆಗಳಿಗೆ ಮುಖ್ಯವಾಗಿ ಅಣುಜೀವಿ, ವೈರಾಣು, ಪರಾವಲಂಬಿ ಜೀವಿಗಳು ಮತ್ತು ಶಿಲೀಂಧ್ರಗಳ ಸೋಂಕು ಕಾರಣ. ಅಸಾಂಕ್ರಾಮಿಕ ಕಾಯಿಲೆಗಳಲ್ಲಿ ಮುಖ್ಯವಾಗಿ ಏರುರಕ್ತದೊತ್ತಡ, ಮಧುಮೇಹ, ಕ್ಯಾನ್ಸರ್ ಮುಖ್ಯವಾದುವು. ಒಮ್ಮೊಮ್ಮೆ ಎರಡೂ ಬಗೆಯ ಕಾಯಿಲೆಗಳು ಒಟ್ಟೊಟ್ಟಿಗೇ ತೊಂದರೆ ಕೊಡುವುದೂ ಇದೆ. ಇದಷ್ಟೇ ಅಲ್ಲದೆ, ಅಪಘಾತಗಳಿಂದಾಗುವ ಪೆಟ್ಟು, ಮೂಳೆಮುರಿತ, ಶಸ್ತ್ರಚಿಕಿತ್ಸೆಯ ನಂತರವೂ ಪರಿಸ್ಥಿತಿ ಭಿನ್ನವಾಗಿರುವುದಿಲ್ಲ. ಹೀಗೆ ಅನಾರೋಗ್ಯದಿಂದ ಚೇತರಿಕೆಯಾಗುವ ಅವಧಿಯಲ್ಲಿ ಕಾಡುವ ಅತಿಯಾದ ಆಯಾಸ, ನಿಃಶಕ್ತಿ, ಕೆಲಸಗಳಲ್ಲಿ ನಿರಾಸಕ್ತಿ ಮೊದಲಾದುವು ವ್ಯಕ್ತಿಯನ್ನು ಮತ್ತಷ್ಟು ಆತಂಕದತ್ತ ದೂಡುತ್ತವೆ. ನಾನು ಮೊದಲಿನಂತೆ ಆಗುತ್ತೇನೆಯೇ ಎಂಬ ಸಂಶಯ ಆತನನ್ನು ಮಾನಸಿಕವಾಗಿ ಕುಗ್ಗಿಸುತ್ತದೆ.

ಈ ಅಂಶಗಳನ್ನು ನೆನಪಿಡಿ: ವ್ಯಕ್ತಿಯಲ್ಲಿ ಕಾಯಿಲೆಯ ಲಕ್ಷಣಗಳು ಕಾಣಿಸಿಕೊಳ್ಳುವ ಮೊದಲು ಆತನ ಶರೀರದಲ್ಲಿ ರೋಗಾಣು ಮತ್ತು ಆತನ ರೋಗನಿರೋಧಕ ವ್ಯವಸ್ಥೆಯ ನಡುವೆ ಹೋರಾಟ ನಡೆದಿರುತ್ತದೆ. ಹಲವು ಜೀವಕೋಶಗಳು ಮರಣ ಹೊಂದಿರುತ್ತವೆ. ರೋಗಾಣುವಿನ ವಿರುದ್ಧ ಪ್ರತಿಕಾಯಗಳು ತಯಾರಾಗಿ ಕಾರ್ಯಪ್ರವೃತ್ತರಾಗಿರುತ್ತವೆ. ವ್ಯಕ್ತಿಯ ಕೆಲವು ಅಂಗಾಂಶಗಳಿಗೂ ಹಾನಿಯಾಗಿರುತ್ತದೆ. ಆದ್ದರಿಂದಲೇ ಆ ವೇಳೆಯಲ್ಲಿ ಆತನಿಗೆ ಮೊದಲಿನ ಕ್ಷಮತೆ ಇರುವುದಿಲ್ಲ. ಇವೆಲ್ಲವೂ ಸಹಜ ಸ್ಥಿತಿಗೆ ಬರಲು ಕೊಂಚ ಸಮಯ ಬೇಕು. ಆಗಿನ ಆತನ ಆಹಾರಕ್ರಮ ಮತ್ತು ಜೀವನಶೈಲಿಯೂ ಅದಕ್ಕೆ ಪೂರಕವಾಗಿರಬೇಕು.

ಉತ್ತಮ ಆಹಾರ: ಕಾಯಿಲೆಯಿಂದ ಸಂಪೂರ್ಣವಾಗಿ ಗುಣಮುಖರಾಗುವಾಗ ಪೌಷ್ಟಿಕ ಆಹಾರಸೇವನೆ ಅತ್ಯಗತ್ಯ. ನಮ್ಮ ರೋಗನಿರೋಧಕ ವ್ಯವಸ್ಥೆಯ ಕಾರ್ಯಕ್ಷಮತೆಗೆ ಹಾಗೂ ಪ್ರತಿಕಾಯಗಳ ಉತ್ಪಾದನೆಗೆ ಪ್ರೋಟಿನ್ ಬಹಳವೇ ಮುಖ್ಯ. ಕಾಯಿಲೆಯ ಪ್ರಕ್ರಿಯೆಯಲ್ಲಿ ನಶಿಸಿಹೋದ ಜೀವಕೋಶಗಳ ಮರುತಯಾರಿಗೆ, ಹಾನಿಗೊಂಡ ಅಂಗಾಂಶಗಳ ದುರಸ್ತಿಗೆ ಪ್ರೋಟಿನ್ ಮತ್ತು ಸಿ ಜೀವಸತ್ವ ಸಹ ಅತ್ಯಗತ್ಯ. ಆದ್ದರಿಂದಲೇ ಪೌಷ್ಟಿಕಾಂಶಗಳು ಯಥೇಚ್ಛವಾಗಿರುವ ಮೊಳಕೆ ಬರಿಸಿದ ಕಾಳುಗಳು, ಸೊಪ್ಪು, ಹಸಿರು ತರಕಾರಿ ಮತ್ತು ಹಣ್ಣುಗಳ ಸೇವನೆಗೆ ಮಹತ್ವ ಕೊಡಬೇಕು. ಹಾಲು, ಹಾಲಿನ ಉತ್ಪನ್ನಗಳು, ಮೊಟ್ಟೆ, ಮಾಂಸಾಹಾರವೂ ಪ್ರೋಟಿನ್‌ನ ಆಗರ. ಅವುಗಳ ಸೇವನೆಯೂ ಈ ಸಮಯದಲ್ಲಿ ಒಳ್ಳೆಯದೇ. ಆದರೆ ಅತಿಯಾದ ಮಸಾಲೆ, ಜಿಡ್ಡು ಪದಾರ್ಥಗಳಿಂದ ಕೆಲಕಾಲ ದೂರವಿರುವುದು ಸೂಕ್ತ.

ಹೆಚ್ಚು ದ್ರವಾಂಶದ ಆಹಾರ: ಶರೀರವು ನಿತ್ರಾಣಗೊಳ್ಳಲು ನಿರ್ಜಲೀಕರಣವೂ ಕಾರಣ. ಈ ಹಂತದಲ್ಲಿ ಶರೀರದ ದ್ರವಾಂಶವನ್ನು ಕಾಪಿಟ್ಟುಕೊಳ್ಳುವುದು ಅತ್ಯಗತ್ಯ. ಆದ್ದರಿಂದ ದಿನವೂ ಕನಿಷ್ಠ ಮೂರು ಲೀಟರ್ ನೀರು ಕುಡಿಯಿರಿ. ಜೊತೆಯಲ್ಲಿ ನಿಂಬೆ ಹಣ್ಣಿನ ಪಾನಕ ಮತ್ತು ಇತರ ಹಣ್ಣು-ತರಕಾರಿಗಳ ರಸವೂ ಸಹಕಾರಿ.

ತಾಜಾ ಆಹಾರ: ಸಾಧ್ಯವಾದಷ್ಟು ಮನೆಯಲ್ಲಿಯೇ ತಯಾರಿಸಿದ ತಾಜಾ ಆಹಾರವನ್ನು ಸೇವಿಸಿ. ಫ್ರಿಜ್‌ನಲ್ಲಿರಿಸಿದ ಅತಿ ತಣ್ಣನೆಯ ಪದಾರ್ಥಗಳ ಸೇವನೆ ಬೇಡ. ಆಹಾರವನ್ನು ಬಿಸಿ ಅಥವಾ ಬೆಚ್ಚಗಿರುವಾಗಲೇ ಸೇವಿಸುವುದು ಉತ್ತಮ. ಜಂಕ್ ಮತ್ತು ಸಂಸ್ಕರಿಸಿದ ಆಹಾರ ಬೇಡವೇ ಬೇಡ.

ವ್ಯಾಯಾಮ: ದೇಹವನ್ನು ದಂಡಿಸುವ, ಅತಿಯಾಗಿ ಬೆವರಿಳಿಸುವ ವ್ಯಾಯಾಮ, ದೂರದ ನಡಿಗೆ ಈ ವೇಳೆಯಲ್ಲಿ ಸೂಕ್ತವಲ್ಲ. ಮನೆಯಲ್ಲಿಯೇ ಹತ್ತರಿಂದ ಹದಿನೈದು ನಿಮಿಷಗಳ ನಿಧಾನ ನಡಿಗೆ ಅಥವಾ ಸರಳ, ಕನಿಷ್ಠ ವ್ಯಾಯಾಮವನ್ನಷ್ಟೇ ಮಾಡಿ. ಪ್ರಾಣಾಯಾಮದ ರೂಢಿಯಿದ್ದರೆ ಮಾಡಿ.

ಮಾನಸಿಕ ಸಿದ್ಧತೆ: ಬಹಳಷ್ಟು ಜನ ಕಾಯಿಲೆಗಳಿಂದ ಬಳಲಿದಾಗ ಸೋತು ಸುಣ್ಣವಾಗಿ ಬಿಡುತ್ತಾರೆ. ಮಾನಸಿಕವಾಗಿ ಕುಗ್ಗಿ 'ತಮಗೇ ಏಕೆ ಕಾಯಿಲೆ ಬಂತು, ತಾವು ಮೊದಲಿನಂತಾಗುವುದು ಸಾಧ್ಯವೇ' ಎಂದು ಚಿಂತಿತರಾಗುತ್ತಾರೆ. ಈ ರೀತಿಯ ನಕಾರಾತ್ಮಕ ಆಲೋಚನೆಗಳು ಕಾಯಿಲೆಯಿಂದ ಗುಣಮುಖಗೊಳ್ಳುವ ಪ್ರಕ್ರಿಯೆಯನ್ನು ಕುಂಠಿತಗೊಳಿಸುತ್ತದೆ. 'ಆದಷ್ಟು ಬೇಗ ಸಹಜ ಸ್ಥಿತಿಗೆ ಹಿಂದಿರುಗುವೆ' ಎಂಬ ಇಚ್ಛಾಶಕ್ತಿ ಬಹಳ ಮುಖ್ಯ.

ವಿಶ್ರಾಂತಿ: ಕಾಯಿಲೆಯಿಂದ ಗುಣಮುಖರಾಗುವಾಗ ವಿಶ್ರಾಂತಿ ಮುಖ್ಯ. ತಕ್ಷಣವೇ ದೈಹಿಕ ಶ್ರಮ ಬೇಡುವ ಕೆಲಸಗಳಿಗೆ ಕೈ ಹಾಕದಿರಿ. ಪ್ರಯಾಣ, ಓಡಾಟ, ಹೆಚ್ಚು ಹೊತ್ತು ಕುಳಿತು, ಗಮನ ವಹಿಸಿ ಮಾಡಬೇಕಾದ ಕೆಲಸಗಳನ್ನೂ ದೂರವಿಡಿ. ಹವಾನಿಯಂತ್ರಿತ ವಾತಾವರಣ ಮತ್ತು ತಂಪಾದ ಹವೆಯಿರುವ ಸ್ಥಳಗಳಲ್ಲಿ ಸಂಚರಿಸದಿರಿ. ಟಿ. ವಿ., ಮೊಬೈಲ್ ಬಳಕೆಯೂ ಮಿತಿಯಲ್ಲಿರಲಿ. ಎಂಟರಿಂದ ಹತ್ತು ತಾಸುಗಳ ಕಾಲ ನಿದ್ದೆ ಮಾಡಿ.

ಒತ್ತಡ ಬೇಡ: ಆ ಸಮಯದಲ್ಲಿ ಮಾನಸಿಕವಾಗಿ ನಿಮ್ಮನ್ನು ಒತ್ತಡಕ್ಕೆ ಗುರಿಪಡಿಸುವ ಆಲೋಚನೆಗಳಿಂದ ದೂರವಿರಿ. ಮನಸ್ಸನ್ನು ಹಗುರಗೊಳಿಸುವ, ಮುದ ನೀಡುವ ಲಘು, ಹಾಸ್ಯಬರಹಗಳನ್ನು ಓದಿ. ಇದು ನಿಮ್ಮ ಮನಸ್ಸನ್ನು ಆಹ್ಲಾದಗೊಳಿಸುತ್ತದೆ. ❖

ಶಸ್ತ್ರಚಿಕಿತ್ಸೆಯ ಬಳಿಕ

ಶಸ್ತ್ರಚಿಕಿತ್ಸೆ ಯಾವುದು ಎನ್ನುವುದರ ಆಧಾರದ ಮೇಲೆ ವೈದ್ಯರು ಕೆಲವು ಸೂಚನೆಗಳನ್ನು ಕೊಟ್ಟಿರುತ್ತಾರೆ. ವೈದ್ಯರ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ. ಉದಾಹರಣೆಗೆ ಹೊಟ್ಟೆಯ ಭಾಗದಲ್ಲಾಗಿದ್ದರೆ ತೂಕ ಎತ್ತದಂತೆ, ಬಗ್ಗಿ ಏಳದಂತೆ ತಿಳಿಸಿರುತ್ತಾರೆ. ಆ ಬಗ್ಗೆ ಎಚ್ಚರ ವಹಿಸಿ. ಕೆಲವು ಮೂಳೆ ಮುರಿತದ ಶಸ್ತ್ರಚಿಕಿತ್ಸೆಗಳಾದಾಗ ಮನೆಯಲ್ಲಿಯೇ ಸರಳ ವ್ಯಾಯಾಮಗಳನ್ನು ಮಾಡುವಂತೆ ಸೂಚಿಸಿರುತ್ತಾರೆ. ಉದಾಹರಣೆಗೆ, ಕೈ ಅಥವಾ ಕಾಲುಗಳ ಬೆರಳುಗಳನ್ನು ಅಲುಗಾಡಿಸುವುದು, ಮೊದಲಾದುವು. ಅವುಗಳನ್ನು ಮರೆಯದೆ ಮಾಡಿ. ಇನ್ನು ಕೆಲವು ಸಂದರ್ಭಗಳಲ್ಲಿ ಕಡ್ಡಾಯವಾಗಿ ಹಾಸಿಗೆಯಿಂದ ಎದ್ದು ನಡೆದಾಡುವಂತೆ ತಿಳಿಸಿರುತ್ತಾರೆ. ಆಗಲೂ ತಪ್ಪದೇ ಮನೆಯವರ ಸಹಾಯ ಪಡೆದು ನಡೆದಾಡಬೇಕು. ಇದು ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿ ಆಗಬಹುದಾದ ಸಂಭವನೀಯ ಅಪಾಯಗಳನ್ನು ತಡೆಯಲು ನೆರವಾಗುತ್ತದೆ. ಯಾವುದೇ ಅಸಾಮಾನ್ಯ ಗುಣಲಕ್ಷಣ ಕಂಡುಬಂದಲ್ಲಿ ಕೂಡಲೇ ವೈದ್ಯರಿಗೆ ಕರೆ ಮಾಡಿ. ಅವಶ್ಯವಿದ್ದಲ್ಲಿ ಆಸ್ಪತ್ರೆಗೆ ಭೇಟಿ ನೀಡಿ ಪರೀಕ್ಷೆ ಮಾಡಿಸಿಕೊಳ್ಳಿ. ಮರುಭೇಟಿಗೆ ಸೂಚಿಸಿದ ದಿನದಂದು ತಪ್ಪದೇ ಸಮಾಲೋಚನೆಗೆ ತೆರಳಿ.

ಸಂತೋಷದ ಸಂಭ್ರಮಾಚರಣೆ ಸಾತ್ವಿಕವಾಗಿ ನೆರವೇರಿದಾಗ ಅದು ಒಳಿತಿನ ಫಲವನ್ನೇ ಕೊಡುತ್ತದೆ. ವೈಯಕ್ತಿಕವಾದ ಖುಷಿಯನ್ನು ಸಾಮುದಾಯಿಕಗೊಳಿಸುವುದು ಜೀವನ್ಮುಖಿ ನಡವಳಿಕೆ

ಸಂತೋಷದಲ್ಲಿ ಸಾತ್ವಿಕತೆ

ಪ್ರಜ್ಞಾ ಮತ್ತಿಹಳ್ಳಿ



ಭಾರತೀಯರು ಆನಂದವನ್ನು ಬ್ರಹ್ಮ ಎಂದು ಕರೆದಿದ್ದಾರೆ. ಅಂದರೆ ಇದೊಂದು ಪರಮ ಗುರಿ. ಎಲ್ಲರೂ ತಲುಪಬೇಕಾದ ಅಥವಾ ಪಡೆದುಕೊಳ್ಳಬೇಕಾದ ಶಾಶ್ವತ ಸ್ಥಿತಿ. ಲೌಕಿಕದ ಕಷ್ಟ-ನಷ್ಟಗಳನ್ನು, ನೋವು-ಅಪಮಾನಗಳನ್ನು ಮೀರಿದ ಅಥವಾ ಮರೆವಿಗೆ ತಳ್ಳಿದ ಸ್ಥಿತಿಯಲ್ಲಿ ಮನಸ್ಸು ಆನಂದದ ಸ್ಥಿತಿಯನ್ನು ತಲುಪಬಹುದು. ನಾವು ಬಾಲ್ಯದಿಂದ ಯಾವ ಸಂಗತಿಗಳನ್ನು ಸುಖ ಎಂದು ಅರ್ಥೈಸಿಕೊಂಡಿರುತ್ತೇವೆಯೋ ಅವುಗಳನ್ನು ಪಡೆದುಕೊಂಡಾಗ ಮನಸ್ಸು ಸಂಭ್ರಮಿಸುತ್ತದೆ. ಉದಾಹರಣೆಗೆ ಹಾಲು-ತುಪ್ಪ-ಸಿಹಿತಿಂಡಿಗಳ ಷಡ್ರಸ ಭೋಜನವನ್ನು, ಬೆಲೆಬಾಳುವ ಒಡವೆ-ಬಟ್ಟೆಗಳನ್ನು, ವಿದೇಶಿ ಯಾತ್ರೆಯನ್ನು ಸುಖವೆಂದು ಭಾವಿಸಿಕೊಂಡಾತ ಮೋಜು-ಮೇಜವಾನಿಗಳನ್ನು ಪಡೆದುಕೊಳ್ಳುವುದನ್ನೇ ತನ್ನ ಜೀವನದ ಧ್ಯೇಯವಾಗಿಟ್ಟುಕೊಂಡು ಹೆಣಗುತ್ತಾನೆ. ದೊಡ್ಡ ಮನೆ, ಕಾರು, ಬೆಲೆಬಾಳುವ ಪೀಠೋಪಕರಣಗಳಂಥ ಸಂಪತ್ತನ್ನು ಸುಖವೆಂದು ವ್ಯಾಖ್ಯಾನಿಸಿಕೊಂಡವನು ಅವುಗಳನ್ನು ಹೊಂದುವಲ್ಲಿ ಆಸಕ್ತನಾಗಿರುತ್ತಾನೆ.

ಇತ್ತೀಚಿನ ದಿನಗಳಲ್ಲಿ ಸಣ್ಣ-ಪುಟ್ಟ ಸಂಗತಿಗಳನ್ನೂ ಸಂಭ್ರಮಿಸುವ ಪ್ರತೀತಿ ಹೆಚ್ಚುತ್ತಿದೆ. ಯಾವುದೇ ಉತ್ಸವ ಅಥವಾ ಮೆರವಣಿಗೆ ನಡೆದರೆ ರಸ್ತೆಗಳಲ್ಲಿ ವಾಹನಗಳ ಸಂಚಾರಕ್ಕೆ ಅಡಚಣೆಯುಂಟಾಗಿ ಸಮಸ್ಯೆ ಉದ್ಭವಿಸುತ್ತದೆ. ಜೋರಾಗಿ ವಾದ್ಯ ನುಡಿಸುವುದು, ಪಟಾಕಿ ಸಿಡಿಸುವುದು, ಕಿವಿ ತಮಟೆ ಹರಿಯುವಂತಹ ಡಿಜೆಗಳ ಸಂಗೀತವನ್ನು ಹಾಕಿಕೊಂಡು ಕುಣಿಯುವುದನ್ನು ನಾವು ಆನಂದದ ಅನುಭೂತಿ ಎಂದು ಒಪ್ಪಿಕೊಂಡರೆ ಸೂಕ್ಷ್ಮಜೀವಿಗಳು, ಅನಾರೋಗ್ಯದಿಂದ ಬಳಲುವವರು, ಶಿಶು-ಬಾಣಂತಿ-ಗರ್ಭಿಣಿಯರು ಇವರೆಲ್ಲ ಬಲಿಪಶುಗಳಾಗುತ್ತಾರೆ. ಹಬ್ಬಗಳ ಮರುದಿನ ರಸ್ತೆಗಳಲ್ಲಿ ಹೊರಟರೆ ಎರಡೂ ಕಡೆ ಪಟಾಕಿ ಚೂರುಗಳು ರಾಶಿ ರಾಶಿ ಬಿದ್ದಿರುತ್ತವೆ. ಥರ್ಮೋಕೋಲಿನ ಬೋರ್ಡ್‌ಗಳು, ಬ್ಯಾನರುಗಳು ಅನಾಥವಾಗಿ ಬಿದ್ದಿರುತ್ತವೆ. ರಬ್ಬರಿನ ಬಲೂನು ಚೂರುಗಳು ಮಣ್ಣಲ್ಲಿ ಒಂದಾಗುವುದಿಲ್ಲವೆಂದು ಹಠ ಹಿಡಿದು ಪಿಳಿಪಿಳಿ ನೋಡುತ್ತಿರುತ್ತವೆ. ಪ್ಲಾಸ್ಟಿಕ್ ತಟ್ಟೆ ಲೋಟಗಳು ಔತಣಕೂಟದ ಪಳೆಯುಳಿಕೆಗಳಾಗಿ ಕೂತಿರುತ್ತವೆ. ಈ ತಟ್ಟೆ ಲೋಟಗಳನ್ನೂ ಮೀರಿಸಿದ ಇನ್ನೊಂದು ಪರ್ವತ ಅರ್ಧ ತಿಂದು ಬಿಟ್ಟ ಮೃಷ್ಟಾನ್ನದ ತಿನಿಸುಗಳದ್ದು. ಮಣ್ಣಲ್ಲಿ ಕರಗದಿರುವ ತ್ಯಾಜ್ಯಗಳನ್ನು ಖಾಲಿ ಸೈಟುಗಳಲ್ಲಿ ಅಥವಾ ಊರ ಹೊರಗೆ ರಸ್ತೆ ಪಕ್ಕದಲ್ಲಿ ಎಸೆದು ಬಿಡುತ್ತಾರೆ. ಅವು ಹೊಲಸು ವಾಸನೆ ಬೀರುತ್ತ ನಾಯಿ-ಹಂದಿಗಳಿಗೂ ಆಹಾರವಾಗುವ ಯೋಗ್ಯತೆಯಿಲ್ಲದೇ ಕೇವಲ ಅವುಗಳ ಕಚ್ಚಾಟಕ್ಕೆ ಕಾರಣವಾಗುತ್ತ ಬಿದ್ದಿರುತ್ತವೆ.

ಭೋಗ ಮತ್ತು ಸುಖ – ಎರಡೂ ವಿಭಿನ್ನ ನೆಲೆಗಳು, ವಿಭಿನ್ನ ಅನುಭವಗಳು. ಭೋಗದಲ್ಲಿ ಸುಖದ ಅಂಶವೂ ಇರಬಹುದು. ಆದರೆ ಸುಖವೆಲ್ಲವೂ ಭೋಗವಲ್ಲ. ಸುಖಕ್ಕೆ ಅಂತರಂಗದ ಭಾವನೆಯಿರುತ್ತದೆ. ಭೋಗಕ್ಕೆ ಬಹಿರಂಗದ ಕಾಮನೆಯಿರುತ್ತದೆ. ಈ ಸತ್ಯದ ಸಾಕ್ಷಾತ್ಕಾರವಾಗುವ ತನಕ ಆನಂದದ ಅನ್ವೇಷಣೆ ನಡೆಯುತ್ತಲೇ ಇರುತ್ತದೆ. ಐಹಿಕ ಸಂಪತ್ತಿನ ಸಂಗ್ರಹ ಹಾಗೂ ಪ್ರದರ್ಶನಗಳು ಕೊಡುತ್ತಿರುವ ಸುಖದ ಕ್ಷಣಿಕತನ ಅರಿವಾಗುತ್ತ ಸಾಗಿದಂತೆ ಬಹಿರ್ಮುಖಿಯಾದ ಮನಸ್ಸು ನಿಧಾನವಾಗಿ ತನ್ನ ಅಂತರಂಗದೊಳಗಿನ ಚೈತನ್ಯದೊಂದಿಗೆ ಸಂವಾದಿಸಲು ಆರಂಭಿಸುತ್ತದೆ.

'ಬಾರದಿರುವುದಕೆ ಕೊರಗುವುದ ಬಿಟ್ಟು ಇರುವುದನು ಪ್ರೀತಿಸು ಹರುಷಕಿದೇ ದಾರಿ' ಎನ್ನುತ್ತಾರೆ ಡಿ.ವಿ.ಜಿ.ಯವರು. ನಮ್ಮ ಬದುಕಿನಲ್ಲಿ ದೊರಕಿರುವ ಒಳ್ಳೆಯ ಅಂಶಗಳಾವವು ಎಂದು ಪಟ್ಟಿ ಮಾಡುತ್ತ ಹೋದಂತೆ ಮನಸ್ಸು ಸಕಾರಾತ್ಮಕವಾಗಿ ಸ್ಪಂದಿಸಲು ಶುರು ಮಾಡುತ್ತದೆ. ಆಗ ಖುಷಿಯ ಕಾಮನಬಿಲ್ಲು ಮೂಡುತ್ತದೆ. ಸಂತೋಷದ ಹುಡುಕಾಟ ಎನ್ನುವುದು ಆದಿಯಿಂದಲೂ ಮಾನವನ ಹಸಿವುಗಳಲ್ಲಿ ಒಂದಾಗಿದೆ. ಆದರೆ ಸಂತೋಷದ ಪರಿಕಲ್ಪನೆ ಮಾತ್ರ ಕಾಲದಿಂದ ಕಾಲಕ್ಕೆ ಹಾಗೂ ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾಗುತ್ತ ಸಾಗಿದೆ. ಸಂತೋಷ ಪಡುವುದು ಅಥವಾ ನಮಗಾದ ಸಂತೋಷವನ್ನು ಎಲ್ಲರೊಂದಿಗೆ ಹಂಚಿಕೊಳ್ಳುವುದು ಅತ್ಯಂತ ಆರೋಗ್ಯಪೂರ್ಣವಾದ ವಿಚಾರ. ವೈಯಕ್ತಿಕವಾದ ಖುಷಿಯನ್ನು ಸಾಮುದಾಯಿಕಗೊಳಿಸುವುದು ಒಂದು ಜೀವನ್ಮುಖಿ ನಡವಳಿಕೆ. ನಮ್ಮ ಸಂತೋಷವನ್ನು ಸಂಭ್ರಮಿಸುವ ಮೂಲಕ ಇತರರಿಗೆ ಹಂಚುತ್ತ ಹೋದಾಗ ಅದು ಅವರ ವೈಯಕ್ತಿಕ ನೋವನ್ನು ಮಾಯಿಸುವ ಮುಲಾಮಿನಂತೆ ಕೆಲಸ ಮಾಡಬಹುದು. ಮನುಷ್ಯ ಖುಷಿಗೊಂಡಾಗ ಮಿದುಳಿನಲ್ಲಿ 'ಎಂಡೊರ್ಫಿನ್' ಹಾರ್ಮೋನ್ ಸೃಜಿಸುತ್ತದೆ. ಅದರಿಂದ ನೋವಿನ ಅನುಭೂತಿ ಮಾಯವಾಗುತ್ತದೆ. 'ಡೊಪಾಮೈನ್' ಎನ್ನುವ ನರಕೋಶಗಳ ಉತ್ತೇಜಕವು ಬಿಡುಗಡೆಗೊಳ್ಳುತ್ತದೆ. ಇದು ಧನಾತ್ಮಕ ಆಲೋಚನೆಗಳಿಗೆ ಪ್ರೇರಣೆ ನೀಡುತ್ತದೆ. 'ಸೆರೆಟೊನಿನ್' ಹಾಗೂ 'ಒಕ್ಸಿಟೊಸಿನ್' ಎಂಬ ರಾಸಾಯನಿಕಗಳು ಕೂಡ ಬಿಡುಗಡೆಯಾಗುತ್ತವೆ. ಇವು ಮಿದುಳನ್ನು ಚುರುಕುಗೊಳಿಸುವ ಮೂಲಕ ಹೃದಯಕ್ಕೆ ಹೆಚ್ಚಿನ ರಕ್ತ ಸಂಚಾರವಾಗುವಂತೆ ನೋಡಿಕೊಳ್ಳುತ್ತವೆ.

ಸಂತೋಷವನ್ನು ಅನುಭವಿಸುವ ಸ್ಥಿತಿಯಲ್ಲಿರುವ ಮನುಷ್ಯನ ಪಚನಕ್ರಿಯೆ ಕೂಡ ಚೆನ್ನಾಗಿ ನಡೆಯುತ್ತದೆ. ಸಂತೋಷದ ಸ್ಥಿತಿಯಲ್ಲಿ ಮನಸ್ಸು ನಿರಾಳ ಭಾವವನ್ನು ಹೊಂದುವುದರಿಂದ ನಿದ್ದೆ ಕೂಡ ಚೆನ್ನಾಗಿ ಬರುತ್ತದೆ. ಹೀಗೆ ಇದು ಆರೋಗ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಕಾರಾತ್ಮಕವಾಗಿ ಕಾರ್ಯವೆಸಗುತ್ತದೆ. ಸಂತೋಷ-ನೆಮ್ಮದಿಗಳು ಮನುಷ್ಯನ ಕಾರ್ಯಕ್ಷಮತೆಯನ್ನು ಕೂಡ ಹೆಚ್ಚಿಸುತ್ತವೆ. ಸಂತೋಷದ ಸಂಭ್ರಮಾಚರಣೆ ಸಾತ್ವಿಕವಾಗಿ ನೆರವೇರಿದಾಗ ಅದು ಒಳಿತಿನ ಫಲವನ್ನೇ ಕೊಡುತ್ತದೆ. ❖

'ದಾರಿ ಯಾವುದಯ್ಯಾ ಶ್ವಾಸಕೋಶಕ್ಕೆ...'

ಡಾ. ಕುಶ್ವಂತ್ ಕೋಳಿಬೈಲು

ವೈದ್ಯಕೀಯ ತಂತ್ರಜ್ಞಾನ ಮುಂದುವರಿದಂತೆ ಹೆಚ್ಚಿನ ಕಾಯಿಲೆಗಳಿಗೆ ಜೀವಕೋಶದ ಮಟ್ಟದಲ್ಲಿರುವ ಸೂಕ್ಷ್ಮ ಕಾರಣಗಳು ಮುನ್ನೆಲೆಗೆ ಬಂದವು. ಕೆಲವು ರೋಗಗಳು ಆಯಾ ಅಂಗಾಂಗಗಳಿಗೆ ಸೀಮಿತವಾಗುತ್ತಾ ಹೋದಂತೆ ಆಯಾ ಅಂಗಾಂಗಗಳ ಸಮಸ್ಯೆಗಳನ್ನು ಮಾತ್ರ ಪತ್ತೆ ಹಚ್ಚಿ ಚಿಕಿತ್ಸೆ ನೀಡುವ ವಿಶೇಷ ಪರಿಣತಿಯಿರುವ ತಜ್ಞವೈದ್ಯರೂ ಮುನ್ನೆಲೆಗೆ ಬಂದರು. ದೇಹದ ಒಂದು ಅಂಗಾಂಗದಲ್ಲಿರುವ ರೋಗವನ್ನು ನಿವಾರಿಸಲು ಇಡೀ ದೇಹಕ್ಕೆ ಔಷಧಿಯನ್ನು ಕೊಡುವುದು ಸಮಂಜಸವಲ್ಲವೆಂಬ ವಾದವೂ ಪ್ರಾಮುಖ್ಯ ಪಡೆಯಿತು. ಇಡೀ ದೇಹದೊಳಗೆ ಔಷಧಿಯು ಕೆಲಸ ಮಾಡಬೇಕೆಂದಿದ್ದಲ್ಲಿ ಮಾತ್ರ ಔಷಧಿಯನ್ನು ಮಾತ್ರೆ ಅಥವಾ ಚುಚ್ಚುಮದ್ದಿನ ರೂಪದಲ್ಲಿ ನೀಡಬೇಕಾಗುತ್ತದೆ. ಇಲ್ಲವಾದಲ್ಲಿ ಆ ಔಷಧಿಯು ಆರೋಗ್ಯವಂತ ಅಂಗಾಂಗಗಳ ಮೇಲೆ ಅನಗತ್ಯವಾದ ಅಡ್ಡ ಪರಿಣಾಮಗಳನ್ನು ಬೀರುವುದನ್ನು ಕಡಿಮೆ ಮಾಡಬೇಕೆನ್ನುವ ಕಾರಣಕ್ಕೆ ಕಣ್ಣಿನ ರೋಗಗಳಿಗೆ ಡ್ರಾಪ್ಸ್, ಚರ್ಮದ ಕಾಯಿಲೆಗಳಿಗೆ ಮುಲಾಮುಗಳನ್ನು ನೀಡುವುದನ್ನು ವೈದ್ಯರು ಪ್ರಾರಂಭಿಸಿದರು.

ಆದರೆ ಕೆಲವೊಂದು ಕಾಯಿಲೆಗಳ ಚಿಕಿತ್ಸಾ ವಿಧಾನದ ಬಗ್ಗೆ ಭಾರತದಲ್ಲಿ ಅರಿವಿನ ಕೊರತೆಯಿರುವ ಕಾರಣದಿಂದ ರೋಗಿಗಳನ್ನು ಕಳಂಕಿತರಂತೆ ಕೀಳಾಗಿ ಕಾಣುತ್ತಾರೆ. ಅಜ್ಞಾನದ ಕಾರಣದಿಂದಾಗಿ ತಪ್ಪು ಮಾಹಿತಿ ಕಾಡ್ಗಿಚ್ಚಿನಂತೆ ಹಬ್ಬಿ ಸತ್ಯಾಂಶವನ್ನು ಸ್ವೀಕರಿಸಲು ವಿದ್ಯಾವಂತರೂ ಹಿಂದೇಟು ಹಾಕುತ್ತಾರೆ. ಶ್ವಾಸಕೋಶದಲ್ಲಿನ ಅಲರ್ಜಿಯಿಂದಾಗಿ 'ವೀಝಿಂಗ್' ಸಮಸ್ಯೆಯಿಂದ ಬಳಲುವ ಲಕ್ಷಾಂತರ ಮಕ್ಕಳು ನಮ್ಮ ದೇಶದಲ್ಲಿದ್ದಾರೆ. ಬಾಲ್ಯದಲ್ಲಿ ಈ ಆಸ್ತಮಾ ಕಾಯಿಲೆಯಿಂದ ಬಳಲುವ ಹೆಚ್ಚಿನ ಮಕ್ಕಳು ತಾವು ಪ್ರೌಢಾವಸ್ಥೆಗೆ ಬರುತ್ತಿದ್ದಂತೆ ರೋಗಮುಕ್ತರಾಗುತ್ತಾರೆ. ಮಕ್ಕಳ ದೇಹ ಬೆಳೆದಂತೆ ಅವರ ಶ್ವಾಸಕೋಶದ ನಾಳಗಳು ವಿಸ್ತಾರ ಮತ್ತು ಬಲಿಷ್ಠವಾಗುವ ಕಾರಣದಿಂದಾಗಿ ಅವರ ವೀಝಿಂಗ್ ಸಮಸ್ಯೆಗಳು ಕಡಿಮೆಯಾಗುತ್ತವೆ. ಈ ಶ್ವಾಸಕೋಶದ ಸ್ಥಳೀಯ ಸಮಸ್ಯೆಗಳಿಗೆ 'ಇನ್ಹೇಲರ್' ಮೂಲಕ ಔಷಧಿಯನ್ನು ನೇರವಾಗಿ ಶ್ವಾಸಕೋಶಕ್ಕೆ ತಲುಪುವಂತೆ ಮಾಡುವುದೇ ಸರಿಯಾದ ವಿಧಾನವೆಂಬ ವಿಚಾರವನ್ನು ವೈದ್ಯಕೀಯ ವಿಜ್ಞಾನವು ಒಪ್ಪಿಕೊಂಡಿದೆ. 'ಸರ್ಜಿಕಲ್ ಸ್ಟ್ರೈಕ್' ಮಾದರಿಯಲ್ಲಿ ನಿಖರವಾಗಿ ರೋಗಗ್ರಸ್ತ ಅಂಗಾಂಗದ ಮೇಲೆ ಮಾತ್ರ ಕಾರ್ಯಾಚರಣೆ ನಡೆಸುವುದು ಇಡೀ ದೇಹದ ಮೇಲೆ ಯುದ್ಧ ಸಾರುವುದಕ್ಕಿಂತ ಉತ್ತಮವೆಂಬುದಕ್ಕೆ ಪುರಾವೆಗಳಿವೆ. ಹೀಗಿದ್ದರೂ ಭಾರತದಲ್ಲಿ ಇನ್ಹೇಲರ್ ಬಗ್ಗೆ ಪ್ರಸ್ತಾಪಿಸಿದ ತಕ್ಷಣ ಹೆತ್ತವರು ಬೆವರಲಾರಂಭಿಸುತ್ತಾರೆ. ಇನ್ಹೇಲರ್ ಒಮ್ಮೆ ಬಳಸಲು ಆರಂಭಿಸಿದರೆ ಮಕ್ಕಳು ಅದನ್ನು ಜೀವನಪರ್ಯಂತ ಬಳಸುವ ಚಟಕ್ಕೆ ತುತ್ತಾಗುತ್ತಾರೆ ಎಂದು ವಿನಾ ಕಾರಣ ಆತಂಕ ಪಡುತ್ತಾರೆ. ನಮ್ಮ ಜನಪ್ರಿಯ ಮನೋರಂಜನಾ ಮಾಧ್ಯಮಗಳೂ ಕೈಯಲ್ಲಿ ಇನ್ಹೇಲರ್ ಹಿಡಿದಿರುವವರನ್ನು ಶಾಶ್ವತ ರೋಗಿಗಳಂತೆ ಬಿಂಬಿಸುತ್ತಾ ಬಂದಿವೆ. ಇಂಥ ಕಾರಣಗಳಿಂದಾಗಿ ಜನರು ಕಾಯಿಲೆಗಿಂತ ಚಿಕಿತ್ಸಾ ವಿಧಾನದ ಬಗ್ಗೆ ಭಯಪಡುವಂತಾಗಿದೆ.

ಆಸ್ತಮಾ ಮಾದರಿಯ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಶ್ವಾಸಕೋಶದ ನಾಳಗಳನ್ನು ಸಡಿಲಗೊಳಿಸುವ ಔಷಧಿ ಮತ್ತು ಅಲರ್ಜಿಯನ್ನು ಕಡಿಮೆ ಮಾಡಬಲ್ಲ ಸ್ಟಿರಾಯ್ಡ್ ಔಷಧಿಗಳನ್ನು ಬಳಸುತ್ತೇವೆ. ಈ ಔಷಧಿಗಳನ್ನು ಮಾತ್ರೆ, ದ್ರಾವಣ ಅಥವಾ ಚುಚ್ಚುಮದ್ದಿನ ರೂಪದಲ್ಲಿ ಸ್ವೀಕರಿಸಿದರೆ ಅದು ದೇಹದ ಎಲ್ಲಾ ಅಂಗಾಂಗಗಳ ಮೇಲೆ ತನ್ನ ಪರಿಣಾಮವನ್ನು ಬೀರುತ್ತದೆ. ಈ ಔಷಧಿಗಳಿಂದ ಹೃದಯದ ಬಡಿತವು ಹೆಚ್ಚಾಗುವುದರಿಂದ ಹಿಡಿದು ಸ್ಟಿರಾಯ್ಡ್ ಮಾದರಿಯ ಔಷಧಿಗಳನ್ನು ಮಾತ್ರೆ ಅಥವಾ ಚುಚ್ಚುಮದ್ದಿನ ರೂಪದಲ್ಲಿ ದೀರ್ಘಕಾಲ ಸೇವಿಸಿದಲ್ಲಿ ದೇಹದ ಪ್ರತಿಯೊಂದು ಅಂಗಾಂಗಗಳಿಗೂ ಇವು ಹಾನಿಯನ್ನು ಉಂಟುಮಾಡುತ್ತವೆ. ಇನ್ಹೇಲರ್ ಮೂಲಕ ತೆಗೆದುಕೊಳ್ಳುವ ಔಷಧಿಗಳು ಮಾತ್ರ ನೇರ ಶ್ವಾಸಕೋಶದೊಳಗೆ ಮಾತ್ರ ಪರಿಣಾಮ ಬೀರುವುದರಿಂದ ಅದು ದೇಹದ ಇತರ ಅಂಗಾಂಗಗಳಿಗೆ ಯಾವುದೇ ಸಮಸ್ಯೆಯನ್ನು ಮಾಡುವುದಿಲ್ಲ. ಇದೇ ಔಷಧಿಯನ್ನು 'ನೆಬ್ಯುಲೈಸರ್' ಯಂತ್ರದೊಳಗಡೆ ಹಾಕಿ ಮಕ್ಕಳು ತೆಗೆದುಕೊಳ್ಳುವುದು ಹೆತ್ತವರಿಗೆ ಇನ್ಹೇಲರ್ ಕ್ರಮಕ್ಕಿಂತ ಹೆಚ್ಚು ಒಪ್ಪಿಗೆಯಿದೆ. ಆದರೆ ನೆಬ್ಯುಲೈಸರ್ ಮಾದರಿಯಲ್ಲಿ ಈ ಔಷಧಿಗಳು ಶ್ವಾಸಕೋಶವನ್ನು ತಲುಪುವುದಕ್ಕಿಂತ ಹೆಚ್ಚು ವಾತಾವರಣದಲ್ಲಿ ಸೋರಿಕೆಯಾಗುವ ಸಾಧ್ಯತೆಯಿರುತ್ತದೆ. ಸರಿಯಾದ ರೀತಿಯಲ್ಲಿ ಇನ್ಹೇಲರ್ ಮೂಲಕ ಔಷಧಿಯನ್ನು ತೆಗೆದುಕೊಂಡಲ್ಲಿ ಪೂರ್ಣಪ್ರಮಾಣದ ಔಷಧಿಯು ನೇರವಾಗಿ ಶ್ವಾಸಕೋಶವನ್ನು ತಲುಪುತ್ತದೆ.



ತಮ್ಮ ಮಗುವಿನ ಕೈಯಲ್ಲಿ ಇನ್ಹೇಲರ್ ಇರುವುದನ್ನು ಹೆತ್ತವರು ಮಾನಸಿಕವಾಗಿ ಸ್ವೀಕರಿಸಲು ತಯಾರಿರುವುದಿಲ್ಲ. ಹೀಗಾಗಿ ಮಕ್ಕಳು ಸೂಕ್ತ ಚಿಕಿತ್ಸೆಯಿಲ್ಲದೆ ಬಳಲುತ್ತಾರೆ. ಮನೆಯಲ್ಲಿ 'ಕಾಫ್ ಸಿರಫ್'ಅನ್ನು ಶೇಖರಿಸಿಟ್ಟುಕೊಂಡು ಆಸ್ತಮಾದಿಂದ ಉಂಟಾಗಿರುವ ಕೆಮ್ಮನ್ನು ಬಗ್ಗಿಸುವ ವಿಫಲ ಯತ್ನವನ್ನು ಮಾಡುತ್ತಾರೆ. ಇನ್ಹೇಲರ್ ಮೂಲಕ ಚಿಕಿತ್ಸೆ ಪಡೆದಲ್ಲಿ ಮಾತ್ರ ಇಂತಹ ಮಕ್ಕಳು ರಾತ್ರಿ ಉಸಿರಾಟದ ಸಮಸ್ಯೆಯಿಲ್ಲದೆ ನೆಮ್ಮದಿಯಾಗಿ ನಿದ್ದೆ ಮಾಡುತ್ತಾರೆ. ಅಂತಹ ಮಕ್ಕಳು ಮರುದಿನ ಶಾಲೆಯಲ್ಲೂ ಕ್ರಿಯಾಶೀಲರಾಗಿರುತ್ತಾರೆ. ಉಸಿರಾಟದ ಸಮಸ್ಯೆ ಉಲ್ಬಣವಾದಲ್ಲಿ ತಕ್ಷಣಕ್ಕೆ ಬಳಸಲು ನೆರವಾಗುವ ಇನ್ಹೇಲರ್ ಜೊತೆಯಲ್ಲಿದ್ದಲ್ಲಿ ಅಂತಹ ಮಕ್ಕಳು ಆಟದ ಮೈದಾನದಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳುವಂತಾಗುತ್ತದೆ. ಈ ಮೂಲಕ ಅವರ ಸರ್ವಾಂಗೀಣ ವ್ಯಕ್ತಿತ್ವದ ನಿರ್ಮಾಣವಾಗುತ್ತದೆ. ಶಾಲೆಗಳಲ್ಲಿಯೂ ಇನ್ಹೇಲರ್ ಬಳಸುವ ಮಕ್ಕಳನ್ನು ತಾರತಮ್ಯವಿಲ್ಲದೆ ನಡೆಸಿಕೊಳ್ಳುವ ಪದ್ಧತಿ ಹೆಚ್ಚಾಗಬೇಕು. ಆಗ ಅಂತಹ ಮಕ್ಕಳ ಆತ್ಮವಿಶ್ವಾಸಕ್ಕೂ ಧಕ್ಕೆ ಬರುವುದಿಲ್ಲ.

ಔಷಧಿಯನ್ನು ಯಾವ ರೂಪದಲ್ಲಿ ಯಾವ ಅಂಗಾಂಗಕ್ಕೆ ಎಷ್ಟು ಪ್ರಮಾಣದಲ್ಲಿ ತಲುಪಿಸಬೇಕೆನ್ನುವುದು ತೀರಾ ತಾಂತ್ರಿಕವಾದ ವಿಚಾರ. ವೈದ್ಯಕೀಯ ವಿಜ್ಞಾನ ಮುಂದುವರಿದಂತೆ ಈಗ ಹೆಚ್ಚಿನ ಶಸ್ತ್ರಚಿಕಿತ್ಸೆಗಳನ್ನು ಮಾಡುವಾಗ ಶಸ್ತ್ರಚಿಕಿತ್ಸೆ ನಡೆಯುವ ಆಯಾ ಸ್ಥಳೀಯ ಅಂಗಾಂಗದ ಮೇಲೆ ಮಾತ್ರ ಪರಿಣಾಮ ಬೀರಬಲ್ಲ ಸ್ಥಳೀಯ ಅರವಳಿಕೆ ಔಷಧಿಗಳು ಬಂದಿವೆ. ಮಾತ್ರೆಯ ಮೂಲಕ ತೆಗೆದುಕೊಂಡಲ್ಲಿಯೂ ಚುಚ್ಚುಮದ್ದಿನಷ್ಟೇ ಸಮರ್ಥವಾಗಿ ಮತ್ತು ಕಡಿಮೆ ಅಪಾಯದೊಂದಿಗೆ ಕೆಲಸ ಮಾಡುವ ಔಷಧಿಗಳಿದ್ದರೂ ಗ್ರಾಮೀಣ ಭಾರತದಲ್ಲಿ ವೈದ್ಯರನ್ನು ಚುಚ್ಚುಮದ್ದಿಗಾಗಿ ಪೀಡಿಸುವ ರೋಗಿಗಳೂ ಇದ್ದಾರೆ. ಶ್ವಾಸಕೋಶದ ವೀಝಿಂಗ್ ಮತ್ತು ಆಸ್ತಮಾ ಸಮಸ್ಯೆಗಳಿಗೆ ಇನ್ಹೇಲರ್ ಮೂಲಕ ನೇರವಾಗಿ ಶ್ವಾಸಕೋಶಕ್ಕೆ ಔಷಧಿಯನ್ನು ತಲುಪಿಸದೆ ಸಿರಪ್ ಮತ್ತು ಚುಚ್ಚುಮದ್ದಿನ ಮೊರೆಹೋಗುವುದು ಕೊಂಕಣ ಸುತ್ತಿ ಮೈಲಾರಕ್ಕೆ ಬರುವ ಹಾಗೆ.

ಒಂದು ಊರನ್ನು ತಲುಪಲು ನೂರು ದಾರಿಗಳಿರಬಹುದು. ಆದರೆ ಅಡ್ಡದಾರಿ ಹಿಡಿದರೆ ಅಪಾಯ ಜಾಸ್ತಿ. ಹಾಗೆಯೇ ಒಂದು ಔಷಧಿಯನ್ನು ರೋಗನಿವಾರಣೆಗಾಗಿ ದೇಹದ ಅಂಗಾಂಗಕ್ಕೆ ತಲುಪಿಸಲು ವೈದ್ಯರು ಸೂಚಿಸಿದ ಅತ್ಯಂತ ಸಮರ್ಪಕವಾದ ದಾರಿಯಲ್ಲಿ ಹೆಜ್ಜೆ ಹಾಕಿದರೆ ಮಾತ್ರ ಪರಿಣಾಮ ಜಾಸ್ತಿ. ಆಗ ಅಡ್ಡಪರಿಣಾಮಗಳಿಗೆ ಅವಕಾಶವೂ ಕಡಿಮೆಯಾಗುತ್ತದೆ. ❖

ಲೈಂಗಿಕ ದೌರ್ಜನ್ಯ: ಧರ್ಮಾತೀತ ಹೋರಾಟ ಅಗತ್ಯ

ಬೆಂಗಳೂರು: ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ ಆರೋಪ ಎದುರಿಸುತ್ತಿರುವ ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಈಗ ಬಂಧನದಲ್ಲಿದ್ದಾರೆ. ದೇಶದ ಗಮನಸೆಳೆದ ಈ ಪ್ರಕರಣ ವಿವಿಧ ಕಾರಣಗಳಿಗೆ ಚರ್ಚೆಗೂ ಗ್ರಾಸವಾಗಿದೆ. ಈ ಪ್ರಕರಣದ ಹಿನ್ನೆಲೆಯಲ್ಲಿ 'ಅತ್ಯಾಚಾರ, ಲೈಂಗಿಕ ದೌರ್ಜನ್ಯ: ಎಲ್ಲಿದೆಯೋ ನ್ಯಾಯ?' ಎನ್ನುವ ಕುರಿತು 'ಪ್ರಜಾವಾಣಿ' ಸೋಮವಾರ ಆಯೋಜಿಸಿದ್ದ ಸಂವಾದದಲ್ಲಿ ಅತಿಥಿಗಳು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.

'ಮೌನ ಅಪಾಯಕಾರಿ'

ಭಾರತದಲ್ಲಿ ಇಂದಿಗೂ ಜಾತಿ, ಧರ್ಮ ಆಧರಿಸಿಯೇ ನ್ಯಾಯ ವ್ಯವಸ್ಥೆ ಇದೆ. ರಾಷ್ಟ್ರೀಯ ಶ್ರೇಣಿಕ ಪ್ರಕರಣಗಳನ್ನು ಈ ಸಂದರ್ಭದಲ್ಲಿ ಗಮನಿಸಬೇಕು. 10ಕ್ಕೂ ಹೆಚ್ಚು ನ್ಯಾಯಮೂರ್ತಿಗಳು ಪ್ರಕರಣದ ವಿಚಾರಣೆಯಿಂದ ಹಿಂದೆ ಸರಿದರು. ಇವತ್ತಿಗೂ ನ್ಯಾಯ ದೊರೆತಿಲ್ಲ. ಪ್ರಭುತ್ವ ಮನಸ್ಸು ಮಾಡಿದ್ದರೆ ನ್ಯಾಯ ಕೊಡಿಸಲು ಸಾಧ್ಯವಿದೆ. ಆದರೆ, ರಾಜಕೀಯ ಪ್ರಜ್ಞೆ ಶೇ 40 ಅಥವಾ 100ಕ್ಕೆ ಮಾರಾಟವಾಗುವುದಾದರೆ ಯಾವ ರೀತಿಯ ನಿರೀಕ್ಷೆ ಮಾಡಲು ಸಾಧ್ಯ? ರಾಜಕೀಯ ಪ್ರಜ್ಞೆ ಇಲ್ಲದ ಹೋದರೆ ಇಂತಹ ಪ್ರಕರಣಗಳಲ್ಲಿ ನಾವು ಮೌನ ವಹಿಸುತ್ತೇವೆ. ಸಜ್ಜನರ ಮಹಾಮೌನ ಹೆಚ್ಚು ಅಪಾಯಕಾರಿ. ಶಿವಮೂರ್ತಿ ಮುರುಘಾ ಶರಣರ ಪ್ರಕರಣದಲ್ಲಿ ಮೌನ ವಹಿಸಿರುವ ಪಟ್ಟಿ ಮಾಡಿದಾಗ ಮೌನದ ಹಿಂದಿನ ಕಾರಣಗಳನ್ನು ಗುರುತಿಸುತ್ತೇವೆ. ಪ್ರಜ್ಞಾವಂತ ಲಿಂಗಾಯತ ಸಮುದಾಯವು ಇಂತಹ ಪ್ರಕರಣದಲ್ಲಿ ಎದ್ದು ಬರಬೇಕಿತ್ತು. ಆದರೆ, ಈ ಸಮುದಾಯ ಮೌನವಹಿಸಿತು. ಇಂತಹ ಎಲ್ಲ ಪ್ರಕರಣಗಳನ್ನು ಮುಚ್ಚಿ ಹಾಕುವ ಪ್ರಯತ್ನಗಳು ನಡೆಯುವುದರಿಂದ ಜನ ಚಳವಳಿ ನಡೆಯುವುದು ಅಗತ್ಯವಿದೆ.

– **ಕೆ. ನೀಲಾ,** ಲೇಖಕಿ, ಸಾಮಾಜಿಕ ಕಾರ್ಯಕರ್ತೆ, ಕಲಬುರಗಿ

'ಜಾತಿ ಆಧಾರದ ಮೇಲೆ ಆರೋಪಿ ರಕ್ಷಣೆ ಸಲ್ಲದು'

ಮಹಿಳೆಯರಿಗೆ ಮತ್ತು ಮಕ್ಕಳಿಗೆ ಘನತೆಯ ಬದುಕು ಕಲ್ಪಿಸಬೇಕಾಗಿದೆ. ಯಾವುದು ಧರ್ಮ ಎನ್ನುವುದು ತಿಳಿಸಬೇಕಾಗಿದೆ. ನ್ಯಾಯಾಲಯವು ಬೀದಿ ಹೋರಾಟಗಳನ್ನು ಪರಿಗಣಿಸುವುದಿಲ್ಲ. ಸಾಕ್ಷ್ಯಾಧಾರಗಳು ಮುಖ್ಯ. ಲಕ್ಷಾಂತರ ಜನರನ್ನು ಸೇರಿಸಿ ಹೋರಾಟ ಮಾಡಿದರೆ ಜಾಗೃತಿ ಮೂಡಬಹುದು. ಹೀಗಾಗಿ, ಎಲ್ಲರೂ ಒಮ್ಮತದಿಂದ ಕೆಲಸ ಮಾಡಬೇಕು. ನಮ್ಮನ್ನು ಬೆಂಬಲಿಸಿ ಬರುತ್ತಿರುವ ಕರೆಗಳ ಪೈಕಿ ಶೇ 80ರಷ್ಟು ಒಂದು ಸಮುದಾಯಕ್ಕೆ ಸೇರಿದ್ದಾಗಿವೆ. ಲಿಂಗಾಯತ ಧರ್ಮಕ್ಕೆ ಸೇರಿದವರು ನಮ್ಮ ಪರವಾಗಿ ನಿಂತಿದ್ದಾರೆ. ಇಲ್ಲಿ ಧರ್ಮ, ಜಾತಿ ಬಗ್ಗೆ ಮಾತನಾಡುವುದು ಸರಿ ಅಲ್ಲ. ಈ ಪ್ರಕರಣದಲ್ಲಿ ಮಠದ ಆಡಳಿತ ಪುರುಷ ಪ್ರಧಾನ ಪರಿಕಲ್ಪನೆ ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ, ಈ ಪ್ರಕರಣದ ಮೂಲಕ ವ್ಯವಸ್ಥೆಯ ಮತ್ತು ನಮ್ಮ ಪರೀಕ್ಷೆಯೂ ನಡೆಯುತ್ತಿದೆ. ಕ್ರೌರ್ಯ ನಡೆದಾಗ ಆರೋಪಿಯ ಜಾತಿ, ಧರ್ಮದ ಮೂಲ ಹುಡುಕುವ ಪರಿಸ್ಥಿತಿ ಇದೆ. ಆರೋಪಿಯನ್ನು ಆರೋಪಿಯನ್ನಾಗಿಯೇ ಮಾತ್ರ ನೋಡಬೇಕು. ಸ್ವಾಮೀಜಿಗಳು, ಪಾದ್ರಿಗಳು, ಮುಲ್ಲಾಗಳು ಅಪರಾಧ ಎಸಗಿದರೆ ಅವರಿಗೆ ರಕ್ಷಣೆ ನೀಡುವುದು ಸರಿಯೇ? ಸಂವಿಧಾನ, ಕಾನೂನಿಗಿಂತ ಯಾರೂ ದೊಡ್ಡವರಲ್ಲ.

– **ಸ್ಟ್ಯಾನ್ಲಿ,** ಸಹ ಸಂಸ್ಥಾಪಕ, ಒಡನಾಡಿ, ಮೈಸೂರು

ಪ್ರಜಾವಾಣಿ ಸಂವಾದ

'ನ್ಯಾಯ ಪ್ರಜ್ಞೆ ಜಾಗೃತಿಗೊಳಿಸಬೇಕು'

ಸಮಾಜದಲ್ಲಿ ನ್ಯಾಯಪ್ರಜ್ಞೆ ಜಾಗೃತಗೊಳಿಸುವುದು ಇಂದಿನ ತುರ್ತು ಅಗತ್ಯ. ಹಲವಾರು ರಾಜಕೀಯ ಪಕ್ಷಗಳ ಅಧಿಕಾರಾವಧಿಯಲ್ಲೂ ಅನೇಕ ಪ್ರಕರಣಗಳು ನಡೆದಿವೆ. ಯಾವುದೇ ರಾಜಕೀಯ ಪಕ್ಷ ಅಸಮಾನತೆ, ಲಿಂಗ ದೌರ್ಜನ್ಯವನ್ನು ಎತ್ತಿಹಿಡಿಯುವ ಸಿದ್ಧಾಂತ ಹೊಂದಿದ್ದರೆ ಅದನ್ನು ಅನುಮೋದಿಸಬಾರದು. ಮಹಿಳಾ ವಿರೋಧಿಗಳನ್ನು ಆಯ್ಕೆ ಮಾಡಿಕೊಳ್ಳಬಾರದು ಎನ್ನುವ ನಿಲುವು ಹೊಂದಬೇಕು. ಮಹಿಳಾ ವಿರೋಧಿಗಳನ್ನು ತಿರಸ್ಕರಿಸುತ್ತೇವೆ ಎನ್ನುವ ನಿರ್ಧಾರ ಕೈಗೊಳ್ಳಬೇಕು. ಜತೆಗೆ, ಶಾಂತಿ ಕಾಲದಲ್ಲೂ ಮಹಿಳಾ ಪರ ಕಾರ್ಯಗಳನ್ನು ಯುದ್ಧೋಪಾದಿಯಲ್ಲಿ ಕೆಲಸ ಮಾಡಬೇಕು. ಕೇವಲ ಒಂದು ಘಟನೆ ನಡೆದಾಗ ಮಾತ್ರ ಎಚ್ಚೆತ್ತುಕೊಳ್ಳಬಾರದು. ಜಿಲ್ಲಾಮಟ್ಟದಲ್ಲಿ ಲೈಂಗಿಕ ದೌರ್ಜನ್ಯ ತಡೆ ಘಟಕಗಳನ್ನು ಇಂದಿಗೂ ಸ್ಥಾಪಿಸಿಲ್ಲ. ಜವಾಬ್ದಾರಿ ಸ್ಥಾನದಲ್ಲಿರುವ ಬೇಜವಾಬ್ದಾರಿ ಹೇಳಿಕೆಗಳನ್ನು ನೀಡುವುದು ದೌರ್ಜನ್ಯಕ್ಕೂ ಪೂರಕವಾಗಲಿದೆ. ದೌರ್ಜನ್ಯಕ್ಕೆ ಒಳಗಾದವರಿಗೆ ನ್ಯಾಯ ದೊರಕಿಸಿಕೊಡಲು ಕಾನೂನಿನ ಹೋರಾಟಕ್ಕೂ ಸಜ್ಜಾಗಬೇಕು.

– **ಮಲ್ಲಿಗೆ ಸಿರಿಮನೆ,** ಸಂಚಾಲಕಿ, ಕರ್ನಾಟಕ ಜನಶಕ್ತಿ, ಮಂಡ್ಯ

'ಪ್ರಗತಿಪರ ಎನ್ನುವುದು ಸಮಜಾಯಿಷಿಯಾಗಬಾರದು'

ಪ್ರಗತಿಪರ ಚಿಂತನೆಗಳನ್ನು ಹೊಂದಿದ್ದರು ಮತ್ತು ಜಾತಿ ವ್ಯವಸ್ಥೆಯ ವಿರೋಧಿಯಾಗಿದ್ದರು ಎನ್ನುವುದು ಸಮಜಾಯಿಷಿಯಾಗಬಾರದು. ವಿಕೃತ ಮನಸ್ಸಿನ ವ್ಯಕ್ತಿ ದೌರ್ಜನ್ಯಗಳನ್ನು ನಡೆಸಿದಾಗ ಕಾನೂನಿನ ಪ್ರಕಾರ ಶಿಕ್ಷೆಯಾಗಬೇಕು. ಮುಖ್ಯವಾಗಿ ಅಸಹಜತೆ ಬಿಟ್ಟು ಸಹಜ ಮನುಷ್ಯರಾಗಬೇಕು. ಇತರರಿಗೆ ಕೇಡು ಬಯಸದ ಮನುಷ್ಯತ್ವಕ್ಕೆ ನಾವು ಒಳ್ಳೆಯವರಾಗಬೇಕು. ಕಲ್ಪಿತ ಸನ್ಯಾಸತ್ವ ಅಥವಾ ಬ್ರಹ್ಮಚರ್ಯ ಶ್ರೇಷ್ಠ ಎನ್ನುವ ಮೂಲಕ ಸಾಮಾಜಿಕ ವಿಕೃತಿಗಳನ್ನು ಮಾಡುವುದೇ ಅಪರಾಧ. ರಾಜಕೀಯ ಪಕ್ಷವಾಗಿ ಬಿಜೆಪಿ ಮನುವಾದವನ್ನು ತನ್ನ ಸಿದ್ಧಾಂತವಾಗಿ ಪ್ರಸ್ತುತಪಡಿಸುತ್ತಿದೆ. ಮನುವಾದ ಪರ ವಿಚಾರಧಾರೆ ಹೇಳಿಕೆ ನೀಡುವುದೇ ಸಂವಿಧಾನಕ್ಕೆ ವಿರುದ್ಧ ನಿಲುವು. ಕಾಂಗ್ರೆಸ್‌ನಲ್ಲೂ ಹಿಂದುತ್ವವಾದಿಗಳಿದ್ದಾರೆ, ಪುರುಷ ಪ್ರಧಾನ ಮನಸ್ಥಿತಿ ಇರುವವರು ಇದ್ದಾರೆ. ಆದರೆ, ಪಕ್ಷದ ಸಿದ್ಧಾಂತ ವಿಭಿನ್ನ ನಿಲುವು ತಳೆಯುತ್ತದೆ. ಆದ್ದರಿಂದ, ಜನರಲ್ಲಿ ಸಂವಿಧಾನ ಪ್ರಜ್ಞೆ, ಲಿಂಗ ಪ್ರಜ್ಞೆ ಮೂಡಿಸುವುದು ಅಗತ್ಯವಿದೆ.

ವಿ.ಕೆ. ಸಂಜ್ಯೋತಿ, ಚಿತ್ರ ನಿರ್ದೇಶಕಿ, ಬೆಂಗಳೂರು

ಪೂರ್ಣ ಸಂವಾದ ವೀಕ್ಷಿಸಲು: https://youtu.be/mjq4e9xMGic,
https://www.facebook.com/prajavani.net/videos



ನೋಂದಣಿ–ಮುದ್ರಾಂಕ ಆದಾಯ ಏರಿಕೆ
5 ತಿಂಗಳಲ್ಲಿ ₹6,764 ಕೋಟಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಸಾಲಿನಲ್ಲಿ (2022–23) ನೋಂದಣಿ ಮತ್ತು ಮುದ್ರಾಂಕ ಶುಲ್ಕದ ಆದಾಯ ಸಂಗ್ರಹದಲ್ಲಿ ಭಾರಿ ಏರಿಕೆ ಆಗಿದ್ದು, ಏಪ್ರಿಲ್‌ನಿಂದ ಸೆಪ್ಟೆಂಬರ್ 4 ರವರೆಗೆ ಒಟ್ಟು 11,08,129 ದಾಖಲೆ ಪತ್ರಗಳು ನೋಂದಣಿ ಆಗಿದ್ದು, ಇದರಿಂದ ₹6,764 ಕೋಟಿ ಆದಾಯ ಸಂಗ್ರಹವಾಗಿದೆ ಎಂದು ಕಂದಾಯ ಸಚಿವ ಆರ್‌.ಅಶೋಕ ಹೇಳಿದರು.

ಸುದ್ದಿಗಾರರಿಗೆ ಸೋಮವಾರ ಈ ವಿಷಯ ತಿಳಿಸಿದ ಅವರು, ಐದು ತಿಂಗಳ ಅವಧಿಗೆ ₹5,647.68 ಕೋಟಿ ಆದಾಯ ಸಂಗ್ರಹದ ಗುರಿ ನಿಗದಿ ಮಾಡಲಾಗಿತ್ತು. ಆದರೆ, ಗುರಿ ಮೀರಿ ₹1,117.03 ಕೋಟಿ ಹೆಚ್ಚು ಆದಾಯ ಸಂಗ್ರಹವಾಗಿದೆ ಎಂದು ಹೇಳಿದರು.

ನೋಂದಣಿ ಮತ್ತು ಮುದ್ರಾಂಕ ಶುಲ್ಕದ ಮೇಲೆ ಶೇ 10 ರಷ್ಟು ರಿಯಾಯಿತಿ ಘೋಷಣೆ ಮಾಡಿದ್ದೇ ಆದಾಯ ಏರಿಕೆಗೆ ಕಾರಣ. ಶೇ 10 ರಷ್ಟು ರಿಯಾಯಿತಿಯನ್ನು ಇನ್ನೂ ಮೂರು ತಿಂಗಳ ಅವಧಿಗೆ ವಿಸ್ತರಿಸಲು ಉದ್ದೇಶಿಸಿದ್ದು, ಸದ್ಯವೇ ಆದೇಶ ಮಾಡಲಾಗುವುದು ಎಂದು ಅಶೋಕ ತಿಳಿಸಿದರು.

2020–21ರಲ್ಲಿ ಕೋವಿಡ್ ಕಾರಣದಿಂದ 2020 ರ ಮಾರ್ಚ್ 24 ರಿಂದ ಏಪ್ರಿಲ್ 24 ರವರೆಗೆ ಲಾಕ್‌ಡೌನ್ ನಿಮಿತ್ತ ಎಲ್ಲ ಉಪನೋಂದಣಾಧಿಕಾರಿಗಳ ಕಚೇರಿಗಳನ್ನು ಮುಚ್ಚಲಾಗಿತ್ತು. 2021–22 ರ ಸಾಲಿನಲ್ಲಿ 2021 ರ ಮೇ 10 ರಿಂದ ಜೂನ್ 7 ರವರೆಗೆ ಉಪನೋಂದಣಾಧಿಕಾರಿಗಳ ಕಚೇರಿಗಳನ್ನು ಮುಚ್ಚಲಾಗಿತ್ತು. ಇದರಿಂದಾಗಿ ನೋಂದಣಿ ಪ್ರಮಾಣ ಕಡಿಮೆ ಆಗಿತ್ತು ಎಂದರು.

ಜಿಲ್ಲಾ ನೋಂದಣಾಧಿಕಾರಿ ಮತ್ತು ಉಪನೋಂದಣಿ ಕಚೇರಿಗಳಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗುವುದು. 36 ಕಚೇರಿಗಳಲ್ಲಿ ಶೌಚಾಲಯ, 28 ಕಚೇರಿಗಳಲ್ಲಿ ಕುಡಿಯುವ ನೀರಿನ ಕೊರತೆ, 202 ಕಚೇರಿಗಳಲ್ಲಿ ಲಿಫ್ಟ್ ಕೊರತೆ, 135 ಕಚೇರಿಗಳಲ್ಲಿ ರ್‍ಯಾಂಪ್ ಕೊರತೆ, 2 ಕಚೇರಿಗಳಲ್ಲಿ ಸಾರ್ವಜನಿಕರಿಗೆ ಆಸನಗಳ ಕೊರತೆ, 58 ಕಚೇರಿಗಳಲ್ಲಿ ವಾಹನ ನಿಲುಗಡೆಗೆ ಸ್ಥಳಾವಕಾಶದ ಕೊರತೆ ಇದೆ. ಮೂರು ತಿಂಗಳೊಳಗೆ ಈ ಎಲ್ಲ ವ್ಯವಸ್ಥೆಗಳನ್ನೂ ಮಾಡಬೇಕು. ಇಲ್ಲವಾದರೆ ಜಿಲ್ಲಾ ನೋಂದಣಾಧಿಕಾರಿಗಳು ಮತ್ತು ಉಪನೋಂದಣಾಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಮುಂದಿನ ಅಧಿವೇಶನದಲ್ಲಿ ಭೂಪರಿವರ್ತನೆ ಸರಳೀಕರಣಗೊಳಿಸುವ ಮಸೂದೆ ಮಂಡಿಸಲಾಗುವುದು. ಇದರಿಂದ ಸಾರ್ವಜನಿಕರಿಗೆ ಅಲೆದಾಟ ಹಾಗೂ ಮಧ್ಯವರ್ತಿಗಳ ಕಾಟದಿಂದ ಮುಕ್ತಿ ಸಿಗಲಿದೆ ಎಂದೂ ತಿಳಿಸಿದೆ.

ಕಾಫಿ ಬೆಳೆಗಾರರಿಗೆ 30 ವರ್ಷಕ್ಕೆ ಭೂಮಿ ಲೀಸ್

ಹಾಸನ, ಚಿಕ್ಕಮಗಳೂರು ಸೇರಿದಂತೆ ಕಾಫಿ ಬೆಳೆಯುವ ಜಿಲ್ಲೆಗಳಲ್ಲಿ ಬೆಳೆಗಾರರು ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು ಕೃಷಿ ಮಾಡುತ್ತಿದ್ದಾರೆ. ಇದರಿಂದ ರೈತರು ಮತ್ತು ಅಧಿಕಾರಿಗಳ ಮಧ್ಯೆ ನಿರಂತರ ತಿಕ್ಕಾಟ ಮುಂದುವರಿದಿದೆ. ಇದರ ಪರಿಹಾರಕ್ಕಾಗಿ, ರೈತರಿಗೆ 30 ವರ್ಷಕ್ಕೆ ಲೀಸ್ ಆಧಾರದಲ್ಲಿ ಒತ್ತುವರಿ ಭೂಮಿ ನೀಡಲು ಇದೇ ತಿಂಗಳು ನಡೆಯುವ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಲಾಗುವುದು. ಇದರಿಂದ ರೈತರಿಗೂ ವಿವಿಧ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗಲಿದೆ. ಸರ್ಕಾರಕ್ಕೆ ಆದಾಯ ಬರಲಿದೆ ಎಂದರು.

ಯಾವ ವರ್ಷ ಎಷ್ಟು ಆದಾಯ

ವರ್ಷ	ದಾಖಲೆಗಳ ನೋಂದಣಿ	ಗುರಿ	ಆದಾಯ ಗಳಿಕೆ
2021–22	7,34,604	₹4,553.94	₹4,831.63
2022–23	11,08,129	₹5,647.68	₹6,764.71

₹15 ಲಕ್ಷ ಪಡೆದ ಬಿಜೆಪಿ ಶಾಸಕ?

ಒಂದನೇ ಪುಟದಿಂದ

ಇದಕ್ಕೆ ದಢೇಸಗೂರು, 'ಹೌದು, ನೀನು ದುಡ್ಡು ಕೊಟ್ಟಿದ್ದೀಯಾ, ವಾಪಸ್ ಕೊಡ್ತೀನಿ ಅಂತ ಹೇಳಿದ್ದೇನಲ್ಲ. ಯಾವ ಕೆಲಸಕ್ಕೆ ಹಣ ಕೊಟ್ಟಿದ್ದೀಯಾ? ಅದನ್ನು ಹೇಗೆ ಕೇಳಬೇಕು ಎನ್ನುವ ಸೌಜನ್ಯವಿಲ್ಲವಾ?' ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ದೊಡ್ಡನಗೌಡ ಪಾಟೀಲ ಹೆಸರೂ ಉಲ್ಲೇಖವಾಗಿದೆ.

ಇದಕ್ಕೆ ಪ್ರತಿಕ್ರಿಯಿಸಿರುವ ದೊಡ್ಡನಗೌಡ, 'ಪರಸಪ್ಪ ಯಾವ ಕೆಲಸಕ್ಕೆ ಹಣ ಕೊಟ್ಟಿದ್ದಾರೆ ಎಂಬುದು ಗೊತ್ತಿಲ್ಲ. ಹಣ ಹಿಂತಿರುಗಿಸಲು ಶಾಸಕರಿಗೆ ಹೇಳಿದ್ದೆ' ಎಂದಿದ್ದಾರೆ.

ಬಂಧನಕ್ಕೆ ಆಗ್ರಹ: 'ಶಾಸಕರನ್ನು ಬಂಧಿಸಬೇಕು. ನೌಕರಿ ಭರವಸೆ ನೀಡಿ ಎಷ್ಟು ಜನರಿಂದ ಹಣ ಪಡೆದಿದ್ದಾರೊ ಆ ಬಗ್ಗೆ ತನಿಖೆ ನಡೆಸಬೇಕು. ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಆರೋಪಿಯಾಗಿಸಬೇಕು' ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಶಿವರಾಜ ತಂಗಡಗಿ ಒತ್ತಾಯಿಸಿದ್ದಾರೆ.

ಹಣವನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆ ಎಂದು ದಢೇಸಗೂರು ಹೇಳುತ್ತಾರೆ. ಸರ್ಕಾರವೆಂದರೆ ಯಾರ ಕೈಯಲ್ಲಿ ಕೊಟ್ಟಿದ್ದಾರೆ. ಇದರ ಕುರಿತು ಸಂಪೂರ್ಣ ತನಿಖೆ ನಡೆಯಬೇಕು.

ಎಂ.ಬಿ.ಪಾಟೀಲ, ಅಧ್ಯಕ್ಷ, ಕೆಪಿಸಿಸಿ ಪ್ರಚಾರ ಸಮಿತಿ

ವಿರೋಧ ಪಕ್ಷದವರು ಆಡಿಯೊ, ವಿಡಿಯೊ ಮಾಡಿಸಿ ಷಡ್ಯಂತ್ರ ಮಾಡುತ್ತಿದ್ದಾರೆ. ಹಾಗೆಂದು ಶಾಸಕರ ವಿರುದ್ಧದ ಆರೋಪ ತಳ್ಳಿಹಾಕುವುದಿಲ್ಲ. ಪ್ರಕರಣದ ಬಗ್ಗೆ ತನಿಖೆಯಾಗಲಿ.

ಆನಂದ್ ಸಿಂಗ್, ಜಿಲ್ಲಾ ಉಸ್ತುವಾರಿ ಸಚಿವ

ಸಂಭಾಷಣೆ ಹೀಗಿದೆ...

ಪರಸಪ್ಪ ಬೇಗೂರು

ಪರಸಪ್ಪ: ಕೈ ಮುಗಿತೀನಿ ನನ್ನ ಹಣ ಕೊಡಿ ಸರ್.
ಶಾಸಕ: ನಾನು ಬೆಂಗಳೂರಿಗೆ ಬಂದಿದ್ದೇನೆ. ಜಿಲ್ಲಾಧ್ಯಕ್ಷ ದೊಡ್ಡನಗೌಡ ಹತ್ತಿರ ಮಾತನಾಡಿದ್ದೇನೆ.
ಪರಸಪ್ಪ: ಹೌದು ಸರ್, ದೊಡ್ಡನಗೌಡರು ನಮಗೆ ಬೇಕಾದವರು.
ಶಾಸಕ: ನನಗೆ ಯಾರಿಂದಲೂ ಹೇಳಿಸುವುದು, ಕೇಳಿಸುವುದು ಬೇಕಾಗಿಲ್ಲ. ದುಡ್ಡು ವಾಪಸ್ ಕೊಡುತ್ತೇನೆ.
ಪರಸಪ್ಪ: ಹಣ ಕೊಟ್ಟು ಒಂದೂವರೆ ವರ್ಷ ಆಯಿತು ಸರ್.
ಶಾಸಕ: ಹಣ ಪಡೆದಿದ್ದೇನೆ. ಸರ್ಕಾರಕ್ಕೆ ಕೊಟ್ಟ ಹಣಅದು. ಬೆಂಗಳೂರಿನಿಂದ ವಾಪಸ್ ಬಂದ ಮೇಲೆ ಕೊಡು ತ್ತೇನೆ.
ಪರಸಪ್ಪ: ಬೆಂಗಳೂರಿನಿಂದ ವಾಪಸ್ ಬಂದ ಮೇಲೆ ನಿಮ್ಮ ಬಳಿ ಬರುವೆ. ಹಣದ ತೊಂದರೆ ಬಹಳಷ್ಟಿದೆ.
ಶಾಸಕ: ಬಾರಪ್ಪ, ಅನುಮಾನ ಬೇಡ. ಖಂಡಿತಾ ಕೊಡುತ್ತೇನೆ. ನನಗೆ ಎಷ್ಟು ಕೋಟಿ ಕೊಟ್ಟಿದ್ದೀಯಪ್ಪ.
ಪರಸಪ್ಪ: ಸರ್, ₹15 ಲಕ್ಷ ಕೊಟ್ಟಿದ್ದೇನೆ.
ಶಾಸಕ: ನಿನಗೆ ಮಾನ ಮರ್ಯಾದೆ ಏನಾದರೂ ಇದೆಯಾ? ಯಾರ ಮುಂದೆ ಏನು ಮಾತನಾಡಬೇಕು ಎನ್ನುವ ಸೌಜನ್ಯ ಇದೆಯೊ ಇಲ್ಲವೊ?
ಪರಸಪ್ಪ: ಎಲ್ಲಾ ಹೇಳಿದ್ದೇವಲ್ಲ ಸರ್.
ಶಾಸಕ: ಹಣ ಕೊಡು ಎಂದು ನಾನೇನು ನಿನ್ನ ಮನೆಗೆ ಬಂದಿದ್ದೆನಾ? ನಿನ್ನ ಉದ್ದೇಶವೇನು? ಯಾವ ಕೆಲಸಕ್ಕೆ ಹಣ ಕೊಟ್ಟಿದ್ದೀಯಾ? ಅದನ್ನು ಹೇಗೆ ಕೇಳಬೇಕು ಎನ್ನುವ ಸೌಜನ್ಯವಿಲ್ಲವಾ? ಹುಚ್ಚನ ರೀತಿ ಮಾತನಾಡುತ್ತಿದ್ದೀಯಾ? ಎಲ್ಲರೂ ನನಗೆ ಫೋನ್ ಕರೆ ಮಾಡುತ್ತಿದ್ದಾರೆ. ಸಾಲ ಕೊಡು ಎಂದು ಕೇಳಲು ನಿನ್ನ ಮನೆಗೆ ಬಂದಿದ್ದೇನಾ? ನಾಲ್ಕು ದಿನ ಹೆಚ್ಚು ಕಡಿಮೆ ಆಗುತ್ತದೆ. ಹಣ ನಾನೇ ಹೇಳಿ ಕೊಡಿಸುತ್ತೇನೆ. ನಿನ್ನ ಅವಸರಕ್ಕೆ, ನಿನ್ನ ಕೆಲಸಕ್ಕೆ ಹಣ ಕೊಟ್ಟಿದ್ದೀಯಾ. ಮಾತು ಲೂಸ್ ಆಗಿದ್ರೆ ಸರಿ ಇರಲ್ಲ. ನಿನ್ನ ಹಣದಿಂದ ನನಗೆ ಏನೂ ಆಗಬೇಕಾಗಿಲ್ಲ. ಗೌರವದಿಂದ ಮಾತಾಡಬೇಕು. ಹಣ ಕೊಟ್ಟಿದ್ದಕ್ಕೆ ದಾಖಲೆಗಳಿಲ್ಲ.
ಪರಸಪ್ಪ: ನಾನು ಬಡವ ಇದ್ದೇನೆ ಸರ್.
ಶಾಸಕ: ನೀನು ಬಡವ, ಶ್ರೀಮಂತ ಏನೇ ಆಗಿರು. ಮಾತು ಸರಿಯಾಗಿ ಇರಬೇಕು.
ಪರಸಪ್ಪ: ಸರ್, ಹಣ ಕೊಡುವುದಾದರೆ ಕೊಡಿ. ಇಲ್ಲವಾದರೆ ಇಲ್ಲ ಎಂದು ಹೇಳಿಬಿಡಿ.
ಶಾಸಕ: ಕೊಡ್ತೀನಿ, ಇವೆಲ್ಲ ಹೇಳಬೇಡ. ನಿನ್ನ ಬಳಿ ಸಾಲ ತಂದಿಲ್ಲ. ಇಷ್ಟೇ ದಿನದಲ್ಲಿ ಕೊಡ್ತೇನೆ ಎಂದು ಹೇಳಿದ್ನಾ?
ಪರಸಪ್ಪ: ಕೊಡುವುದಿಲ್ಲ ಎಂದು ಹೇಳಿ ಬಿಡಿ ಸರ್.
ಶಾಸಕ: ಕೊಡುವುದಿಲ್ಲ ಎಂದು ನಾನು ಯಾಕೆ ಹೇಳಲಿ. ಅಂಥ ಚಿಲ್ಲರೆ ಕೆಲಸ ಮಾಡುವುದಿಲ್ಲ.

ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ವಿಭಾಗ, ಹೊನ್ನಾವರ
ಸಂ: ಎ2/ಬಜೆಟ್/ಟೆಂಡರ/ವಿವ–78&79/2022–23 ದಿನಾಂಕ: 01.09.2022

ಟೆಂಡರ ಪ್ರಕಟಣೆ

(1) 2022–23ನೇ ಸಾಲಿಗೆ ಹೊನ್ನಾವರ ಅರಣ್ಯ ವಿಭಾಗದಲ್ಲಿ ಲೆಟರೈಟಿಕ್ ಬೋಳುಗುಡ್ಡ ಪ್ರದೇಶದಲ್ಲಿ ಮಾನಸೂನ್ ನೆಡುತೋಪು ಕಾಮಗಾರಿ ಕುರಿತು ದಿನಾಂಕ 12.09.2022 ರಂದು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ ಕರೆಯಲಾಗಿದೆ. ಸದರ ಕಾಮಗಾರಿಯ ಅಂದಾಜು ಮೊತ್ತ ರೂ. 78.00 ಲಕ್ಷ ಆಗಿರುತ್ತದೆ.
(2) 2022–23 ನೇ ಸಾಲಿಗೆ ಮಂಕಿ ವಲಯದಲ್ಲಿ ವಲಯ ಅರಣ್ಯಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿ ಕುರಿತು ದಿನಾಂಕ: 26.09.2022 ರಂದು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಕರೆಯಲಾಗಿದೆ. ಸದರ ಕಾಮಗಾರಿಯ ಮೊತ್ತ ರೂ. 26.00 ಲಕ್ಷ ಆಗಿರುತ್ತದೆ.
ಆಸಕ್ತ ಟೆಂಡರುದಾರರು https://www.eproc.karnataka.gov.in ಮೂಲಕ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ: 08387–295236 ಮೂಲಕ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ
DIPR/ADK/MCA/381/22-23 Dt.05.09.22

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560 001. ದೂರವಾಣಿ ಸಂ: 080–29565353, 29566556, 29604556
ಇ–ಮೇಲ್: splocaima-21@ka.gov.in

ತಿದ್ದುಪಡಿ ಅಧಿಸೂಚನೆ:
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸ್ಥಿರಾಸ್ತಿಗಳ ಇ–ಹರಾಜು ಪ್ರಕಟಣೆ

ಸಂಖ್ಯೆ: SPLOCA/IMA/AUC/06/2021 ದಿನಾಂಕ: 24.08.2022ರಂದು ಹೊರಡಿಸಿರುವ ಇ–ಹರಾಜು ಪ್ರಕಟಣೆಯ ದಿನಾಂಕಗಳು ಮತ್ತು ಇ.ಎಂ.ಡಿ ಪಾವತಿ ತಿದ್ದುಪಡಿಗಳನ್ನು ಈ ಕೆಳಕಂಡಂತೆ ತಿದ್ದುಪಡಿಸಿ ಅಧಿಸೂಚನೆ ಹೊರಡಿಸಿದೆ.
ಇ.ಎಂ.ಡಿ (ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಇ.ಎಫ್.ಟಿ / ಎನ್.ಇ.ಎಫ್.ಟಿ/ ಆರ್.ಟಿ.ಜಿ.ಎಸ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 06.10.2022ರ ಸಂಜೆ 5:00 ಗಂಟೆಯವರೆಗೆ. ಇ–ಹರಾಜು ದಿನಾಂಕ ಮತ್ತು ಸಮಯ: 07.10.2022ರ ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 1:00 ಗಂಟೆಯವರೆಗೆ.
ಸ್ಥಳ: ಬೆಂಗಳೂರು
ದಿನಾಂಕ: 05.09.2022
ವಾಸಾಸಂಇ/ವಾಪ್ರ/ಜಿಎ/2071/2022–23
ಸಹಿ/– ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ.
ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ, ತುಮಕೂರು
ಸಂ:ಜಿಪತು:ತುಮ:ಉ.ನಿ(ಗ್ರಾ.ಕೈ) ಇ–ಟೆಂಡರ್:2022–23
ದಿನಾಂಕ: 03.09.2022

ಪ್ರಕಟಣೆ

ಉಪನಿರ್ದೇಶಕರು (ಗ್ರಾ.ಕೈ), ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ, ಡಿ.ಐ.ಸಿ ಕಟ್ಟಡ, ಬಿ.ಹೆಚ್. ರಸ್ತೆ ತುಮಕೂರು ಇವರ ಕಛೇರಿಯಿಂದ 2022–23ನೇ ಸಾಲಿಗೆ ತುಮಕೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಡುವ ಗ್ರಾಮೀಣ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ಸರಬರಾಜು ಯೋಜನೆಯಡಿ ರೂ.28.48ಲಕ್ಷಗಳ ಮೌಲ್ಯದ ಬಡಗಿ, ಕಮ್ಮಾರಿಕೆ, ದೋಬಿ, ಕಲ್ಲುಕೆಲಸ, ಗಾರೆ ಕೆಲಸ, ಕ್ಷೌರಿಕ, ಚಮ್ಮಾರಿಕೆ ಉಪಕರಣಗಳ ಖರೀದಿಗೆ ಇ–ಟೆಂಡರ್ ಕರೆದಿದ್ದು, ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು 03.10.2022 ಆಗಿರುತ್ತದೆ. ಅಂತೆಯೇ ಆಸಕ್ತರಾದ ಅರ್ಹ ನೊಂದಾಯಿತ ಸರಬರಾಜುದಾರರು ಸುಧಾರಿತ ಉಪಕರಣಗಳನ್ನು ಸರಬರಾಜು ಮಾಡಲು ಇ–ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ ಹಾಗೂ ವೆಬ್‌ಸೈಟ್ ವಿಳಾಸ http://www.eproc.karnataka.gov.in ರಲ್ಲಿ ಮಾಹಿತಿ ದೊರೆಯುತ್ತದೆ.
ಸಹಿ/– ಉಪ ನಿರ್ದೇಶಕರು (ಗ್ರಾ.ಕೈ) ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ, ತುಮಕೂರು
DIPR/TUM/478/MCA/2022-23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ
ಟೆಂಡರ ಪ್ರಕಟಣೆ ಸಂಖ್ಯೆ.: KNNL/KPD/KNP/KBDS/CTY/TND/2022–23/842 & 843 Date: 03.09.2022

"ಅಲ್ಪಾವಧಿ ಟೆಂಡರ ಪ್ರಕಟಣೆ" (ಇ–ಪ್ರೂಕ್ಯೂರ್‌ಮೆಂಟ ಪೋರ್ಟಲ್ ಸಿಸ್ಟಮ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗಳಿಗೆ A valid copy of the registration of the Firm / Company with the register of Companies. ಶೇಕಡಾವಾರು ಟೆಂಡರಗಳನ್ನು ಇ–ಪ್ರೂಕ್ಯೂರ್‌ಮೆಂಟ ಪೋರ್ಟಲ್ ಸಿಸ್ಟಮ್ ಮುಖಾಂತರ ಆಹ್ವಾನಿಸಲಾಗಿದೆ.
ಕ್ರ. ಸಂ. 1. ಕಾಮಗಾರಿಯ ಹೆಸರು : Consultancy services for Detailed Investigation, Survey and Preparation of Designs, Drawings, Estimates and Detailed Project Report for construction of Kalasa Nala Diversion Scheme (Lift Scheme) to augment storage of Malaprabha Dam including Liaisoning with various Directorates of CWC for obtaining CWC approval. (W.I. No. 33813) ಟೆಂಡರ್‌ಗೆ ಇಟ್ಟ ಮೊತ್ತ (ರೂ. ಲಕ್ಷಗಳಲ್ಲಿ)381.34
ಕ್ರ. ಸಂ. 2. ಕಾಮಗಾರಿಯ ಹೆಸರು :Consultancy services for Detailed Investigation, Survey and Preparation of Designs, Drawings, Estimates and Detailed Project Report for construction of Bhandura Nala Diversion Scheme (Lift Scheme) to augment storage of Malaprabha Dam including Liaisoning with various Directorates of CWC for obtaining CWC approval. (W.I. No. 33818) ಟೆಂಡರ್‌ಗೆ ಇಟ್ಟ ಮೊತ್ತ (ರೂ. ಲಕ್ಷಗಳಲ್ಲಿ)381.27
www.eproc.karnataka.gov.in ನಲ್ಲಿ ಅರ್ಜಿ ಡೌನಲೋಡ ಮಾಡಿಕೊಳ್ಳಬಹುದು/ಭರ್ತಿಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 13.09.2022 ರಂದು ಮಧ್ಯಾಹ್ನ 12.00 ವರೆಗೆ ಸಲ್ಲಿಸಬಹುದು. ಪ್ರಿ–ಬಿಡ್ ಸಭೆಯನ್ನು ದಿನಾಂಕ: 09.09.2022 ರಂದು ಮುಂಜಾನೆ 11.00 ಘಂ. ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪೂರ ಕಚೇರಿಯಲ್ಲಿ ಆಯೋಜಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 14.09.2022 ಮಧ್ಯಾಹ್ನ 3.00 ಗಂಟೆಯ ನಂತರ ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ ಶರತ್ತುಗಳು ಹಾಗೂ ಇತರೆ ವಿವರಗಳನ್ನು ಇ–ಪ್ರೂಕ್ಯೂರ್‌ಮೆಂಟ ಪೋರ್ಟಲ್ ಸಿಸ್ಟಮ್ ಮುಖಾಂತರ www. eproc. karnataka.gov.in ಸಂಪರ್ಕಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ. 08336–222163 ಸಂಪರ್ಕಿಸುವದು.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ
DIPR/BGM/RO-NO-807/MCA/2022-23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟ ಇವರ ಕಛೇರಿ.
ಸಂಖ್ಯೆ.ಲೋಇ:ಬಾವಿ:ಪಿಬಿ:ಕೆಡಬ್ಲು:2022–23/ 2188 ದಿನಾಂಕ : 03–09–2022

–: ಟೆಂಡರ ಪ್ರಕಟಣೆ :–

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ 2000ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ ಕೆ/ಡಬ್ಲೂ–1,2,3,4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಬಾಗಲಕೋಟೆ ವಿಭಾಗದ ಅಡಿಯಲ್ಲಿಯಈ ಕೆಳಕಾಣಿಸಿದ ಕಾಮಗಾರಿಗಳ ಟೆಂಡರ ಅಹ್ವಾನಿಸಲಾಗಿದೆ.
ವರ್ಕ ಇಂಡೆಂಟ್ ನಂ:ಸಾಮಾನ್ಯ: 154825, 154824, 147937, 151706, 152274, 148688 ಕಾಲ್–2, 150098 ಕಾಲ್–2, 155231, 153373 ಕಾಲ್–2, 146433–ಕಾಲ್–2, 154984, 154985.
ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ 350.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ 50.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಟೆಂಡರ ಅಹ್ವಾನಿಸಲಾಗಿದೆ.

ಅ)	ಪ್ರೀಬಿಡ್ ಮಿಟಿಂಗ್ ದಿನಾಂಕ:	02–09–2022 ರಂದು ಮಧ್ಯಾಹ್ನ 11–30 ಘಂಟೆಯವರೆಗೆ
ಬ)	ಟೆಂಡರ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ:	03–09–2022 ರಂದು ಸಂಜೆ 5–30 ಘಂಟೆಯವರೆಗೆ
ಕ)	ಟೆಂಡರ ಸ್ವೀಕರಿಸುವ ದಿನಾಂಕ:	14–09–2022 ರಂದು ಸಂಜೆ 4–00 ಘಂಟೆಯವರೆಗೆ
ಡ)	ತಾಂತ್ರಿಕ ಬಿಡ್ ತೆರೆಯುವ ದಿನಾಂಕ:	15–09–2022 ರಂದು ಸಂಜೆ 4.30 ಘಂಟೆಯವರೆಗೆ
ಬ)	ಆರ್ಥಿಕ ಬಿಡ್ ತೆರೆಯುವ ದಿನಾಂಕ:	16–09–2022. ರಂದು ಸಂಜೆ 4.30 ಘಂಟೆಯವರೆಗೆ

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ http://eproc.karnataka.gov.in ರಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟೆ.
ವಾ.ಸಾ.ಇ/ಬಾಗಲಕೋಟ/402/2022–23/ದೇಶಪಾಂಡೆಪಬ್ಲಿಸಿಟಿ
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘ (ರಿ.) ಕಲಬುರಗಿ ವಿಭಾಗ ಕಲಬುರಗಿ.
ಇಮೇಲ್: kksecklb@gmail.com ದೂರವಾಣಿ : 08472–227712
ಸಂಖ್ಯೆ: ಕಕಮಾಕೃಸಾಸಂ/ ಅಭಿವೃದ್ಧಿ/ ಸಿ.ಆರ್–40/ 2022–23 ದಿನಾಂಕ : 05.09.2022

ಸಂಕ್ಷಿಪ್ತ ಟೆಂಡರ ಪ್ರಕಟಣೆ

ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿ ಸಂಘ, ಕಲಬುರಗಿ ವಿಭಾಗ, ಕಲಬುರಗಿ ಇವರ ಕಚೇರಿಯಿಂದ ಸಂಘದ ಕೃಷಿ ಅಭಿವೃದ್ಧಿ ವಿಭಾಗದಲ್ಲಿನ ಸಮಗ್ರ ಕೃಷಿ ಪದ್ಧತಿ ಯೋಜನೆಯಡಿಯಲ್ಲಿನ **ಹಣ್ಣುಗಳ ಸಸಿಗಳನ್ನು, ಹಾಗೂ ಅವುಗಳ ಪೋಷಣೆಗೆ ಅವಶ್ಯಕ ಸಾಮಗ್ರಿಗಳನ್ನು** ಕಲ್ಯಾಣ ಕರ್ನಾಟಕ ವಿಭಾಗದ (07) ಜಿಲ್ಲೆಗಳಲ್ಲಿನ ಆಯ್ಕೆಗೊಂಡ ಫಲಾನುಭವಿಗಳಿಗೆ ಒದಗಿಸುವ ಸಂಬಂಧ ಅರ್ಹ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ.
ಮೇಲ್ನಮೂದಿಸಿದಂತೆ, ಆಸಕ್ತ ಸಂಸ್ಥೆಗಳು ತಮ್ಮ ದರಪಟ್ಟಿಯನ್ನು ಇ–ಪ್ರೋಕ್ಯೂರಮೆಂಟ್ ಪೋರ್ಟಲ್ http://eproc.karnataka.gov.in ಮೂಲಕ ದಿನಾಂಕ **14.09.2022 ರ ಸಂಜೆ : 4.30ಕ್ಕೆ ಒಳಗಾಗಿ ಸಲ್ಲಿಸುವುದು, ತಾಂತ್ರೀಕ ಬಿಡ್ ತೆರೆಯುವ ದಿನಾಂಕ : 15–09–2022 ರ ಸಂಜೆ : 4.35ಕ್ಕೆ ಹಾಗೂ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 16–09–2022 ರ ಮಧ್ಯಾಹ್ನ : 3.00 ಗಂಟೆಗೆ ಇರುತ್ತದೆ. ಟೆಂಡರ ಪ್ರಕಟಣೆಯ ಸಂಕ್ಷೀಪ್ತ ವಿವರಗಳು ಈ ಕೆಳಗಿನಂತಿರುತ್ತದೆ.**

ಕ್ರ.ಸಂ.	ವಿವರಗಳು	ಪ್ರಮಾಣ	ಸಂಖ್ಯೆ	ದರ	ದರ (ಅಕ್ಷರಗಳಲ್ಲಿ)
1	2	3	4	5	6
01)	ಸೀತಾಫಲ	ಸಂಖ್ಯೆ	1647		
02)	ಪೇರು	ಸಂಖ್ಯೆ	1698		
03)	ಮಾವು	ಸಂಖ್ಯೆ	2180		
04)	ತೆಂಗು	ಸಂಖ್ಯೆ	1755		
05)	ಲಿಂಬು	ಸಂಖ್ಯೆ	2470		
06)	ಡ್ರ್ಯಾಗನ ಹಣ್ಣು	ಸಂಖ್ಯೆ	300		
07)	ಮೋಸಂಬಿ	ಸಂಖ್ಯೆ	720		
08)	ಸಪೋಟ	ಸಂಖ್ಯೆ	50		
09)	ಎರೆಹುಳು ಮತ್ತು ಟ್ರೈಕೋಡೆನ್	ಕೆ.ಜಿ.	5140		

ಷರತ್ತುಗಳು, ನಿಬಂಧನೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಗೆ ಸಂಪರ್ಕಿಸಬಹುದು.
ಸಹಿ/– ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘ [ರಿ] ಕಲಬುರಗಿ ವಿಭಾಗ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/578/ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ಶಿವಾಜಿನಗರ, ಬೆಂಗಳೂರು
ಸಂಖ್ಯೆ: ಎಸ್‌ಎಬಿವಿಎಂಸಿಆರ್‌ಐ/384/2022–23, ಬೆಂಗಳೂರು ದಿನಾಂಕ: 03–09–2022

ನೇಮಕಾತಿಗಾಗಿ ಪ್ರಕಟಣೆ

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಖಾಲಿ ಇರುವ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ **ರಾಜ್ಯ ಮಟ್ಟದ ಉಳಿಕೆ ಮೂಲ ವೃಂದ (ಆರ್.ಪಿ.ಸಿ)** ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಖಾಲಿ ಹುದ್ದೆಗಳ ವಿವರ, ವಿದ್ಯಾರ್ಹತೆ, ಅನುಭವ, ವೇತನ ಶ್ರೇಣಿ ಇತ್ಯಾದಿಗಳ ಬಗ್ಗೆ ಪೂರ್ಣ ವಿವರ, ಸಲ್ಲಿಸಬೇಕಾದ ಅರ್ಜಿ ನಮೂನೆ, ಅರ್ಜಿ ಶುಲ್ಕ ಹಾಗೂ ಇನ್ನಿತರೆ ಹೆಚ್ಚಿನ ಮಾಹಿತಿಗಾಗಿ ಈ ಸಂಸ್ಥೆಯ ಅಂತರ್ಜಾಲ: **https://sabvmcri.karnataka.gov.in** ನಲ್ಲಿ ಪರಿವೀಕ್ಷಿಸಬಹುದು. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 17–09–2022ರಂದು ಸಂಜೆ 5.00 ಗಂಟೆಯವರೆಗೆ.**
ಸಂಸ್ಥೆಯ ಅಂತರ್ಜಾಲದಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡಿ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಅಪ್‌ಲೋಡ್ ಮಾಡತಕ್ಕದ್ದು ಹಾಗೂ ಸ್ವೀಕೃತಿ ಪ್ರತಿ ಸಂಬಂಧಪಟ್ಟ ದಾಖಲಾತಿಗಳ ಸ್ವದೃಢೀಕೃತ ಎರಡು ಪ್ರತಿಗಳನ್ನು ನಿಗದಿತ ದಿನಾಂಕದೊಳಗೆ ಈ ಕಛೇರಿಗೆ ಸಲ್ಲಿಸತಕ್ಕದ್ದು ಹಾಗೂ ಅರ್ಜಿ ಶುಲ್ಕ **ರೂ. 2000/–** ಗಳನ್ನು ಆನ್‌ಲೈನ್ ಮೂಲಕ ಪಾವತಿಸತಕ್ಕದ್ದು.
ಅಭ್ಯರ್ಥಿಗಳಿಗೆ ವಿಭಾಗವಾರು ಸಂದರ್ಶನದ ದಿನಾಂಕವನ್ನು ಪ್ರತ್ಯೇಕವಾಗಿ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು. ಅವಧಿ ಮುಗಿದ ನಂತರ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸುವ ದಾಖಲಾತಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

Category of Post	Total No. of Posts	Department		Roster
Professor	5	Biochemistry	1	SC (O), GM (O), ST (O), GM (W), Cat-I(O)
		Pharmacology	1	
		General Medicine	1	
		OBG	1	
		Radio Diagnosis	1	

Category of Post	Total No. of Posts	Department				Roster
Associate Professor	20	Anatomy	1	General Medicine	2	SC (O), GM (O), ST (O), GM (W), Cat-I (O), GM (R), 2A (O), GM (PH), SC (W), GM (W), 2B (W), GM (R), 2A (W), GM (O), SC (R), GM (W), 3A (O), GM (R), 3B (O), GM (Ex)
		Physiology	1	Pediatrics	1	
		Biochemistry	1	General Surgery	2	
		Pharmacology	1	Orthopedics	1	
		Pathology	3	OBG	1	
		Microbiology	1	Anesthesiology	2	
		Forensic Medicine	1	Radio Diagnosis	1	
		Community Medicine	1			

Category of Post	Total No. of Posts	Department				Roster
Assistant Professor	30	Anatomy	1	Psychiatry	1	SC (O), GM (O), ST (O), GM (W), Cat-I (O), GM (R), 2A (O), GM (PH), SC (W), GM (W), 2B (W), GM (R), 2A (W), GM (O), SC (R), GM (W), 3A (O), GM (R), 3B (M), GM (Ex), 2A (R), GM (W), SC (PH), GM (W), 2A (PH), GM (R), SC (W), GM (KM), 2A (W), GM (W)
		Physiology	2	General Surgery	3	
		Biochemistry	2	Orthopedics	1	
		Pharmacology	1	ENT	1	
		Pathology	1	Ophthalmology	1	
		Microbiology	1	OBG	2	
		Community Medicine	4	Anesthesiology	2	
		General Medicine	3	Radio Diagnosis	1	
		Pediatrics	1	Dentistry	1	
		Pulmonary Medicine	1			

ಷರಾ: ಸರ್ಕಾರದ ಉಪ ಕಾರ್ಯದರ್ಶಿಗಳು (ಹೈದ್ರಾಬಾದ್ ಕರ್ನಾಟಕ ವಿಶೇಷ ಕೋಶ), ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇವರ ಸುತ್ತೋಲೆ ಸಂಖ್ಯೆ: ಸಿಆರ್‌ಸುಇ 03 ಹೈಕೋ 2019 ದಿನಾಂಕ: 23.03.2022 ರಂತೆ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಅಧಿಸೂಚನೆಯನ್ನು ಹೊರಡಿಸಬೇಕಾಗಿರುವುದರಿಂದ ಈ ಕಛೇರಿ ಹಿಂದಿನ ನೇರ ನೇಮಕಾತಿ ಅಧಿಸೂಚನೆ ಸಂಖ್ಯೆ: ಎಸ್‌ಎಬಿವಿಎಂಸಿಆರ್‌ಐ/254/2022–23 ದಿನಾಂಕ: 03.08.2022 ಮತ್ತು ಎಸ್‌ಎಬಿವಿಎಂಸಿಆರ್‌ಐ /313/2022–23 ದಿನಾಂಕ: 05.8.2022 ರ ಅಧಿಸೂಚನೆಗಳನ್ನು ಹಿಂಪಡೆಯಲಾಗಿದೆ.
ಸಹಿ/– ನಿರ್ದೇಶಕರು ಹಾಗೂ ಡೀನ್ ಎಸ್‌ಎಬಿವಿಎಂಸಿಆರ್‌ಐ, ಬೆಂಗಳೂರು.
ವಾಸಾಸಂಇ/ವಾ.ಪ್ರ/2080/ಅಡ್ವರ್ಟೋರ್/2022–23
ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನಿಮಗೆ ಗೌರವ ತಂದುಕೊಡುವಂತಹುದನ್ನು ಮಾತ್ರ ಮಾತನಾಡಿ.

-ಗುರು ನಾನಕ್

ಜಿಡಿಪಿ ಬೆಳವಣಿಗೆ ನಿರೀಕ್ಷೆಗಿಂತ ಕಡಿಮೆ ಚೇತರಿಕೆಗೆ ಹಣದುಬ್ಬರದ ತೊಡಕು

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ಕಳೆದ ವಾರ ಬಿಡುಗಡೆ ಮಾಡಿದ ಈ ಹಣಕಾಸು ವರ್ಷದ ಏಪ್ರಿಲ್-ಜೂನ್ ಅವಧಿಯ ಮೊದಲ ತ್ರೈಮಾಸಿಕದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆ ಪ್ರಮಾಣ ನಿರೀಕ್ಷೆಗಿಂತ ಬಹಳ ಕೆಳಗೆ ಇದೆ ಮತ್ತು ಇದು ದೊಡ್ಡ ನಿರಾಶೆಗೆ ಕಾರಣವಾಗಿದೆ. ಸಾಮಾನ್ಯ ಸಂದರ್ಭದಲ್ಲಿಯಾದರೆ ಶೇ 13.5ರಷ್ಟು ಬೆಳವಣಿಗೆಯನ್ನು ಅಸಾಧಾರಣ ಎಂದೇ ಬಣ್ಣಿಸಬಹುದಾಗಿತ್ತು. ಆದರೆ, ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಅರ್ಥ ವ್ಯವಸ್ಥೆಯು ತೀವ್ರವಾಗಿ ಕುಗ್ಗಿತ್ತು. ಪ್ರಗತಿಯ ಲೆಕ್ಕಾಚಾರವು ಅದನ್ನು ಅವಲಂಬಿಸಿರುವುದರಿಂದ ಈ ಬಾರಿಯ ಪ್ರಗತಿ ಹೇಳಿಕೊಳ್ಳುವಂತಹುದೇನೂ ಅಲ್ಲ. ಜೊತೆಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಾಡಿದ್ದ ಅಂದಾಜಿಗಿಂತ ಬಹಳ ಕಡಿಮೆ ಇದೆ. ಶೇ 16.2ರಷ್ಟು ಬೆಳವಣಿಗೆ ದಾಖಲಾಗಬಹುದು ಎಂದು ಆರ್‌ಬಿಐ ಅಂದಾಜಿಸಿತ್ತು. ಪರೋಕ್ಷ ತೆರಿಗೆಗಳು ಮತ್ತು ಸಹಾಯಧನಗಳ ಹೊಂದಾಣಿಕೆಯ ಬಳಿಕ ಸರಕು ಮತ್ತು ಸೇವೆಗಳ ಸರಾಸರಿ ಮೌಲ್ಯವನ್ನು ಲೆಕ್ಕಕ್ಕೆ ತೆಗೆದುಕೊಂಡರೆ, 2019–20ರ ಮೊದಲ ತ್ರೈಮಾಸಿಕಕ್ಕಿಂತ ಶೇ 4.7ರಷ್ಟು ಮಾತ್ರ ಪ್ರಗತಿಯಲ್ಲಿ ಏರಿಕೆ ಆಗಿದೆ. ಕೋವಿಡ್ ಸಾಂಕ್ರಾಮಿಕದ ನಂತರದಲ್ಲಿ, ಈ ವರ್ಷದ ಮೊದಲ ತ್ರೈಮಾಸಿಕದಲ್ಲಿ ಅರ್ಥ ವ್ಯವಸ್ಥೆಯು ಬಹುತೇಕ ಚೇತರಿಸಿಕೊಂಡಿದೆ ಎಂದೇ ಪರಿಗಣಿಸಲಾಗಿತ್ತು. ರಷ್ಯಾ–ಉಕ್ರೇನ್ ನಡುವೆ ಯುದ್ಧದಿಂದಾಗಿ ತೊಡಕುಗಳು ಉಂಟಾಗಿದ್ದರೂ ಉತ್ತಮ ಪ್ರಗತಿಯ ನಿರೀಕ್ಷೆ ಇತ್ತು. ಆದುದರಿಂದಲೇ ಬೆಳವಣಿಗೆಯ ಕುರಿತ ಈಗಿನ ಅಂದಾಜು ಕಳವಳಕ್ಕೆ ಕಾರಣವಾಗಿದೆ.

ಹಣದುಬ್ಬರವನ್ನು ನಿಯಂತ್ರಣಕ್ಕೆ ತರುವಲ್ಲಿನ ತನ್ನ ಹೋರಾಟವನ್ನು ಆರ್‌ಬಿಐ ಮುಂದುವರಿಸಬೇಕು. ಅತಿ ಹೆಚ್ಚು ಅಗತ್ಯ ಇರುವ ವಲಯಗಳಲ್ಲಿ ಸರ್ಕಾರವು ಹೆಚ್ಚು ವೆಚ್ಚ ಮಾಡಿ ಪ್ರಗತಿಗೆ ಉತ್ತೇಜನ ಕೊಡಬೇಕು

ಪ್ರಗತಿಯು ನಿರೀಕ್ಷೆಯ ಹತ್ತಿರಕ್ಕೂ ಬಾರದಿರಲು ತಯಾರಿಕಾ ವಲಯದ ಕೊಡುಗೆ ಕಡಿಮೆಯಾಗಿರುವುದು ಒಂದು ಕಾರಣ. ತಯಾರಿಕಾ ವಲಯದ ಬೆಳವಣಿಗೆಯು ಶೇ 4.8ರಷ್ಟು ಮಾತ್ರ. ಸಾಂಕ್ರಾಮಿಕಪೂರ್ವಕ್ಕೆ ಹೋಲಿಸಿದರೆ ಬೆಳವಣಿಗೆಯು ಅತ್ಯಂತ ಕಡಿಮೆ ಎಂದೇ ಹೇಳಬೇಕಾಗುತ್ತದೆ. ಕಟ್ಟಡ ನಿರ್ಮಾಣ ಕ್ಷೇತ್ರದ ಬೆಳವಣಿಗೆಯು ಶೇ 14.7ರಷ್ಟು ದಾಖಲಾಗಿದೆ. ಹೋಟೆಲ್, ಸಾರಿಗೆ ಮತ್ತು ಸಂವಹನ ಸೇರಿದಂತೆ ಸೇವಾ ವಲಯವು ಕೂಡ ಉತ್ತಮ ಪ್ರಗತಿ ಕಂಡಿಲ್ಲ. ಕೃಷಿ ವಲಯವು ಶೇ 4.5ರಷ್ಟು ಬೆಳವಣಿಗೆಯನ್ನು ದಾಖಲಿಸಿದ್ದು ಇದನ್ನು ಉತ್ತಮ ಎಂದೇ ಹೇಳಬಹುದು. ಆದರೆ, ದೇಶದ ಕೆಲವು ಭಾಗಗಳಲ್ಲಿ ಮುಂಗಾರು ಮಳೆಯು ವಿಚಿತ್ರವಾಗಿ ವರ್ತಿಸಿರುವುದರಿಂದ ಮುಂದಿನ ತಿಂಗಳುಗಳಲ್ಲಿ ಇದೇ ಗತಿಯನ್ನು ಕಾಯ್ದುಕೊಳ್ಳುವ ಭರವಸೆ ಇಲ್ಲ. ಹಾಗಾಗಿ, ಗ್ರಾಮೀಣ ಪ್ರದೇಶದ ಬೇಡಿಕೆಯ ಮೇಲೆ ಇದು ಪ್ರತಿಕೂಲ ಪರಿಣಾಮ ಬೀರಬಹುದು. ಅರ್ಥ ವ್ಯವಸ್ಥೆಯ ಚಾಲಕಶಕ್ತಿಯೇ ಆಗಿರುವ ಗ್ರಾಹಕ ವಸ್ತುಗಳ ಬೇಡಿಕೆಯು ಪುನಶ್ಚೇತನಗೊಂಡಿದೆ ಎಂಬುದು ಉತ್ತೇಜನಕಾರಿ ಅಂಶ. ಆದರೆ, ಇದು ಇನ್ನೂ ಉತ್ತಮಗೊಳ್ಳಬೇಕಿತ್ತು. ಸರ್ಕಾರದ ವೆಚ್ಚವು ಶೇ 10.4ರಷ್ಟು ಕಡಿಮೆಯಾಗಿದೆ. ಹಣದುಬ್ಬರವು ಗರಿಷ್ಠ ಮಟ್ಟಕ್ಕೆ ಹೋಗಿದೆ ಮತ್ತು ಅದೇ ಮಟ್ಟದಲ್ಲಿಯೇ ಮುಂದುವರಿದಿದೆ. ಹಾಗಾಗಿ, ಈ ವರ್ಷದ ಮುಂದಿನ ತಿಂಗಳುಗಳಲ್ಲಿ ಕೂಡ ಪ್ರಗತಿಯು ಹೆಚ್ಚುವುದು ಕಷ್ಟಕರ ಎಂಬ ಪರಿಸ್ಥಿತಿ ಇದೆ.

ಭಾರತದ ಪ್ರಗತಿಯು 2022ರಲ್ಲಿ ಶೇ 7.7ರಷ್ಟು ಇರಲಿದೆ ಎಂದು ರೇಟಿಂಗ್ ಸಂಸ್ಥೆ ಮೂಡೀಸ್ ಅಂದಾಜಿಸಿದೆ. ಹೆಚ್ಚುತ್ತಿರುವ ಬಡ್ಡಿದರ, ಮುಂಗಾರು ಮಳೆಯಲ್ಲಿನ ಏರಿಳಿತ ಮತ್ತು ಜಾಗತಿಕ ಮಟ್ಟದಲ್ಲಿ ಬೇಡಿಕೆ ಕುಸಿತದಿಂದಾಗಿ ಈ ಮಟ್ಟದ ಬೆಳವಣಿಗೆಯಷ್ಟೇ ಸಾಧ್ಯ ಎಂದು ಮೂಡೀಸ್ ವಿಶ್ಲೇಷಿಸಿದೆ. ಮೂಲಸೌಕರ್ಯ ವಲಯದಲ್ಲಿ ಪ್ರಮುಖವಾದ ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ಸಂಸ್ಕರಿತ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಗಳ ಪ್ರಗತಿಯು ಜುಲೈ ತಿಂಗಳಲ್ಲಿ ಶೇ 4.5ರಷ್ಟಕ್ಕೆ ಕುಸಿದಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಆರ್ಥಿಕ ಹಿಂಜರಿತದ ಭೀತಿಯಿಂದಾಗಿ ರಫ್ತು ಕುಸಿತ ಕಂಡಿದೆ. ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಚೀನಾವು ಶೇ 0.4ರಷ್ಟು ಅತ್ಯಲ್ಪ ಪ್ರಗತಿ ದಾಖಲಿಸಿದೆ. ಭಾರತದಲ್ಲಿ ಈ ವರ್ಷದ ಎರಡನೇ ತ್ರೈಮಾಸಿಕದಲ್ಲಿ ಶೇ 6.2ರಷ್ಟು ಮತ್ತು ವರ್ಷದ ಕೊನೆಯ ಎರಡು ತ್ರೈಮಾಸಿಕಗಳಲ್ಲಿ ಶೇ 4ರಷ್ಟು ಪ್ರಗತಿ ಆಗಬಹುದು ಎಂದು ಆರ್‌ಬಿಐ ಅಂದಾಜಿಸಿದೆ. ಆದರೆ, ಈ ಅಂದಾಜು ಈಗಿನ ಪರಿಸ್ಥಿತಿಯಲ್ಲಿ ಅತಿ ಆಶಾವಾದಿಯಾದುದು ಎಂದೇ ಹೇಳಬೇಕಾಗುತ್ತದೆ. ಹಣದುಬ್ಬರವನ್ನು ನಿಯಂತ್ರಣಕ್ಕೆ ತರುವಲ್ಲಿನ ತನ್ನ ಹೋರಾಟವನ್ನು ಆರ್‌ಬಿಐ ಮುಂದುವರಿಸಬೇಕು. ಅತಿ ಹೆಚ್ಚು ಅಗತ್ಯ ಇರುವ ವಲಯಗಳಲ್ಲಿ ಸರ್ಕಾರವು ಹೆಚ್ಚು ವೆಚ್ಚ ಮಾಡಿ ಪ್ರಗತಿಗೆ ಉತ್ತೇಜನ ಕೊಡಬೇಕು.

ದಿನದ ಟ್ವೀಟ್

ಕಾರಣ ಅರಿಯಿರಿ

ಹಳೆ ಬೆಂಗಳೂರು ಮತ್ತು ಹೊಸ ಬೆಂಗಳೂರು ಎರಡೂ ಪ್ರದೇಶಗಳಲ್ಲಿ ಸುರಿಯುವ ಮಳೆ ಪ್ರಮಾಣ ಹೆಚ್ಚುಕಡಿಮೆ ಒಂದೇ ರೀತಿ ಇದೆ. ಆದರೆ ಹಳೆ ಬೆಂಗಳೂರು ಪ್ರದೇಶದಲ್ಲಿ ಪ್ರವಾಹ ಪರಿಸ್ಥಿತಿ ಇಲ್ಲ. ಇದಕ್ಕೆ ಕಾರಣವೇನೆಂದು ಯೋಚಿಸಿ, ಭ್ರಷ್ಟಾಚಾರಮುಕ್ತ ಆಡಳಿತ, ಸಮರ್ಪಕ ನಗರ ಯೋಜನೆ ಹಾಗೂ ಅದರ ಪರಿಣಾಮಕಾರಿ ಅನುಷ್ಠಾನವು ಇಂತಹ ವಿಪತ್ತುಗಳನ್ನು ತಡೆಯಲು ಸಹಾಯ ಮಾಡುತ್ತವೆ ಎಂಬುದನ್ನು ಅರ್ಥಮಾಡಿಕೊಂಡರೆ ತುಂಬಾ ಒಳ್ಳೆಯದು.

ಅರವಿಂದ, ನಾಗರಿಕ

ಕಿಡಿನುಡಿ

ಪಿಎಸ್‌ಐ ನೇಮಕಾತಿ ಆಕಾಂಕ್ಷಿಯೊಬ್ಬರಿಂದ ₹ 15 ಲಕ್ಷ ಪಡೆದಿರುವುದಾಗಿ ಒಪ್ಪಿಕೊಂಡಿರುವ ಬಿಜೆಪಿ ಶಾಸಕ ಬಸವರಾಜ ದಢೇಸಗೂರು, ಸರ್ಕಾರಕ್ಕೆ ಹಣ ತಲುಪಿಸಿದ್ದೇನೆ ಎಂದಿದ್ದಾರೆ. ಸರ್ಕಾರ ಎಂದರೆ ಯಾರು? ಹಿಂದಿನ ಗೃಹ ಮಂತ್ರಿಗಳೇ ಈಗ ಮುಖ್ಯಮಂತ್ರಿ. ಈ ಪ್ರಕರಣದಲ್ಲಿ ನ್ಯಾಯಾಂಗ ತನಿಖೆಗೆ ಆದೇಶಿಸಲು ಸರ್ಕಾರ ಏಕೆ ಹಿಂಜರಿಯುತ್ತಿದೆ ಎಂಬುದಕ್ಕೆ ಇದರಲ್ಲೇ ಉತ್ತರವಿದೆ.

ಪ್ರಿಯಾಂಕ್ ಖರ್ಗೆ, ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ

50 ವರ್ಷಗಳ ಹಿಂದೆ

ಬುಧವಾರ, 6-9-1972

- **ಇಸ್ರೇಲಿ ಆಟಗಾರರ ಶಿಬಿರಕ್ಕೆ ಅರಬ್ ಗೆರಿಲ್ಲಾ ಮುತ್ತಿಗೆ; ಒಬ್ಬನ ಕೊಲೆ**

ಮ್ಯೂನಿಕ್, ಸೆ. 5– ಸಬ್‌ಮೆಷಿನ್‌ಗನ್ ಮತ್ತು ಸ್ಫೋಟಕ ವಸ್ತುಗಳಿಂದ ಸಜ್ಜಾಗಿದ್ದ ಅರಬ್ ಕಮಾಂಡೋಗಳು ಇಂದು ಹಠಾತ್ತನೆ ಒಲಿಂಪಿಕ್ ಗ್ರಾಮದಲ್ಲಿನ ಇಸ್ರೇಲಿಗಳ ಬಿಡಾರಕ್ಕೆ ನುಗ್ಗಿ ಒಬ್ಬ ಇಸ್ರೇಲಿಯನ್ನು ಕೊಂದು ಇನ್ನೊಬ್ಬನಿಗೆ ಗಾಯ ಮಾಡಿ, ಹದಿಮೂರು ಮಂದಿ ಇಸ್ರೇಲಿ ಕ್ರೀಡಾಪಟುಗಳ ಪ್ರಾಣವನ್ನು ಪಣಕ್ಕೆ ಒಡ್ಡಿದ್ದರು.

ಇಸ್ರೇಲ್ ಬಂಧನದಲ್ಲಿಟ್ಟಿರುವ ಇನ್ನೂರು ಮಂದಿ ಅರಬ್ ಗೆರಿಲ್ಲಾಗಳನ್ನು ಬಿಡುಗಡೆ ಮಾಡಬೇಕೆಂದು, ಇಲ್ಲವಾದಲ್ಲಿ ಉಳಿದ ಇಸ್ರೇಲಿಗಳನ್ನು ಕೊಲ್ಲುವುದಾಗಿ ಅರಬ್ ಕಮಾಂಡೋಗಳು ಬೆದರಿಕೆ ಹಾಕಿದ್ದರು.

- **ಒಲಿಂಪಿಕ್ಸ್ ತಾತ್ಕಾಲಿಕ ಸಸ್ಪೆನ್ಷನ್**

ಮ್ಯೂನಿಕ್, ಸೆ. 5 – ಒಲಿಂಪಿಕ್ ಪಂದ್ಯಗಳನ್ನು 24 ಗಂಟೆಗಳ ಕಾಲ ಸಸ್ಪೆಂಡ್ ಮಾಡಲಾಗಿದೆ ಎಂದು ಒಲಿಂಪಿಕ್ ಅಂತರರಾಷ್ಟ್ರೀಯ ಸಮಿತಿಯ ನಿವೃತ್ತಿ ಹೊಂದಲಿರುವ ಅಧ್ಯಕ್ಷ ಅವೆರಿ ಬ್ರುಂಡೇಜ್ ಅವರು ತಿಳಿಸಿದರು.

- **ಒಲಿಂಪಿಕ್ಸ್‌ನಿಂದ ಈಜಿಪ್ಟ್ ವಾಪಸು**

ಮ್ಯೂನಿಕ್, ಸೆ. 5 – ಅರಬ್ ಗೆರಿಲ್ಲಾಗಳು ಇಸ್ರೇಲ್ ಆಟಗಾರರ ಮೇಲೆ ಹಲ್ಲೆ ನಡೆಸಿರುವ ಕಾರಣ ಒಲಿಂಪಿಕ್ ಪಂದ್ಯಗಳಿಂದ ಈಜಿಪ್ಟ್ ವಾಪಸಾಗಿದ್ದು, ತನ್ನ ಟೀಮು ಇಂದು ಕೈರೋಗೆ ವಾಪಸ್ ಸಾಗಲಿದೆಯೆಂದು ಈಜಿಪ್ಟ್ ತಂಡದ ಅಧಿಕಾರಿಯೊಬ್ಬರು ಇಲ್ಲಿ ಇಂದು ಪ್ರಕಟಿಸಿದರು.

- **ಮಂಗಳೂರು ಗೊಬ್ಬರ ಕಾರ್ಖಾನೆ: 74ರಲ್ಲಿ ಉತ್ಪಾದನೆ ಆರಂಭ**

ಮಂಗಳೂರು, ಸೆ. 5 – 58 ಕೋಟಿ ರೂ. ವೆಚ್ಚದ ಮಂಗಳೂರು ರಾಸಾಯನಿಕ ಗೊಬ್ಬರ ಕಾರ್ಖಾನೆಗಾಗಿ ಈಗಾಗಲೇ 13 ಕೋಟಿ ರೂ. ಮೌಲ್ಯದ ಯಂತ್ರಗಳನ್ನು ಕೊಳ್ಳಲು ವ್ಯವಸ್ಥೆ ಮಾಡಲಾಗಿದೆಯೆಂದು ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಎನ್.ಆರ್. ಶೇಷಾದ್ರಿ ಅವರು ಇಂದು ಹೇಳಿದರು.

ಮಂಗಳೂರಿನ ಕೃಷಿಕರು ಮತ್ತು ಕೈಗಾರಿಕೋದ್ಯಮಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, 1974ರ ಮೇ ತಿಂಗಳೊಳಗೆ ನಿರ್ಮಾಣ ಕಾರ್ಯ ಪೂರ್ಣಗೊಳಿಸುವ ಭರವಸೆ ನೀಡಿದರು.

- **ಕ್ರಿಮಿನಲ್ ಕೇಸ್ ನಿರ್ವಹಣೆ ಪ್ರಾಸಿಕ್ಯೂಷನ್ ಡೈರೆಕ್ಟೊರೇಟ್**

ಬೆಂಗಳೂರು, ಸೆ. 5 –ಕ್ರಿಮಿನಲ್ ಕೇಸುಗಳ ನಿರ್ವಹಣೆಯಲ್ಲಿ ಹೆಚ್ಚಿನ ದಕ್ಷತೆ ತರಲು ರಾಜ್ಯದಲ್ಲಿ ಪ್ರತ್ಯೇಕ ಪ್ರಾಸಿಕ್ಯೂಷನ್ ಡೈರೆಕ್ಟೊರೇಟ್ ಒಂದನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆ.

- **ಕಲಬುರ್ಗಿ ಗ್ರಾಮದಲ್ಲಿ ಎತ್ತು ಹಾಯ್ದು ಸಚಿವ ಕಿತ್ತೂರ್ ಅವರಿಗೆ ಗಾಯ**

ಬೆಂಗಳೂರು, ಸೆ. 5 –ಬರಗಾಲ ಪರಿಹಾರ ಕಾಮಗಾರಿಗಳ ಬಗ್ಗೆ ಕ್ರಮ ಕೈಗೊಳ್ಳಲು ಕಲಬುರ್ಗಿ ಜಿಲ್ಲೆಯಲ್ಲಿ ಸಂಚರಿಸುತ್ತಿರುವ ರಾಜ್ಯದ ಗೃಹ ಇಲಾಖೆಯ ರಾಜ್ಯ ಸಚಿವ ಅರ್.ಡಿ.ಕಿತ್ತೂರ್ ಅವರನ್ನು ಎತ್ತೊಂದು ಹಾಯ್ದು ಗಾಯಗೊಳಿಸಿತು.

ಪರಿಣಾಮವಾಗಿ ಸಚಿವರು ಕೆಳಗೆ ಬಿದ್ದರು. ಅವರಿಗೆ ಕಲಬುರ್ಗಿಯ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ಎದೆಗೆ ಗಾಯಗಳಾಗಿದ್ದು, ಹೆಚ್ಚಿನ ತೊಂದರೆ ಇಲ್ಲವೆಂದು ಅಧಿಕೃತ ವರದಿ ಹೇಳಿದೆ.

ಸ್ವೀಕಾರಾರ್ಹ ನಾಯಕನಾಗಿ ಹೊರಹೊಮ್ಮಲು ಇರುವ ಅವಕಾಶ ಮತ್ತು ಅಡೆತಡೆ

ವಿರೋಧ ಪಕ್ಷಗಳಲ್ಲಿ ಆಸೆ ಚಿಗುರಿಸಿದ ನಿತೀಶ್

ವಿಶ್ಲೇಷಣೆ

ಅರುಣ್ ಸಿನ್ಹಾ

ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದಿಂದ (ಎನ್‌ಡಿಎ) ಹೊರನಡೆದಿರುವ ನಿತೀಶ್ ಕುಮಾರ್ ಅವರು ಮಹಾಘಟಬಂಧನದ (ಮಹಾ ಮೈತ್ರಿಕೂಟ) ಜತೆ ಪುನಃ ಸೇರಿಕೊಂಡಿರುವುದು ದೇಶದಾದ್ಯಂತ ಬಿಜೆಪಿ ವಿರೋಧಿ ಮತದಾರರಲ್ಲಿ ಹೊಸ ಆಶಾಕಿರಣವನ್ನು ಮೂಡಿಸಿದೆ. ಕಾಂಗ್ರೆಸ್ ಪಕ್ಷದ ಸಾಮರ್ಥ್ಯ ಕ್ರಮೇಣ ಕ್ಷೀಣಿಸತೊಡಗಿದ್ದು ಮತ್ತು ವಿರೋಧ ಪಕ್ಷಗಳು ಒಗ್ಗೂಡುವ ಯಾವ ಲಕ್ಷಣಗಳೂ ಗೋಚರಿಸದೆ ಹೋಗಿದ್ದು, ಅವರನ್ನು ಇದುವರೆಗೆ ನಿರಾಶೆಯ ಮಡುವಿನೊಳಗೆ ನೂಕಿಬಿಟ್ಟಿತ್ತು. ಎರಡೂ ಮೈತ್ರಿಕೂಟಗಳಲ್ಲಿ ಈಗ ಉಂಟಾಗಿರುವ ಪಲ್ಲಟದಿಂದಾಗಿ 2024ರ ಚುನಾವಣೆಯಲ್ಲಿ ನರೇಂದ್ರ ಮೋದಿ ಅವರ ವಿರುದ್ಧ ನಿತೀಶ್ ಅವರು ವಿರೋಧಪಕ್ಷಗಳ ಪ್ರಧಾನಿ ಅಭ್ಯರ್ಥಿಯಾಗುವ ಸಾಧ್ಯತೆ ಹೆಚ್ಚಿರುವ ಕುರಿತು ಊಹಾಪೋಹಗಳು ಹರಿದಾಡುತ್ತಿವೆ.

ನಿತೀಶ್ ಅವರು, ತಮ್ಮ ರಾಜಕೀಯ ಬದುಕಿನಲ್ಲಿ ವಿರೋಧಪಕ್ಷಗಳ ಸಂಭಾವ್ಯ ಪ್ರಧಾನಿ ಅಭ್ಯರ್ಥಿಯಾಗಿ ಬಿಂಬಿತವಾಗುತ್ತಿರುವುದು ಇದು ಎರಡನೇ ಬಾರಿ. ಮೊದಲ ಬಾರಿ ಅವರನ್ನು ಈ ಹುದ್ದೆಗೆ ಪರಿಗಣಿಸಿದ ಸಂದರ್ಭವೆಂದರೆ ಅದು 2010ರ ದಶಕದಲ್ಲಿ. ಬಿಹಾರ ವಿಧಾನಸಭೆಗೆ 2010ರಲ್ಲಿ ನಡೆದ ಚುನಾವಣೆಯಲ್ಲಿ ಅವರು ದೊಡ್ಡ ಬಹುಮತ ಪಡೆದಿದ್ದರು. ಬಡತನ ಮತ್ತು ಜಡತ್ವದಿಂದ ಕುಸಿದುಹೋಗಿದ್ದ ಬಿಹಾರವನ್ನು ಮೇಲೆತ್ತಿದ ನಾಯಕನೆಂದು ಬಿಂಬಿತವಾಗಿ ದೇಶದಾದ್ಯಂತ ಜನಪ್ರಿಯರಾಗಿದ್ದರು. ಬಿಜೆಪಿ ಜತೆ ಸಖ್ಯವಿದ್ದರೂ ಮೋದಿ ಅವರನ್ನೂ ಅವರ ಉಗ್ರ ಹಿಂದುತ್ವವನ್ನೂ ಬಹಿರಂಗವಾಗಿಯೇ ವಿರೋಧಿಸುವ ಮೂಲಕ ದೊಡ್ಡ ಗೌರವವನ್ನು ಸಂಪಾದಿಸಿದ್ದರು. ಹೀಗಾಗಿ, 2014ರ ಲೋಕಸಭಾ ಚುನಾವಣೆ ಕಾಲಕ್ಕೆ ಸಾರ್ವಜನಿಕ ಗ್ರಹಿಕೆಯಲ್ಲಿ ಅವರು ಮೋದಿಯವರ ಪ್ರಬಲ ಪ್ರತಿಸ್ಪರ್ಧಿಯಾಗಿ ಕಾಣಿಸಿಕೊಂಡಿದ್ದರಲ್ಲಿ ಯಾವುದೇ ಆಶ್ಚರ್ಯವಿಲ್ಲ.

ಆದರೆ, ವಾಸ್ತವವಾಗಿ ಅವರು ಮೋದಿಗೆ ಪ್ರತಿಸ್ಪರ್ಧಿಯಾಗಿ ನಿಲ್ಲಲಿಲ್ಲ. 2013ರ ಜೂನ್‌ನಲ್ಲಿ ಗೋವಾದಲ್ಲಿ ನಡೆದ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಮೋದಿ ಅವರನ್ನು ಆ ಪಕ್ಷದ ಪ್ರಧಾನಿ ಅಭ್ಯರ್ಥಿಯನ್ನಾಗಿ ಘೋಷಿಸಲಾಯಿತು. ಅದನ್ನು ವಿರೋಧಿಸಿ ನಿತೀಶ್ ಎನ್‌ಡಿಎಯಿಂದಲೇ ನಿರ್ಗಮಿಸಿದರು. ಆ ಸಂದರ್ಭದಲ್ಲಿ ಸಂಯುಕ್ತ ಪ್ರಗತಿಪರ ಒಕ್ಕೂಟವು (ಯುಪಿಎ) ಸಂಯುಕ್ತ ಜನತಾದಳವನ್ನು ತನ್ನೊಂದಿಗೆ ಸೇರಿಸಿಕೊಳ್ಳುವ ಹಾಗೂ ನಿತೀಶ್ ಅವರನ್ನು ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯನ್ನಾಗಿಸುವ ಪ್ರಸ್ತಾವದೊಂದಿಗೆ ಅವರನ್ನು ತಲುಪುವ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಅದೇ ರೀತಿ ನಿತೀಶ್ ಸಹ ಯುಪಿಎ ಜತೆ ಸೇರುವ ಇರಾದೆಯನ್ನು ವ್ಯಕ್ತಪಡಿಸಲಿಲ್ಲ. ಅದರ ಪರಿಣಾಮವಾಗಿ 2014ರ ಚುನಾವಣೆಯಲ್ಲಿ ಮೋದಿ ವಿರುದ್ಧದ ಅವರ ಹೋರಾಟವು ಬಿಹಾರಕ್ಕೆ ಸೀಮಿತಗೊಂಡಿತು. ಮೋದಿ ಪ್ರಧಾನಿ ಆಗುವುದನ್ನು ತಡೆಯುವುದಕ್ಕಿಂತ, ಅವರು ತಮ್ಮ ರಾಜಕೀಯ ನೆಲೆಯನ್ನು ಆಕ್ರಮಿಸುವುದನ್ನು ತಡೆಯುವುದಕ್ಕೇ ನಿತೀಶ್ ಗಮನವನ್ನು ಕೇಂದ್ರೀಕರಿಸಬೇಕಾಯಿತು. ಈ ಏಕಾಂಗಿ ಹೋರಾಟವು ನಿತೀಶ್ ಅವರಿಗೆ ಸುಸ್ತು ಹೊಡೆಸಿತು.

ಈಗ ಅವರು ಹಿಂದೆ ಇದ್ದುದಕ್ಕಿಂತಲೂ ಉತ್ತಮ ಸ್ಥಿತಿಯಲ್ಲಿದ್ದಾರೆ ಮತ್ತು ಮಹಾಘಟಬಂಧನದ ಭಾಗವಾಗಿದ್ದಾರೆ. ಅಂತೆಯೇ ಈ ಮಹಾಘಟಬಂಧನವು ಯುಪಿಎ ಅಂಗವಾಗಿದೆ. ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ಮೋದಿ ನೇತೃತ್ವದ ಸರ್ಕಾರವು ರದ್ದುಗೊಳಿಸಿದಾಗ, ಪೌರತ್ವ (ತಿದ್ದುಪಡಿ) ಕಾಯ್ದೆ ಜಾರಿಗೆ ಸಂಬಂಧಿಸಿದಂತೆ ನಿತೀಶ್ ಅವರಿಂದ ಹೇಳಿಕೊಳ್ಳುವಂತಹ ಪ್ರತಿರೋಧ ವ್ಯಕ್ತವಾಗಿರಲಿಲ್ಲ. ಇದರಿಂದ ಬಹುತ್ವದ ಪರ ಎಂಬ ಅವರ ವ್ಯಕ್ತಿಚಿತ್ರಣಕ್ಕೆ ಪೆಟ್ಟು ಬಿದ್ದಿದ್ದರೂ ತಟಸ್ಥ–ಎಡ ಸಿದ್ಧಾಂತದ ಪಕ್ಷಗಳಿಗೆ ಅವರು ಈಗಲೂ ಸ್ವೀಕಾರಾರ್ಹ ನಾಯಕ. ಭ್ರಷ್ಟಾಚಾರಮುಕ್ತ, ಚಿಂತನಶೀಲ ರಾಜಕಾರಣಿಯಾಗಿ ಅವರು ಕಾಣುತ್ತಿರುವುದೇ ಇದಕ್ಕೆ ಕಾರಣ ಆಗಿರಬಹುದು. ಹೀಗಿದ್ದೂ ಅವರನ್ನು ವಿರೋಧಪಕ್ಷಗಳ ಪ್ರಧಾನಿ ಅಭ್ಯರ್ಥಿಯನ್ನಾಗಿ ಘೋಷಿಸುವಲ್ಲಿ ಹಲವು ಅಡೆತಡೆಗಳೂ ಇವೆ.

ಮೊದಲನೆಯದಾಗಿ, ರಾಹುಲ್ ಗಾಂಧಿಯವರೇ ಯುಪಿಎಯ ಮೊದಲ ಆಯ್ಕೆ. ಆದರೆ, ಅವರು ಪ್ರಧಾನಿ ಅಭ್ಯರ್ಥಿಯಾಗುವ ಪ್ರಸ್ತಾವವನ್ನು ಒಪ್ಪಲಾರರು ಎಂದೂ ಹೇಳಲಾಗುತ್ತಿದೆ. ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನಕ್ಕೆ ತಮ್ಮ ಕುಟುಂಬದ ಯಾರನ್ನೂ ಆಯ್ಕೆ ಮಾಡುವುದು ಬೇಡ ಎಂದು ಹೇಳಿದಂತೆಯೇ ಪ್ರಧಾನಿ ಅಭ್ಯರ್ಥಿಯಾಗುವ ಅವಕಾಶವನ್ನೂ ಅವರು ನಿರಾಕರಿಸುವ ಸಾಧ್ಯತೆ ಇದೆ. ವಂಶಾಡಳಿತದ ವಿಚಾರ ಮುಂದಿಟ್ಟುಕೊಂಡು ಬಿಜೆಪಿ ದಾಳಿ ನಡೆಸಬಾರದು ಎನ್ನುವುದು ಅವರ ಈ ನಿರ್ಧಾರದ ಹಿಂದಿನ ತಂತ್ರವಾಗಿರಬಹುದು. ಈ ಊಹೆ ಏನಾದರೂ ನಿಜವಾದರೆ ಪ್ರಧಾನಿ ಹುದ್ದೆಗಾಗಿ ಗಾಂಧಿ ಕುಟುಂಬಕ್ಕೆ ಹೊರತಾದ ವ್ಯಕ್ತಿಯನ್ನೇ ಶೋಧಿಸಬೇಕಾಗುತ್ತದೆ. ಆಗ ನಿತೀಶ್ ಅವರೇ ಅತ್ಯುತ್ತಮ ಆಯ್ಕೆಯಾಗಬಲ್ಲರು.

ಹೀಗಿದ್ದೂ ಇಲ್ಲಿ ಮತ್ತೊಂದು ಸಾಧ್ಯತೆಯೂ ಇದೆ. ರಾಹುಲ್ ಅಥವಾ ಪ್ರಿಯಾಂಕಾ ಗಾಂಧಿ ವಾದ್ರಾ ಅಭ್ಯರ್ಥಿಯಾಗದಿದ್ದರೆ ಕಾಂಗ್ರೆಸ್ ಪಕ್ಷದಲ್ಲೇ ಬೇರೊಬ್ಬರನ್ನು ಆಯ್ಕೆ ಮಾಡಬಹುದು ಎನ್ನುವುದೇ ಆ ಸಾಧ್ಯತೆ. ಆಗ ನಿತೀಶ್ ಅವರ ಅವಕಾಶ ಕೈತಪ್ಪುವ ಸಂಭವವಿದೆ. ಸಂಸತ್ತಿನಲ್ಲಿರುವ ಅಥವಾ ಆಡಳಿತಕ್ಕೆ ಬರುವ ಮೈತ್ರಿಕೂಟದಲ್ಲಿರುವ ಅತಿದೊಡ್ಡ ಪಕ್ಷದ ನಾಯಕನೇ ಸರ್ಕಾರದ ನೇತೃತ್ವವನ್ನೂ ವಹಿಸಬೇಕು ಎಂಬುದು ಒಪ್ಪಿತ ರೂಢಿ. ಹೀಗಾಗಿ ಯಾರೂ ಅದನ್ನು ವಿರೋಧಿಸಲಾರರು.

ಇನ್ನೊಂದು ಸಾಧ್ಯತೆಯೂ ಇದೆ. ಕಾಂಗ್ರೆಸ್‌ವೊಂದನ್ನು ಹೊರತುಪಡಿಸಿ ಇತರ ವಿರೋಧ ಪಕ್ಷಗಳಿಂದ ನಿತೀಶ್ ಅವರು ಬೆಂಬಲ ಗಳಿಸಬಹುದು. ಲೋಹಿಯಾವಾದದ ಹಿನ್ನೆಲೆಯುಳ್ಳ ‘ಜನತಾದಳ ಪರಿವಾರ’ದ ಆರ್‌ಜೆಡಿ, ಜೆಡಿಎಸ್, ಸಮಾಜವಾದಿ ಪಕ್ಷ (ಎಸ್‌ಪಿ), ಭಾರತೀಯ ರಾಷ್ಟ್ರೀಯ ಲೋಕದಳ (ಐಎನ್‌ಎಲ್‌ಡಿ) ಮತ್ತು ನಿತೀಶ್ ಅವರದೇ ಸ್ವಂತ ಜೆಡಿಯು ಪಕ್ಷ ಅವರ ಬೆಂಬಲಕ್ಕೆ ನಿಲ್ಲಬಹುದು. ಜೆಡಿಎಸ್‌ನ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರಂತೂ ಈಗಾಗಲೇ ನಿತೀಶ್ ಅವರ ನಾಯಕತ್ವಕ್ಕೆ ಪರೋಕ್ಷವಾಗಿ ಒಪ್ಪಿಗೆ ಸೂಚಿಸಿದ್ದಾರೆ. ಆರ್‌ಜೆಡಿ ಸಹ ಅವರ ಜತೆಗಿದೆ. ಎಸ್‌ಪಿ ಮತ್ತು ಐಎನ್‌ಎಲ್‌ಡಿ ಕೂಡ ಅವರನ್ನು ಬೆಂಬಲಿಸುವ ಸಾಧ್ಯತೆ ಇದೆ.

ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಎರಡೂ ಮೊದಲಿನಿಂದಲೂ ಕಾಂಗ್ರೆಸ್ ನಾಯಕತ್ವವನ್ನು ಪ್ರಶ್ನಿಸುತ್ತಲೇ ಬಂದಿವೆ. ಒಕ್ಕೂಟದ ಅಭ್ಯರ್ಥಿಯಾಗಿ ರಾಹುಲ್ ಅವರನ್ನೋ ಅಥವಾ ಕಾಂಗ್ರೆಸ್ ಪಕ್ಷದ ಬೇರೆ ಯಾವುದೇ ನಾಯಕನನ್ನೋ ಆ ಪಕ್ಷಗಳು ಒಪ್ಪುವ ಸಾಧ್ಯತೆ ಕಡಿಮೆ. ಆಗಲೂ ನಿತೀಶ್ ಅವರೇ ಸ್ವೀಕಾರಾರ್ಹವಾಗಿ ಗೋಚರಿಸಬಹುದು.

ತೆಲಂಗಾಣದ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರು ಪಟ್ನಾದಲ್ಲಿ ಇತ್ತೀಚೆಗೆ ನಿತೀಶ್ ಅವರನ್ನು ಭೇಟಿ ಮಾಡಿರುವುದು ಈ ಹಿನ್ನೆಲೆಯಲ್ಲಿ ಮಹತ್ವ ಪಡೆದುಕೊಂಡಿದೆ. ಜಂಟಿ ಪತ್ರಿಕಾಗೋಷ್ಠಿಯಲ್ಲಿ ಎದುರಾದ ‘ನಿತೀಶ್ ಅವರು ಪ್ರಧಾನಿ ಅಭ್ಯರ್ಥಿಯಾಗಬಹುದೇ’ ಎಂಬ ಪ್ರಶ್ನೆಗೆ, ‘ದೇಶದ ಅತ್ಯುತ್ತಮ ಹಾಗೂ ಹಿರಿಯ ನಾಯಕರಲ್ಲಿ ನಿತೀಶ್ ಕೂಡ ಒಬ್ಬರಾಗಿದ್ದಾರೆ. ಒಕ್ಕೂಟದ ಪಕ್ಷಗಳೆಲ್ಲ ಒಟ್ಟಿಗೆ ಕುಳಿತು ಪ್ರಧಾನಿ ಅಭ್ಯರ್ಥಿ ಯಾರಾಗಬೇಕೆಂದು ನಿರ್ಧರಿಸುತ್ತವೆ’ ಎಂದು ರಾವ್ ಉತ್ತರಿಸಿದ್ದರು. ಅವರ ಈ ಹೇಳಿಕೆಯಿಂದ ಟಿಆರ್‌ಎಸ್ ಕೂಡ ನಿತೀಶ್ ಅವರನ್ನು ಪ್ರಧಾನಿ ಅಭ್ಯರ್ಥಿಯನ್ನಾಗಿ ನೋಡುತ್ತಿದೆ ಎಂದೇ ಭಾವಿಸಬಹುದು.

ರಾವ್ ಅವರ ಹೇಳಿಕೆಯು ಹಿಂದಿನ ತನ್ನ ನಿಲುವಿನಿಂದ ಟಿಆರ್‌ಎಸ್ ಹಿಂದೆ ಸರಿದುದರ ಸಂಕೇತವಾಗಿದೆ. ಟಿಎಂಸಿಯಂತೆಯೇ ಟಿಆರ್‌ಎಸ್ ಕೂಡ ವಿರೋಧ ಪಕ್ಷಗಳನ್ನು ಒಗ್ಗೂಡಿಸುವಲ್ಲಿ ತಾನೇ ಊರುಗೋಲಾಗಲು ಹೊರಟಿತ್ತು. ಕಾಂಗ್ರೆಸ್‌ನಿಂದ ಉಳಿದ ವಿರೋಧ ಪಕ್ಷಗಳನ್ನು ದೂರ ಸರಿಸಲು ಕೂಡ ಪ್ರಯತ್ನಿಸಿತ್ತು. ಕೆಸಿಆರ್ ಅವರು ನಿತೀಶ್ ಪರವಾಗಿ ಆಡಿರುವ ಮಾತುಗಳು ಕಾಂಗ್ರೆಸ್ಸೇತರ ನಾಯಕ ಪ್ರಧಾನಿ ಅಭ್ಯರ್ಥಿಯಾಗಲು ತನ್ನ ಸಹಮತವಿದೆ ಎನ್ನುವುದರ ದ್ಯೋತಕ.

ನಿತೀಶ್ ಅವರನ್ನು ಟಿಎಂಸಿ ಹೇಗೆ ನೋಡಲಿದೆ ಎನ್ನುವುದು ಇನ್ನೂ ಅಸ್ಪಷ್ಟ. ಮಮತಾ ಬ್ಯಾನರ್ಜಿ ಮತ್ತು ನಿತೀಶ್ ನಡುವೆ ಸೌಹಾರ್ದ ಸಂಬಂಧವಿದೆ ಎನ್ನುವುದು ನಿಜವಾದರೂ ‘ರಾಷ್ಟ್ರಮಟ್ಟದ ಪಾತ್ರ’ ನಿರ್ವಹಿಸಲು ಮಮತಾ ಉತ್ಸುಕರಾಗಿರುವುದನ್ನು ಅಲ್ಲಗಳೆಯುವಂತಿಲ್ಲ. ಅವರು, ಈಗಾಗಲೇ ವಿರೋಧಪಕ್ಷಗಳ ಎರಡು ಸಭೆಗಳನ್ನು ನಡೆಸಿದ್ದು, ಶರದ್ ಪವಾರ್ ಅವರೊಂದಿಗೂ ಚರ್ಚಿಸಿದ್ದಾರೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿ ದೀರ್ಘ ಸಮಯದಿಂದ ಸೇವೆ ಸಲ್ಲಿಸುತ್ತಿರುವ ಮಮತಾ ಪ್ರಧಾನಿ ಹುದ್ದೆಗೇರುವ ಬಯಕೆ ಹೊಂದಿರುವುದು ಸಹಜವಾಗಿಯೇ ಇದೆ. ಅವರ ಪಾಲಿಗೆ ‘ರಾಷ್ಟ್ರ ಮಟ್ಟದ ಪಾತ್ರ’ ನಿರ್ವಹಿಸುವುದು ಎಂದರೆ ಪ್ರಧಾನಿ ಹುದ್ದೆ ಅಲಂಕರಿಸುವುದೇ ಹೊರತು ಈ ಹಿಂದೆ ನಿಭಾಯಿಸಿದ ಕೇಂದ್ರ ಸಚಿವರ ಹುದ್ದೆಗೆ ಏರುವುದಲ್ಲ. ಅದರರ್ಥ ವಿರೋಧ ಪಕ್ಷಗಳ ಒಕ್ಕೂಟದಲ್ಲೇ ಬಹುಕೋನದ ಸ್ಪರ್ಧೆ. ಹಾಗಾದಾಗ ನಿತೀಶ್ ಅಭ್ಯರ್ಥಿಯಾಗುವ ಅವಕಾಶಗಳು ಕ್ಷೀಣಿಸಲಿವೆ.

ಚುರುಮುರಿ

ಪುಣ್ಯಕೋಟಿ-2.0

• ಲಿಂಗರಾಜು ಡಿ.ಎಸ್.

ಸತ್ಯಕ್ಕಾಗಿ ಬದುಕಿದ್ದ ಪುಣ್ಯಕೋಟಿಗಳ ದಂಡನ್ನು ಆಧುನಿಕ ಕಾಲದಲ್ಲಿ ನೀತಿ, ನ್ಯಾಯ, ಧರ್ಮಗಳನ್ನು ಮಾರಿಕೊಂಡ ಹುಲಿಗಳೇ ಆಳತೊಡಗಿದ್ದವು.

ಹುಲಿಗಳು ಹೇಳಿದ್ದೇ ಸತ್ಯ, ಇದೇ ಸಮರ್ಥ ಆಡಳಿತ ಎಂಬ ನಂಬಿಕೆಯನ್ನು ಗೋವುಗಳ ಮನಸ್ಸಲ್ಲಿ ಹುಟ್ಟುಹಾಕಲಾಗಿತ್ತು. ಖೂಳ ವ್ಯಾಘ್ರಗಳು ರೇವಡಿ ದನಸ್ನೇಹಿ ಕ್ರಮಗಳು, ಉಚಿತ ರೇಷನ್, ಸಸ್ತಾ ಕ್ಯಾಂಟೀನು, ಆಧುನಿಕ ಪೆದ್ದಾರಿಗಳ ಹುಸಿ ಜಾಹೀರಾತುಗಳನ್ನು ತೋರಿಸುತ್ತಾ ಅಕ್ರಮ ಪರ್ಸೆಂಟೇಜು ಗಳಿಸಿ ತಮ್ಮ ಹೊಟ್ಟೆ ಹೊರೆದುಕೊಳ್ಳುತ್ತಿದ್ದವು. ಹುಲಿಗಳು ತಿಂದು ಬಿಟ್ಟ ಎಂಜಲಿಗಾಗಿ ನರಿ-ತೋಳಗಳು ಕಾಯ್ದು ಕುಳಿತಿದ್ದವು.

ನಗರದ ಐಟಿ ಗೋವುಗಳು, ತಾವು ತೆರಿಗೆಯ ನೊಗ ಹೊತ್ತು ದುಡಿದರೂ ಹುಲಿಗಳ ಸರ್ಕಾರ ತಮಗೆ ಸರಿಯಾದ ಸೌಕರ್ಯ ಕಲ್ಪಿಸುತ್ತಿಲ್ಲ ಎಂದು ಸಿಟ್ಟಿಗೆದ್ದು, ತಾವು ಬೇರೆ ಕಡೆ ದುಡಿಯಲು ಹೋಗುವುದಾಗಿ ಬೆದರಿಕೆ ಹಾಕಿದವು.

ಹುಲಿಗಳು ‘ನುಸುಳಿ ಹೋಗುವೆ, ಹುಸಿಯ ನಾಡುವೆ!’ ಎಂದು ಗೊಣಗಿಕೊಳ್ಳುತ್ತಾ ಮಳೆ ನಿಂತ ಕೂಡಲೇ ರಸ್ತೆ, ಟ್ರಾಫಿಕ್ ಅವ್ಯವಸ್ಥೆ ಸರಿಪಡಿಸುವುದಾಗಿ ಹಳೇ ರೆಕಾರ್ಡನ್ನು ಮತ್ತೆ ಹಾಕಿದವು! ರಸ್ತೆಗುಂಡಿಗಳ ಹೋಲ್‌ಗೇಟುಗಳು, ರಾಜಕಾಲುವೆ ಒತ್ತುವರಿ, ಪಾಲಿಕೆ, ಅಭಿವೃದ್ಧಿ ಪ್ರಾಧಿಕಾರಗಳ ನಾಟಕ, ಸ್ಟೀಲ್ ಬ್ರಿಡ್ಜ್ ಕುಲುಕಾಟದ ಮೋಸ ನಿಲ್ಲದೇ ನಿರಂತರವಾಗಿ ನಡೆಯುತ್ತಲೇ ಇತ್ತು.

ಗೋಮುಖ ಧರಿಸಿದ ಹುಲಿಗಳು ದನ ಸಾಮಾನ್ಯರಾದ ತಮ್ಮನ್ನು ವೋಟಿಗಾಗಿ ಮೋಸಗೊಳಿಸುತ್ತಿವೆ ಎಂಬುದನ್ನು ಅರಿತ ಗೋವುಗಳು ನಿಸ್ಸಹಾಯಕತೆಯಿಂದ ‘ಕಣ್ಣ ನೀರನು ಸುರಿಸಿ ನೊಂದು, ಸತ್ಯ ವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು. ಚಂಡ ವ್ಯಾಘ್ರನೆ ನೀನಿದೆಲ್ಲವ ಉಂಡು ಸಂತಸದಿಂದಿರು’ ಎಂದು ದುಃಖದಿಂದ ಶಾಪ ಹಾಕುತ್ತಾ ರಸ್ತೆಗುಂಡಿಗೆ ಹಾರಿ ಸಾಮೂಹಿಕ ಆತ್ಮಹತ್ಯೆ ಮಾಡಿಕೊಂಡವು!

ಕಿಂಚಿತ್ತೂ ನೋಯದ ಆಳುವ ಹುಲಿಗಳು ಮತ್ತು ವಿರೋಧಪಕ್ಷದ ಹುಲಿಗಳು ಹಸಿದ ವೇಳೆಗೆ ಸಿಕ್ಕಿದ ಈ ಅವಘಡ ತಮಗೆಷ್ಟು ಮತ ತಂದುಕೊಡಬಹುದು ಎಂಬ ಲೆಕ್ಕಾಚಾರದಲ್ಲಿ ಕಳೆದುಹೋದವು! ಸತ್ಯವೇ ಭಗವಂತನೆಂಬ ಪುಣ್ಯಕೋಟಿಯ ಕಥೆಯಿದು!

ಸಂಗತ

‘ಮೂಕ್’: ಮಹತ್ವಾಕಾಂಕ್ಷೆಯಷ್ಟೇ ಸಾಲದು

ಈ ಮಾದರಿಯ ಕಲಿಕೆಗೆ ದೇಶದಾದ್ಯಂತ ಅಗತ್ಯವಾದ ಮೂಲ ಸೌಕರ್ಯ ತೃಪ್ತಿಕರವಾಗಿ ಇದೆಯೇ ಎಂದು ಯೋಚಿಸಬೇಕಿದೆ

• ಡಾ. ಶಿವಲಿಂಗಸ್ವಾಮಿ ಎಚ್.ಕೆ.

ಕೊರೊನೋತ್ತರ ಭಾರತದಲ್ಲಿ ಉನ್ನತ ಶಿಕ್ಷಣ ಕ್ಷೇತ್ರವು ಗಣನೀಯ ಬದಲಾವಣೆಗಳನ್ನು ಕಾಣುತ್ತಿದೆ. ಆನ್‌ಲೈನ್ ಸಂಸ್ಕೃತಿ ಕಾರಣದಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ‘ಹೈಬ್ರಿಡ್ ಕಲಿಕೆ’ಯ ಯುಗ ಪ್ರಾರಂಭವಾಗಿರುವುದು ಗೋಚರಿಸುತ್ತದೆ. ಇದಕ್ಕೆ ಪೂರಕವಾಗಿ ಯುಜಿಸಿ ಕೂಡ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಸುಧಾರಣೆಗಳನ್ನು ಜಾರಿಗೆ ತಂದಿದೆ. ಈ ದಿಸೆಯಲ್ಲಿ ಆಗಿರುವ ಮತ್ತೊಂದು ಬೆಳವಣಿಗೆಯೆಂದರೆ, ಮೂಕ್ (MOOC– Massive Open Online Courses) ಆನ್‌ಲೈನ್ ಕೋರ್ಸುಗಳು.

ಈ ಕೋರ್ಸುಗಳು ಆನ್‌ಲೈನಿನಲ್ಲಿ ಉಚಿತವಾಗಿ ಲಭ್ಯ ಇವೆ. ಜಗತ್ತಿನಾದ್ಯಂತ ವಿವಿಧ ಶಿಸ್ತುಗಳಲ್ಲಿ ಪ್ರಾವೀಣ್ಯ ಹೊಂದಿರುವ ನುರಿತ ಪ್ರಾಧ್ಯಾಪಕರ ಉಪನ್ಯಾಸಗಳನ್ನು ವಿದ್ಯಾರ್ಥಿಗಳು ಮನೆಯಿಂದಲೇ ಆಲಿಸಿ ನೂತನ ಕೌಶಲಗಳನ್ನು ಕಲಿಯಬಹುದು, ಆ ಮೂಲಕ ಸರ್ವಾಂಗೀಣ ಬೆಳವಣಿಗೆ ಹೊಂದಬಹುದು ಎಂಬುದು ಈ ಕೋರ್ಸ್‌ಗಳನ್ನು ರೂಪಿಸಿದ್ದರ ಹಿಂದಿರುವ ಸದಾಶಯವಾಗಿದೆ.

ಮೂಕ್ ಅನ್ನು ಪರಿಚಯಿಸಿ, ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ಇದರ ಸದುಪಯೋಗ ಪಡೆದುಕೊಳ್ಳುವಂತೆ ಮಾಡಬೇಕು ಎಂದು ಆರಂಭದಲ್ಲಿ ಉದ್ದೇಶಿಸಲಾಗಿತ್ತು.ಆದರೆವಿದ್ಯಾರ್ಥಿಗಳಪ್ರತಿಕ್ರಿಯೆನೀರಸವಾಗಿದ್ದರಿಂದ ಈಗ ಈ ಕೋರ್ಸ್‌ಗಳನ್ನು ಎಲ್ಲ ವಿಶ್ವವಿದ್ಯಾಲಯಗಳು ತಮ್ಮ ಪಠ್ಯಕ್ರಮದಲ್ಲಿ ಅಳವಡಿಸಿಕೊಂಡು, ಶೇಕಡ 40ರವರೆಗೆ ಈ ಕೋರ್ಸುಗಳನ್ನು ಆಯ್ದುಕೊಳ್ಳುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಮಾಡಿಕೊಡಬೇಕು ಎಂದು ಆದೇಶಿಸಲಾಗಿದೆ. ಅಂದರೆ ಪ್ರತೀ ವಿಶ್ವವಿದ್ಯಾಲಯವು ತನ್ನ ಪರೀಕ್ಷಾ ಕ್ರಮದ ವ್ಯಾಪ್ತಿಯಲ್ಲಿ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುವ ಮೂಕ್ ಕೋರ್ಸುಗಳ ಅಂಕಗಳನ್ನೂ ಪರಿಗಣಿಸಬೇಕು.

ಪ್ರತಿಬಾರಿ ಶಿಕ್ಷಣ ನೀತಿಯನ್ನು ಪರಿಷ್ಕರಿಸಿದಾಗ, ಉನ್ನತ ಶಿಕ್ಷಣದ ಸುಧಾರಣೆಗಾಗಿ ಸಮಕಾಲೀನ ಮಾದರಿಗಳನ್ನು ಅಳವಡಿಸಿಕೊಂಡು, ಭಾರತೀಯ ವಿಶ್ವವಿದ್ಯಾಲಯಗಳನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವ ಮಹತ್ವಾಕಾಂಕ್ಷೆ ಇದ್ದೇ ಇರುತ್ತದೆ. ಇದು ಉತ್ತೇಜನಕಾರಿ ನಡೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಪರಿಷ್ಕೃತ ಶಿಕ್ಷಣ ನೀತಿಗಳು ಹೊಸತನವನ್ನು ಪರಿಚಯಿಸಿದಾಗಲೆಲ್ಲ ಅದರ ಅನುಷ್ಠಾನದ ರೂಪುರೇಷೆಗಳು ನಮ್ಮ ಮುಂದೆ ಸವಾಲುಗಳಾಗಿ ಕಾಣುತ್ತವೆ. ಮಹತ್ವಾಕಾಂಕ್ಷೆಯುಳ್ಳ ನಾಯಕರಲ್ಲಿ ಪ್ರಮುಖವಾಗಿ ಎದ್ದು ಕಾಣುವುದು ಆದರ್ಶವಾದ ಮತ್ತು ವಾಸ್ತವದ ನಡುವೆ ಇರುವ ಅಗಾಧವಾದ ಅಂತರ.

ಅಂತರಶಿಸ್ತೀಯ ಕಲಿಕೆಯ ದೃಷ್ಟಿಯಿಂದ ವಿದ್ಯಾರ್ಥಿಗಳಿಗೆ ತಮ್ಮ ಆಸಕ್ತಿಯ ಯಾವುದೇ ಕೋರ್ಸ್ ಕಲಿಯಲು ಅವಕಾಶ ಕಲ್ಪಿಸುವ ಸಲುವಾಗಿ ಆನ್‌ಲೈನ್ ಕಲಿಕೆಯನ್ನು ಅಧಿಕೃತಗೊಳಿಸುವುದು ಮೇಲ್ನೋಟಕ್ಕೆ ಶ್ಲಾಘನೀಯ. ಆದರೆ ಈ ‘ಹೈಬ್ರಿಡ್ ಮಾದರಿ’ಯ ಸದುಪಯೋಗ ಪಡೆಯಬೇಕಿರುವುದು ವಿದ್ಯಾರ್ಥಿಗಳಾಗಿರುವುದರಿಂದ, ಭಾರತದಾದ್ಯಂತ ಈ ಮಾದರಿಯ ಕಲಿಕೆಗೆ ಅಗತ್ಯವಾದ ಮೂಲಸೌಕರ್ಯ ತೃಪ್ತಿಕರವಾಗಿ ಇದೆಯೇ ಎಂದು ಯೋಚಿಸಬೇಕಿದೆ.

ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶದಲ್ಲಿನ ವಿದ್ಯಾರ್ಥಿಗಳು ಹೆಚ್ಚಾಗಿ ಕಲಾ ವಿಭಾಗವನ್ನು ಆರಿಸಿಕೊಳ್ಳುತ್ತಾರೆ. ಇದಕ್ಕೆ ಆಸಕ್ತಿ ಒಂದು ಕಾರಣವಾದರೆ, ಕಲಿಕಾ ಮಾಧ್ಯಮ ಅತ್ಯಂತ ಪ್ರಮುಖವಾದ ಇನ್ನೊಂದು ಕಾರಣ. ಉನ್ನತ ಶಿಕ್ಷಣದಲ್ಲಿ ದ್ವಿಭಾಷಾ ಕಲಿಕೆಗೆ ಆದ್ಯತೆ ಇದೆ ಎಂದು ಹೊರನೋಟಕ್ಕೆ ಅನ್ನಿಸುತ್ತದೆ. ಆದರೆ ಪರೀಕ್ಷೆಯಲ್ಲಿ ಕನ್ನಡದಲ್ಲಿ ಉತ್ತರಿಸುವ ಅವಕಾಶ ಇರುವುದರಿಂದ, ಇಂಗ್ಲಿಷ್ ಕಲಿಕೆಗೆ ಆದ್ಯತೆ ಕಡಿಮೆ ಇರುತ್ತದೆ. ಹೀಗಾಗಿ, ಮೂಕ್ ಕೋರ್ಸುಗಳು ಸುಲಭವಾಗಿ ಲಭ್ಯ ಎಂಬ ಕಾರಣದಿಂದ ಎಲ್ಲ ಮಕ್ಕಳ ಮೇಲೆ ಒಮ್ಮೆಲೇ ಹೇರಿದರೆ, ಇಂಗ್ಲಿಷಿನಲ್ಲಿ ಸಿಗುವ ಆನ್‌ಲೈನ್ ಉಪನ್ಯಾಸಗಳು ಎಷ್ಟರಮಟ್ಟಿಗೆ ಅವರಿಗೆ ಉಪಯುಕ್ತವಾಗುತ್ತವೆ ಎಂಬುದು ಪ್ರಮುಖ ಪ್ರಶ್ನೆ.

ಮೂಕ್ ಉಪನ್ಯಾಸಗಳನ್ನು ನೇರವಾಗಿ ಆಲಿಸಬಹುದು ಮತ್ತು ಹಾಗೆಯೇ ರೆಕಾರ್ಡ್ ಆಗಿರುವ ಉಪನ್ಯಾಸಗಳೂ ಲಭ್ಯ. ಅತ್ಯಂತ ಮಹತ್ವಾಕಾಂಕ್ಷೆಯ ಈ ನೂತನ ಯೋಜನೆ ಕೇವಲ ಉಪನ್ಯಾಸಗಳ ಲಭ್ಯತೆ ಕುರಿತು ಮಾತನಾಡುತ್ತದೆ. ಆದರೆ ಹೆಚ್ಚಾಗಿ ಇಂಗ್ಲಿಷಿನಲ್ಲಿ ಮಾತ್ರ ಲಭ್ಯವಿರುವ ಉಪನ್ಯಾಸಗಳನ್ನು ಆಲಿಸಿ ಈ ಹೈಬ್ರಿಡ್ ಮಾದರಿಗೆ ಹೊಂದಿಕೊಳ್ಳಲು ಎಲ್ಲ ವಿದ್ಯಾರ್ಥಿಗಳೂ ಭಾಷಿಕವಾಗಿ ಮತ್ತು ತಾಂತ್ರಿಕವಾಗಿ ಸಜ್ಜಾಗಿದ್ದಾರೆಯೇ ಎಂದು ಯೋಚಿಸಬೇಕಿರುವುದು ಶಿಕ್ಷಣ ನೀತಿ ನಿರೂಪಕರ ಜವಾಬ್ದಾರಿ.

ಇಲ್ಲಿ ಎದುರಾಗುವ ಅತ್ಯಂತ ಪ್ರಮುಖ ಸಮಸ್ಯೆಯೆಂದರೆ, ಭಾಷಾ ಸಾಮರ್ಥ್ಯ. ಆನ್‌ಲೈನ್ ಉಪನ್ಯಾಸಗಳನ್ನು ಸದ್ಬಳಕೆ ಮಾಡಿಕೊಳ್ಳಲು ವಿದ್ಯಾರ್ಥಿಗಳು ತಮ್ಮ ಭಾಷಾ ಸಾಮರ್ಥ್ಯ ಮತ್ತು ತಾಂತ್ರಿಕ ಕೌಶಲಗಳನ್ನು ಕರಗತ ಮಾಡಿಕೊಳ್ಳುವತ್ತ ತುರ್ತಾಗಿ ಗಮನಹರಿಸಬೇಕು. ಮೂಕ್ ಕೋರ್ಸುಗಳು ರಾಷ್ಟ್ರ ಮಟ್ಟದಲ್ಲಿ ಲಭ್ಯವಿರುವುದರಿಂದ, ಗ್ರಾಮೀಣ ವಿದ್ಯಾರ್ಥಿಗಳು ಹೊರ ರಾಜ್ಯಗಳ ವಿದ್ಯಾರ್ಥಿಗಳ ಪೈಪೋಟಿಯನ್ನು ಸಹ ಎದುರಿಸಲು ಸಜ್ಜಾಗಬೇಕು. ದೇಶದ ವಿವಿಧ ಮೂಲೆಗಳಿಂದ ಉತ್ಕೃಷ್ಟ ಮಟ್ಟದ ಉಪನ್ಯಾಸಗಳು ಆನ್‌ಲೈನ್ ವೇದಿಕೆಗಳನ್ನು ಪ್ರತಿದಿನ ಸೇರಿಕೊಳ್ಳುತ್ತವೆ. ಆದರೆ ಭಾರತೀಯರಲ್ಲಿ ಎಲ್ಲರ ಬಳಕೆಗಾಗಿ ಒಂದು ಭಾರತೀಯ ಭಾಷೆ ಇಲ್ಲದಿರುವುದರಿಂದ ಇಂಗ್ಲಿಷ್ ಬಳಕೆ ಅನಿವಾರ್ಯ.

ಉಪನ್ಯಾಸಕರಿಗೆ ಹೇಗೆ ಇಂಗ್ಲಿಷ್ ಅನಿವಾರ್ಯವೊ ಹಾಗೆಯೇ ಎಲ್ಲ ವಿದ್ಯಾರ್ಥಿಗಳಿಗೂ ವಾಸ್ತವ ಪರಿಸ್ಥಿತಿಯಲ್ಲಿ ಇಂಗ್ಲಿಷ್ ಅನಿವಾರ್ಯವಾಗಿದೆ. ಹೀಗಾಗಿ ಅವರು ತಮ್ಮ ಇಂಗ್ಲಿಷ್ ಭಾಷಾ ಸಾಮರ್ಥ್ಯವನ್ನು ಉತ್ತಮಗೊಳಿಸಿಕೊಳ್ಳಲು ಮನಸ್ಸು ಮಾಡಲೇಬೇಕಾಗುತ್ತದೆ. ಆಗಷ್ಟೇ ಮಹತ್ವಾಕಾಂಕ್ಷೆಯ ಮೂಕ್ ಕೋರ್ಸುಗಳು ಯಶಸ್ವಿಯಾಗಬಹುದು.

ವಾಚಕರ ವಾಣಿ

ಭಾಷೆ ಬಳಕೆ: ಇರಲಿ ಸಜ್ಜನಿಕೆ

ಕೆಲವು ಸುದ್ದಿವಾಹಿನಿಗಳಲ್ಲಿ ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಅವರನ್ನು ‘ಯಡ್ಡಿ’ ಎಂತಲೂ ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ಅವರನ್ನು ‘ಸಿದ್ದು’ ಎಂತಲೂ ಕರೆಯುತ್ತಾರೆ. ಇದು ಒಳ್ಳೆಯ ಪರಿಪಾಟವಲ್ಲ. ಭಾಷೆಯನ್ನು ಬಳಸುವಲ್ಲಿಯೂ ಒಂದು ಸಜ್ಜನಿಕೆ ಇರಬೇಕು. ಅದು ಶಿಷ್ಟಾಚಾರ ಕೂಡ.

ಈರಪ್ಪ ಎಂ. ಕಂಬಳಿ, ಬೆಂಗಳೂರು

ವಚನಗಳು ಇರಬೇಕಾದುದು ಕಪಾಟಿನೊಳಗಲ್ಲ!

‘ವಚನ ದರ್ಶನ’ ಧ್ವನಿಸುರುಳಿ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆದಿರುವುದಾಗಿ ವರದಿಯಾಗಿದೆ (ಪ್ರ.ವಾ., ಸೆ. 4). ವಚನಗಳು ಸಂಗೀತ, ಸಾಹಿತ್ಯದ ಗುಂಪಿಗೆ ಸೇರಿದವಲ್ಲ, ಅವು ನಡೆ ನುಡಿಯಲ್ಲಿ ಬೆರೆಯಬೇಕಾದ ಕ್ರಿಯೆಗಳು. ‘ವಚನ’ ಎಂಬುದೊಂದು ಬದುಕಿನ ಕ್ರಿಯಾ ಅನುಭವ. ಆಣೆ, ಪ್ರಮಾಣ, ಪ್ರತಿಜ್ಞೆ ಇವು ವಚನ ಎಂಬ ಶಬ್ದಕ್ಕಿರುವ ಸಮೀಪದ ಅರ್ಥಗಳು. ನಿತ್ಯ ಬದುಕಿನ ಅನುಭವದ ವೈಚಾರಿಕ ಮತ್ತು ವೈಜ್ಞಾನಿಕ ಸಾರಾಂಶವೇ ವಚನ. ಇದು ವಾಸ್ತವ ಸತ್ಯ. ಸನಾತನ ಸಂಪ್ರದಾಯದ ಕಟ್ಟುಪಾಡುಗಳನ್ನು ಬದಿಗಿಟ್ಟು, ಸಮ ಸಮಾಜದ ಕಡೆಗೆ ಹೆಜ್ಜೆ ಇಡಬೇಕಾದ ಕಟು ಸತ್ಯವನ್ನು ವಚನಗಳು ಹೇಳುತ್ತವೆ.

ಆದ್ಯರ ಅನುಭವದ ಈ ನುಡಿಗಳನ್ನು ಸಾಹಿತ್ಯ ಅಥವಾ ಸಂಗೀತವೆಂದು ಪರಿಗಣಿಸಿ, ಅವುಗಳನ್ನು ಓದಿ ಇಲ್ಲವೇ ಆಲಿಸಿ ಕಪಾಟಿನೊಳಗೆ ಜೋಡಿಸಿಡುವ ಯಾಂತ್ರಿಕ ಕೆಲಸವಾದರೆ, ಅದು ವಚನಗಳಿಗೆ ಅಪಾಯವನ್ನು ತಂದೊಡ್ಡುತ್ತದೆ. ವಚನಗಳನ್ನು ಬದುಕಿನ ಕ್ರಿಯೆಗೆ ಅಳವಡಿಸಿಕೊಳ್ಳುವ ಬದ್ಧತೆಯ ಕೆಲಸ ಎಲ್ಲರಿಂದ ಎಲ್ಲರಿಗಾಗಿ ಆಗಬೇಕಾಗಿದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ತರವಲ್ಲ ತೋರಿಕೆಯ ರಾಜಕಾರಣ

ತೆಲಂಗಾಣ ರಾಜ್ಯದ ಕಾಮಾರೆಡ್ಡಿ ಜಿಲ್ಲೆಯ ಪಡಿತರ ವಿತರಣಾ ಕೇಂದ್ರವೊಂದಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು, ವಿತರಿಸುವ ಪಡಿತರದಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲೆಷ್ಟು ಎಂದು ಪ್ರಶ್ನಿಸಿದ್ದಾರೆ. ಪಡಿತರ ವ್ಯವಸ್ಥೆಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಲಾಗಿದೆಯೇ ಮತ್ತು ಅರ್ಹ ಪಲಾನುಭವಿಗಳಿಗೆ ಅದು ತಲುಪುತ್ತಿದೆಯೇ ಎಂಬುದನ್ನು ಪರಿಶೀಲಿಸುವುದು ಬಿಟ್ಟು, ಕೇಂದ್ರ ಸರ್ಕಾರವೇ ಹೆಚ್ಚಿನ ಪಾಲು ನೀಡುತ್ತಿದೆಯಾದರೂ ನರೇಂದ್ರ ಮೋದಿ ಅವರ ಫೋಟೊ ಯಾಕೆ ಅಳವಡಿಸಿಲ್ಲ ಎಂದು ಸ್ಥಳದಲ್ಲಿದ್ದ ಜಿಲ್ಲಾಧಿಕಾರಿಯನ್ನು ಪ್ರಶ್ನಿಸಿ ಗರಂ ಆಗಿದ್ದಾರೆ. ಇದು ಸರಿಯಾದ ನಡೆಯಲ್ಲ.

ಪಡಿತರವನ್ನು ನೀಡುವುದು ರಾಜ್ಯವಾಗಿರಲಿ ಅಥವಾ ಕೇಂದ್ರವೇ ಆಗಿರಲಿ, ಅದಕ್ಕಾಗಿ ಬಳಸುವುದೆಲ್ಲವೂ ನಾವು ಕಟ್ಟುವ ತೆರಿಗೆಯ ಹಣ ಮತ್ತು ರಾಷ್ಟ್ರದ ರೈತರ ದುಡಿಮೆಯ ಫಲ. ಹೀಗಿರುವಾಗ ಇಲ್ಲಿ ಪಕ್ಷ ಮತ್ತು ನಾಯಕರ ಹೆಸರನ್ನು ಯಾಕೆ ನಿರ್ದೇಶಿಸಬೇಕು? ಪ್ರಜೆಗಳಿಗೆ ಮೂಲಸೌಕರ್ಯಗಳನ್ನು ಒದಗಿಸುವುದು ಪ್ರತೀ ಸರ್ಕಾರದ ಕರ್ತವ್ಯ. ಅದಕ್ಕಾಗಿಯೇ ತಾನೆ ಜನಪ್ರತಿನಿಧಿಗಳನ್ನು ಚುನಾವಣೆಯಲ್ಲಿ ಆರಿಸುವುದು. ಹೀಗಿರುವಾಗ ನಾಯಕರ ಪ್ರತಿಷ್ಠೆ ಮತ್ತು ತೋರಿಕೆಯ ರಾಜಕಾರಣದ ಅಗತ್ಯವಿಲ್ಲ.

ಬೋರೇಗೌಡ ಜೆ.ಬಿ., ಕೆ.ಆರ್.ಪೇಟೆ, ಮಂಡ್ಯ

ಇದನ್ನು ಕಾಣಲು ಇಷ್ಟೊಂದು ಹಣವೇ?

ಊರಿನಿಂದ ಬಂದಿದ್ದ ಕುಟುಂಬದ ಸ್ನೇಹಿತರೊಂದಿಗೆ ಇತ್ತೀಚೆಗೆ ಬೆಂಗಳೂರು ಅರಮನೆ ನೋಡಲು ಹೋಗಿದ್ದೆವು. ಅರಮನೆ ಪ್ರವೇಶ ದರವನ್ನು ಕೇಳಿ ಆಘಾತವಾಯಿತು. ಒಬ್ಬರಿಗೆ ₹ 240, ಮೊಬೈಲ್ ಕ್ಯಾಮೆರಾ ಬಳಕೆಗೆ ₹ 300, ಸ್ಟಿಲ್ ಕ್ಯಾಮೆರಾ ಬಳಕೆಗೆ ₹ 700! ವಿದೇಶಿ ಪ್ರಜೆಗಳಿಗೆ ಅದರ ದುಪ್ಪಟ್ಟು! ಹೇಗೂ ಬಂದಿದ್ದೇವಲ್ಲ ಎಂದು, ಟಿಕೆಟ್ ಪಡೆದು ಒಳಹೋದರೆ, ಒಂದರ ಮೇಲೊಂದು ಆಘಾತ ಎದುರಾಯಿತು. ನೆಲದ ಮೇಲೆ, ಗೋಡೆ-ಕಿಟಕಿಗಳ ಮೇಲೆ ಎಲ್ಲಿ ಕೈಯಿಟ್ಟರೂ ದೂಳು, ಅಲ್ಲಲ್ಲಿ, ಜೇಡರ ಬಲೆ. ಹಲವಾರು ಕಲಾಕೃತಿಗಳ ಫ್ರೇಮುಗಳೇ ಕಿತ್ತು ನೇತಾಡುತ್ತಿದ್ದವು. ಅವುಗಳನ್ನು ನೋಡಲು ಸರಿಯಾದ ಬೆಳಕಿನ ವ್ಯವಸ್ಥೆಯೂ ಇರಲಿಲ್ಲ. ಹಲವಾರು ಕೊಠಡಿಗಳಿಗೆ ಬೀಗ ಜಡಿಯಲಾಗಿತ್ತು. ಒಂದೆಡೆ ನೀರು ಸೋರಿ ಪಾಚಿ ಕಟ್ಟಿಕೊಂಡಿತ್ತು. ಗ್ರಂಥಾಲಯದಲ್ಲಿ ಕಪಾಟು-ಪುಸ್ತಕಗಳ ಮೇಲೆ ದಪ್ಪ ಪದರದ ದೂಳು, ಜೇಡರಬಲೆ, ಹಲ್ಲಿ ಹಿಕ್ಕೆಗಳ ಚಿತ್ತಾರ. ಗಾಳಿಯ ಕೊರತೆಯಿಂದ ದುರ್ವಾಸನೆ ಮಿತಿಮೀರಿತ್ತು.

ಬಾಗಿಲು ಮುಚ್ಚಿದ್ದ ಕೊಠಡಿಯೊಂದರ ಕಿಟಕಿಯ ಒಳಭಾಗದಲ್ಲಿ, ರಾಷ್ಟ್ರಧ್ವಜದಿಂದ ಏನನ್ನೋ ಸುತ್ತಿ ಇಟ್ಟಿದ್ದುದು ಇನ್ನೊಂದು ಆಘಾತಕಾರಿ ಸಂಗತಿ. ಅಲ್ಲಿದ್ದ ಭದ್ರತಾ ಸಿಬ್ಬಂದಿಗೆ ವಿಷಯ ತಿಳಿಸಿದರೆ, ಆ ಕೊಠಡಿಯ ಬೀಗದ ಕೈ ತಮ್ಮಲ್ಲಿಲ್ಲ ಎಂದರು. ಐತಿಹಾಸಿಕ ಮ್ಯೂಸಿಯಮ್ಮುಗಳು ಒಂದು ನಾಗರಿಕ ಸಮಾಜದಲ್ಲಿ ಅತ್ಯಗತ್ಯ. ಆದರೆ, ಮ್ಯೂಸಿಯಮ್ ಹೆಸರಿನಲ್ಲಿ ಇಷ್ಟೊಂದು ಹಣ ವಸೂಲು ಮಾಡುವುದು ವಿಷಾದಕರ.

ಡಾ. ಬಿ.ಆರ್.ಸತ್ಯನಾರಾಯಣ, ಬೆಂಗಳೂರು

ಮಳೆ ನೀರಿಗೆ ದಾರಿ ಬಿಡಿ

ಮಳೆ ಬಾರದಿದ್ದರೂ ಕಷ್ಟ, ಹೆಚ್ಚು ಮಳೆ ಬಂದರೂ ಕಷ್ಟ. ಪ್ರಕೃತಿಯ ಮುಂದೆ ಮನುಷ್ಯ ಕುಬ್ಜ. ಇದನ್ನರಿತೇ ನಮ್ಮ ಹಿರೀಕರು ಪ್ರಕೃತಿಯನ್ನೇ ದೇವರೆಂದು ನಂಬಿ ಅದಕ್ಕೆ ಹೊಂದಿಕೊಂಡು ಹೋಗುತ್ತಿದ್ದರು. ಊರುಗಳು ಎತ್ತರವಾದ ಜಾಗದಲ್ಲಿ ಇರುತ್ತಿದ್ದವು. ಊರಿನ ನೀರೆಲ್ಲಾ ಹರಿದು ವ್ಯರ್ಥವಾಗದಂತೆ ಊರಾಚೆ ಒಂದು ಕೆರೆ, ಕೊಳ ಅಥವಾ ಕುಂಟೆ ಇರುತ್ತಿದ್ದವು. ಇವು ತುಂಬಿದ ಮೇಲೆ ಕೋಡಿಯ ನೀರು ಕಾಲುವೆ ಮುಖಾಂತರ ಮತ್ತೊಂದು ಹಳ್ಳಕ್ಕೊ, ಕೆರೆಗೊ ಸೇರುತ್ತಿತ್ತು. ಬೇಸಿಗೆಯಲ್ಲಿ ಈ ನೀರಿನಿಂದ ಜೀವ ತಣಿಯುತ್ತಿತ್ತು. ಹೀಗೆ ಮಳೆಯ ಕಾಲದಲ್ಲಿ ನೀರನ್ನು ಕೂಡಿಟ್ಟುಕೊಂಡು ಬೇಸಿಗೆಯಲ್ಲಿ ಬಳಸಿಕೊಳ್ಳುತ್ತಿದ್ದರು.

ಆದರೆ ಇಂದು ಕೆರೆಗಳೆಲ್ಲಾ ಲೇಔಟ್‌ಗಳಾಗಿ ಮಾರ್ಪಾಡಾಗುತ್ತಿರುವುದೇ ಈ ಸಮಸ್ಯೆಗೆ ಪ್ರಮುಖ ಕಾರಣ. ಆದ್ದರಿಂದ ಇಂದಿನ ಎಂಜಿನಿಯರ್‌ಗಳು, ಪ್ರಭಾವಿ ವ್ಯಕ್ತಿಗಳು ಕೆರೆಗಳನ್ನು ಅಥವಾ ಮಳೆ ನೀರು ಹರಿಯುವ ಯಾವುದೇ ಮೂಲಗಳನ್ನು ಮುಚ್ಚುವ ದುಸ್ಸಾಹಸಕ್ಕೆ ಕೈಹಾಕಬಾರದು. ಮಳೆ ನೀರಿಗೆ ಮೊದಲು ದಾರಿ ಬಿಟ್ಟು ಆಮೇಲೆ ನಗರ ಯೋಜನೆ ಸಿದ್ಧಪಡಿಸಿದರೆ ಅತಿವೃಷ್ಟಿಯನ್ನೂ ಅನಾವೃಷ್ಟಿಯನ್ನೂ ಅನಾಯಾಸವಾಗಿ ಎದುರಿಸಬಹುದು.

ನಾಗರಾಜ ಮಾದೇಗೌಡ, ಕನಕಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಸ್ತೆ ಅಪಘಾತಗಳಲ್ಲಿ ಸಾವು

ದ್ವಿಚಕ್ರವಾಹನಗಳ ಸವಾರರೇ ಹೆಚ್ಚು ಬಲಿ

ಪ್ರಜಾವಾಣಿ ವಾರ್ತೆ

ದೇಶದಲ್ಲಿ ಸಂಭವಿಸುವ ರಸ್ತೆ ಅಪಘಾತಗಳಲ್ಲಿ ಮೃತಪಡುವವರಲ್ಲಿ ದ್ವಿಚಕ್ರವಾಹನ ಸವಾರರೇ ಹೆಚ್ಚು ಎನ್ನುತ್ತದೆ ರಾಷ್ಟ್ರೀಯ ಅಪರಾಧ ದಾಖಲೆಗಳು ಬ್ಯೂರೊವಿನ (ಎನ್‌ಸಿಆರ್‌ಬಿ) ಅಪಘಾತ ಮತ್ತು ಆತ್ಮಹತ್ಯಾ ಸಾವುಗಳು–2021 ವರದಿ. 2021ರಲ್ಲಿ ಅತಿ ಹೆಚ್ಚು ಜನರು ರಸ್ತೆ ಅಪಘಾತಗಳಲ್ಲಿ ಮೃತಪಟ್ಟಿದ್ದಾರೆ. ಆದರೆ ಹೀಗೆ ಸಂಭವಿಸಿದ ಒಟ್ಟು ಸಾವುಗಳಲ್ಲಿ ದ್ವಿಚಕ್ರ ವಾಹನ ಸವಾರರ ಪ್ರಮಾಣ ಶೇ 44.5ಕ್ಕಿಂತಲೂ ಹೆಚ್ಚು. ದ್ವಿಚಕ್ರ ವಾಹನಗಳನ್ನು ಚಲಾಯಿಸುತ್ತಿದ್ದವರು ಮತ್ತು ಹಿಂಬದಿ ಸವಾರಿ ಮಾಡುತ್ತಿದ್ದವರ ಸಂಖ್ಯೆಯೂ ಇದರಲ್ಲಿ ಸೇರಿದೆ.

2021ರಲ್ಲಿ ದ್ವಿಚಕ್ರವಾಹನದಲ್ಲಿ ಸವಾರಿ ಮಾಡುತ್ತಿದ್ದವರಲ್ಲಿ ಒಟ್ಟು 1.74 ಲಕ್ಷ ಮಂದಿ ಅಪಘಾತಕ್ಕೆ ಒಳಗಾಗಿದ್ದಾರೆ. ಇದರಲ್ಲಿ 69,240 ಮಂದಿ ಮೃತಪಟ್ಟಿದ್ದರೆ, 1.05 ಲಕ್ಷ ಮಂದಿ ಗಾಯಗೊಂಡಿದ್ದಾರೆ. ದೇಶದ ರಸ್ತೆಗಳಲ್ಲಿ ಪ್ರಯಾಣ ಮಾಡುವಲ್ಲಿ ದ್ವಿಚಕ್ರ ವಾಹನಗಳೇ ಅತ್ಯಂತ ಅಪಾಯಕಾರಿ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಬೇರೆಲ್ಲಾ ಸ್ವರೂಪದ ವಾಹನಗಳು ಅಪಘಾತಕ್ಕೆ ಒಳಗಾಗಿದ್ದರೂ, ಅವುಗಳ ಚಾಲಕರು ಮತ್ತು ಪ್ರಯಾಣಿಕರು ಬದುಕುಳಿಯುವ ಸಾಧ್ಯತೆ ಹೆಚ್ಚು ಇದೆ. ಆದರೆ, ದ್ವಿಚಕ್ರ ವಾಹನಗಳಲ್ಲಿ ಅಪಘಾತಕ್ಕೆ ಒಳಗಾದವರು ಮೃತಪಡುವ ಸಾಧ್ಯತೆ ಹೆಚ್ಚು. ಹೀಗಾಗಿಯೇ ಇಂತಹ ಪ್ರಯಾಣಿಕರ ಸಾವಿನ ಸಂಖ್ಯೆ ಮತ್ತು ಪ್ರಮಾಣ ಹೆಚ್ಚು ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.



- ದ್ವಿಚಕ್ರ ವಾಹನಗಳನ್ನು ಬಿಟ್ಟರೆ ಹೆಚ್ಚು ಮಂದಿ ಮೃತಪಟ್ಟಿರುವುದು ಕಾರು/ಎಸ್‌ಯುವಿ ಅಪಘಾತಗಳಲ್ಲಿ. ಒಟ್ಟು ರಸ್ತೆ ಅಪಘಾತದ ಸಾವುಗಳಲ್ಲಿ ಇಂತಹ ಪ್ರಯಾಣಿಕರ ಪ್ರಮಾಣ ಶೇ 18.1ರಷ್ಟಿದೆ. ಈ ಅವಧಿಯಲ್ಲಿ ಕಾರು/ಎಸ್‌ಯುವಿ/ಜೀಪ್ ಸ್ವರೂಪದ ವಾಹನಗಳಲ್ಲಿ ಪ್ರಯಾಣಿಸುತ್ತಿದ್ದ 67,159 ಮಂದಿ ಅಪಘಾತಕ್ಕೆ ಒಳಗಾಗಿದ್ದಾರೆ. ಅವರಲ್ಲಿ 43,628 ಮಂದಿ ಗಾಯಗೊಂಡಿದ್ದರೆ, ಉಳಿದವರು ಮೃತಪಟ್ಟಿದ್ದಾರೆ
- ದ್ವಿಚಕ್ರ ವಾಹನಗಳು ಮತ್ತು ಕಾರುಗಳ ಬಿಟ್ಟರೆ ರಸ್ತೆ ಅಪಘಾತದಲ್ಲಿ ಮೃತಪಟ್ಟವರಲ್ಲಿ ಹೆಚ್ಚಿನ ಸಂಖ್ಯೆ ಪಾದಚಾರಿಗಳದ್ದು. 2021ರಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ 18 ಸಾವಿರಕ್ಕೂ ಹೆಚ್ಚು ಪಾದಚಾರಿಗಳು ಮೃತಪಟ್ಟಿದ್ದಾರೆ. ಒಟ್ಟು ರಸ್ತೆ ಅಪಘಾತದ ಸಾವುಗಳಲ್ಲಿ ಪಾದಚಾರಿಗಳ ಪ್ರಮಾಣ ಶೇ 9.6ರಷ್ಟು
- ಟ್ರಕ್‌ಗಳಲ್ಲಿ ಪ್ರಯಾಣಿಸುತ್ತಿದ್ದು ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ 14 ಸಾವಿರದಷ್ಟಿದೆ. 25,515 ಮಂದಿ ಟ್ರಕ್‌ಗಳಲ್ಲಿ ಅಪಘಾತಕ್ಕೆ ಸಿಲುಕಿದ್ದರೆ, ಅವರಲ್ಲಿ 10,893 ಮಂದಿ ಗಾಯಾಳುಗಳಾಗಿ ಬಚಾವಾಗಿದ್ದಾರೆ
- ಬೈಸಿಕಲ್, ರಿಕ್ಷಾ, ಎತ್ತಿನಗಾಡಿ, ಟಾಂಗಾಗಳೂ ಅಪಘಾತಕ್ಕೆ ಒಳಗಾಗಿವೆ. ಈ ಸ್ವರೂಪದ ಅಪಘಾತಗಳಲ್ಲಿ ಒಟ್ಟು 8,086 ಮಂದಿ ಪ್ರಾಣಕಳೆದುಕೊಂಡಿದ್ದಾರೆ
- ಎಲ್ಲಕ್ಕಿಂತ ಸುರಕ್ಷಿತ ಪ್ರಯಾಣ ಸಾಧ್ಯವಿರುವುದು ಬಸ್‌ಗಳಲ್ಲಿ ಎನ್ನುತ್ತವೆ ಈ ವರದಿಯ ದತ್ತಾಂಶಗಳು. ಬೇರೆಲ್ಲ ವಾಹನಗಳಲ್ಲಿ ಸಂಭವಿಸಿದ ಅಪಘಾತಗಳಲ್ಲಿ ಮೃತಪಟ್ಟವರಿಗಿಂತ ಬಸ್‌ಗಳಲ್ಲಿ ಸಂಭವಿಸಿದ ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆ (4,622) ಕಡಿಮೆ. 2021ರಲ್ಲಿ ಸಂಭವಿಸಿದ ಒಟ್ಟು ಅಪಘಾತದ ಸಾವುಗಳಲ್ಲಿ, ಇಂತಹ ಸಾವುಗಳ ಪ್ರಮಾಣ ಶೇ 3.9ರಷ್ಟು

ಅತಿವೇಗ, ಅಪಾಯಕಾರಿ ಚಾಲನೆಯೇ ಮುಖ್ಯ ಕಾರಣ

2021ರಲ್ಲಿ ದೇಶದಲ್ಲಿ ಸಂಭವಿಸಿದ ಅಪಘಾತ ಮತ್ತು ಸಾವುಗಳಿಗೆ ಅತಿಯಾದ ವೇಗ ಹಾಗೂ ಅಜಾಗರೂಕ ಚಾಲನೆಯೇ ಅತ್ಯಂತ ದೊಡ್ಡ ಕಾರಣವಾಗಿದೆ. ಈ ಅವಧಿಯಲ್ಲಿ ಸಂಭವಿಸಿದ ಒಟ್ಟು ಅಪಘಾತ ಮತ್ತು ಸಾವುಗಳಲ್ಲಿ ಅತಿವೇಗದಿಂದ ಸಂಭವಿಸಿದ ಅವಘಡಗಳ ಪ್ರಮಾಣ ಶೇ 55.9ರಷ್ಟಿದೆ. ಅಪಾಯಕಾರಿ ಮತ್ತು ನಿರ್ಲಕ್ಷ್ಯದ ಚಾಲನೆಯು ಶೇ 27.5ರಷ್ಟು ಅಪಘಾತ ಮತ್ತು ಸಾವುಗಳಿಗೆ ಕಾರಣವಾಗಿದೆ.

ಈ ಎರಡೂ ಕಾರಣಗಳಿಂದ ಸಂಭವಿಸಿದ ಅಪಘಾತಗಳಲ್ಲಿ ಒಟ್ಟು 1.29 ಲಕ್ಷ ಜನರು ಪ್ರಾಣ ಕಳೆದುಕೊಂಡಿದ್ದಾರೆ. ಅತಿಯಾದ ವೇಗ ಮತ್ತು ಅಪಾಯಕಾರಿ/ನಿರ್ಲಕ್ಷ್ಯದ ಚಾಲನೆಗೆ ಚಾಲಕರೇ ಕಾರಣ. ರಸ್ತೆ ಸಂಚಾರ ನಿಯಮಗಳ ಉಲ್ಲಂಘನೆ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿರುವುದನ್ನು ಇದು ಸೂಚಿಸುತ್ತದೆ. ಚಾಲನೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕು ಮತ್ತು ಅವುಗಳನ್ನು ಉಲ್ಲಂಘಿಸುವವರಿಗೆ ಭಾರಿ ಪ್ರಮಾಣದ ದಂಡ ವಿಧಿಸಬೇಕು. ಹಾಗೆ ಮಾಡುವ ಮೂಲಕ ಸಂಭಾವ್ಯ ಅಪಘಾತಗಳು ಮತ್ತು ಜೀವಹಾನಿಯನ್ನು ತಪ್ಪಿಸಬಹುದು ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.



- 2021ರಲ್ಲಿ ಸಂಭವಿಸಿದ ಅಪಘಾತದ ಸಾವುಗಳಲ್ಲಿ 15,357 (ಶೇ 10ರಷ್ಟು) ಅಪಘಾತ ಮತ್ತು ಸಾವುಗಳಿಗೆ ನಿಖರ ಕಾರಣ ಪತ್ತೆಯಾಗಿಲ್ಲ. ಅಪಘಾತಕ್ಕೆ ಕಾರಣ ಏನು ಎಂಬುದನ್ನು ಪತ್ತೆ ಮಾಡಲು ಇನ್ನೂ ಪರಿಣಾಮಕಾರಿಯಾದ ವಿಧಾನ ಹಾಗೂ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬೇಕಾದ ಅಗತ್ಯವಿದೆ
- 2021ರಲ್ಲಿ ಸಂಭವಿಸಿದ ಒಟ್ಟು ಅಪಘಾತದ ಸಾವುಗಳಲ್ಲಿ, ಮದ್ಯ ಕುಡಿದು ಚಾಲನೆ ಮಾಡಿದ್ದರಿಂದ ಆದ ಅಪಘಾತದ ಸಾವುಗಳ ಪ್ರಮಾಣ ಶೇ 1.9ರಷ್ಟು ಮಾತ್ರ. ಈ ಸ್ವರೂಪದ ಉಲ್ಲಂಘನೆ ತಡೆಗೆ ಹೆಚ್ಚು ಗಮನ ನೀಡಲಾಗುತ್ತಿದೆ. ಆದರೆ, ಹೆಚ್ಚು ಸಾವಿಗೆ ಕಾರಣವಾಗುವ ಅತಿವೇಗ/ಅಪಾಯಕಾರಿ/ನಿರ್ಲಕ್ಷ್ಯದ ಚಾಲನೆಗೆ ಕಡಿವಾಣ ಹಾಕುವಲ್ಲಿ ನಿರ್ಲಕ್ಷ್ಯ ತೋರಲಾಗಿದೆ
- ಪ್ರತಿಕೂಲ ಹವಾಮಾನದಲ್ಲಿ ಚಾಲನೆ ಮಾಡುವಾಗ ಅಪಘಾತಗಳು ಸಂಭವಿಸಿವೆ. ಅಂತಹ ಅಪಘಾತಗಳಲ್ಲಿ 5,405 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

ಅಪಘಾತಗಳಲ್ಲಿ ದಿಢೀರ್ ಏರಿಕೆ



2010ರ ದಶಕದ ಬಹುತೇಕ ಎಲ್ಲಾ ವರ್ಷಗಳಲ್ಲಿ ನಾಲ್ಕು ಲಕ್ಷಕ್ಕೂ ಹೆಚ್ಚು ರಸ್ತೆ ಅಪಘಾತಗಳು ಸಂಭವಿಸಿವೆ. ಪ್ರತಿವರ್ಷ ಅಪಘಾತಗಳ ಸಂಖ್ಯೆಯಲ್ಲಿ ಸ್ವಲ್ಪ ಪ್ರಮಾಣದ ಏರಿಳಿತವಾಗಿದೆ. ಆದರೆ, 2021ರಲ್ಲಿ ರಸ್ತೆ ಅಪಘಾತಗಳ ಸಂಖ್ಯೆಯಲ್ಲಿ ದಿಢೀರ್ ಏರಿಕೆಯಾಗಿದೆ. 2012ರಿಂದ 2016ರವರೆಗೆ ಪ್ರತಿ ವರ್ಷ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ ಸತತ ಏರಿಕೆ ಕಂಡುಬಂದಿದೆ. 2016ರಲ್ಲಿ ಆವರೆಗಿನ ಗರಿಷ್ಠ ಸಂಖ್ಯೆಯ ರಸ್ತೆ ಅಪಘಾತಗಳು ಸಂಭವಿಸಿವೆ. 2017ರ ನಂತರ ಪ್ರತಿ ವರ್ಷ ಸಂಭವಿಸಿದ ರಸ್ತೆ ಅಪಘಾತಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆ ಕಂಡುಬಂದಿದೆ. ಉತ್ತಮ ಹೆದ್ದಾರಿ ನಿರ್ಮಾಣ, ಎಬಿಎಸ್ ಮತ್ತು ಕಾರ್ನರ್ ಸ್ಟೆಬಿಲಿಟಿ ಕಂಟ್ರೋಲ್ ಸವಲತ್ತುಗಳು ಕಡ್ಡಾಯವಾದ ನಂತರ ಅಪಘಾತಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ. 2020ರಲ್ಲಿ ಸಂಭವಿಸಿದ ಅಪಘಾತಗಳಿಗೆ ಹೋಲಿಸಿದರೆ, 2021ರಲ್ಲಿ ಸಂಭವಿಸಿದ ರಸ್ತೆ ಅಪಘಾತಗಳ ಸಂಖ್ಯೆಯಲ್ಲಿ ಶೇ 14.5ರಷ್ಟು ಏರಿಕೆಯಾಗಿದೆ.

ಗರಿಷ್ಠ ಸಾವು

2021ರಲ್ಲಿ ರಸ್ತೆ ಅಪಘಾತಗಳಿಗೆ ಒಟ್ಟು 1.55 ಲಕ್ಷ ಜನರು ಬಲಿಯಾಗಿದ್ದಾರೆ. ಇದು ಈವರೆಗೆ, ವರ್ಷವೊಂದರಲ್ಲಿ ರಸ್ತೆ ಅಪಘಾತಕ್ಕೆ ಬಲಿಯಾದವರ ಗರಿಷ್ಠ ಸಂಖ್ಯೆ. 2018ರಲ್ಲಿ 4.45 ಲಕ್ಷ ರಸ್ತೆ ಅಪಘಾತಗಳು ಸಂಭವಿಸಿದ್ದವು. ಆ ಅಪಘಾತಗಳಲ್ಲಿ ಒಟ್ಟು 1.54 ಲಕ್ಷ ಜನರು ಮೃತಪಟ್ಟಿದ್ದರು. 2021ರಲ್ಲಿ 4.03 ಲಕ್ಷ ಅಪಘಾತಗಳು ಸಂಭವಿಸಿವೆ. ಆದರೆ, ಈ ಅಪಘಾತಗಳಲ್ಲಿ 1.55 ಲಕ್ಷ ಜನರು ಮೃತಪಟ್ಟಿದ್ದಾರೆ.



ಆಧಾರ: ಎನ್‌ಸಿಆರ್‌ಬಿ, ಅಪಘಾತ ಮತ್ತು ಆತ್ಮಹತ್ಯಾ ಸಾವುಗಳು–2021, 2017, 2016ನೇ ಸಾಲಿನ ವರದಿಗಳು

ಪ್ರಜಾವಾಣಿ ಗ್ರಾಫಿಕ್ಸ್

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ದೇಶದಲ್ಲಿ ದ್ವೇಷ ಮತ್ತು ಕ್ರೋಧ ಹೆಚ್ಚಾಗುತ್ತಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿರುವುದು ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 217

ಶಿವನ ಮೇಲೆ ಮನ್ಮಥ ಲೀಲೆ

ಶಿವನನ್ನು ತನ್ನ ಮೋಹಪಾಶದಿಂದ ಸುಲಭವಾಗಿ ಮಣಿಸುವ ಗರ್ವದಿಂದ ಶಿವನ ಬಳಿಗೆ ಬಂದ ಮದಾಂಧ ಮದನ, ಮೊದಲಿಗೆ ತನ್ನ ಮಿತ್ರನಾದ ವಸಂತನ ಮೂಲಕ ಆ ತಪೋವನದಲ್ಲಿ ವಸಂತ ಋತು ಹರಡುವಂತೆ ಮಾಡಿದ. ಔಷಧಿಪ್ರಸ್ಥದಲ್ಲಿ ಅದರ ಪ್ರಭಾವ ಬೀರತೊಡಗಿತು. ಮರಗಳಲ್ಲೆಲ್ಲಾ ಎಲೆಗಳು ಚಿಗುರಿದವು. ಮಾವಿನ ಮರಗಳು ಹೂವುಗಳನ್ನು ಬಿಟ್ಟವು. ಅದರ ಸುವಾಸನೆಯು ಎಲ್ಲೆಲ್ಲಿಯೂ ಹರಡಿ ಜನರಿಗೆ ಮನ್ಮಥವಿಕಾರ ಉಂಟಾಗುವಂತೆ ಮಾಡಿತು. ಕಮಲಗಳು ಅರಳಿ, ಅವುಗಳಲ್ಲಿ ದುಂಬಿಗಳು ಮುತ್ತಿ ಮಧುಪಾನವನ್ನು ಹೀರುತ್ತಾ ಕಾಮವಿಕಾರವಾದಂತೆ ಝೇಂಕರಿಸಿದವು.

ಕಾಮೋದ್ದೀಪವಾಗುವಂತೆ ಕೋಗಿಲೆಗಳು ಮನೋಹರವಾಗಿ ಧ್ವನಿಗೈಯ್ಯುತ್ತಿದ್ದರೆ, ದುಂಬಿಗಳು ಹಲವು ವಿಧದಲ್ಲಿ ಮನೋಹರವಾಗಿ ಝೇಂಕರಿಸಿದವು. ನಿರ್ಮಲವಾದ ಚಂದ್ರಕಾಂತಿಯು ಎಲ್ಲೆಡೆಯೂ ಹರಡಿ ಕಾಮಿನೀ-ಕಾಮುಕರನ್ನು ಒಗ್ಗೂಡಿಸುವ ದೂತಿಯಂತಾಯಿತು. ವಸಂತಕಾಲವೆಂಬ ದೀಪಿಕೆಯು ಕಾಮುಕರನ್ನು ಕಾಮೋತ್ಸವಕ್ಕೆ ಪ್ರೇರೇಪಿಸತೊಡಗಿತು. ಗಾಳಿಯು ಉಲ್ಲಾಸಕರವಾಗಿ ಬೀಸಿ, ಎಲ್ಲರ ಮನದಲ್ಲಿ ಕಾಮಸುಖದ ಮತ್ತೇರಿಸುತ್ತಿತ್ತು. ವಿರಹ ಬಯಸುವವರಿಗೆ ಅಲ್ಲಿನ ವಾತಾವರಣ ಹಿತಕರವಾಗಿರಲಿಲ್ಲ; ಅವರಿಗೆ ಅತ್ಯಂತ ದುಃಖಕರವಾಗಿತ್ತು. ಮುನಿಗಳಿಗೂ ಮನ್ಮಥವಿಕಾರ ಉಂಟಾಗಿ ತಪೋಭಂಗಿತರಾದರು. ತಿರ್ಯಕ್ ಪ್ರಾಣಿಗಳಿಗೂ ಕಾಮವಿಕಾರ ಉಂಟಾಯಿತು ಎಂದಮೇಲೆ, ಇನ್ನು ಸಾಮಾನ್ಯ ಮನುಷ್ಯರಿಗೆ ಕಾಮವಿಕಾರ ಯಾವ ಪರಿ ಉಂಟಾಗಿರಬೇಕು ಎಂಬುದನ್ನು ಊಹಿಸಿಕೊಳ್ಳಬಹುದು. ಹೀಗೆ ವಸಂತ ಸುತ್ತಲಿನ ಎಲ್ಲ ಪ್ರಾಣಿಗಳಿಗೂ ಕಾಮವಿಕಾರವಾಗುವಂತೆ ತನ್ನ ಪ್ರಭಾವವನ್ನು ಪ್ರಸರಿಸಿದ.

ಅಕಾಲದಲ್ಲಿ ವಸಂತಋತುವಿನ ಮಹಿಮೆಯನ್ನು ನೋಡಿ ಹರನಿಗೆ ತುಂಬಾ ಆಶ್ಚರ್ಯವಾಯಿತು. ಆದರೂ ಶಿವ ಬದಲಾದ ವಾತಾವರಣಕ್ಕೆ ಮನಸ್ಸು ಕೊಡದೆ, ಎಂದಿನಂತೆ ಬ್ರಹ್ಮ ವಸ್ತುವಿನತ್ತ ಏಕಾಗ್ರಚಿತ್ತದಿಂದ ಧ್ಯಾನಿಸುತ್ತಾ, ತಪವನ್ನ ಆಚರಿಸುತ್ತಿದ್ದ. ಮನ್ಮಥನ ಲೀಲೆಗಳು ಅವನ ಮೇಲೆ ಯಾವುದೇ ಗುರುತರ ಪರಿಣಾಮ ಬೀರಲಿಲ್ಲ. ಎಂದಿನಂತೆ ನಿರ್ಲಿಪ್ತಭಾವದಿಂದ ಶಿವ ತಪೋನಿರತನಾದಾಗ ಮನ್ಮಥ ಮತ್ತು ವಸಂತ ಹತಾಶಗೊಂಡರು.

ಮನ್ಮಥ ತನ್ನ ಕಾಮಮಹಿಮೆಯನ್ನು ಮತ್ತಷ್ಟು ತೋರಿಸಲು ಚೂತಬಾಣವನ್ನು ಬಿಲ್ಲಿಗೇರಿಸಿ ಶಿವನ ಎಡಭಾಗದಲ್ಲಿ ರತಿಯೊಡನೆ ನಿಂತ. ಎಂಥವರೂ ಮೋಹಗೊಳ್ಳುವಂತೆ ನಾನಾ ಭಂಗಿಯಲ್ಲಿ ರತಿ-ಮನ್ಮಥರು ನರ್ತಿಸಿದರು. ಔಷಧಪ್ರಸ್ಥದ ತಪ್ಪಲಿನ ಸುತ್ತಲ ಜನರೆಲ್ಲ ಮೋಹಗೊಳ್ಳುತ್ತಿದ್ದರೂ, ಶಿವ ಮಾತ್ರ ವಿಚಲಿತನಾಗಲಿಲ್ಲ. ರತಿ–ಮನ್ಮಥರನ್ನು ನೋಡಿದ ಯಾರೇ ಆದರೂ ಮೋಹಗೊಳ್ಳದೆ ಇರುತ್ತಿರಲಿಲ್ಲ. ಆದರೆ ಶಿವ ಸ್ವಲ್ಪವೂ ಕಾಮವಿಕಾರಕ್ಕೆ ಮನಸ್ಸು ಕೊಡದೆ ತಪೋನಿರತನಾಗಿ ಕುಳಿತಿದ್ದ. ಧ್ಯಾನಾಸಕ್ತನಾದ ಶಂಕರನ ಹಣೆಯ ಮೇಲಿನ ತೃತೀಯ ನೇತ್ರವು ಅಗ್ನಿಜ್ವಾಲೆಯನ್ನು ಉಗುಳುತ್ತಿರುವಂತೆ ಜಾಜ್ವಲ್ಯಮಾನವಾಗಿತ್ತು.

ಹತಯೋಗಿ ಶಿವನನ್ನು ಮಣಿಸಲು ರತಿ-ಮನ್ಮಥ-ವಸಂತರಿಗೆ ನೆರವಾಗಲು ಶೃಂಗಾರಪುರುಷ(ರಸ)ನೂ ಆಗಮಿಸಿದ. ಆದರೆ ಅವನಿಗೂ ಶಂಕರನನ್ನು ಮೋಹಗೊಳಿಸಲು ಸಾಧ್ಯವಾಗದೆ ಮಂಕಾದ. ಯೋಗಿರಾಜನಾದ ಮಹಾದೇವ ತನ್ನ ಬಲೆಗೆ ಸಿಗದಿರುವುದನ್ನು ನೋಡಿ ಮನ್ಮಥ ತುಂಬಾ ವ್ಯಾಕುಲಗೊಂಡ. ಹೀಗೆ ಧ್ಯಾನಮಗ್ನನಾಗಿ ಕುಳಿತ್ತಿದ್ದ ಶಿವನನ್ನು ಮೋಹಗೊಳಿಸಲು ಸಾಧ್ಯವಾಗದೆ, ಮದನ ಮತ್ತವನ ಪರಿವಾರ ಶಿವನ ಹಠಯೋಗದ ಮುಂದೆ ಸೋತುಹೋದರು.ಇಂಥ ಸಮಯದಲ್ಲಿ ಪಾರ್ವತಿಯು ಶಿವಪೂಜೆಗಾಗಿ ಹೂವುಗಳೊಂದಿಗೆ ಸಖಿಯರೊಡನೆ ಅಲ್ಲಿಗೆ ಬಂದಳು. ಜಗತ್ತಿನಲ್ಲಿ ಮಹಾಲೋಕೋತ್ತರವೆಂದು ವರ್ಣಿಸುವ ಸೌಂದರ್ಯಕ್ಕಿಂತಲೂ ಮಿಗಿಲಾದ ಸೌಂದರ್ಯವು ಅವಳಲ್ಲಿ ರಾರಾಜಿಸುತ್ತಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಹಿಳೆಯೊಬ್ಬರನ್ನು ವ್ಯಕ್ತಿಯೊಬ್ಬ ಎಳೆದಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಮಹಿಳೆಯರು ಸೇರಿದಂತೆ ಇತರ ಕೆಲವರು ಮಹಿಳೆಯ ಕೂದಲು ಹಿಡಿದೆಳೆದು ಬಡಿಯುವ, ಒದೆಯುವ ದೃಶ್ಯಗಳೂ ವಿಡಿಯೊದಲ್ಲಿ ಇವೆ. ಇದು ಪಾಕಿಸ್ತಾನದಲ್ಲಿ ಹಿಂದೂ ಮಹಿಳೆಯನ್ನು ಥಳಿಸುತ್ತಿರುವ ದೃಶ್ಯ ಎಂದು ಹಲವರು ಹೇಳಿಕೊಂಡಿದ್ದಾರೆ. 'ಜೀ ಹಿಂದುಸ್ಥಾನ್' ಹೀಗೆ ಟ್ವೀಟ್ ಮಾಡಿದೆ: 'ಪಾಕಿಸ್ತಾನದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಮುಂದುವರಿದಿದೆ'. ವಿಶ್ವ ಹಿಂದೂ ಪರಿಷತ್‌ನ ವಕ್ತಾರ ವಿನೋದ್ ಬನ್ಸಲ್ ಕೂಡ ವಿಡಿಯೊವನ್ನು ಟ್ವೀಟ್ ಮಾಡಿದ್ದಾರೆ. ಅವರು ಹೀಗೆ ಹೇಳಿದ್ದಾರೆ: 'ಅಫ್ಗಾನಿಸ್ತಾನವು ಹೆಣ್ಣು ಮಕ್ಕಳು ಕಲಿಯಲು ವಿದೇಶಕ್ಕೆ ಹೋಗುವುದನ್ನು ನಿಷೇಧಿಸಿದೆ. ಪಾಕಿಸ್ತಾನವು ಹಿಂದೂಗಳ ಮೇಲೆ ಕ್ರೂರ ದೌರ್ಜನ್ಯ ಎಸಗುತ್ತಿದೆ. ಜಿಹಾದಿಗಳ ಮಹಿಳಾ ವಿರೋಧಿ ಮನಸ್ಥಿತಿ ಬದಲಾಗಲು ಸಾಧ್ಯವೇ ಇಲ್ಲ'.

ವಿಡಿಯೊದ ಕುರಿತು ಇರುವ ವಿವರಣೆಯು ಸುಳ್ಳು ಎಂದು ಆಲ್ಟ್ ನ್ಯೂಸ್ ಹೇಳಿದೆ. ವಿಡಿಯೊ ಕುರಿತಂತೆ ಪರಿಶೀಲನೆ ನಡೆಸಿದಾಗ 2022ರ ಜನವರಿ 9ರಂದು ಪಾಕಿಸ್ತಾನದ 'ಜಿಯೊ ನ್ಯೂಸ್'ನಲ್ಲಿ ಪ್ರಕಟವಾದ ವರದಿಯೊಂದು ಸಿಕ್ಕಿದೆ. ಭೂ ವಿವಾದಕ್ಕೆ ಸಂಬಂಧಿಸಿ ಸಿಯಾಲ್‌ಕೋಟ್‌ನಲ್ಲಿ ಮಹಿಳೆಯನ್ನು ಥಳಿಸಲಾಗಿದೆ ಎಂಬುದೇ ಆ ವರದಿ. ಈ ವಿಡಿಯೊ ವೈರಲ್ ಆದ ಬಳಿಕ ಪೊಲೀಸರು ಕ್ರಮ ಕೈಗೊಂಡಿದ್ದಾರೆ. 15 ಮಂದಿಯ ವಿರುದ್ಧ ದೂರು ದಾಖಲಾಗಿದೆ. 13 ವರ್ಷಗಳಿಂದ ಇದ್ದ ಭೂ ವ್ಯಾಜ್ಯಕ್ಕೆ ಸಂಬಂಧಿಸಿ ಈ ಘಟನೆ ನಡೆದಿದೆ ಎಂದು ಸಂತ್ರಸ್ತ ಮಹಿಳೆಯೇ ಜಿಯೊ ನ್ಯೂಸ್‌ಗೆ ಹೇಳಿದ್ದಾರೆ. ಈ ಘಟನೆಗೆ ಕೋಮು ಆಯಾಮ ಇದೆ ಎಂಬ ಯಾವುದೇ ಉಲ್ಲೇಖ ವರದಿಯಲ್ಲಿ ಇಲ್ಲ.

ಗುಂಡಣ್ಣ



ಕಡುಯೋಗಿ ಭರತ

ಒಡರಿಸುವನೆಲ್ಲವನ್, ಅದಾವುದುಂ ತನದಲ್ಲ |
ಬಿಡನೊಂದನುಂ ರಾಜ್ಯ ತನದಲ್ಲವೆಂದು ||
ನಡೆವಂ ಸ್ವತಂತ್ರದಲಿ ಸಲಿಸುತೆ ವಿಧೇಯತೆಯ |
ಕಡುಯೋಗಿ ಭರತನಲ? – ಮಂಕುತಿಮ್ಮ ||708||

ಪದ-ಅರ್ಥ: ಒಡರಿಸುವನೆಲ್ಲನ್ = ಒಡಲಿಸುವನು (ನಡೆಸುವನು) + ಎಲ್ಲವನ್, ಬಿಡನೊಂದನುಂ = - ಬಿಡನು + ಒಂದನುಂ(ಒಂದನ್ನು), ತನದಲ್ಲವೆಂದು- = ತನದು (ತನ್ನದು) + ಅಲ್ಲವೆಂದು.

ವಾಚ್ಯಾರ್ಥ: ಯಾವದೂ ತನ್ನದಲ್ಲವೆಂದು ತಿಳಿದಿದ್ದರೂ ಎಲ್ಲವನ್ನೂ ನಡೆಸಿದ. ರಾಜ್ಯ ತನ್ನದಲ್ಲವೆಂದು ಯಾವ ಕಾರ್ಯವನ್ನೂ ಬಿಡಲಿಲ್ಲ. ಸ್ವತಂತ್ರವಾಗಿ ಕಾರ್ಯಗಳನ್ನು ನಡೆಸಿದರೂ, ಕಾಣದ ಯಜಮಾನನಿಗೆ ವಿಧೇಯತೆಯನ್ನು ಸಲ್ಲಿಸುತ್ತ, ಬದುಕಿನ ಭರತ ಕಡುಯೋಗಿಯಲ್ಲವೆ?

ವಿವರಣೆ: ಶ್ರೀರಾಮನನ್ನು ಮರಳಿ ಅಯೋಧ್ಯೆಗೆ ಕರೆತರಲು ಭರತ ಏನೆಲ್ಲ ಪ್ರಯತ್ನಗಳನ್ನು ಮಾಡಿದರೂ ಸಾಧ್ಯವಾಗದಿದ್ದಾಗ, ತಾನು ತಂದಿದ್ದ ಎರಡು ಪಾದುಕೆಗಳನ್ನು ರಾಮನ ಮುಂದಿಟ್ಟು, "ಅಣ್ಣಾ, ಈ ಪಾದುಕೆಗಳ ಮೇಲೆ ಕ್ಷಣಕಾಲ ನಿಂತು, ಇದನ್ನು ನನಗೆ ಅನುಗ್ರಹಿಸು" ಎಂದು ಬೇಡಿದ. ಅವನ ಆಶಯ ಶ್ರೀರಾಮನಿಗೆ ತಿಳಿದುಹೋಯಿತು. ಭರತ ಹೇಳಿದ. "ಅಣ್ಣಾ, ಈ ಪಾದುಕೆಗಳು ರಾಜ್ಯವನ್ನು ಪಾಲಿಸುತ್ತವೆ. ನಾನು ಅವುಗಳ ಭೃತ್ಯನಾಗಿ ನಡೆದುಕೊಳ್ಳುತ್ತೇನೆ. ಹದಿನಾಲ್ಕು ವರ್ಷಗಳವರೆಗೆ ನಾನು ಜಟಾಧಾರಿಯಾಗಿ, ಫಲಮೂಲಗಳನ್ನೇ ತಿನ್ನುತ್ತ, ನಿನಗಾಗಿ ಕಾದಿರುತ್ತೇನೆ. ನಗರದಲ್ಲಿಯೂ ವಾಸಮಾಡುವುದಿಲ್ಲ. ಹದಿನಾಲ್ಕು ವರ್ಷಗಳ ನಂತರ ನಿನ್ನನ್ನು ಕಾಣದೆ ಹೋದರೆ ಬೆಂಕಿಯಲ್ಲಿ ಬಿದ್ದು ಪ್ರಾಣ ಬಿಡುತ್ತೇನೆ". ಭರತ, ಶ್ರೀರಾಮನ ಪ್ರತೀಕವಾಗಿದ್ದ ಪಾದುಕೆಗಳಿಗೆ ಭೃತ್ಯನಂತೆ ಕಾರ್ಯನಿರ್ವಾಹಕನಾದದ್ದನ್ನು ವಾಲ್ಮೀಕಿಗಳು ವಿವರಿಸುವ ರೀತಿ ಅನನ್ಯ.

ಯದಾ ಹಿ ಯತ್ ಕಾರ್ಯಮುಪೈತಿ ಕಿಂಚಿತ್ |
ಉಪಾಯನಂ ಚೋಪಹೃತಂ ಮಹಾರ್ಹಮ್ ||
ಸ ಪಾದುಕಾಭ್ಯಾಂ ಪ್ರಥಮಂ ನಿವೇದ್ಯ |
ಚಕಾರ ಪಶ್ಚಾದ್ ಭರತೋ ಯಥಾವತ್ ||

"ಯಾವುದಾದರೂ ವಿಶೇಷವಾದ ರಾಜಕಾರ್ಯ ಪ್ರಾಪ್ತವಾದರೆ, ಭರತ ಅದನ್ನು ಪಾದುಕೆಗಳಿಗೆ ಅರಿಕೆ ಮಾಡುತ್ತಿದ್ದ. ಬೆಲೆಬಾಳುವ ಕಪ್ಪಕಾಣಿಕೆಗಳು ಬಂದರೆ ಅವುಗಳನ್ನು ಪಾದುಕೆಗಳೆದುರಿಟ್ಟು ನಿವೇದಿಸುತ್ತಿದ್ದ. ಹೀಗೆ ಭರತ ರಾಜ್ಯಭಾರ ಮಾಡಿದ.

ಭರತನ ಕಾರ್ಯವಿಧಾನ ಅದ್ಭುತವಾದದ್ದು. ರಾಜ್ಯ ತನ್ನದಲ್ಲವೆಂದು ತೀರ್ಮಾನಿಸಿದ ಭರತ, ಕೆಲಸದ ಜವಾಬ್ದಾರಿ ತನ್ನದಲ್ಲವೆನ್ನಲಿಲ್ಲ. ರಾಜ್ಯ ತನಗೆ ದಕ್ಕಿದ್ದಲ್ಲವೆಂದು ತಿಳಿದರೂ ಯಾವ ಕಾರ್ಯವನ್ನೂ ಬಿಡಲಿಲ್ಲ. ರಾಜ್ಯವನ್ನು ನಿಭಾಯಿಸುವಲ್ಲಿ ಸ್ವತಂತ್ರನಾಗಿ ವರ್ತಿಸಬೇಕಾಗುತ್ತದೆ. ಹಾಗಿಲ್ಲದಿದ್ದಾಗ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಸ್ವಾತಂತ್ರ್ಯವನ್ನು ವಹಿಸಿದರೂ, ತಾನು ರಾಜನೆಂದು ಭಾವಿಸಿಕೊಂಡ ಪಾದುಕೆಗಳಿಗೆ ವಿಧೇಯತೆಯನ್ನು ಸಲ್ಲಿಸಿದ ಭರತ. ಹೀಗೆ ರಾಜ್ಯ ಸಕಲ ಭಾರವನ್ನು ಹೊತ್ತರೂ, ರಾಜ್ಯ ತನ್ನದಲ್ಲ. ಜವಾಬ್ದಾರಿ ತನ್ನದಾದರೂ ಅದರ ಫಲ ತನ್ನದಲ್ಲ. ಕರ್ತವ್ಯದಲ್ಲಿ ಸ್ವತಂತ್ರ, ಆದರೆ ನಿರ್ಣಯ ಯಜಮಾನನದು ಎಂಬ ವಿಧೇಯತೆ. ಈ ಗುಣಗಳು ಯೋಗಿಗೆಮಾದರಿಯಾಗುವಂತಹವು. ಅದಕ್ಕೇ ಕಗ್ಗ ಭರತನನ್ನು 'ಕಡುಯೋಗಿ' ಎಂದು ಕರೆಯುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಸೆಪ್ಟೆಂಬರ್ 6, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ದಶಮಿ ಗಂ. 05-55 ನಂತರ ಏಕಾದಶಿ ಗಂ. 22-05 ನಕ್ಷತ್ರ: ಪೂರ್ವಾಷಾಢ ಗಂ. 18-09 ಯೋಗ: ಆಯುಷ್ಮಾನ್ ಗಂ. 08-15, ಸಿಂಹ ಮಾಸದ 20 ನೇ ದಿನ. ರಾಹುಕಾಲ : ಮಧ್ಯಾಹ್ನ 03:00 – 04:30 ಸೂರ್ಯೋದಯ : 06-23 ಸೂರ್ಯಾಸ್ತ : 06-35, ಮುಸ್ಲಿಂ ದಿನಾಂಕ : 09 ಸಫರ್ ದಿನ ವಿಶೇಷ : ವಾಮನ ಜಯಂತೀ, ಡೋಲ್ ಗ್ಯಾರಸ್ (ಮಧ್ಯ ಪ್ರದೇಶ), ಪಾರ್ಶ್ವಪರಿವರ್ತನಿ ಏಕಾದಶಿ (ಸ್ಮಾರ್ತ)
ಅದೃಷ್ಟ ಸಂಖ್ಯೆ: 4, 9

ಮೇಷ: ನಿಮ್ಮ ಕಠಿಣ ಪರಿಶ್ರಮದಿಂದ ಆರ್ಥಿಕವಾಗಿ ಅಲ್ಪ ಚೇತರಿಕೆ ಕಾಣುವುದು. ಉದ್ಯೋಗದಲ್ಲಿರುವ ಒತ್ತಡವನ್ನು ನಿವಾರಿಸಿಕೊಳ್ಳುವುದು ಕಷ್ಟವಾಗುತ್ತದೆ. ಕುಟುಂಬದವರ ಜೊತೆಯಲ್ಲಿ ಸಮಯ ಕಳೆಯುವಿರಿ.

ವೃಷಭ: ನಿಮ್ಮ ವೃತ್ತಿಯ ಮತ್ತು ಮುಂದಿನ ಬದುಕಿನ ಬಗ್ಗೆ ಗಂಭೀರವಾಗಿ ಚಿಂತಿಸಬೇಕಾದ ಅಗತ್ಯವಿದೆ. ಇಂದು ಖಾದಿ ಉದ್ಯಮದವರಿಗೆ ಬೇಡಿಕೆ ಪೂರೈಸಲು ಸಾಧ್ಯವಾಗದ ರೀತಿಯಲ್ಲಿ ವ್ಯಾಪಾರ ನಡೆಯುವುದು.

ಮಿಥುನ: ನಿಮ್ಮ ಸ್ವಯಂ ಶಕ್ತಿಯು ನಿಮ್ಮ ಹಿತೈಷಿಗಳ ಕಣ್ಣನ್ನು ಕೆಂಪಾಗಿಸುತ್ತದೆ. ಎಚ್ಚರಿಕೆಯಿಂದ ಕಾರ್ಯಗಳನ್ನು ನಿರ್ವಹಿಸಿ. ನಿಮ್ಮ ಈ ದಿನದ ಸಾಧನೆಗೆ ತಾಯಿಯ ಬೆಂಬಲ, ಪ್ರೋತ್ಸಾಹ ಸಿಗುವುದು.

ಕರ್ಕಾಟಕ: ಹೋಟೆಲ್ ಉದ್ಯಮದವರಿಗೆ ಅಥವಾ ಬೇಕರಿಯವರಿಗೆ ವ್ಯಾಪಾರದಲ್ಲಿ ಹಿನ್ನಡೆ ಉಂಟಾಗಬಹುದು. ಬಂಧುಗಳಿಂದ ಯಾವುದೇ ಸಹಾಯ ನಿರೀಕ್ಷಿಸಬೇಡಿ. ಋಣಬಾಧೆಯಿಂದ ಮುಕ್ತರಾಗಲು ಮಾರ್ಗದ ಬಗ್ಗೆ ಗಮನ ನೀಡಿ.

ಸಿಂಹ: ಹಳೆಯ ಅನುಭವದಿಂದ ಕಲಿತ ಅಂಶಗಳು ಈ ದಿನ ಬಳಕೆಗೆ ಬರಲಿದೆ. ನಿಮ್ಮ ಯೋಜನೆಗಳನ್ನು ಇತರರ ಮುಂದೆ ಮಂಡಿಸಿ ಅವರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗುವಿರಿ. ಇಂದಿನ ಗ್ರಹಸ್ಥಿತಿಗೆ ನೀಲಿ ಬಣ್ಣ ಶುಭದಾಯಕ.

ಕನ್ಯಾ: ವಾಹನ ಬಿಡಿ ಭಾಗಗಳ ಮಾರಾಟಗಾರರಿಗೆ ಹೆಚ್ಚು ಲಾಭ ಸಿಗುವುದು. ನಿಮ್ಮ ಪ್ರಯತ್ನಕ್ಕೆ ಕುಟುಂಬದ ಸದಸ್ಯರ ಸಹಕಾರ ದೊರೆತು ಮನಸ್ಸಿಗೆ ಸಂತಸ ದೊರೆಯುತ್ತದೆ. ಮಾನಸಿಕ ಕಲ್ಪನೆಗಳನ್ನು ಎಲ್ಲರೊಂದಿಗೆ ಹಂಚಿಕೊಳ್ಳುವಿರಿ.

ತುಲಾ: ಗುರಿ ಸಾಧನೆಯತ್ತ ಲಕ್ಷ್ಯವಿರಿಸಲು ಮಕ್ಕಳಿಗೆ ತಿಳಿ ಹೇಳುವುದು ಒಳ್ಳೆಯದು. ಸರ್ಕಾರಿ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಇನ್ನಷ್ಟು ಹೆಚ್ಚಿನ ಅನುಕೂಲವಾಗುವ ಸಾಧ್ಯತೆ ಇದೆ.

ವೃಶ್ಚಿಕ: ಅಕ್ಕ-ಪಕ್ಕದವರನ್ನು ತಾತ್ಸಾರವಾಗಿ ಭಾವಿಸಬೇಡಿ. ಮುಂದೊಂದು ದಿನ ಅವರ ಸಹಾಯ ಪಡೆಯಬೇಕಾಗಬಹುದು. ನಿಮ್ಮ ದುಡುಕುತನದಿಂದ ಕಾರ್ಯ ಹಾನಿಯಾಗುವ ಸಂಭವವಿದೆ, ತಾಳ್ಮೆ ನಿಮಗೆ ಅತ್ಯವಶ್ಯ.

ಧನು: ನಿಮ್ಮ ವೃತ್ತಿಯನ್ನು ಅಭಿವೃದ್ಧಿ ಮಾಡುವ ಸಂಕಲ್ಪದಿಂದ ಈ ದಿನವನ್ನು ಪ್ರಾರಂಭಿಸಿ, ದೇವತಾನುಗ್ರಹದಿಂದ ಅಭಿವೃದ್ಧಿಯಾಗುವುದು. ದೈವಾನುಗ್ರಹ ಇರುವುದರಿಂದ ಸಕಲ ಅಭೀಷ್ಟವು ನೆರವೇರುವುದು.

ಮಕರ: ನಿಮ್ಮ ಸಮಯೋಚಿತವಾದ ಬುದ್ಧಿಶಕ್ತಿಯು ಸಂಕಟಗಳನ್ನು ದೂರ ಮಾಡಲಿದೆ. ವ್ಯಾಪಾರದಲ್ಲಿ ಮೋಸ ಹೋಗುವ ಸಾಧ್ಯತೆಯಿದೆ ಜಾಗ್ರತೆ ವಹಿಸಿ. ಸಾಲಬಾಧೆಯಂತಹ ಪರಿಸ್ಥಿತಿಯಲ್ಲಿ ಸಹೋದರರು ಸಹಕರಿಸುವರು.

ಕುಂಭ: ಕುಟುಂಬ ನಿರ್ವಹಣೆಯಲ್ಲಿ ಅಸಹಾಯಕತನ ಮನೆಯ ಸದಸ್ಯರಿಗೆ ತೊಂದರೆಯನ್ನು ಉಂಟುಮಾಡುವುದು. ನೂತನ ವ್ಯಾಪಾರ ಆರಂಭವನ್ನು ನಿರ್ಧರಿಸಿದವರಿಗೆ ಮಧ್ಯವರ್ತಿಗಳ ಬಳಕೆಯಿಂದ ಸಹಾಯ ಸಿಗುವುದು.

ಮೀನ: ಹಣ ಮಾಡುವ ಪ್ರಯತ್ನಕ್ಕಿಂತ ಮಿಗಿಲಾಗಿ ಹೆಸರು ಮಾಡುವ ಬಗ್ಗೆ ಗಮನವಿರಲಿ. ಮೋಜು ಮಸ್ತಿಯ ಆಲೋಚನೆಯಿಂದ ದೂರವಿರುವ ಪ್ರಯತ್ನ ಒಳ್ಳೆಯದು..

ಪದಬಂಧ 5071

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಚುಂಬನದೊಂದಿಗೆ ಸಿಕ್ಕಿದ್ದು ನವರತ್ನಗಳಲ್ಲೊಂದು (2)
2.ಕಾಯ ಬಗ್ಗಿಸಿ ಮಾಡಿರುವ ಕೆಲಸ (3)
4.ಕಣದಲ್ಲಿ ಸಿಕ್ಕಿರುವ ಹತೋಟಿ (4)
6.ಇದು ವೀರಶೈವರ ಸ್ಮಶಾನ (4)
8.ರಾವು ಬಡಿದಂತಿರುವ ಕುದುರೆ ಸವಾರ (3)
9.ಇವನು ಜ್ಞಾನವಿಲ್ಲದವನು (3)
11.ಮಂಜ ನಡುವಿದ್ದಾಗಲೇ ಇದು ಸೂಕ್ತವಾದುದು (4)
13ಮರದೊಳಗೆ ಸುತ್ತುತ್ತಿರುವ ದುಂಬಿ (4)
15.ಲೋಹದ ಅಥವಾ ಮರದ ಹಾಳೆ (3)
16.ಖನಿಜಗಳ ನೆಲೆ (2)

ಮೇಲಿಂದ ಕೆಳಕ್ಕೆ
1.ದುಮುಗುಟ್ಟುತ್ತಿರುವ ಅಜ್ಜ! (3)
2.ರಾಜಕಾರಣದಲ್ಲಿರುವ ಉದ್ದೇಶ! (3)
3.ಕರುವನ್ನು ಮಾರುವಾತನ ಷರತ್ತು! (3)
5.ಕಾವು ಬಡಿದರೂ ತೋರಿಸಿದ ಡೌಲು! (3)
7.ನಿಯಮಿಸಿದಾತ ತೋರಿಸಿದ ಬಂಗಾರ (3)
8.ರಾಯರಿಂದ ಬಂದಿರುವ ನಿರೂಪ (3)
10. ಪಕ ಪಕ ನಕ್ಕಾಗಲೇ ಆಗಿರುವ ನೆನಪು (3)
12.ಸಹನೀಯವೆನಿಸಿದ್ದಕ್ಕೇ ಇಷ್ಟು ಹತ್ತಿರ (3)
13.ಮೆಲ್ಲಗೆ ಕಿತ್ತು ಮುಡಿದ ಸುವಾಸಿತ ಹೂ (3)
14.ಮಣಿ ಧರಿಸಿದ ಚಲುವೆ (3)



5070ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚಕ್ಷುಃಪ್ರೀತಿ 3.ಲವಾಜಮೆ
5.ವಿಧುರ 6.ಅಡವಿ
7.ದನುಜ 9.ದಮನ
11.ಲಹರಿ 12.ಅಪಾತ್ರ
13.ಅಂಗಾರಕ 15.ವಿನಿಯೋಗ

ಮೇಲಿಂದ ಕೆಳಕ್ಕೆ:
1.ಚಮ್ಮಾರ 2.ತಿಲ
4.ವಾಕ್ಕೋವಿದ 5.ವಿಷಾದ
6.ಅಜಾರಿ 8.ಜಲಚರ
10.ನಕ್ಷತ್ರ 12.ಅನಂಗ
14.ಕವಿ

ಸುಡೊಕು 5457

	4			2		7		3
6		9	5		7			
	3			8		6		
	7			9			3	
	9	3	6					4
4				5		8		
7			8		9			
	5						8	
	8			4		9		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5456 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ಮೋದಿ– ಶೇಖ್ ಹಸೀನಾ ಚರ್ಚೆ ಇಂದು

ಶೇಖ್ ಹಸೀನಾ

ನವದೆಹಲಿ (ಪಿಟಿಐ): ಭಾರತ–ಬಾಂಗ್ಲಾದೇಶ ದ್ವಿಪಕ್ಷೀಯ ಸಂಬಂಧ ವೃದ್ಧಿ ಉದ್ದೇಶದಿಂದ ಬಾಂಗ್ಲಾ ಪ್ರಧಾನಿ ಶೇಖ್ ಹಸೀನಾ ಅವರು ಸೋಮವಾರದಿಂದ ನಾಲ್ಕು ದಿನ ಭಾರತಕ್ಕೆ ಭೇಟಿ ನೀಡಿದ್ದಾರೆ.

ಹಸೀನಾ ಅವರನ್ನು ಕೇಂದ್ರ ಸಚಿವ ದರ್ಶನ್ ಜರ್ದೋಶ್ ಅವರು ಇಲ್ಲಿನ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು.

ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಹಸೀನಾ ಅವರು ಸುದೀರ್ಘ ಮಾತುಕತೆ ನಡೆಸಲಿದ್ದಾರೆ. ಈ ವೇಳೆ ರಕ್ಷಣೆ, ವ್ಯಾಪಾರ ಮತ್ತು ನದಿ ನೀರು ಹಂಚಿಕೆ ವಿಷಯದಲ್ಲಿ ಪರಸ್ಪರ ಸಹಕಾರ ನೀಡುವ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆ ಇದೆ.

ಇದಕ್ಕೂ ಮೊದಲು ಹಸೀನಾ ಅವರು 2019ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದರು.

ಜಾಗತಿಕ ಮಟ್ಟದಲ್ಲಿ ಎನ್‌ಇಪಿಗೆ ಶ್ಲಾಘನೆ– ಪ್ರಧಾನಿ ಮೆಚ್ಚುಗೆ

‘ದೇಶದಲ್ಲಿ 14,500 ಶಾಲೆಗಳ ಅಭಿವೃದ್ಧಿ’

ನವದೆಹಲಿ(ಪಿಟಿಐ): ‘ಪ್ರಧಾನ ಮಂತ್ರಿ ಸ್ಕೂಲ್ಸ್ ಫಾರ್ ರೈಸಿಂಗ್ ಇಂಡಿಯಾ’ (ಪಿಎಂ–ಶ್ರೀ) ಯೋಜನೆಯಡಿ ದೇಶದಾದ್ಯಂತ 14,500 ಶಾಲೆಗಳನ್ನು ಅಭಿವೃದ್ಧಿಪಡಿಸಿ, ಮೇಲ್ದರ್ಜೆಗೇರಿಸಲಾಗುವುದು’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಹೇಳಿದ್ದಾರೆ.

ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿ ಮಾತನಾಡಿದ ಅವರು, ‘ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಒಳಗೊಂಡ ಪಿಎಂ–ಶ್ರೀ ಯೋಜನೆ ಅಡಿ ಶಾಲೆಗಳು ಮಾದರಿ ಶಾಲೆಗಳಾಗಿ ಪರಿವರ್ತನೆಯಾಗಲಿವೆ. ಶಿಕ್ಷಕರ ದಿನದ ಈ ಸುಸಂದರ್ಭದಲ್ಲಿ 14,500 ಶಾಲೆಗಳನ್ನು ಅಭಿವೃದ್ಧಿಪಡಿಸಿ, ಮೇಲ್ದರ್ಜೆಗೇರಿಸುವ ಹೊಸ ಕ್ರಮವನ್ನು ಜಾರಿಗೆ ತರುತ್ತಿರುವುದನ್ನು ಘೋಷಿಸುತ್ತಿರುವುದು ಹೆಮ್ಮೆಯ ಸಂಗತಿ’ ಎಂದೂ ತಿಳಿಸಿದ್ದಾರೆ.

ಈ ಕುರಿತು ಸರಣಿ ಟ್ವೀಟ್‌ಗಳನ್ನು ಮಾಡಿರುವ ಮೋದಿ ಅವರು, ‘ಪಿಎಂ–ಶ್ರೀ ಯೋಜನೆಯ ಶಾಲೆಗಳು ಶಿಕ್ಷಣವನ್ನು ನೀಡುವ ಆಧುನಿಕ, ಪರಿವರ್ತನೆಯ ಮತ್ತು ಸಮಗ್ರ ವಿಧಾನವನ್ನು ಹೊಂದಿರುತ್ತವೆ. ಆವಿಷ್ಕಾರ ಆಧಾರಿತ, ಕಲಿಕಾ ಕೇಂದ್ರಿತ ಬೋಧನೆಯ ಮಾರ್ಗಕ್ಕೆ ಇಲ್ಲಿ ಒತ್ತು ನೀಡಲಾಗುವುದು’ ಎಂದೂ ಹೇಳಿದ್ದಾರೆ.

ನವದೆಹಲಿಯಲ್ಲಿ ನಡೆದ ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕರೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಭಾರತವು ತನ್ನ ಶೈಕ್ಷಣಿಕ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಸರಿಯಾದ ಹಾದಿಯಲ್ಲಿ ಸಾಗುತ್ತಿದ್ದು, ದೇಶದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ಜಾಗತಿಕಮಟ್ಟದಲ್ಲಿ ಪ್ರಶಂಸೆಗೆ ಪಾತ್ರವಾಗಿದೆ. ಇದನ್ನು ರೂಪಿಸುವಲ್ಲಿ ಶಿಕ್ಷಕರು ಮಹತ್ವದ ಪಾತ್ರವನ್ನು ವಹಿಸಿದ್ದಾರೆ’ ಎಂದು ಹೇಳಿದರು.

‘ನಮ್ಮ ಶಿಕ್ಷಕರು ವಿದ್ಯಾರ್ಥಿಗಳನ್ನು ವಿದ್ಯಾವಂತರನ್ನಾಗಿ ಮಾತ್ರವಲ್ಲದೆ ಅವರ ಜೀವನವನ್ನೂ ಬದಲಾಯಿಸುತ್ತಾರೆ. 2047ರ ‘ಅಮೃತ ಕಾಲ’ದಲ್ಲಿ ಭಾರತವು ಹೇಗಿರುತ್ತದೆ ಎಂಬುದನ್ನು ನಿರ್ಧರಿಸುವ ಯುವಜನರನ್ನು ನಮ್ಮ ಶಿಕ್ಷಕರು ರೂಪಿಸುತ್ತಾರೆ. ಶಿಕ್ಷಕನಾದವನು ಸಕರಾತ್ಮಕ ಶಕ್ತಿಯನ್ನು ಹೊಂದಿದ್ದು, ಸದಾ ಸವಾಲುಗಳನ್ನು ಎದುರಿಸಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುತ್ತಾನೆ. ನಿಜವಾದ ಶಿಕ್ಷಕನು ಕನಸು ಕಾಣಲು ಮತ್ತು ಅಸಾಧ್ಯವಾದುದನ್ನು ಸಾಧಿಸಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುವ ಗುಣವನ್ನು ಹೊಂದಿರುತ್ತಾನೆ’ ಎಂದೂ ಮೋದಿ ಅಭಿಪ್ರಾಯಪಟ್ಟರು.

ಪ್ರತಿಭಾನ್ವೇಷಣೆಗೆ ಮಾತೃಭಾಷೆ ಶಿಕ್ಷಣ ಪರಿಣಾಮಕಾರಿ

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ನಮಿಸಿದರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ‘ವಿಜ್ಞಾನ, ಸಾಹಿತ್ಯ ಮತ್ತು ಸಮಾಜ ವಿಜ್ಞಾನ ಕ್ಷೇತ್ರಗಳಲ್ಲಿ ಪ್ರತಿಭಾನ್ವೇಷಣೆಗೆ ಮಾತೃಭಾಷೆ ಶಿಕ್ಷಣ ಹೆಚ್ಚು ಪರಿಣಾಮಕಾರಿ’ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ವಿಜ್ಞಾನ ಭವನದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕದ ವಿ.ಪೊನಶಂಕರಿ ಮತ್ತು ಟಿ.ಪಿ.ಉಮೇಶ್ ಸೇರಿದಂತೆ ಒಟ್ಟು 46 ಶಿಕ್ಷಕರಿಗೆ ರಾಷ್ಟ್ರ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ವಿಜ್ಞಾನ, ಸಂಶೋಧನೆ ಹಾಗೂ ಆವಿಷ್ಕಾರವು ಜ್ಞಾನಾಧಾರಿತ ಆರ್ಥಿಕತೆಯ ಬುನಾದಿಗಳಾಗಿವೆ. ಈ ಕ್ಷೇತ್ರಗಳಲ್ಲಿ ಭಾರತದ ಸ್ಥಾನವನ್ನು ಇನ್ನಷ್ಟು ಉತ್ತಮಪಡಿಸಬೇಕು. ಇದಕ್ಕೆ ಶಾಲಾ ಹಂತದಲ್ಲೇ ಅಡಿಪಾಯ ಹಾಕಬೇಕು. ಶಿಕ್ಷಕರು ಮಕ್ಕಳಲ್ಲಿ ಪ್ರಶ್ನೆ ಕೇಳುವ ಹಾಗೂ ಅನುಮಾನ ವ್ಯಕ್ತಪಡಿಸುವ ಮನೋಭಾವ ಬೆಳೆಸಬೇಕು. ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸುವ ಹಾಗೂ ಅವರ ಅನುಮಾನಗಳನ್ನು ಪರಿಹರಿಸುವುದರಿಂದ ಶಿಕ್ಷಕರ ಜ್ಞಾನವೂ ಹೆಚ್ಚುತ್ತದೆ’ ಎಂದಿದ್ದಾರೆ.

‘ಆರಂಭದಲ್ಲಿ ನಮಗೆ ಬದುಕುವ ಕಲೆ ಕಲಿಸಿಕೊಟ್ಟವರು ಅಮ್ಮಂದಿರು. ಮಕ್ಕಳಲ್ಲಿ ಹುದುಗಿರುವ ಪ್ರತಿಭೆ ಹೊರಗೆಡವಲು ಮಾತೃಭಾಷೆ ಶಿಕ್ಷಣ ಸಹಕಾರಿ. ಹೀಗಾಗಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) ಶಾಲಾ, ಉನ್ನತ ಶಿಕ್ಷಣದಲ್ಲಿ ಸ್ಥಳೀಯ ಭಾಷೆ ಬಳಕೆಗೆ ಹೆಚ್ಚಿನ ಒತ್ತು ನೀಡಲಾಗಿದೆ’ ಎಂದು ಹೇಳಿದರು.

ಸುದ್ದಿ 2 ನಿಮಿಷ

ಸಂಜಯ್ ರಾವುತ್ ನ್ಯಾಯಾಂಗ ಬಂಧನ ಅವಧಿ ಮತ್ತೆ ವಿಸ್ತರಣೆ

ಮುಂಬೈ (ಪಿಟಿಐ): ಶಿವಸೇನಾ ಸಂಸದ ಸಂಜಯ್ ರಾವುತ್ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ಇಲ್ಲಿನ ವಿಶೇಷ ನ್ಯಾಯಾಲಯವು ಮತ್ತೆ 14 ದಿನ ವಿಸ್ತರಿಸಿ ಸೋಮವಾರ ಆದೇಶ ನೀಡಿದೆ.

ಪತ್ರಾ ಚಾಳ್ ಭೂಹಗರಣದ ಹಣ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾವುತ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಆಗಸ್ಟ್ 1ರಂದು ವಶಕ್ಕೆ ಪಡೆದು ಬಳಿಕ ಬಂಧಿಸಿದ್ದರು.

ಸೋಮವಾರ ರಾವುತ್ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಈ ವೇಳೆ ವಿಚಾರಣೆ ನಡೆಸಿದ ನ್ಯಾಯಾಲಯ ರಾವುತ್ ಅವರ ನ್ಯಾಯಾಂಗ ಬಂಧನದ ಅವಧಿ ವಿಸ್ತರಿಸಿ ಆದೇಶಿಸಿತು.

ಚೀನಾ: ಸಿಚುವಾನ್ ಪ್ರಾಂತ್ಯದಲ್ಲಿ ಪ್ರಬಲ ಭೂಕಂಪ– 46 ಸಾವು

ಬೀಜಿಂಗ್ (ಪಿಟಿಐ): ಟಿಬೆಟ್ ಸಮೀಪದ ಚೀನಾದ ಸಿಚುವಾನ್ ಪ್ರಾಂತ್ಯದಲ್ಲಿ ಸೋಮವಾರ ರಿಕ್ಟರ್ ಮಾಪಕದಲ್ಲಿ 6.8ರಷ್ಟು ತೀವ್ರತೆಯ ಭೂಕಂಪ ಸಂಭವಿಸಿದ್ದು, 46 ಮಂದಿ ಮೃತಪಟ್ಟಿದ್ದಾರೆ.

ಸಿಚುವಾನ್ ಪ್ರಾಂತ್ಯದ ರಾಜಧಾನಿ ಚೆಂಗ್‌ಡುವಿನಿಂದ 226 ಕಿ.ಮೀ. ದೂರದ ಲುಡಿಂಗ್ ಕೌಂಟಿಯ ಮುಖ್ಯ ಪಟ್ಟಣದ ಸಮೀಪ ಭೂಕಂಪದ ಕೇಂದ್ರಬಿಂದು ಇತ್ತು ಎಂದು ಚೀನಾ ಭೂಕಂಪನ ಜಾಲ ಕೇಂದ್ರವನ್ನು ಉಲ್ಲೇಖಿಸಿ ಮಾಧ್ಯಮವೊಂದು ವರದಿ ಮಾಡಿದೆ.

ಚೆಂಗ್‌ಡುವಿನಲ್ಲಿ ಸಹ ಭೂಕಂಪನದ ಅನುಭವವಾಗಿದೆ. ಅಲ್ಲಿ ಕಟ್ಟಡಗಳು ಅಲುಗಾಡುವ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ.

ಟಿಬೆಟ್ ಪ್ರಸ್ಥಭೂಮಿ ಭಾರಿ ಭೂಕಂಪಕ್ಕೆ ಕುಖ್ಯಾತಿ ಗಳಿಸಿದೆ. 2008ರಲ್ಲಿ ಇಲ್ಲಿ ಸಂಭವಿಸಿದ 8.2ರಷ್ಟು ತೀವ್ರತೆಯ ಭೂಕಂಪದಲ್ಲಿ 69 ಸಾವಿರ ಜನರು ಸತ್ತಿದ್ದರು ಹಾಗೂ 2013ರಲ್ಲಿ 7 ತೀವ್ರತೆಯ ಭೂಕಂಪದಲ್ಲಿ 200 ಮಂದಿ ಮೃತಪಟ್ಟಿದ್ದರು.

ಈ ಭಾಗದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಿರುವಂತೆಯೇ, ಭೂಕಂಪವೂ ಸಂಭವಿಸಿರುವುದರಿಂದ ಜನರ ಆತಂಕ ಇಮ್ಮಡಿಗೊಂಡಿದೆ.

ವಿಚಾರಣೆಗೆ ‘ಸುಪ್ರೀಂ’ ನಕಾರ

ನವದೆಹಲಿ: ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ರದ್ದುಗೊಳಿಸಿರುವ ಕರ್ನಾಟಕ ಹೈಕೋರ್ಟ್‌ನ ತೀರ್ಪಿನ ವಿರುದ್ಧ ಸಲ್ಲಿಕೆಯಾಗಿರುವ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಕನಕರಾಜು ಎಂಬುವರು ಸುಪ್ರೀಂ ಕೋರ್ಟ್‌ಗೆ ಆಗಸ್ಟ್ 23ರಂದು ಮೇಲ್ಮನವಿ ಸಲ್ಲಿಸಿದ್ದರು. ಮುಖ್ಯ ನ್ಯಾಯಮೂರ್ತಿ ಅವರನ್ನೊಳಗೊಂಡ ಪೀಠವು ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿತ್ತು.

ಸೋಮವಾರ ಈ ಪ್ರಕರಣವು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ಹಿಮಾ ಕೊಹ್ಲಿ ಅವರನ್ನು ಒಳಗೊಂಡ ಪೀಠದ ಎದುರು ಬಂತು. ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೊಹಟಗಿ ಅವರನ್ನು ಪ್ರಶ್ನಿಸಿದ ನ್ಯಾಯಮೂರ್ತಿಗಳು, ‘ಕನಕರಾಜು ಅವರ ಮನವಿಯನ್ನು ನ್ಯಾಯಾಲಯ ಏಕೆ ಪರಿಗಣಿಸಬೇಕು’ ಎಂದು ಕೇಳಿದರು.

ರೊಹಟಗಿ ವಾದ ಮಂಡಿಸಿ, ‘ಲಂಚಕ್ಕಾಗಿ ಬೇಡಿಕೆ ಇಟ್ಟಿದ್ದ ಬೆಸ್ಕಾಂನ ಇಬ್ಬರು ಅಧಿಕಾರಿಗಳ ವಿರುದ್ಧ ಕನಕರಾಜು ಅವರು ಎಸಿಬಿಯಲ್ಲಿ ದೂರು ಸಲ್ಲಿಸಿದ್ದರು. ಅವರು ದೂರುದಾರರಾಗಿದ್ದಾರೆ. ಜತೆಗೆ, ಹೈಕೋರ್ಟ್ ಆದೇಶವನ್ನು ಕರ್ನಾಟಕ ಸರ್ಕಾರ ಸಹ ಪ್ರಶ್ನಿಸಿದೆ ಎಂದು ಕನಕರಾಜು ಹೇಳಿದ್ದಾರೆ’ ಎಂದರು.

ಆಗ ನ್ಯಾಯಮೂರ್ತಿಗಳು, ‘ಹಾಗಿದ್ದರೆ ರಾಜ್ಯ ಸರ್ಕಾರದ ಅರ್ಜಿಯೊಂದಿಗೆ ಪ್ರಕರಣದ ವಿಚಾರಣೆಯನ್ನು ಮುಂದೂಡುತ್ತೇವೆ’ ಎಂದು ತಿಳಿಸಿದರು.

ಸಾರ್ವಜನಿಕ ಸೇವೆಯಲ್ಲಿರುವ ಸರ್ಕಾರಿ ನೌಕರರ ವಿರುದ್ಧದ ಭ್ರಷ್ಟಾಚಾರ ಆರೋಪ ಪ್ರಕರಣಗಳ ತನಿಖೆ ನಡೆಸಲು 2016ರಲ್ಲಿ ರಚಿಸಲಾಗಿದ್ದ ಎಸಿಬಿಯನ್ನು 2022ರ ಆಗಸ್ಟ್ 11ರಂದು ರದ್ದುಗೊಳಿಸಿತ್ತು.

‘ರಾಜ್‌ಪಥ್’ ಇನ್ನು ‘ಕರ್ತವ್ಯಪಥ್’

ನವದೆಹಲಿ (ಪಿಟಿಐ): ‘ದೆಹಲಿಯ ಐತಿಹಾಸಿಕ ‘ರಾಜ್‌ಪಥ್’ಗೆ ‘ಕರ್ತವ್ಯಪಥ್’ ಎಂದು ಮರು ನಾಮಕರಣ ಮಾಡಲು ಸರ್ಕಾರ ತೀರ್ಮಾನಿಸಿದೆ’ ಎಂದು ಮೂಲಗಳು ಸೋಮವಾರ ತಿಳಿಸಿವೆ.

‘ಇದೇ 7ರಂದು ನ್ಯೂ ಡೆಲ್ಲಿ ಮುನ್ಸಿಪಲ್ ಕೌನ್ಸಿಲ್‌ನ (ಎನ್‌ಡಿಎಂಸಿ) ವಿಶೇಷ ಸಭೆ ನಿಗದಿಯಾಗಿದೆ. ಮರುನಾಮಕರಣದ ಪ್ರಸ್ತಾವನೆಯನ್ನು ಸಭೆಯ ಮುಂದೆ ಇಡಲಾಗುತ್ತದೆ. ಇಂಡಿಯಾ ಗೇಟ್ ಬಳಿಯ ನೇತಾಜಿ ಪ್ರತಿಮೆಯಿಂದ ರಾಷ್ಟ್ರಪತಿ ಭವನದವರೆಗಿನ ಇಡೀ ರಸ್ತೆ ಇನ್ನು ಮುಂದೆ ‘ಕರ್ತವ್ಯಪಥ್’ ಎಂದು ಕರೆಸಿಕೊಳ್ಳಲಿದೆ’ ಎಂದು ಹೇಳಿವೆ.

ಮಾಜಿ ಸಚಿವ ಪ್ರಭಾಕರ ರಾಣೆ ನಿಧನ

ಕಾರವಾರ: ಮಾಜಿ ಸಚಿವ, ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಪ್ರಭಾಕರ ರಾಣೆ (81), ತಾಲ್ಲೂಕಿನ ಸಿದ್ದರಗ್ರಾಮದ ಮನೆಯಲ್ಲಿ ಸೋಮವಾರ ನಿಧನರಾದರು. ಜ್ವರ, ವಯೋಸಹಜ ಅನಾರೋಗ್ಯಕ್ಕೆ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಕೆಲ ದಿನಗಳ ಹಿಂದೆಯಷ್ಟೇ ಮನೆಗೆ ಮರಳಿದ್ದರು.

ಅವರಿಗೆ ಪತ್ನಿ ಇದ್ದಾರೆ. ಅಂತ್ಯಕ್ರಿಯೆ ಸಿದ್ದರಗ್ರಾಮದಲ್ಲಿ ಸೆ.6ರಂದು ಬೆಳಿಗ್ಗೆ ನಡೆಯಲಿದೆ.

ಕಾರವಾರ– ಜೊಯಿಡಾ ವಿಧಾನಸಭಾ ಕ್ಷೇತ್ರದಿಂದ ‘ಕ್ರಾಂತಿರಂಗ’ ಪಕ್ಷದಿಂದ ಒಂದು ಸಲ, ಕಾಂಗ್ರೆಸ್ ಪಕ್ಷದಿಂದ ಎರಡು ಸಲ ಶಾಸಕರಾಗಿ ಆಯ್ಕೆಯಾಗಿದ್ದರು. 1993ರಲ್ಲಿ ವೀರಪ್ಪ ಮೊಯ್ಲಿ ನೇತೃತ್ವದ ಸಂಪುಟದಲ್ಲಿ ಗ್ರಂಥಾಲಯ ಮತ್ತು ವಯಸ್ಕರ ಶಿಕ್ಷಣ ಸಚಿವರಾಗಿದ್ದರು. ಬಳಿಕ ರಾಜಕೀಯದಲ್ಲಿ ಹಿನ್ನಡೆ ಕಂಡಿದ್ದ ಅವರು, ಕೆಲ ಕಾಲ ಜೆಡಿಎಸ್ ಹಾಗೂ ಬಿಜೆಪಿಯಲ್ಲೂ ಗುರುತಿಸಿಕೊಂಡಿದ್ದರು.

ರಾಣೆ ಅವರು ಸಿದ್ದರಗ್ರಾಮದ ಮಲ್ಲಿಕಾರ್ಜುನ ಶಿಕ್ಷಣ ಸಮಿತಿ ಸಂಸ್ಥೆಯ ಶಿಕ್ಷಕರಾಗಿ ವೃತ್ತಿ ಜೀವನ ಆರಂಭಿಸಿದರು. ನಂತರ ಬಾಪೂಜಿ ಗ್ರಾಮೀಣ ವಿಕಾಸ ಸಮಿತಿ ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ಈ ಸಮಿತಿ ಈಗ ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆ ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳಲ್ಲಿ 20ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಮುನ್ನಡೆಸುತ್ತಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

1ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ನಂಜಮ್ಮ

ನಿಧನ: 06-09-2021

ಲೇಟ್ ಶ್ರೀ ರಾಮಣ್ಣನವರ ಪತ್ನಿ

(ಸಂಸ್ಥಾಪಕರು: ಪಲ್ಲವಿ ಕನ್‌ಸ್ಟ್ರಕ್ಷನ್ಸ್)

ಸದಾ ನಿಮ್ಮ ನೆನಪಿನಲ್ಲಿರುವ...

ಡಾ. ಸಿ. ರಾಮಚಂದ್ರ, ಡಾ. ವಿ.ಆರ್. ಪಲ್ಲವಿ

ಕುಮಾರಿ ಸಂಹಿತಾ ರಾಮಚಂದ್ರ

ಕುಮಾರಿ ಅನ್ವಿತಾ ರಾಮಚಂದ್ರ ಹಾಗೂ ಬಂಧು-ಮಿತ್ರರು

ಹಿಜಾಬ್ ಪ್ರಕರಣದ ವಿಚಾರಣೆ: ಸುಪ್ರೀಂ ಕೋರ್ಟ್ ಪ್ರಶ್ನೆ

‘ಮಿಡಿ, ಮಿನಿ ಧರಿಸಿ ತರಗತಿಗೆ ಬರಬಹುದೇ’

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಜಾಬ್ ಧರಿಸುವುದು ಒಂದು ಅಗತ್ಯ ಧಾರ್ಮಿಕ ಆಚರಣೆ ಎಂಬ ವಾದ ಕುರಿತು ಆಕ್ಷೇಪ ಎತ್ತಿರುವ ಸುಪ್ರೀಂಕೋರ್ಟ್, ‘ಒಂದು ವೇಳೆ ಅದನ್ನು ಸರಿಯೆಂದು ಪರಿಗಣಿಸಿದರೂ, ನಿರ್ದಿಷ್ಟ ಉಡುಪು ಅಥವಾ ಸಮವಸ್ತ್ರದ ನಿಯಮವಿರುವ ಒಂದು ಜಾತ್ಯತೀತ ದೇಶದ ಶಿಕ್ಷಣ ಸಂಸ್ಥೆಗಳಲ್ಲಿ ಅದಕ್ಕೆ ಅನುವು ಮಾಡಿಕೊಡಬಹುದೇ’ ಎಂದು ಪ್ರಶ್ನಿಸಿತು.

ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಮೇಲಿನ ನಿಷೇಧವನ್ನು ಎತ್ತಿಹಿಡಿದಿದ್ದ ಕರ್ನಾಟಕ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ಸುಧಾಂಶು ಧುಲಿಯಾ ಅವರಿದ್ದ ಪೀಠ ಸೋಮವಾರ ಆರಂಭಿಸಿತು.

‘ನೀವು ಧಾರ್ಮಿಕ ಹಕ್ಕನ್ನು ಹೊಂದಿರಬಹುದು ಮತ್ತು ಸಮವಸ್ತ್ರದ ನಿಯಮ ಹೊಂದಿರುವ ಶಿಕ್ಷಣ ಸಂಸ್ಥೆಯಲ್ಲಿ ಈ ಹಕ್ಕನ್ನು ಚಲಾಯಿಸಬಹುದು. ನೀವು ಹಿಜಾಬ್ ಅಥವಾ ಸ್ಕಾರ್ಫ್ ಧರಿಸಲು ಅರ್ಹರಾಗಿರಬಹುದು. ಆದರೆ, ಶಿಕ್ಷಣ ಸಂಸ್ಥೆಯೊಳಗೆ ನೀವು ಹಕ್ಕನ್ನು ಹೊಂದಬಹುದೇ? ಸರ್ಕಾರ ನಿಮಗೆ ಶಿಕ್ಷಣದ ಹಕ್ಕನ್ನು ನಿರಾಕರಿಸುತ್ತಿಲ್ಲ. ಶಾಲೆಗಳಿಗೆ ಸಮವಸ್ತ್ರದಲ್ಲಿ ಬರಬೇಕು ಎಂದು ಹೇಳುತ್ತಿದೆ’ ಎಂದು ಪೀಠ ಹೇಳಿತು.

‘ಗಾಲ್ಫ್ ಕೋರ್ಸ್ ಅಥವಾ ರೆಸ್ಟೋರೆಂಟ್‌ಗಳಿಗೆ ಕೂಡ ವಸ್ತ್ರ ಸಂಹಿತೆಯ ನಿಯಮವಿದ್ದಾಗ, ವಿದ್ಯಾರ್ಥಿಯು ತರಗತಿಯಲ್ಲಿ ಚಿಕ್ಕ ವಸ್ತ್ರಗಳನ್ನು (ಮಿಡಿ' ಅಥವಾ 'ಮಿನಿ') ಧರಿಸುತ್ತೇವೆ ಎನ್ನಬಹುದೇ’ ಎಂದು ಪ್ರಶ್ನಿಸಿತು. ಜೊತೆಗೆ, 'ಹಿಜಾಬ್' ಅನ್ನು 'ಪಗ್ಡಿ' ಅಥವಾ 'ತಿಲಕ' ಧರಿಸುವುದಕ್ಕೆ ಹೋಲಿಕೆ ಮಾಡಿರುವ ವಾದಗಳಿಂದ ನ್ಯಾಯಾಲಯ ತೃಪ್ತಿ ಹೊಂದಿದಂತೆ ಕಾಣಲಿಲ್ಲ.

ಕರ್ನಾಟಕ ಸರ್ಕಾರದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ ನಾವದಗಿ ವಾದ ಮಂಡಿಸಿ, ‘ರಾಜ್ಯ ಸರ್ಕಾರವು ಯಾರಿಗೂ ತೊಂದರೆ ಆಗದ ಆದೇಶ ಹೊರಡಿಸಿದೆ. ಶಿಕ್ಷಣ ಸಂಸ್ಥೆಗಳು ತಮ್ಮ ವಸ್ತ್ರಸಂಹಿತೆಯನ್ನು ರೂಪಿಸಲು ಅವಕಾಶ ಮಾಡಿಕೊಟ್ಟಿದೆ. ಸರ್ಕಾರ ಇದನ್ನು ಸಂಬಂಧಪಟ್ಟ ಸಂಸ್ಥೆಗೆ ಬಿಟ್ಟುಕೊಟ್ಟಿದೆ. ಕೆಲವು ಕಾಲೇಜುಗಳು ಉಡುಪಿಯಲ್ಲಿಯೇ ಹಿಜಾಬ್ ಧರಿಸುವುದನ್ನು ನಿಷೇಧಿಸದಿರಲು ನಿರ್ಧರಿಸಿದ್ದವು’ ಎಂದರು.

‘ಕಾಲೇಜುಗಳು ಹಿಜಾಬ್ ಧರಿಸಲು ಅನುಮತಿಸಿದರೆ, ಕ್ರೈಸ್ತ ಕಾಲೇಜುಗಳು ಸೇರಿದಂತೆ ಅಲ್ಪಸಂಖ್ಯಾತ ಸಂಸ್ಥೆಗಳು ತಮ್ಮದೇ ಆದ ಸಮವಸ್ತ್ರವನ್ನು ಶಿಫಾರಸು ಮಾಡಲು ಅನುಮತಿಸಲಾಗಿದೆಯೇ’ ಎಂದು ಪೀಠವು ಕೇಳಿತು.

ಇದಕ್ಕೆ ಪ್ರತಿಕ್ರಿಯಿಸಿದ ನಾವದಗಿ, ‘ಆ ಕುರಿತು ಮಾಹಿತಿ ಕಲೆ ಹಾಕಬಹುದು. ಆದರೆ, ತಮಗೆ ತಿಳಿದಂತೆ, ಉಡುಪಿಯ ಎರಡು ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ವಿದ್ಯಾರ್ಥಿಗಳಿಗೆ ಅನುಮತಿ ನೀಡಲಾಗಿದೆ’ ಎಂದರು.

ಕರ್ನಾಟಕ ಸರ್ಕಾರದ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್, ‘ಶಿಸ್ತು ಕಾಪಾಡಿಕೊಳ್ಳುವುದಕ್ಕಾಗಿ ವಸ್ತ್ರಸಂಹಿತೆಯ ನಿಯಮವನ್ನು ಜಾರಿಗೆ ತರಲಾಗಿದೆ. ಆದರೆ, ಕೆಲವರು ಧಾರ್ಮಿಕ ಆಚರಣೆಯ ಹೆಸರಿನಲ್ಲಿ ಇದನ್ನು ಉಲ್ಲಂಘಿಸಲು ಯತ್ನಿಸುತ್ತಿದ್ದಾರೆ’ ಎಂದರು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಸಂಜಯ್ ಹೆಗ್ಡೆ, ‘ಹಿಜಾಬ್ ಧರಿಸುವ ವಿಚಾರವು ಉಡುಪಿಗೆ ಸೀಮಿತ ಘಟನೆಯಾಗಿತ್ತು. ರಾಜಕೀಯ ಕಾರಣಗಳಿಂದ ಅದನ್ನು ರಾಜ್ಯ ಮಟ್ಟದ ವಿಷಯವನ್ನಾಗಿ ಪರಿವರ್ತಿಸಲಾಯಿತು’ ಎಂದರು.

‘ಪ್ರತಿ ಸಾರ್ವಜನಿಕ ಸ್ಥಳಗಳಲ್ಲಿ ವಸ್ತ್ರಸಂಹಿತೆಯಿದೆ. ಉದಾಹರಣೆಗೆ ಗಾಲ್ಫ್ ಕೋರ್ಸ್. ಇಲ್ಲಿ ವಸ್ತ್ರಸಂಹಿತೆ ಪಾಲಿಸುವುದಿಲ್ಲ ಎಂದು ಹೇಳಿ ಒಳಹೋಗಲು ಸಾಧ್ಯವೇ’ ಎಂದು ನ್ಯಾಯಪೀಠ ಪ್ರಶ್ನಿಸಿತು. ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ರಾಜೀವ್ ಧವನ್, ‘ಈ ಪ್ರಕರಣವನ್ನು ಸಾಂವಿಧಾನಿಕ ಪೀಠಕ್ಕೆ ವರ್ಗಾಯಿಸುವುದು ಉತ್ತಮ’ ಎಂದು ಸಲಹೆ ನೀಡಿದರು. ವಾದ ಪ್ರತಿವಾದ ಬುಧವಾರ ಮುಂದುವರಿಯಲಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560

Jerry : 9731810277 | Tanveer : 9886213331

Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ರೀಡೂ: ಬದಲಿ ನಿವೇಶನ ಹಂಚಿಕೆ ಮುನ್ನೆಲೆಗೆ

ಒಂದನೇ ಪುಟದಿಂದ

‘ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಅರ್ಕಾವತಿ ಬಡಾವಣೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡಿದ್ದ ಜಮೀನುಗಳ ಡಿನೋಟಿಫಿಕೇಷನ್ ಪ್ರಕರಣದಲ್ಲಿ ನಡೆದಿರುವ ‘ರೀಡೂ’ ಪ್ರಕ್ರಿಯೆ ಬಗ್ಗೆ ಪರಿಶೀಲನೆ ನಡೆಸಲು ಮೂವರು ಸದಸ್ಯರ ಸಮಿತಿಯನ್ನು ಹೈಕೋರ್ಟ್ ನೇಮಿಸಿದೆ. ಈ ಸಮಿತಿ ಇನ್ನೂ ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಳಿಸಿ ವರದಿ ಸಲ್ಲಿಸಿಲ್ಲ. ಅದಕ್ಕೂ ಮೊದಲೇ ಬದಲಿ ನಿವೇಶನಗಳನ್ನು ನೀಡುವ ಅಗತ್ಯ ಏನಿತ್ತು’ ಎಂದು ಕರ್ನಾಟಕ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಪ್ರಶ್ನಿಸಿದರು.

‘ರೀಡೂ ಹೆಸರಿನಲ್ಲಿ ಸಿದ್ದರಾಮಯ್ಯ ಅಧಿಕಾರದ ಅವಧಿ ಯಲ್ಲಿ ಅಕ್ರಮಗಳನ್ನು ಎಸಗಲಾಗಿದೆ. ಇದರ ವಿರುದ್ಧ ಬಿಜೆಪಿ ಹಲವು ಸಲ ಧ್ವನಿ ಎತ್ತಿದೆ. ಈಗ ರೀಡೂ ಪ್ರಕರಣಗಳ ತನಿಖೆಗೂ ಸಿದ್ಧತೆ ನಡೆಸಿದೆ. ಬದಲಿ ನಿವೇಶನಗಳನ್ನು ಹಂಚಿಕೆ ಮಾಡುವ ಮೂಲಕ ಕಾಂಗ್ರೆಸ್‌ನ ತಪ್ಪನ್ನು ಸಕ್ರಮ ಮಾಡಿದಂತೆ ಆಗಿದೆ’ ಎಂದು ಬಿಜೆಪಿ ಶಾಸಕರೊಬ್ಬರು ಬೇಸರ ವ್ಯಕ್ತಪಡಿಸಿದರು.

ಪಾರದರ್ಶಕವಾಗಿ ಹಂಚಿಕೆ: ‘ನಿವೇಶನ ಹಂಚಿಕೆಗೆ ಯಾರ ಹಸ್ತಕ್ಷೇಪಕ್ಕೂ ಅವಕಾಶ ಇಲ್ಲದ ರೀತಿ ಸಂಪೂರ್ಣ ಕಂಪ್ಯೂಟರೀಕೃತ ಆಯ್ಕೆ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳುವ ಮೂಲಕ ಪಾರದರ್ಶಕತೆ ಕಾಯ್ದುಕೊಂಡಿದ್ದೇವೆ. ಫಲಾನುಭವಿಗಳ ವಯಸ್ಸನ್ನು ಪರಿಗಣಿಸಿ, ಜ್ಯೇಷ್ಠತೆ ಆಧಾರದಲ್ಲಿ ಬದಲಿ ನಿವೇಶನ ಹಂಚಿಕೆ ಮಾಡಲಾಗಿದೆ’ ಎಂದು ಬಿಡಿಎ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಅವರಿಗೆ ಎರಡು ಸಲ ಕರೆ ಮಾಡಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ.

ಅಧಿಕಾರಿ ಕುಟುಂಬಕ್ಕೆ ₹7.5 ಕೋಟಿಯ ನಿವೇಶನ

ಡಿನೋಟಿಫಿಕೇಷನ್ ಕಾರಣದಿಂದ ನಿವೇಶನ ಕಳೆದುಕೊಂಡ ಮೂವರಿಗೆ ಬದಲಿ ನಿವೇಶನಗಳನ್ನು ನೀಡಲಾಗಿದೆ ಎಂದು ಎಂ.ಬಿ. ರಾಜೇಶ ಗೌಡ ಹೇಳಿದ್ದಾರೆ.

ಅದರಲ್ಲಿ ನಗರಾಭಿವೃದ್ಧಿ ಇಲಾಖೆಯ ಉಪ ಕಾರ್ಯದರ್ಶಿ ಕೆ.ಎಸ್. ಜಗದೀಶ ರೆಡ್ಡಿ ಸಂಬಂಧಿಗಳಾದ ಬಿ.ರಾಮ ರೆಡ್ಡಿ ಮತ್ತು ಆರ್.ಗೀತಾ ರೆಡ್ಡಿ ಅವರ 40x60 ಅಡಿಯ ನಿವೇಶನವೂ ಸೇರಿದೆ. ಮೊದಲು ಅವರಿಗೆ ಎಚ್‌ಎಸ್‌ಆರ್ ಬಡಾವಣೆಯ ಸೆಕ್ಟರ್ 6 ರಲ್ಲಿ ನಿವೇಶನ ನೀಡಲಾಗಿತ್ತು. ಬಳಿಕ ಅವರಿಗೆ ಆರ್‌ಎಂವಿ ಎರಡನೇ ಹಂತದಲ್ಲಿ ಅದೇ ಅಳತೆಯ ಬದಲಿ ನಿವೇಶನ ನೀಡಲಾಗಿದೆ.

2022ರ ಜನವರಿ 19ರಂದು ಕ್ರಯಪತ್ರ ಮಾಡಿಕೊಡಲಾಗಿದೆ. ಇಲ್ಲಿ ಚದರ ಅಡಿಗೆ ₹25 ಸಾವಿರ ಮಾರುಕಟ್ಟೆ ಮೌಲ್ಯ ಇದೆ. ಈ ನಿವೇಶನದ ಮಾರುಕಟ್ಟೆ ಮೌಲ್ಯ ₹7.5 ಕೋಟಿ ಎಂದು ಅಂದಾಜಿಸಲಾಗಿದೆ. ಸುಪ್ರೀಂ ಕೋರ್ಟ್ ಆದೇಶವನ್ನು ಗಾಳಿಗೆ ತೂರಿ ಈ ನಿವೇಶನ ಹಂಚಿಕೆ ಮಾಡಲಾಗಿದೆ.

ಉಪ ಕಾರ್ಯದರ್ಶಿಗೆ ನೋಟಿಸ್ ನೀಡುವುದಾಗಿ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ತಿಳಿಸಿದ್ದಾರೆ.

ಎಚ್‌ಡಿಕೆ– ನಿತೀಶ್ ಸಮಾಲೋಚನೆ

ಪ್ರಜಾವಾಣಿ ವಾರ್ತೆ



ದೆಹಲಿಯಲ್ಲಿ ಸೋಮವಾರ ಎಚ್‌.ಡಿ.ಕುಮಾರಸ್ವಾಮಿ ಹಾಗೂ ನಿತೀಶ್ ಕುಮಾರ್ ಭೇಟಿಯಾಗಿ ಸಮಾಲೋಚನೆ ನಡೆಸಿದರು. ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ಜೆಡಿಯು ರಾಜ್ಯ ಘಟಕದ ಅಧ್ಯಕ್ಷ ಮಹಿಮ ಪಟೇಲ್ ಇದ್ದರು.

ನವದೆಹಲಿ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹಾಗೂ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ದೆಹಲಿಯಲ್ಲಿ ಸೋಮವಾರ ಸಮಾಲೋಚನೆ ನಡೆಸಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಕುಮಾರಸ್ವಾಮಿ, ‘ಜನತಾ ಪರಿವಾರ ಒಗ್ಗೂಡುವ ಬಗ್ಗೆ ಮಾತುಕತೆ ನಡೆಯಿತು. ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕಾದರೆ ಎಲ್ಲರೂ ಒಗ್ಗೂಡುವ ಅವಶ್ಯಕತೆ ಇದೆ’ ಎಂದರು.

‘ಬಿಹಾರದಲ್ಲಿ ಇತ್ತೀಚೆಗೆ ನಡೆದ ರಾಜಕೀಯ ಬೆಳವಣಿಗೆಗಳ ನಂತರ ಮತ್ತೆ ಈ ಚರ್ಚೆಗೆ ಚಾಲನೆ ಸಿಕ್ಕಿದೆ. ಜೆ.ಪಿ. ಅವರಿಂದ ಪ್ರಾರಂಭವಾದ ಜನತಾ ಪರಿವಾರ ಮತ್ತೆ ಒಂದುಗೂಡಬೇಕಿದೆ. ಈಗ ದೇಶದಲ್ಲಿ ಬಲವಾದ ವಿರೋಧ ಪಕ್ಷದ ಅವಶ್ಯಕತೆ ಇದೆ’ ಎಂದರು.

ನಿತೀಶ್‌–ರಾಹುಲ್ ಭೇಟಿ: ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಸೋಮವಾರ ಭೇಟಿ ಆದರು. ದೇಶದ ಇಂದಿನ ರಾಜಕೀಯ ಪರಿಸ್ಥಿತಿ ಮತ್ತು ವಿರೋಧ ಪಕ್ಷಗಳನ್ನು ಒಗ್ಗೂಡಿಸುವ ಕುರಿತು ಅವರಿಬ್ಬರೂ ಭೇಟಿ ವೇಳೆ ಚರ್ಚಿಸಿದ್ದಾರೆ ಎನ್ನಲಾಗಿದೆ.

‘ಗೌರಿ ನೆನಪು’ ಕಾರ್ಯಕ್ರಮದಲ್ಲಿ ಅರುಂಧತಿ ರಾಯ್

‘ಬೀದಿಗಳಲ್ಲಿ ವಿಷ ತುಂಬಿದ ಕೋಮುವಾದಿಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶ ಈಗ ಕೋಮುವಾದಿಗಳ ಹಿಡಿತಕ್ಕೆ ಸಿಲುಕಿದೆ. ಅವರು ಬೀದಿ, ಬೀದಿಗಳಿಗೆ ನುಗ್ಗಿ ಜನರಲ್ಲಿ ವಿಷ ತುಂಬಿದ್ದಾರೆ ಎಂದು ಲೇಖಕಿ ಅರುಂಧತಿ ರಾಯ್ ಹೇಳಿದರು.

ಪತ್ರಕರ್ತೆ ಗೌರಿ ಲಂಕೇಶ್ ಸ್ಮರಣಾರ್ಥ ಗೌರಿ ಸ್ಮಾರಕ ಟ್ರಸ್ಟ್ ವತಿಯಿಂದ ಸೋಮವಾರ ಆಯೋಜಿಸಿದ್ದ ‘ಗೌರಿ ನೆನಪು’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಯಾವುದನ್ನೂ ಪ್ರಶ್ನೆ ಮಾಡಬಾರದು ಎಂಬ ಹಂತಕ್ಕೆ ಕೋಮುವಾದಿಗಳು ಬೆಳೆದಿದ್ದಾರೆ. ಕಾಶ್ಮೀರದಲ್ಲಿ ಪ್ರಜಾಪ್ರಭುತ್ವವನ್ನೇ ನಾಶ ಮಾಡಲಾಗಿದೆ. ಕೋಟ್ಯಂತರ ಜನರು ಧ್ವನಿ ಎತ್ತದೇ ಮೌನವಾಗಿ ಉಳಿದಿದ್ದರ ಪರಿಣಾಮವಿದು’ ಎಂದರು.

ಜನರಿಗೆ ಅಕ್ಕಿ, ಉಪ್ಪು ಸೇರಿದಂತೆ ಆಹಾರ ಧಾನ್ಯ ವಿತರಿಸುವುದನ್ನೂ ಅಪಾಯಕಾರಿ ಎಂದು ಕೋಮುವಾದಿ ಶಕ್ತಿಗಳು ಬಿಂಬಿಸುತ್ತಿವೆ. ಪ್ರಧಾನಿ ನರೇಂದ್ರ ಮೋದಿಯವರು ಜನರಿಗೆ ಉಚಿತವಾಗಿ ಉಪ್ಪು ಹಂಚಿದರೆ ಅದಕ್ಕೆ ಪ್ರತಿಯಾಗಿ ಮತ ಕೇಳುತ್ತಾರೆ. ಅಭಿವೃದ್ಧಿ, ಬೆಲೆ ಏರಿಕೆ, ಶಿಕ್ಷಣ, ಆರೋಗ್ಯ ಸೇವೆಯಂತಹ ವಿಚಾರಗಳ ಕುರಿತು ಸಮಸ್ಯೆ ಎದುರಾಗಿದ್ದರೂ, ಕೋಮುವಾದದ ಹಿಡಿತಕ್ಕೆ ಸಿಲುಕಿರುವ ಜನರು ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತರುವ ಮನಸ್ಥಿತಿ ಹೊಂದಿದ್ದಾರೆ ಎಂದರು.

‘ಗುಜರಾತ್‌ನಲ್ಲಿ ನಡೆದ ಬಿಲ್ಕಿಸ್ ಬಾನೊ ಅತ್ಯಾಚಾರ ಪ್ರಕರಣದ ಅಪರಾಧಿಗಳಿಗೆ ನ್ಯಾಯಾಲಯದಿಂದ ಜೀವಾವಧಿ ಶಿಕ್ಷೆಯಾಗಿತ್ತು. ಆದರೆ, ಅಪರಾಧಿಗಳೆಲ್ಲರೂ ಈಗ ಹೊರಬಂದಿದ್ದಾರೆ. ಪ್ರಪಂಚದ ಶ್ರೀಮಂತ ರಾಜಕೀಯ ಪಕ್ಷ ಮತ್ತು ಬ್ರಾಹ್ಮಣರು ಇದಕ್ಕೆ ಕಾರಣ’ ಎಂದು ದೂರಿದರು.

ಪ್ರತಿಷ್ಠೆ ಮರೆತು ಹೋರಾಡಬೇಕು: ನಟ ಪ್ರಕಾಶ್ ರಾಜ್ ಮಾತನಾಡಿ, ‘ಆರ್‌ಎಸ್‌ಎಸ್ ಇಷ್ಟು ಬಲವಾಗಿ ಬೆಳೆದು ನಿಲ್ಲಲು ಅದನ್ನು ಎದುರಿಸಬೇಕಾದ ಹೋರಾಟಗಾರರಲ್ಲಿನ ಪ್ರತಿಷ್ಠೆಯೇ ಕಾರಣ. ನಾವು ಸ್ವಪ್ರತಿಷ್ಠೆ ಮರೆತು ಒಗ್ಗೂಡಿ ಹೋರಾಟ ನಡೆಸಬೇಕು. ಅದಕ್ಕೆ ನಮಗೆ ಗೌರಿ ಮಾದರಿ ಆಗಬೇಕು’ ಎಂದರು.

ಐದು ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಹೋರಾಟಗಾರರು ಸಕ್ರಿಯರಾಗಿ ಉಳಿದಿಲ್ಲ. ಆದರೆ, ರೈತರು ಮತ್ತು ಮಹಿಳೆಯರು ಪ್ರಬಲ ಹೋರಾಟಗಳನ್ನು ನಡೆಸಿದ್ದಾರೆ ಎಂದು ಹೇಳಿದರು. ಮಾನವ ಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಸೆಟಲ್‌ವಾಡ್ ವರ್ಚ್ಯುಯಲ್ ಆಗಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಗೌರಿ ಸ್ಮಾರಕ ಟ್ರಸ್ಟ್ ಟ್ರಸ್ಟಿಗಳಾದ ಜಿ.ಎನ್. ದೇವಿ, ವಿ.ಎಸ್. ಶ್ರೀಧರ್, ಕಾರ್ಯದರ್ಶಿ ದೀಪು, ಪತ್ರಕರ್ತ ಡಿ. ಉಮಾಪತಿ ಇದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಭವಿಷ್ಯ

Astrology

★॥ಶ್ರೀಚಾಮುಂಡೇಶ್ವರಿ॥★ ಜ್ಯೋತಿಷ್ಯರು ಸ್ತ್ರೀಪುರುಷ ಪ್ರೇಮವಿಚಾರ, ಪ್ರೀತಿಯಲ್ಲಿಮೋಸ, ಆರೋಗ್ಯ, ದಾಂಪತ್ಯ, ಸಾಲಭಾದೆ, ಸಂತಾನಫಲ, ಮದುವೆ, ಇನ್ನ್ಯಾವುದೇ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. 8050061378

ಪ್ರವಾಸ

Travel

15/9/22, 8/10/22 ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದ್ರಿನಾಥ್, 6/10/22 ನೇಪಾಳ್, ಮುಕ್ತಿನಾಥ್, ಕಾಶಿ. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ್) 9845035349, 9482435755

17.09.2022, 01.11.2022 13ದಿನಗಳು ವಿಮಾನದಲ್ಲಿ ಕಾಶಿ, ಗಯಾ, ಆಗ್ರಾ, ಅಲಹಬಾದ್, ಅಯೋಧ್ಯೆ, ನೈಮಿಷ್ಯಾರಣ್ಯ ಪ್ರವಾಸ. ಆರ್.ಗಾಂಧಿ ಟೂರ್ಸ್ 9945445809 9902433500

ಉದ್ಯೋಗಾವಕಾಶ

Part-Time Jobs

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 1500020000 ಗಳಿಸಿ. ಕರೆಮಾಡಿ: 9611225388/ 9611225266

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಬೆಂಗಳೂರಿನ ನಾಗಸಂದ್ರ, ಮೆಟ್ರೋ ಸ್ಟೇಷನ್ ಹತ್ತಿರವಿರುವ ತೋಟ ಮತ್ತು ಮನೆಕೆಲಸ ಮಾಡಲು ಗಂಡ-ಹೆಂಡತಿ ಬೇಕಾಗಿದ್ದಾರೆ. ವಸತಿ ಉಚಿತ. ಸಂಪರ್ಕಿಸಿ: 98450 26475, 98455 10722

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC,PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

General

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ /ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17800/-68000/-98447 08666, 9844702666

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Book Your Classifieds Ads

Online Log in to dhclassifieds.com

DH DECCAN HERALD ಪ್ರಜಾವಾಣಿ

Contact :

Jerry Louis : 9731810277

Vishal GM : 9845114560

Ravichandra : 9901641752

Tanveer : 9886213331

ದೆಹಲಿ ಅಬಕಾರಿ ಹಗರಣ: ಬಿಜೆಪಿ–ಆಮ್ ಆದ್ಮಿ ಪಕ್ಷದ ನಡುವಣ ತಿಕ್ಕಾಟ ಮುಂದುವರಿಕೆ

ವಿಡಿಯೊ ಬಿಡುಗಡೆ ಮಾಡಿದ ಬಿಜೆಪಿ

ನವದೆಹಲಿ (ಪಿಟಿಐ): ದೆಹಲಿ ಸರ್ಕಾರದ ಅಬಕಾರಿ ನೀತಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿರುವ ಬಿಜೆಪಿ, ಇದಕ್ಕೆ ಸಂಬಂಧಿಸಿದ ರಹಸ್ಯ ಕಾರ್ಯಾಚರಣೆಯ ವಿಡಿಯೊವೊಂದನ್ನು ಸೋಮವಾರ ಬಿಡುಗಡೆ ಮಾಡಿದೆ. ಆ ಮೂಲಕ ಆಮ್ ಆದ್ಮಿ ಪಕ್ಷದ ಮೇಲೆ ದಾಳಿ ಮುಂದುವರಿಸಿದೆ.

‘ಅಬಕಾರಿ ಹಗರಣದ ಆರೋಪಿಯಾಗಿರುವ ಸನ್ನಿ ಮರ್ವಾಹ್ ಅವರ ತಂದೆ ಕುಲ್ವಿಂದರ್ ಮರ್ವಾಹ್ ಅವರು ಅಬಕಾರಿ ಪರವಾನಗಿ ಪಡೆಯಲು ಕಮಿಷನ್ ನೀಡಿದ್ದಾಗಿ ವಿಡಿಯೊದಲ್ಲಿ ಒಪ್ಪಿಕೊಂಡಿದ್ದಾರೆ. ಹೀಗಾಗಿ ಮನೀಷ್ ಸಿಸೋಡಿಯಾ ಅವರನ್ನು ಉಪ ಮುಖ್ಯಮಂತ್ರಿ ಸ್ಥಾನದಿಂದ ವಜಾಗೊಳಿಸಬೇಕು’ ಎಂದು ಒತ್ತಾಯಿಸಿದೆ.

ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ, ಬಿಜೆಪಿ ದೆಹಲಿ ಘಟಕದ ಅಧ್ಯಕ್ಷ ಆದೇಶ್ ಗುಪ್ತಾ ಮತ್ತು ಸಂಸದ ಮನೋಜ್ ತಿವಾರಿ ಅವರು ಸೋಮವಾರ ಜಂಟಿ ಸುದ್ದಿಗೋಷ್ಠಿ ನಡೆಸಿ ವಿಡಿಯೊ ಬಿಡುಗಡೆ ಮಾಡಿದರು.

ಬಿಜೆಪಿ ರಹಸ್ಯ ಕಾರ್ಯಾಚರಣೆ ನಡೆಸಲು ಮುಂದಾಗಿರುವುದು ಹಾಸ್ಯಾಸ್ಪದ. ಪ್ರಕರಣದಲ್ಲಿ ಸಿಬಿಐ ನನಗೆ ಕ್ಲೀನ್ ಚಿಟ್ ನೀಡಿದೆ.

ಮನೀಷ್ ಸಿಸೋಡಿಯಾ, ದೆಹಲಿ ಉಪ ಮುಖ್ಯಮಂತ್ರಿ

‘ಶೇ 80ರಷ್ಟು ಆದಾಯವು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಸಿಸೋಡಿಯಾ ಹಾಗೂ ಅವರ ಸ್ನೇಹಿತರಿಗೆ ಸೇರುತ್ತದೆ. ಪರವಾನಗಿ ಪಡೆಯುವವರು ಮೊದಲು ಶೇ 80ರಷ್ಟು ಕಮಿಷನ್ ಕೊಟ್ಟುಬಿಡಬೇಕು. ಶೇ 20ರಷ್ಟು ಸರಕನ್ನು ಎಷ್ಟು ಬೆಲೆಗೆ ಬೇಕಾದರೂ ಮಾರಾಟ ಮಾಡಿಕೊಳ್ಳಬಹುದು ಎಂದು ಮರ್ವಾಹ್ ಅವರು ವಿಡಿಯೊದಲ್ಲಿ ಹೇಳಿದ್ದಾರೆ. ಇದು ಕೇಜ್ರಿವಾಲ್ ಅವರ ನೀತಿಯೇ’ ಎಂದು ಸಂಬಿತ್ ಪಾತ್ರಾ ಪ್ರಶ್ನಿಸಿದ್ದಾರೆ.

‘ವಿಡಿಯೊದಲ್ಲಿ ಕುಲ್ವಿಂದರ್ ಅವರು ಹಗರಣದ ಎಳೆ ಎಳೆಯನ್ನೂ ಬಿಚ್ಚಿಟ್ಟಿದ್ದಾರೆ. ದೆಹಲಿ ಸರ್ಕಾರವು ಕಪ್ಪು ಪಟ್ಟಿಯಲ್ಲಿರುವ ಕಂಪನಿಗಳಿಗೂ ಪರವಾನಗಿ ನೀಡಿರುವುದು ವಿಡಿಯೊದಿಂದ ಬಹಿರಂಗವಾಗಿದೆ. ಈ ನೀತಿಯ ಮೂಲಕ ಬಿಳಿ ಹಣವನ್ನು ಕಪ್ಪು ಹಣವನ್ನಾಗಿ ಪರಿವರ್ತಿಸಿ ಅದನ್ನು ಕೇಜ್ರಿವಾಲ್ ಹಾಗೂ ಸಿಸೋಡಿಯಾಗೆ ರವಾನಿಸಲಾಗಿದೆ’ ಎಂದಿದ್ದಾರೆ.

ಸಂಬಿತ್ ಪಾತ್ರಾ

‘ನೂತನ ಅಬಕಾರಿ ನೀತಿ ಬಗ್ಗೆ ನಾವು ಕೇಜ್ರಿವಾಲ್ ಅವರಿಗೆ ಐದು ಪ್ರಶ್ನೆಗಳನ್ನು ಕೇಳಿದ್ದೆವು. ಆ ಪ್ರಶ್ನೆಗಳಿಗೆ ಇನ್ನೂ ಉತ್ತರ ದೊರೆತಿಲ್ಲ. ಹೀಗಾಗಿ ರಹಸ್ಯ ಕಾರ್ಯಾಚರಣೆ ಮೂಲಕ ಅವರ ಬಣ್ಣ ಬಯಲು ಮಾಡಲು ಮುಂದಾಗಿದ್ದೇವೆ’ ಎಂದು ತಿಳಿಸಿದ್ದಾರೆ.

‘ಬೇಕಿದ್ದರೆ ನನ್ನನ್ನು ಬಂಧಿಸಿ, ಅಧಿಕಾರಿಗಳಿಗೆ ಕಿರುಕುಳ ನೀಡಬೇಡಿ’

ನವದೆಹಲಿ (ಪಿಟಿಐ): ‘ಅಬಕಾರಿ ಹಗರಣದಲ್ಲಿ ನನ್ನನ್ನು ಸಿಲುಕಿಸಲು ಕೇಂದ್ರ ಸರ್ಕಾರವು ಸಿಬಿಐ ಅಧಿಕಾರಿಗಳ ಮೇಲೆ ಒತ್ತಡ ಹೇರುತ್ತಿದೆ. ಸಿಬಿಐ ಸಹಾಯಕ ಕಾನೂನು ಸಲಹೆಗಾರ ಜಿತೇಂದ್ರ ಕುಮಾರ್ ಎಂಬುವರು ಒತ್ತಡ ತಾಳಲಾರದೆ ಎರಡು ದಿನಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಸುದ್ದಿಗೋಷ್ಠಿಯಲ್ಲಿ ಸೋಮವಾರ ಆರೋಪಿಸಿದ್ದಾರೆ.

‘ಬೇಕಿದ್ದರೆ ನನ್ನನ್ನು ಬಂಧಿಸಿ. ಅಧಿಕಾರಿಗಳ ಮೇಲೆ ಒತ್ತಡ ಹೇರಿ ಅವರು ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಬೇಡಿ. ಅವರ ಕುಟುಂಬದವರನ್ನು ಸಂಕಷ್ಟಕ್ಕೆ ದೂಡಬೇಡಿ’ ಎಂದು ಪ್ರಧಾನಿ ಮೋದಿಯವರನ್ನು ಟೀಕಿಸಿದ್ದಾರೆ.

‘ಜಿತೇಂದ್ರ ಅವರ ಸಾವಿಗೆ ನಿಖರ ಕಾರಣ ಗೊತ್ತಾಗಬೇಕು. ಹೀಗಾಗಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ಸ್ವತಂತ್ರ ನ್ಯಾಯಾಂಗ ತನಿಖೆ ನಡೆಸಬೇಕು’ ಎಂದು ಟ್ವೀಟ್ ಮೂಲಕ ಒತ್ತಾಯಿಸಿದ್ದಾರೆ.

‘ಸಿಸೋಡಿಯಾ ಅವರ ಪ್ರಕರಣದ ತನಿಖೆಗೂ ಜಿತೇಂದ್ರ ಅವರ ಸಾವಿಗೂ ಯಾವುದೇ ಸಂಬಂಧವಿಲ್ಲ. ಪ್ರಕರಣದ ತನಿಖೆಯ ದಿಕ್ಕು ತಪ್ಪಿಸುವ ಉದ್ದೇಶದಿಂದ ಸಿಸೋಡಿಯಾ ಈ ರೀತಿ ಆರೋಪ ಮಾಡಿದ್ದಾರೆ’ ಎಂದು ಸಿಬಿಐ ಪ್ರಕಟಣೆ ತಿಳಿಸಿದೆ.

ವಿಶ್ವಾಸಮತ ಗೆದ್ದ ಸೊರೇನ್

ಜಾರ್ಖಂಡ್ ವಿಧಾನಸಭೆಯಲ್ಲಿ ವಿಶ್ವಾಸಮತ ಗೆದ್ದ ಬಳಿಕ ಮುಖ್ಯಮಂತ್ರಿ ಹೇಮಂತ್ ಸೊರೇನ್ ಮತ್ತು ಶಾಸಕರು ಹರ್ಷ ವ್ಯಕ್ತಪಡಿಸಿದರು –ಪಿಟಿಐ ಚಿತ್ರ

ರಾಂಚಿ (ಪಿಟಿಐ): ಹಲವು ದಿನಗಳಿಂದ ರಾಜ್ಯದಲ್ಲಿ ಸೃಷ್ಟಿಯಾಗಿರುವ ರಾಜಕೀಯ ಬಿಕ್ಕಟ್ಟಿನ ನಡುವೆಯೇ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ವಿಶ್ವಾಸಮತ ಸಾಬೀತುಪಡಿಸುವಲ್ಲಿ ಸೋಮವಾರ ಯಶಸ್ವಿಯಾಗಿದ್ದಾರೆ.

ಒಟ್ಟು 81 ಸದಸ್ಯ ಬಲದ ವಿಧಾನ ಸಭೆಯಲ್ಲಿ 48 ಶಾಸಕರ ಬೆಂಬಲದೊಂದಿಗೆ ಹೇಮಂತ್ ಬಹುಮತ ಸಾಬೀತುಪಡಿಸಿದರು. ವಿಶ್ವಾಸಮತಕ್ಕೂ ಮುನ್ನ ಬಿಜೆಪಿ ಸದಸ್ಯರು ಅಧಿವೇಶನದಿಂದ ಹೊರನಡೆದರು.

ಒಂದು ದಿನದ ವಿಶೇಷ ಅಧಿವೇಶನದಲ್ಲಿ ಮಾತನಾಡಿದ ಮುಖ್ಯಮಂತ್ರಿ ಹೇಮಂತ್, ‘ಬಿಜೆಪಿಯು ತಾನು ಆಡಳಿತದಲ್ಲಿ ಇಲ್ಲದ ರಾಜ್ಯಗಳಲ್ಲಿ ಶಾಸಕರನ್ನು ಖರೀದಿಸುತ್ತಿದೆ. ಜನರಿಂದ ಆಯ್ಕೆಯಾದ ನಮ್ಮ ಸರ್ಕಾರವನ್ನು ಬೀಳಿಸಲು ಅದು ಯತ್ನಿಸಿತು. ನಾವು ನಮ್ಮ ಶಕ್ತಿಯನ್ನು ತೋರಿಸುತ್ತೇವೆ’ ಎಂದು ಹೇಳಿದರು.

‘ನಮ್ಮ ಸರ್ಕಾರ ಉರುಳಿಸಲು ಬಿಜೆಪಿಯು ಯಾವ ರೀತಿ ಪ್ರಯತ್ನ ಮಾಡಿತು ಎನ್ನುವುದು ರಹಸ್ಯವಾಗಿ ಉಳಿದಿಲ್ಲ. ಚುನಾವಣೆ ಗೆಲ್ಲುವುದಕ್ಕಾಗಿ ಗಲಭೆಗಳನ್ನು ಎಬ್ಬಿಸಿ ದೇಶದಲ್ಲಿ ಆಂತರಿಕ ಯುದ್ಧದಂಥ ವಾತಾವರಣ ನಿರ್ಮಿಸಲು ಬಿಜೆಪಿ ಯತ್ನಿಸುತ್ತಿದೆ’ ಎಂದು ಆರೋಪಿಸಿದರು.

ಬುಡಕಟ್ಟು ಮಹಿಳೆಯನ್ನು ರಾಷ್ಟ್ರಪತಿ ಮಾಡಿದ ಪಕ್ಷವು ಬುಡಕಟ್ಟು ಮುಖ್ಯಮಂತ್ರಿಯಿಂದ ಅಧಿಕಾರ ಕಿತ್ತುಕೊಳ್ಳುವ ಪ್ರಯತ್ನ ಮಾಡುತ್ತಿದೆ

ಹೇಮಂತ್ ಸೊರೇನ್, ಜಾರ್ಖಂಡ್ ಮುಖ್ಯಮಂತ್ರಿ

‘ಜನರು ಮಾರುಕಟ್ಟೆಯಲ್ಲಿ ಬಟ್ಟೆ, ದಿನಸಿ ಮುಂತಾದವುಗಳನ್ನು ಕೊಳ್ಳುತ್ತಾರೆ. ಆದರೆ, ಬಿಜೆಪಿಯು ಶಾಸಕರನ್ನು ಖರೀದಿ ಮಾಡುತ್ತದೆ. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ನಾವು ತಕ್ಕ ಪಾಠ ಕಲಿಸುತ್ತೇವೆ’ ಎಂದರು.

ಛತ್ತೀಸಗಡದ ರೆಸಾರ್ಟ್‌ವೊಂದರಲ್ಲಿದ್ದ ಜಾರ್ಖಂಡ್ ಶಾಸಕರನ್ನು ಭಾನುವಾರ ರಾತ್ರಿ ರಾಂಚಿಗೆ ಕರೆತರಲಾಗಿತ್ತು. ನಂತರ ಶಾಸಕರನ್ನು ಸರ್ಕಾರಿ ಅತಿಥಿ ಗೃಹದಲ್ಲಿ ಇರಿಸಲಾಗಿತ್ತು. ಸೋಮವಾರ ಬೆಳಿಗ್ಗೆ ಅವರನ್ನು ಅತಿಥಿ ಗೃಹದಿಂದ ನೇರವಾಗಿ ವಿಧಾನಸಭೆಗೆ ಕರೆತರಲಾಯಿತು.

ಕಾರು ಅಪಘಾತದಲ್ಲಿ ಮೃತಪಟ್ಟಿರುವ ಸೈರಸ್

ಅತಿ ವೇಗದ ಚಾಲನೆ ಮತ್ತು ಚಾಲಕಿಯ ತಪ್ಪು ನಿರ್ಧಾರ ಅಪಘಾತಕ್ಕೆ ಕಾರಣ ಎಂದು ಪೊಲೀಸರು ಹೇಳಿದ್ದಾರೆ.

‘ಸೈರಸ್ ಮಿಸ್ತ್ರಿ ಸೀಟ್ ಬೆಲ್ಟ್ ಧರಿಸಿರಲಿಲ್ಲ’

ಮುಂಬೈ: ಕಾರು ಅಪಘಾತದಲ್ಲಿ ಮೃತಪಟ್ಟಿರುವ ಟಾಟಾ ಸನ್ಸ್‌ನ ಮಾಜಿ ಅಧ್ಯಕ್ಷ ಸೈರಸ್ ಮಿಸ್ತ್ರಿ ಮತ್ತು ಸಹ ಪ್ರಯಾಣಿಕ ಸೀಟ್ ಬೆಲ್ಟ್ ಧರಿಸಿರಲಿಲ್ಲ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ಚರೋತಿ ಚೆಕ್‌ಪೋಸ್ಟ್ ದಾಟಿದ ಬಳಿಕ ಮಿಸ್ತ್ರಿ ಪ್ರಯಾಣಿಸುತ್ತಿದ್ದ ಮರ್ಸಿಡಿಸ್ ಬೆಂಜ್ ಕಾರು 20 ಕಿ.ಮೀ. ದೂರವನ್ನು 9 ನಿಮಿಷಗಳಲ್ಲಿ ಕ್ರಮಿಸಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಅಹಮದಾಬಾದ್‌ನಿಂದ ಮುಂಬೈಗೆ ಪ್ರಯಾಣಿಸುತ್ತಿದ್ದಾಗ, ಪಾಲ್ಘರ್ ಜಿಲ್ಲೆಯ ಬಳಿ ರಸ್ತೆ ವಿಭಜಕಕ್ಕೆ ಕಾರು ಡಿಕ್ಕಿ ಹೊಡೆದಿದ್ದರಿಂದ ಮಿಸ್ತ್ರಿ ಹಾಗೂ ಸಹ ಪ್ರಯಾಣಿಕ ಜಹಂಗೀರ್ ಪಾಂಡೋಲೆ ಭಾನುವಾರ ಸ್ಥಳದಲ್ಲೇ ಸಾವಿಗೀಡಾಗಿದ್ದರು. ಮುಂಬೈನ ಸ್ತ್ರೀರೋಗತಜ್ಞೆ ಅನಾಹಿತಾ ಪಾಂಡೋಲೆ ಅವರು ಕಾರು ಚಲಾಯಿಸುತ್ತಿದ್ದರು.

ಅಪಘಾತದಲ್ಲಿ ಗಾಯಗೊಂಡಿರುವ ಅನಾಹಿತಾ ಪಾಂಡೋಲೆ ಅವರನ್ನು ಶಸ್ತ್ರಕ್ರಿಯೆಗೆ ಒಳಪಡಿಸಲಾಗುವುದು ಎಂದು ಸರ್ ಎಚ್.ಎನ್. ರಿಲಯನ್ಸ್ ಫೌಂಡೇಶನ್ ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಅನಾಹಿತಾ ಅವರ ಪತಿ ಡೇರಿಯಸ್ ಪಾಂಡೋಲೆ ಅವರನ್ನೂ ಇದೇ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ದಾಖಲಿಸಲಾಗಿದೆ.

ಇಂದು ಅಂತ್ಯಕ್ರಿಯೆ: ಸೈರಸ್ ಮಿಸ್ತ್ರಿ ಅವರ ಅಂತ್ಯಕ್ರಿಯೆ ಮಂಗಳವಾರ ವರ್ಲಿಯ ಚಿತಾಗಾರದಲ್ಲಿ ನಡೆಯಲಿದೆ ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಎಎಪಿ ಶಾಸಕರಿಗೆ ಲೀಗಲ್ ನೋಟಿಸ್

ನವದೆಹಲಿ (ಪಿಟಿಐ): ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು ಎಎಪಿ ಶಾಸಕರಾದ ಅತೀಶಿ, ದುರ್ಗೇಶ್ ಪಾಠಕ್, ಸೌರಭ್ ಭಾರದ್ವಾಜ್, ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್, ಮುಖಂಡ ಜಸ್ಮೈನ್ ಶಾ ಹಾಗೂ ಇತರರಿಗೆ ಸೋಮವಾರ ಲೀಗಲ್ ನೋಟಿಸ್ ನೀಡಿದ್ದಾರೆ.

ತಮ್ಮ ವಿರುದ್ಧ ಸುಳ್ಳು, ಅವಹೇಳನಕಾರಿ ಹೇಳಿಕೆ ನೀಡುವುದನ್ನು ಹಾಗೂ ಆಧಾರರಹಿತವಾಗಿ ಆರೋಪ ಮಾಡುವುದನ್ನು ನಿಲ್ಲಿಸುವಂತೆ ನೋಟಿಸ್‌ನಲ್ಲಿ ಸೂಚಿಸಲಾಗಿದೆ.

ಸಕ್ಸೇನಾ ಅವರು 2016ರಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ (ಕೆವಿಐಸಿ) ಅಧ್ಯಕ್ಷರಾಗಿದ್ದಾಗ ಅಮಾನ್ಯೀಕರಣಗೊಂಡಿದ್ದ ₹1,400 ಕೋಟಿ ಮೌಲ್ಯದ ನೋಟುಗಳನ್ನು ಬದಲಾಯಿಸಿಕೊಡುವಂತೆ ತಮ್ಮ ಸಹೋದ್ಯೋಗಿಗಳ ಮೇಲೆ ಒತ್ತಡ ಹೇರಿದ್ದಾಗಿ ಎಎಪಿ ಶಾಸಕ ದುರ್ಗೇಶ್ ಪಾಠಕ್ ಹೋದ ವಾರ ವಿಧಾನಸಭೆಯಲ್ಲಿ ಆರೋಪಿಸಿದ್ದರು.

‘ದೋಷಪೂರಿತ ರಸ್ತೆ ವಿನ್ಯಾಸಗಳೇ ಅಪಘಾತಗಳಿಗೆ ಕಾರಣ’

ನವದೆಹಲಿ: ದೋಷಪೂರಿತ ರಸ್ತೆ ವಿನ್ಯಾಸಗಳೇ ಕೆಲವು ಅಪಘಾತಗಳಿಗೆ ಕಾರಣ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಸೋಮವಾರ ಅಭಿಪ್ರಾಯಪಟ್ಟಿದ್ದಾರೆ.

₹3 ಲಕ್ಷದವರೆಗೆ ರೈತರ ಸಾಲ ಮನ್ನಾ: ರಾಹುಲ್ ಘೋಷಣೆ

ಅಹಮದಾಬಾದ್ (ಪಿಟಿಐ): ಮುಂಬರುವ ಚುನಾವಣೆಯಲ್ಲಿ ಗುಜರಾತ್‌ನಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರೈತರ ₹3ಲಕ್ಷದವರೆಗಿನ ಸಾಲವನ್ನು ಸಂಪೂರ್ಣ ಮನ್ನಾ ಮಾಡಲಾಗುವುದು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ಘೋಷಿಸಿದ್ದಾರೆ.

ಅಹಮದಾಬಾದ್‌ನಲ್ಲಿ ಸೋಮವಾರ ಆಯೋಜಿಸಿದ್ದ ‘ಪರಿವರ್ತನ್ ಸಂಕಲ್ಪ್ ರ‍್ಯಾಲಿ’ಯಲ್ಲಿ ಬೂತ್ ಮಟ್ಟದ ಕಾರ್ಯಕರ್ತರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಗುಜರಾತ್‌ನ ಜನರಿಗೆ ಎಲ್‌ಪಿಜಿ ಸಿಲಿಂಡರ್ ಅನ್ನು ₹1000ದ ಬದಲಿಗೆ ₹500ಕ್ಕೆ ನೀಡಲಾಗುವುದು. ರೈತರಿಗೆ ಉಚಿತವಾಗಿ ಮತ್ತು ಸಾಮಾನ್ಯ ಗ್ರಾಹಕರಿಗೆ 300 ಯೂನಿಟ್ ವರೆಗೆ ಉಚಿತ ವಿದ್ಯುತ್ ನೀಡಲಾಗುವುದು ಎಂದೂ ಭರವಸೆ ನೀಡಿದ್ದಾರೆ.

ಕಾಬೂಲ್‌ನ ರಷ್ಯಾ ರಾಯಭಾರ ಕಚೇರಿಯಲ್ಲಿ ಸ್ಫೋಟ: 3 ಸಾವು

ಕಾಬೂಲ್ (ಎಪಿ): ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿರುವ ರಷ್ಯಾ ರಾಯಭಾರ ಕಚೇರಿಯ ಹೊರಭಾಗದಲ್ಲಿ ಸೋಮವಾರ ಸ್ಫೋಟ ಸಂಭವಿಸಿದ್ದು, ಇಬ್ಬರು ಸಿಬ್ಬಂದಿ ಹಾಗೂ ನಾಗರಿಕರೊಬ್ಬರು ಮೃತಪಟ್ಟಿದ್ದಾರೆ.

ಸ್ಫೋಟದಲ್ಲಿ ಎಂಟರಿಂದ 10 ಮಂದಿ ಮೃತಪಟ್ಟಿದ್ದಾರೆ ಎಂಬ ವರದಿಗಳೂ ಬರುತ್ತಿವೆ. ಹೀಗಾಗಿ ಮೃತರ ಸಂಖ್ಯೆಯಲ್ಲಿ ಏರಿಕೆಯಾಗುವ ಸಾಧ್ಯತೆ ಇದೆ ಎಂದು ರಷ್ಯಾದ ಸರ್ಕಾರಿ ಸ್ವಾಮ್ಯದ ರಿಯಾ ನೊವೊಸ್ತಿ ಸುದ್ದಿಸಂಸ್ಥೆ ತಿಳಿಸಿದೆ.

ರಾಯಭಾರ ಕಚೇರಿಯ ಹೊರಗಡೆ ವೀಸಾಕ್ಕಾಗಿ ಸರದಿಯಲ್ಲಿ ನಿಂತಿದ್ದವರನ್ನು ಕರೆಯಲು ರಷ್ಯಾದ ರಾಜತಾಂತ್ರಿಕ ಸಿಬ್ಬಂದಿಯೊಬ್ಬರು ಹೊರಬರುತ್ತಿದ್ದಂತೆಯೇ ಸ್ಫೋಟ ಸಂಭವಿಸಿತು. ಘಟನೆಯಲ್ಲಿ ಒಬ್ಬರು ನಾಗರಿಕರು ಮೃತಪಟ್ಟಿದ್ದಾರೆ, 10 ಮಂದಿಗೆ ಗಾಯವಾಗಿದೆ ಎಂದು ಕಾಬೂಲ್ ಪೊಲೀಸ್ ಮುಖ್ಯಸ್ಥರ ವಕ್ತಾರ ಖಾಲಿದ್ ಜದ್ರಾನ್ ತಿಳಿಸಿದ್ದಾರೆ.

ಇದೊಂದು ಆತ್ಮಾಹುತಿ ದಾಳಿ ಆಗಿರಬೇಕು ಎಂದು ಶಂಕಿಸಲಾಗಿದೆ. ಸದ್ಯ ಯಾವೊಂದು ಸಂಘಟನೆಯೂ ಸ್ಫೋಟದ ಹೊಣೆ ಹೊತ್ತುಕೊಂಡಿಲ್ಲ. ಈಚಿನ ದಿನಗಳಲ್ಲಿ ಇಸ್ಲಾಮಿಕ್ ಸ್ಟೇಟ್ (ಐಎಸ್) ಸ್ಥಳೀಯ ಘಟಕ ನಾಗರಿಕರು ಮತ್ತು ತಾಲಿಬಾನಿಗಳನ್ನು ಗುರಿಯಾಗಿಟ್ಟುಕೊಂಡು ಹಿಂಸಾತ್ಮಕ ದಾಳಿ ತೀವ್ರಗೊಳಿಸಿವೆ.

ಲಿಜ್ ಟ್ರಸ್ ಬ್ರಿಟನ್ ನೂತನ ಪ್ರಧಾನಿ

ಒಂದನೇ ಪುಟದಿಂದ

ಬ್ರಿಟನ್ ಟೋರಿ ನಾಯಕತ್ವ ಚುನಾವಣಾ ಅಖಾಡದಲ್ಲಿ 47ರ ಹರೆಯದ ಲಿಜ್ ಟ್ರಸ್ ಅವರಿಗೆ ನಿರೀಕ್ಷಿತ ಗೆಲುವು ಸಿಕ್ಕಿದೆ. ಬೋರಿಸ್ ಜಾನ್ಸನ್ ಅವರ ಸರ್ಕಾರದಲ್ಲಿ ಹಣಕಾಸು ಸಚಿವರಾಗಿದ್ದ ಭಾರತೀಯ ಮೂಲದ ರಿಷಿ ಸುನಕ್ ಅವರನ್ನು ಸುಮಾರು 21 ಸಾವಿರ ಮತಗಳ ಅಂತರದಿಂದ ಮಣಿಸಿ, ಟೋರಿ ನಾಯಕಿ ಮತ್ತು ಬ್ರಿಟನ್ ಪ್ರಧಾನಿ ಹುದ್ದೆಯ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ. 2015ರ ಚುನಾವಣೆ ನಂತರ ಕನ್ಸರ್ವೇಟಿವ್ ಪಕ್ಷದಿಂದ ಆಯ್ಕೆಯಾದ ನಾಲ್ಕನೇ ಪ್ರಧಾನಿ ಎನಿಸಿಕೊಳ್ಳಲಿದ್ದಾರೆ ಟ್ರಸ್.

ಚಲಾವಣೆಯಾದ ಸುಮಾರು 1.70 ಲಕ್ಷ ಟೋರಿ ಸದಸ್ಯರ ಆನ್‌ಲೈನ್ ಮತ್ತು ಅಂಚೆ ಮತಗಳ ಪೈಕಿ ಟ್ರಸ್ ಅವರಿಗೆ 81,326 ಮತಗಳು ಲಭಿಸಿದರೆ, ಪ್ರತಿಸ್ಪರ್ಧಿ ರಿಷಿ ಸುನಕ್ ಅವರಿಗೆ 60,399 ಮತಗಳು ಲಭಿಸಿದವು. 654 ಮತಗಳು ತಿರಸ್ಕೃತಗೊಂಡಿವೆ. ಭಾರತ ಉಪಖಂಡವನ್ನು ಸುಮಾರು ಮೂರು ಶತಮಾನಗಳ ಕಾಲ ಆಳಿದ ಬ್ರಿಟನ್ ಅನ್ನು ಭಾರತೀಯ ಸಂಜಾತರೊಬ್ಬರು ಮುನ್ನಡೆಸುವ ಮತ್ತು ‘10 ಡೌನಿಂಗ್ ಸ್ಟ್ರೀಟ್’ನಲ್ಲಿ ಉನ್ನತ ಹುದ್ದೆ ಅಲಂಕರಿಸುವ ಐತಿಹಾಸಿಕ ಅವಕಾಶವೊಂದು ತಪ್ಪಿಹೋದಂತಾಯಿತು.

ಬೋರಿಸ್ ಜಾನ್ಸನ್ ಅವರು ತಮ್ಮ ರಾಜೀನಾಮೆಯ ಅಧಿಕೃತ ಅಂಗೀಕಾರಕ್ಕೆ ಮತ್ತು ತಮ್ಮ ಉತ್ತರಾಧಿಕಾರಿಗೆ ಸರ್ಕಾರ ರಚಿಸಲು ಅನುಮತಿ ಪಡೆಯಲು ರಾಣಿ ಎಲಿಜಬೆತ್ ಅವರ ಭೇಟಿಗಾಗಿ ಸ್ಕಾಟ್ಲೆಂಡ್‌ಗೆ ಪ್ರಯಾಣ ಬೆಳೆಸಿದರು.

ರಾಣಿ ಎರಡನೇ ಎಲಿಜಬೆತ್ ಅವರ ಆಳ್ವಿಕೆಯಲ್ಲಿ ಟ್ರಸ್ ಅವರು ದೇಶದ 15ನೇ ಪ್ರಧಾನಿ ಆಗಲಿದ್ದಾರೆ.

‘ಚುನಾವಣೆಯಲ್ಲಿ ತೀವ್ರ ಹಣಾಹಣಿ ಇತ್ತು. ನನ್ನನ್ನು ಆಯ್ಕೆ ಮಾಡಿದ ನಾಯಕರಿಗೆ ಈ ಗೌರವ ಸಲ್ಲುತ್ತದೆ. ಬ್ರಿಟನ್‌ನ ಆರ್ಥಿಕ ಬೆಳವಣಿಗೆ ಮತ್ತು ತೆರಿಗೆಗಳ ಕಡಿತಕ್ಕೆ ದಿಟ್ಟ ಯೋಜನೆಗಳನ್ನು ಕೈಗೊಳ್ಳುವೆ’ ಎಂದು ಟ್ರಸ್ ಟ್ವೀಟ್ ಮಾಡಿದ್ದಾರೆ.

‘ಕನ್ಸರ್ವೇಟಿವ್ ಪಕ್ಷದ ನಾಯಕಿಯಾಗಿ ಆಯ್ಕೆಯಾಗಿರುವುದು ಹೆಮ್ಮೆ ಎನಿಸಿದೆ. ಮಹಾನ್ ದೇಶದ ಮುಂದಾಳತ್ವ ವಹಿಸಲು ನನ್ನಲ್ಲಿ ನಂಬಿಕೆ ಇಟ್ಟಿದ್ದಕ್ಕಾಗಿ ಧನ್ಯವಾದಗಳು. ಈ ಕಠಿಣ ಸಮಯದಲ್ಲಿ ನಮ್ಮ ಆರ್ಥಿಕತೆ ಬೆಳೆಸಲು ಮತ್ತು ದೇಶದ ಸಾಮರ್ಥ್ಯ ಸಾಬೀತುಪಡಿಸಲು ದಿಟ್ಟ ಕ್ರಮ ತೆಗೆದುಕೊಳ್ಳುತ್ತೇನೆ’ ಎಂದು ಟ್ರಸ್ ಟ್ವೀಟ್‌ನಲ್ಲಿ ಹೇಳಿದ್ದಾರೆ.

ಮೋದಿ ಅಭಿನಂದನೆ: ಟ್ರಸ್ ಅವರನ್ನು ಟ್ವೀಟ್ ಮೂಲಕ ಅಭಿನಂದಿಸಿರುವ ಪ್ರಧಾನಿ ನರೇಂದ್ರ ಮೋದಿ, ‘ನಿಮ್ಮ ನಾಯಕತ್ವದಲ್ಲಿ ಭಾರತ ಮತ್ತು ಬ್ರಿಟನ್ ನಡುವಿನ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆ ಮತ್ತಷ್ಟು ಬಲಗೊಳ್ಳಲಿದೆ ಎಂದು ಆಶಿಸುವೆ’ ಎಂದು ಹೇಳಿದ್ದಾರೆ.

ಟ್ರಸ್‌ಗೆ ಒಗ್ಗಟ್ಟಿನ ಬೆಂಬಲ: ರಿಷಿ ಮನವಿ

ಲಂಡನ್ (ಪಿಟಿಐ): ದೇಶವು ಕಠಿಣ ಸಂದರ್ಭ ಎದುರಿಸುತ್ತಿರುವಾಗ, ಬೋರಿಸ್ ಜಾನ್ಸನ್ ಅವರ ಉತ್ತರಾಧಿಕಾರಿ ಮತ್ತು ಬ್ರಿಟನ್ ನೂತನ ಪ್ರಧಾನಿಯಾಗಿ ಆಯ್ಕೆಯಾಗಿರುವ ಲಿಜ್ ಟ್ರಸ್ ಅವರ ಬೆಂಬಲಕ್ಕೆ ಕನ್ಸರ್ವೇಟಿವ್ ಪಕ್ಷದ ಸದಸ್ಯರೆಲ್ಲರೂ ಒಂದು ಕುಟುಂಬವಾಗಿ ಒಗ್ಗಟ್ಟಿನಿಂದ ನಿಲ್ಲಬೇಕಾದ ಸಮಯವಿದು ಎಂದು ಪರಾಜಿತ ಅಭ್ಯರ್ಥಿ ರಿಷಿ ಸುನಕ್ ಸೋಮವಾರ ಹೇಳಿದ್ದಾರೆ.

ಸೋಲಿನ ಬಳಿಕ ಟ್ವೀಟ್ ಮಾಡಿರುವ ರಿಷಿ ಸುನಕ್ ಅವರು ತಮಗೆ ಮತ ಚಲಾಯಿಸಿದ ಎಲ್ಲರಿಗೂ ಧನ್ಯವಾದ ಸಲ್ಲಿಸಿದ್ದಾರೆ.

ಕನ್ಸರ್ವೇಟಿವ್ ಪಕ್ಷದ ನಾಯಕತ್ವದ ಸ್ಪರ್ಧೆಯಲ್ಲಿ ಪರಾಜಿತಗೊಂಡರೆ ಮುಂದಿನ ಸರ್ಕಾರಕ್ಕೆ ಅಗತ್ಯ ಬೆಂಬಲ ನೀಡುವುದು ನನ್ನ ಕೆಲಸ ಎಂದು ಸುನಕ್ ಅವರು ಫಲಿತಾಂಶದ ಹಿಂದಿನ ದಿನವೇ ಹೇಳಿದ್ದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,539
ಇಂದಿನ ಅಂತ್ಯ	17,665
▲	126
ದಿನದ ಗರಿಷ್ಠ	17,683

ವಿನಿಮಯ ದರ

$ ಡಾಲರ್	79.78
£ ಪೌಂಡ್	91.92
€ ಯುರೊ	79.23
¥ ಯೆನ್ (100ಕ್ಕೆ)	57

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹475

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1640)
ಸೋಯಾ (ರಿಫೈನ್ಡ್)	₹1237 (1240)
ಸೂರ್ಯಕಾಂತಿ (ರಿಫೈನ್ಡ್)	₹1450 (1450
ಪಾಮೋಲಿನ್	₹995 (1000)

ಟಾಟಾದಿಂದ 14 ಹೊಸ ಟ್ರಕ್ ಬಿಡುಗಡೆ

• ಶರತ್ ಹೆಗ್ಡೆ

ಮುಂಬೈ: ಟಾಟಾ ಮೋಟರ್ಸ್ ಕಂಪನಿಯು ಸಿಎನ್‌ಜಿ ಚಾಲಿತ 5 ಟ್ರಕ್‌ಗಳನ್ನೂ ಒಳಗೊಂಡು ಒಟ್ಟಾರೆ 14 ಹೊಸ ಟ್ರಕ್ ಮಾದರಿಗಳನ್ನು ದೇಶದ ಮಾರುಕಟ್ಟೆಗೆ ಸೋಮವಾರ ಬಿಡುಗಡೆ ಮಾಡಿದೆ.

ಜಿಯೊ ವರ್ಲ್ಡ್ ಸೆಂಟರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಗಿರೀಶ್ ವಾಘ್ ಅವರು ಈ ಟ್ರಕ್‌ಗಳನ್ನು ಬಿಡುಗಡೆ ಮಾಡಿದರು.

‘ರಾಷ್ಟ್ರದ ಮೂಲಸೌಲಭ್ಯ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಹೊಸ ವಾಹನಗಳನ್ನು ಅಭಿವೃದ್ಧಿ ಮಾಡಲಾಗಿದೆ. ಇಂಧನ ಕ್ಷಮತೆ, ಪರ್ಯಾಯ ಇಂಧನಗಳ ಬಳಕೆಯತ್ತ ಗಮನವಿರಿಸಿ, ಸುರಕ್ಷತೆಗೆ ಒತ್ತು ನೀಡಿ ಈ ವಾಹನಗಳನ್ನು ಬಿಡುಗಡೆ ಮಾಡಿದ್ದೇವೆ. ಶೂನ್ಯ ಮಾಲಿನ್ಯದ ವಾಹನಗಳ ಅಭಿವೃದ್ಧಿಯತ್ತಲೂ ಸಂಶೋಧನೆ ತೀವ್ರಗತಿಯಲ್ಲಿ ಮುಂದುವರಿದಿದೆ. ಹೈಡ್ರೋಜನ್ ಬಳಕೆ ಮಾಲಿನ್ಯ ತಡೆಗೆ ಉತ್ತಮವೇ ಆದರೂ ಅಗತ್ಯ ಪ್ರಮಾಣದಲ್ಲಿ ಪೂರೈಕೆ ಆಗುತ್ತಿಲ್ಲ. ಮುಂದೆ ಸಿಎನ್‌ಜಿ ಮತ್ತು ಹೈಡ್ರೋಜನ್ ಮಿಶ್ರಿತ ಇಂಧನ ಬಳಕೆ, ಜೈವಿಕ ಸಿಎನ್‌ಜಿ ಬಳಕೆಯತ್ತಲೂ ನಮ್ಮ ಸಂಶೋಧನೆ ಮುಂದುವರಿದಿದೆ’ ಎಂದರು.

ವಾಹನಗಳಲ್ಲೇನು ವಿಶೇಷ: ಪುಟ್ಟ ಗಾತ್ರದ ಮಿನಿ ಟಿಪ್ಪರ್‌ನಿಂದ (710ಕೆ) ಹಿಡಿದು, ಸುಮಾರು 55 ಟನ್ ಎಳೆಯಬಲ್ಲ (SIGNA 5530S) ಬೃಹತ್ ಟ್ರಕ್‌ವರೆಗಿನ ವಾಹನಗಳು ಬಿಡುಗಡೆ ಆಗಿವೆ. ಎಲ್ಲ ವಾಹನಗಳು ಬಿಎಸ್ 6 ಎಂಜಿನ್‌ಗಳನ್ನು ಹೊಂದಿವೆ. ಚಾಲಕನನ್ನು ಎಚ್ಚರಿಸುವ ವ್ಯವಸ್ಥೆ, ಕ್ಯಾಬಿನ್ ಎಸಿ, ಚಾಲಕರಿಗೆ ವಿಶ್ರಾಂತಿ ವ್ಯವಸ್ಥೆ, ಆಕರ್ಷಕ ಮತ್ತು ಆರಾಮದಾಯಕ ಒಳಾಂಗಣ, ಡ್ಯಾಷ್ ಬೋರ್ಡ್‌ಗೆ ಗಿಯರ್ ಲಿವರ್ ಅಳವಡಿಕೆ, ಬಾಗಿಸಿ ಹೊಂದಿಸಬಹುದಾದ ಸ್ಟೀರಿಂಗ್ ಇತ್ಯಾದಿ ವ್ಯವಸ್ಥೆಯನ್ನು ಹೊಂದಿದೆ. ಎಲ್ಲ ಟ್ರಕ್‌ಗಳಿಗೂ 6 ವಿಧದ (ಸುರಕ್ಷತೆ, ವಾಹನ ನಿರ್ವಹಣೆ ಹಾಗೂ ದುರಸ್ತಿಯ ಜಾಲಗಳು, ಜಿಪಿಎಸ್ ನಿಗಾ ವ್ಯವಸ್ಥೆ, ಇಂಧನ ಕ್ಷಮತೆಯ ನಿಗಾ, ಚಾಲನೆ ಮೇಲೆ ನಿಗಾ) ‘ಸಂಪೂರ್ಣ ಸುರಕ್ಷಾ’ ಹೆಸರಿನ ಮೊಬೈಲ್ ಆಧರಿತ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

(ಕಂಪನಿಯ ಆಹ್ವಾನದ ಮೇರೆಗೆ ವರದಿಗಾರ ಮುಂಬೈಗೆ ಭೇಟಿ ನೀಡಿದ್ದರು)

ಲೋಹ, ಬ್ಯಾಂಕಿಂಗ್ ಷೇರು ಗಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳ ವಾರದ ವಹಿವಾಟಿನ ಮೊದಲ ದಿನ ಸೂಚ್ಯಂಕಗಳು ಏರಿಕೆ ಕಂಡುಕೊಂಡವು.

ಜಾಗತಿಕ ಮಟ್ಟದಲ್ಲಿ ವಹಿವಾಟು ಇಳಿಮುಖವಾಗಿದ್ದರು ಸಹ ದೇಶದಲ್ಲಿ ಲೋಹ, ಬ್ಯಾಂಕಿಂಗ್ ಮತ್ತು ಬಂಡವಾಳ ಸರಕುಗಳ ವಲಯಗಳ ಷೇರುಗಳ ಮೌಲ್ಯ ಹೆಚ್ಚಾಗಿದ್ದರಿಂದ ಸೋಮವಾರ ಸಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 443 ಅಂಶ ಏರಿಕೆ ಕಂಡು 59,246 ಅಂಶಗಳಿಗೆ ತಲುಪಿತು.

ಗರಿಷ್ಠ ಗಳಿಕೆ (%)	
ಸನ್ ಫಾರ್ಮಾ	1.81
ಐಟಿಸಿ	1.78
ಎನ್‌ಟಿಪಿಸಿ	1.70
ರಿಲಯನ್ಸ್	1.60
ಎಲ್‌ಆಂಡ್‌ಟಿ	1.45

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 126 ಅಂಶ ಏರಿಕೆ ಕಂಡು 17,665 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ರಿಲಯನ್ಸ್ ಇಂಡಸ್ಟ್ರೀಸ್, ಸನ್ ಫಾರ್ಮಾ ಮತ್ತು ಐಟಿಸಿ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿ ನಡೆಸಿದರು. ಡಾಲರ್ ಎದುರು ರೂಪಾಯಿ ಮೌಲ್ಯ ಏರಿಕೆಯೂ ವಹಿವಾಟಿನ ಮೇಲೆ ಪ್ರಭಾವ ಬೀರಿತು ಎಂದು ಮಾರುಕಟ್ಟೆ ವರ್ತಕರು ಹೇಳಿದ್ದಾರೆ.

‘ಷೇರುಪೇಟೆಯ ಪಾಲಿಗೆ ಇದೊಂದು ಅಚ್ಚರಿಯ ವಾರದ ವಹಿವಾಟಿನ ಆರಂಭ ಆಗಿದೆ. ಜಾಗತಿಕ ಷೇರುಪೇಟೆಗಳು ದುರ್ಬಲವಾಗಿದ್ದರೂ ಸೆನ್ಸೆಕ್ಸ್ ಮತ್ತು ನಿಫ್ಟಿ ನಿಯಂತ್ರಣ ಕಂಡುಕೊಂಡಿವೆ’ ಎಂದು ಮೆಹ್ತಾ ಈಕ್ವಿಟೀಸ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

ರೂಪಾಯಿ ಮೌಲ್ಯ 9 ಪೈಸೆ ಹೆಚ್ಚಳ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಸೋಮವಾರ 9 ಪೈಸೆ ಏರಿಕೆ ಕಂಡು ಒಂದು ಡಾಲರ್‌ಗೆ ₹79.78ರಂತೆ ವಿನಿಮಯಗೊಂಡಿತು.

ಆದರೆ, ಜಾಗತಿಕ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಮೌಲ್ಯ ವೃದ್ಧಿ ಆಗಿದ್ದರಿಂದ ರೂಪಾಯಿ ಹೆಚ್ಚಿನ ಗಳಿಕೆ ಕಾಣಲು ಸಾಧ್ಯವಾಗಲಿಲ್ಲ ಎಂದು ವರ್ತಕರು ಹೇಳಿದ್ದಾರೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸಕಾರಾತ್ಮಕ ನೆಲೆಯಲ್ಲಿ ವಹಿವಾಟು ನಡೆಸುವ ನಿರೀಕ್ಷೆ ಇದೆ. ಒಂದು ಡಾಲರ್‌ಗೆ ₹79.40 ರಿಂದ ₹80.05ರ ಆಸುಪಾಸಿನಲ್ಲಿ ಇರುವ ಅಂದಾಜು ಇದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವೀಸ್‌ನ ವಿಶ್ಲೇಷಕ ಗೌರಂಗ್ ಸೋಮಾನಿಯಾ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಕುಮಟ	
ಚಿಪ್ಪು	29509-33809
ಕೋಕ	22109-33019
ಫ್ಯಾಕ್ಟರಿ	13069-23700
ಹಳೆಚಾಲಿ	41509-47129
ಹೊಸಚಾಲಿ	39019-42201
ಕಾರ್ಕಳ	
ಹೊಸತು	40000-47500
ಸಾಗರ	
ಬಿಳಿಗೋಟು	15199-33299
ಚಾಲಿ	32119-41244
ಕೋಕ	12989-37989
ಕೆಂಪುಗೋಟು	35199-40899
ರಾಶಿ	37989-55409
ಸಿಪ್ಪೆಗೋಟು	5029-23699
ಪುತ್ತೂರು	
ಹೊಸತು	34500-47500
ಶಿವಮೊಗ್ಗ	
ಬೆಟ್ಟೆ	52199-55319
ಗೊರಬಲು	17809-39458
ರಾಶಿ	49569-55009
ಸರಕು	59000-80930
ಸಿದ್ದಾಪುರ	
ಚಿಪ್ಪು	31699-35299
ಚಾಲಿ	37599-42999
ಕೋಕ	26799-34629
ರಾಶಿ	48599-52549
ತಟ್ಟಿಬೆಟ್ಟೆ	51099-51099
ಶಿರಸಿ	
ಬೆಟ್ಟೆ	31001-48999
ಬಿಳಿಗೋಟು	26818-36600
ಚಾಲಿ	39369-44099
ರಾಶಿ	48011-52899
ಯಲ್ಲಾಪುರ	
ಚಿಪ್ಪು	29899-36419
ಕೋಕ	21299-32712
ಚಾಲಿ	36899-43180
ಕೆಂಪುಗೋಟು	27800-35600
ರಾಶಿ	49799-56299
ತಟ್ಟಿಬೆಟ್ಟೆ	38299-46799

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	16000	16650	242 ಸೆಂಟ್ಸ್
ಎಸಿ	---	8500	9200	
ಆರ್‌ಪಿ	---	9800	9825	ಲಂಡನ್
ಆರ್‌ಸಿ	---	4600	4750	2281 ಡಾಲರ್ಸ್

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ಗೆ ದಂಡ

ಮುಂಬೈ (ಪಿಟಿಐ): ಹೌಸಿಂಗ್ ಫೈನಾನ್ಸ್‌ಗೆ ಸಂಬಂಧಿಸಿದ ನಿಯಮಗಳನ್ನು ಅನುಸರಿಸದೇ ಇರುವ ಕಾರಣಕ್ಕಾಗಿ ಬೆಂಗಳೂರಿನ ‘ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್’ಗೆ ₹ 25 ಲಕ್ಷದ ದಂಡ ವಿಧಿಸಲಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೋಮವಾರ ತಿಳಿಸಿದೆ.

ನಿಯಮ ಅನುಸರಿಸುವಲ್ಲಿ ವಿಫಲವಾಗಿರುವ ಕಾರಣಕ್ಕಾಗಿ ಒಟ್ಟು ಐದು ಸಹಕಾರಿ ಬ್ಯಾಂಕ್‌ಗಳಿಗೆ ದಂಡ ವಿಧಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಗ್ರಾಹಕರ ರಕ್ಷಣೆಗೆ ಸಂಬಂಧಿಸಿದಂತೆ ಆರ್‌ಬಿಐ ನೀಡಿರುವ ನಿರ್ದೇಶನಗಳನ್ನು ಅನುಸರಿಸದೇ ಇರುವ ಕಾರಣಕ್ಕಾಗಿ ಠಾಣೆ ಭಾರತ್ ಸಹಕಾರಿ ಬ್ಯಾಂಕ್ ಲಿಮಿಟೆಡ್‌ಗೆ ₹15 ಲಕ್ಷ ದಂಡ ವಿಧಿಸಲಾಗಿದೆ ಎಂದು ಇನ್ನೊಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅದೇ ರೀತಿ ಝಾನ್ಸಿ ಲಕ್ಷ್ಮಿಬಾಯಿ ಅರ್ಬನ್ ಕೊ–ಆಪರೇಟಿವ್ ಬ್ಯಾಂಕ್‌ಗೆ ₹ 5 ಲಕ್ಷ, ತಮಿಳುನಾಡಿನ ನಿಕೋಲ್ಸನ್ ಕೊ–ಆಪರೇಟಿವ್ ಟೌನ್ ಬ್ಯಾಂಕ್‌ಗೆ ₹ 2 ಲಕ್ಷ ಹಾಗೂ ಒಡಿಶಾದ ರೂರ್ಕೆಲಾದ ಅರ್ಬನ್ ಕೊ–ಆಪರೇಟಿವ್ ಬ್ಯಾಂಕ್‌ಗೆ ₹10 ಸಾವಿರ ದಂಡ ವಿಧಿಸಲಾಗಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

5–9-2022

ಜಾವಾ 70/80(ಹೊಸ)	11550-11600
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	10200-10300
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1650)
ಒಂದು ವಾರದ ಡೆಲಿವರಿ	1625 (1645)
ಸೋಯಾ ಕಚ್ಚಾ	1170 (1165)
ಪಾಮ್ ವಾರದ ಡೆಲಿವರಿ	993 (998)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1350)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

50,550 (50,550)

ಬೆಳ್ಳಿ ಕೆ.ಜಿ 53,350 (52,800)

ಆವರಣದಲ್ಲಿ ಶನಿವಾರದ ಧಾರಣೆ

ಬೇಡಿಕೆ ಹೆಚ್ಚಳ; 14 ವರ್ಷಗಳ ಗರಿಷ್ಠ ಮಟ್ಟಕ್ಕೆ ನೇಮಕಾತಿ

ಸೇವಾ ವಲಯದ ಚಟುವಟಿಕೆಗೆ ವೇಗ

ನವದೆಹಲಿ (ಪಿಟಿಐ/ರಾಯಿಟರ್ಸ್): ದೇಶದ ಸೇವಾ ವಲಯದ ಚಟುವಟಿಕೆಯು ಆಗಸ್ಟ್‌ನಲ್ಲಿ ನಿರೀಕ್ಷೆಗೂ ಮೀರಿ ವೇಗದ ಬೆಳವಣಿಗೆ ಕಂಡಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ.

ಸೇವಾ ವಲಯದ ಚಟುವಟಿಕೆಗಳನ್ನು ತಿಳಿಸುವ ಸೂಚ್ಯಂಕವು ಜುಲೈನಲ್ಲಿ ನಾಲ್ಕು ತಿಂಗಳ ಕನಿಷ್ಠ ಮಟ್ಟವಾದ 55.5ಕ್ಕೆ ಇಳಿಕೆ ಕಂಡಿತ್ತು. ಆದರೆ ಆಗಸ್ಟ್‌ನಲ್ಲಿ 57.2ಕ್ಕೆ ಏರಿಕೆ ಕಂಡಿದೆ.

ಬೇಡಿಕೆ ಹೆಚ್ಚಾಗುತ್ತಿರುವುದರ ಜೊತೆಗೆ ಒಟ್ಟಾರೆಯಾಗಿ ವೆಚ್ಚದ ಒತ್ತಡವೂ ಕಡಿಮೆ ಆಗುತ್ತಿದೆ. ಇದರಿಂದಾಗಿ ಕಂಪನಿಗಳ ಹೊಸ ನೇಮಕಾತಿಯು 14 ವರ್ಷಗಳ ಗರಿಷ್ಠ ಮಟ್ಟವನ್ನು ತಲುಪಿದೆ ಎಂದು ಅದು ತಿಳಿಸಿದೆ.

ಮುಖ್ಯಾಂಶಗಳು

- ಸತತ 13ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಬೆಳವಣಿಗೆ
- ಜಾಗತಿಕ ಮಾರುಕಟ್ಟೆಯಲ್ಲಿ 30ನೇ ತಿಂಗಳಿನಲ್ಲಿಯೂ ಬೇಡಿಕೆ ಕುಸಿತ

ಸೂಚ್ಯಂಕವು 50 ಮತ್ತು ಅದಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ. ಈ ದೃಷ್ಟಿಯಿಂದ ಸತತ 13ನೇ ತಿಂಗಳಿನಲ್ಲಿಯೂ ವಲಯವು ಸಕಾರಾತ್ಮಕ ಬೆಳವಣಿಗೆ ಕಂಡಂತಾಗಿದೆ.

ತಯಾರಿಕೆ ಮತ್ತು ಸೇವಾ ವಲಯಗಳ ಒಟ್ಟಾರೆ ಬೆಳವಣಿಗೆಯನ್ನು ಸೂಚಿಸುವ ಕಂಪೋಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ 56.6ರ ರಿಂದ 58.2ಕ್ಕೆ ಏರಿಕೆ ಆಗಿದೆ. ಇದು ಒಂಬತ್ತು ತಿಂಗಳ ಗರಿಷ್ಠ ಮಟ್ಟವಾಗಿದೆ.

ಬಡ್ಡಿದರ ಗರಿಷ್ಠ ಮಟ್ಟದಲ್ಲಿ ಇರುವುದು, ಬೆಲೆ ಏರಿಕೆಯ ಒತ್ತಡ ಹಾಗೂ ಜಾಗತಿಕ ಮಂದಗತಿಯ ಆರ್ಥಿಕ ಬೆಳವಣಿಗೆಯ ಆತಂಕದಿಂದಾಗಿ ಮುಂಬರುವ ದಿನಗಳಲ್ಲಿ ಬೆಳವಣಿಗೆಯ ವೇಗದ ಮೇಲೆ ಪರಿಣಾಮ ಉಂಟಾಗಬಹುದು ಎಂದು ಸಂಸ್ಥೆಯು ಅಭಿಪ್ರಾಯಪಟ್ಟಿದೆ.

ಸಂಸ್ಕರಣಾ ಕಂಪನಿಗಳಿಂದ ಹೆಚ್ಚಿನ ಖರೀದಿ: ವಿತರಕರ ಅಭಿಪ್ರಾಯ

ತಾಳೆ ಎಣ್ಣೆ ಆಮದು 11 ತಿಂಗಳ ಗರಿಷ್ಠ

ಮುಂಬೈ (ರಾಯಿಟರ್ಸ್): ಭಾರತವು ಆಗಸ್ಟ್‌ನಲ್ಲಿ 10.3 ಲಕ್ಷ ಟನ್ ತಾಳೆ ಎಣ್ಣೆ ಆಮದು ಮಾಡಿಕೊಂಡಿದ್ದು, 11 ತಿಂಗಳ ಗರಿಷ್ಠ ಮಟ್ಟವನ್ನು ತಲುಪಿದೆ ಎಂದು ವಿತರಕರು ಹೇಳಿದ್ದಾರೆ. ಜುಲೈಗೆ ಹೋಲಿಸಿದರೆ ಆಗಸ್ಟ್‌ನಲ್ಲಿ ಆಮದು ಪ್ರಮಾಣವು ಶೇ 94ರಷ್ಟು ಏರಿಕೆ ಆಗಿದೆ.

ತಾಳೆ ಎಣ್ಣೆ ಬೆಲೆ ಇಳಿಕೆ ಆಗಿರುವುದರಿಂದ ಸಂಸ್ಕರಣೆ ಮಾಡುವ ಕಂಪನಿಗಳು ಹೆಚ್ಚಿನ ಪ್ರಮಾಣದಲ್ಲಿ ಖರೀದಿ ಮಾಡುತ್ತಿವೆ. ಹೀಗಾಗಿ ಆಮದು ಹೆಚ್ಚಾಗಿದೆ ಎಂದು ವಿತರಕರು ಹೇಳಿದ್ದಾರೆ.

ಭಾರತಕ್ಕೆ ಸೆಪ್ಟೆಂಬರ್ ತಿಂಗಳಿನಲ್ಲಿ ಪೂರೈಸುವ ಕಚ್ಚಾ ತಾಳೆ ಎಣ್ಣೆಯನ್ನು ಪ್ರತಿ ಟನ್‌ಗೆ 1,011 ಡಾಲರ್‌ಗೆ ನೀಡಲಾಗುತ್ತಿದೆ. ಕಚ್ಚಾ ಸೋಯಾ ಎಣ್ಣೆ ದರವು ಪ್ರತಿ ಟನ್‌ಗೆ 1,443 ಡಾಲರ್ ಇದೆ ಎಂದು ವಿತರಕರು ತಿಳಿಸಿದ್ದಾರೆ.

ಸೆಪ್ಟೆಂಬರ್‌ನಲ್ಲಿ ಭಾರತಕ್ಕೆ ಆಮದಾಗಲಿರುವ ತಾಳೆ ಎಣ್ಣೆ ಪ್ರಮಾಣವು 10 ಲಕ್ಷ ಟನ್‌ಗಿಂತಲೂ ಹೆಚ್ಚಿಗೆ ಆಗಬಹುದು ಎಂದು ಸನ್‌ವಿನ್ ಸಮೂಹದ ಮುಖ್ಯ ಕಾರ್ಯನಿರ್ವಾಹಕ ಸಂದೀಪ್ ಬಜೋರಿಯಾ ಹೇಳಿದ್ದಾರೆ.

ಸುಂಕ ರಹಿತವಾಗಿ ಅಕ್ಟೋಬರ್ ಅಂತ್ಯದವರೆಗೆ ತಾಳೆ ಎಣ್ಣೆ ರಫ್ತು ಮಾಡಲು ಇಂಡೊನೇಷ್ಯಾ ನಿರ್ಧರಿಸಿದೆ.

ಇದರಿಂದಾಗಿ ಮಾರುಕಟ್ಟೆಯಲ್ಲಿ ಪೂರೈಕೆ ಹೆಚ್ಚಾಗಿದ್ದು, ಬೆಲೆಯಲ್ಲಿ ಇಳಿಕೆ ಕಾಣುವಂತಾಗಿದೆ ಎಂದು ಮುಂಬೈ ಮೂಲದ ವಿತರಕರೊಬ್ಬರು ತಿಳಿಸಿದ್ದಾರೆ.

ಏಪ್ರಿಲ್–ಮೇ ಅವಧಿಯಲ್ಲಿ ಇಂಡೊನೇಷ್ಯಾವು ರಫ್ತು ನಿರ್ಬಂಧಿಸಿತ್ತು. ಇದೀಗ ದಾಸ್ತಾನು ಕಡಿಮೆ ಮಾಡಿಕೊಳ್ಳುತ್ತಿದೆ ಎಂದು ಅವರು ಹೇಳಿದ್ದಾರೆ.

ಸೋಯಾ ಎಣ್ಣೆ ಆಮದು ಜುಲೈಗೆ ಹೋಲಿಸಿದರೆ ಆಗಸ್ಟ್‌ನಲ್ಲಿ ಇಳಿಕೆ ಆಗಿದ್ದು 2.40 ಲಕ್ಷ ಟನ್ ಆಗಿದೆ. ಸೂರ್ಯಕಾಂತಿ ಎಣ್ಣೆ ಆಮದು ಶೇ 8ರಷ್ಟು ಇಳಿಕೆ ಕಂಡಿದ್ದು 1.43 ಲಕ್ಷ ಟನ್‌ಗೆ ತಲುಪಿದೆ ಎಂದು ವಿತರಕರು ಮಾಹಿತಿ ನೀಡಿದ್ದಾರೆ.

ಭಾರತವು ಇಂಡೊನೇಷ್ಯಾ, ಮಲೇಷ್ಯಾ ಮತ್ತು ಥಾಯ್ಲೆಂಡ್‌ನಿಂದ ತಾಳೆ ಎಣ್ಣೆ ಆಮದುಮಾಡಿಕೊಳ್ಳುತ್ತಿದೆ. ಅರ್ಜೆಂಟೀನಾ, ಬ್ರೆಜಿಲ್, ಉಕ್ರೇನ್ ಮತ್ತು ರಷ್ಯಾದಿಂದ ಸೋಯಾ ಮತ್ತು ಸೂರ್ಯಕಾಂತಿ ಎಣ್ಣೆಗಳನ್ನು ಆಮದುಮಾಡಿಕೊಳ್ಳುತ್ತಿದೆ.

ಕಚ್ಚಾ ತೈಲ ಉತ್ಪಾದನೆ ತಗ್ಗಿಸಲು ಒಪೆಕ್+ ಒಪ್ಪಿಗೆ

ವಿಯೆನ್ನಾ (ಎಎಫ್‌ಪಿ): ಪೆಟ್ರೋಲಿಯಂ ರಫ್ತುದಾರ ರಾಷ್ಟ್ರಗಳ ಒಕ್ಕೂಟ (ಒಪೆಕ್) ಮತ್ತು ಆ ಒಕ್ಕೂಟದ ಮಿತ್ರರಾಷ್ಟ್ರಗಳ (ಒಪೆಕ್ +) ಪ್ರತಿನಿಧಿಗಳು ಒಂದು ವರ್ಷಕ್ಕೂ ಅಧಿಕ ಸಮಯದ ಬಳಿಕ ಕಚ್ಚಾ ತೈಲ ಉತ್ಪಾದನೆಯನ್ನು ತುಸು ಕಡಿತಗೊಳಿಸಲು ಸೋಮವಾರ ಒಪ್ಪಿಗೆ ನೀಡಿವೆ.

ಜಾಗತಿಕ ಆರ್ಥಿಕ ಹಿಂಜರಿತದ ಆತಂಕದಿಂದಾಗಿ ಕಚ್ಚಾ ತೈಲ ದರ ಇಳಿಕೆ ಆಗುತ್ತಿದೆ. ಹೀಗಾಗಿ ಉತ್ಪಾದನೆ ಕಡಿಮೆ ಮಾಡುವ ಮೂಲಕ ಬೆಲೆ ಹೆಚ್ಚಾಗುವಂತೆ ಮಾಡಲು ಈ ನಿರ್ಧಾರಕ್ಕೆ ಬಂದಿವೆ. ಅಕ್ಟೋಬರ್‌ನಲ್ಲಿ ದಿನಕ್ಕೆ ಒಂದು ಲಕ್ಷ ಬ್ಯಾರಲ್‌ನಷ್ಟು ಕಡಿಮೆ ಉತ್ಪಾದನೆ ಮಾಡಲಿವೆ.

ಕಚ್ಚಾ ತೈಲ ದರ ಏರಿಕೆಯಿಂದ ಅಮೆರಿಕದಲ್ಲಿ ಹಣದುಬ್ಬರವು ದಶಕಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದೆ. ಹೀಗಾಗಿ ಉತ್ಪಾದನೆ ಹೆಚ್ಚಿಸುವಂತೆ ಅಮೆರಿಕವು ಒತ್ತಾಯಿಸುತ್ತಲೇ ಇತ್ತು. ಆದರೆ, ಒಪೆಕ್ + ದೇಶಗಳು ಸೋಮವಾರ ತೆಗೆದುಕೊಂಡಿರುವ ನಿರ್ಧಾರದಿಂದ ಅಮೆರಿಕಕ್ಕೆ ನಿರಾಸೆ ಆಗಲಿದೆ.

ಈಗಿನ ಜಾಗತಿಕ ಪರಿಸ್ಥಿತಿಯಲ್ಲಿ ಉತ್ಪಾದನೆ ಕಡಿತ ಮಾಡುವುದು ಸೂಕ್ತ ನಿರ್ಧಾರವಲ್ಲ ಎಂದು ತಜ್ಞರು ಹೇಳಿದ್ದಾರೆ.

ತೈಲ ದರ ಏರಿಕೆ: ಈ ನಿರ್ಧಾರದ ಬಳಿಕ ಕಚ್ಚಾ ತೈಲ ದರ ಏರಿಕೆ ಕಂಡಿದೆ. ಅಮೆರಿಕದ ಕಚ್ಚಾ ತೈಲ ದರ ಶೇ 3.3ರಷ್ಟು ಹೆಚ್ಚಾಗಿ ಬ್ಯಾರಲ್‌ಗೆ 89.79 ಡಾಲರ್‌ಗೆ ತಲುಪಿತು. ಬ್ರೆಂಟ್ ಕಚ್ಚಾ ತೈಲ ದರ ಶೇ 3.7ರಷ್ಟು ಹೆಚ್ಚಾಗಿ ಬ್ಯಾರಲ್‌ಗೆ 96.50ರಂತೆ ಮಾರಾಟವಾಯಿತು.

ಕ್ಯಾಚ್ ಕೈಚೆಲ್ಲಿದ್ದಕ್ಕೆ ಟ್ರೋಲ್: ಆರ್ಷದೀಪ್ ಬೆಂಬಲಕ್ಕೆ ಭಜ್ಜಿ



ಆರ್ಷದೀಪ್ ಸಿಂಗ್

ಚಂಡೀಗಡ (ಪಿಟಿಐ): ಪಾಕಿಸ್ತಾನದ ಎದುರಿನ ಕ್ರಿಕೆಟ್ ಪಂದ್ಯದಲ್ಲಿ ಕ್ಯಾಚ್ ಕೈಚೆಲ್ಲಿ, ಟೀಕೆಗೆ ಗುರಿಯಾದ ಭಾರತ ತಂಡದ ಬೌಲರ್ ಆರ್ಷದೀಪ್ ಸಿಂಗ್ ಅವರ ಬೆಂಬಲಕ್ಕೆ ಮಾಜಿ ಕ್ರಿಕೆಟಿಗ, ರಾಜ್ಯಸಭಾ ಸದಸ್ಯ ಹರಭಜನ್ ಸಿಂಗ್ ಹಾಗೂ ಪಂಜಾಬ್‌ನ ಇತರ ಮುಖಂಡರು ನಿಂತಿದ್ದಾರೆ.

ಭಾನುವಾರ ನಡೆದ ಏಷ್ಯಾಕಪ್ ಪಂದ್ಯದ ನಿರ್ಣಾಯಕ ಘಟ್ಟದಲ್ಲಿ ಆರ್ಷದೀಪ್, ಪಾಕಿಸ್ತಾನದ ಆಸಿಫ್ ಅಲಿ ಅವರ ಸುಲಭ ಕ್ಯಾಚ್ ಕೈಚೆಲ್ಲಿದ್ದರು. ಆಸಿಫ್ ಆ ಬಳಿಕ ಪಾಕ್ ತಂಡವನ್ನು ಗೆಲುವಿನತ್ತ ಮುನ್ನಡೆಸಿದ್ದರು.

ಕ್ಯಾಚ್ ಕೈಚೆಲ್ಲಿದ್ದ ಪಂಜಾಬ್‌ನ ಯುವ ಬೌಲರ್, ಸಾಮಾಜಿಕ ಮಾಧ್ಯಮಗಳಲ್ಲಿ 'ಟ್ರೋಲ್'ಗೆ ಗುರಿಯಾಗಿದ್ದರು. ಕೆಲವರು ಅವರನ್ನು 'ಖಲಿಸ್ತಾನಿ' ಎಂದು ತೆಗಳಿದ್ದರು. 'ಆತ ಖಲಿಸ್ತಾನಿಯಾಗಿದ್ದು, ಪಾಕಿಸ್ತಾನದೊಂದಿಗೆ ರಹಸ್ಯ ಸಂಬಂಧ ಹೊಂದಿದ್ದಾನೆ' ಎಂದು 'ಟ್ವೀಟ್' ವೊಂದರಲ್ಲಿ ಟೀಕಿಸಲಾಗಿತ್ತು.

ಹರಭಜನ್ ಅಲ್ಲದೆ, ಎಎಪಿ ಸಂಸದ ರಾಘವ್ ಚಡ್ಡಾ, ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್, ಪಂಜಾಬ್ ಕ್ರೀಡಾ ಸಚಿವ ಗುರ್ಮೀತ್ ಸಿಂಗ್ ಮತ್ತು ಬಿಜೆಪಿ ಮುಖಂಡ ಮಂಜಿಂದರ್ ಸಿರ್ಸಾ ಅವರೂ ಆರ್ಷದೀಪ್ ಪರ ನಿಂತಿದ್ದಾರೆ.

'ಆರ್ಷದೀಪ್ ಅವರನ್ನು ಟೀಕಿಸುವುದನ್ನು ನಿಲ್ಲಿಸಿ. ಯಾರೂ ಉದ್ದೇಶಪೂರ್ವಕವಾಗಿ ಕ್ಯಾಚ್ ಕೈಚೆಲ್ಲುವುದಿಲ್ಲ. ಪಾಕಿಸ್ತಾನ ಉತ್ತಮವಾಗಿ ಆಡಿ ಗೆಲುವು ಪಡೆದಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಆರ್ಷದೀಪ್ ಹಾಗೂ ಭಾರತ ತಂಡದ ಬಗ್ಗೆ ಕೀಳು ಅಭಿರುಚಿಯ ಪೋಸ್ಟ್ ಹಾಕುವವರಿಗೆ ನಾಚಿಕೆಯಾಗಬೇಕು' ಎಂದು ಹರಭಜನ್ ಟ್ವೀಟ್ ಮಾಡಿದ್ದಾರೆ.

ಕ್ರೀಡಾ ಸಚಿವ ಗುರ್ಮೀತ್ ಸಿಂಗ್ ಅವರು ಆರ್ಷದೀಪ್ ತಾಯಿ ಬಲ್ಜಿತ್ ಕೌರ್ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ್ದು, 'ಪಂಜಾಬ್ ಮತ್ತು ಇಡೀ ದೇಶ ನಿಮ್ಮ ಮಗನ ಪರ ನಿಂತಿದೆ' ಎಂದು ಧೈರ್ಯ ತುಂಬಿದ್ದಾರೆ.

'ಒತ್ತಡದ ಸಮಯದಲ್ಲಿ ಅಂತಹ ತಪ್ಪುಗಳು (ಕ್ಯಾಚ್ ಕೈಚೆಲ್ಲುವುದು) ಆಗುವುದು ಸಹಜ. ನಮ್ಮ ಕ್ರೀಡಾಪಟುಗಳನ್ನು ನಾವು ಬೆಂಬಲಿಸಬೇಕು. ಆರ್ಷದೀಪ್, ನಿರಾಸೆಗೆ ಒಳಗಾಗಬೇಡ. ನಿನಗೆ ಉಜ್ವಲ ಭವಿಷ್ಯವಿದೆ' ಎಂದು ಅಮರಿಂದರ್ ಸಿಂಗ್ ತಮ್ಮ 'ಫೇಸ್‌ಬುಕ್' ಖಾತೆಯಲ್ಲಿ ಬರೆದಿದ್ದಾರೆ.

ತಪ್ಪು ಮಾಹಿತಿ: ವಿಕಿಪೀಡಿಯಕ್ಕೆ ನೋಟಿಸ್

ಆರ್ಷದೀಪ್ ಸಿಂಗ್ ಕುರಿತು ತಪ್ಪು ಮಾಹಿತಿ ಪ್ರಕಟಿಸಿದ 'ವಿಕಿಪೀಡಿಯ'ವನ್ನು ಕೇಂದ್ರ ಸರ್ಕಾರ ಸೋಮವಾರ ತರಾಟೆಗೆ ತೆಗೆದುಕೊಂಡಿದೆ.

ಆರ್ಷದೀಪ್ ಅವರ ಮಾಹಿತಿ ಒಳಗೊಂಡ ಪುಟವನ್ನು ಯಾರೋ ಕಿಡಿಗೇಡಿಗಳು ತಿರುಚಿದ್ದರು. ಅವರ ದೇಶ 'ಭಾರತ' ಎಂಬುದರ ಬದಲು 'ಖಲಿಸ್ತಾನ' ಎಂಬುದಾಗಿ ಬದಲಾಯಿಸಿದ್ದರು. ಅಲ್ಪ ಸಮಯದ ಬಳಿಕ ಇದನ್ನು ಸರಿಪಡಿಸಲಾಗಿತ್ತು. ಪಾಕಿಸ್ತಾನದಿಂದಲೇ ಯಾರೋ ಕಿಡಿಗೇಡಿಗಳು ಮಾಹಿತಿ ತಿರುಚಿದ್ದಾರೆ ಎನ್ನಲಾಗಿದೆ.

'ಈ ರೀತಿಯ ತಪ್ಪು ಮಾಹಿತಿ ನೀಡಲು ಯಾರಿಗೂ ಅವಕಾಶವಿಲ್ಲ. ಉದ್ದೇಶಪೂರ್ವಕವಾಗಿ ಪ್ರಚೋದನೆ ಉಂಟುಮಾಡುವ ಇಂತಹ ಕೃತ್ಯಗಳನ್ನು ಖಂಡಿಸುತ್ತೇವೆ' ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ 'ಟ್ವೀಟ್' ಮಾಡಿದ್ದಾರೆ.

ಐ.ಟಿ ಸಚಿವಾಲಯವು ಇದಕ್ಕೆ ಸಂಬಂಧಿಸಿದಂತೆ ಸ್ಪಷ್ಟನೆ ಕೋರಿ ವಿಕಿಪೀಡಿಯ ಕಾರ್ಯನಿರ್ವಾಹಕರಿಗೆ ನೋಟಿಸ್ ಜಾರಿಗೊಳಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇಂದು ಲಂಕಾ ಜತೆ ಪೈಪೋಟಿ: ರೋಹಿತ್ ಬಳಗಕ್ಕೆ ಬೌಲಿಂಗ್‌ನದ್ದೇ ಚಿಂತೆ

ಗೆಲುವಿನ ಒತ್ತಡದಲ್ಲಿ ಭಾರತ

ಭಾರತ ತಂಡದ ಕೋಚ್ ರಾಹುಲ್ ದ್ರಾವಿಡ್ ಹಾಗೂ ನಾಯಕ ರೋಹಿತ್ ಶರ್ಮ –ಎಎಫ್‌ಪಿ ಚಿತ್ರ

ಏಷ್ಯಾ ಕಪ್ ಯುಎಇ 2022

ಇಂದಿನ ಪಂದ್ಯ

ಭಾರತ–ಶ್ರೀಲಂಕಾ

ಆರಂಭ: ಸಂಜೆ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

ದುಬೈ (ಪಿಟಿಐ): ಪಾಕಿಸ್ತಾನದ ಎದುರಿನ ಸೋಲಿನ ನಿರಾಶೆಯಿಂದ ಹೊರಬರುವ ಪ್ರಯತ್ನದಲ್ಲಿರುವ ಭಾರತ ತಂಡ, ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಮಂಗಳವಾರ ಶ್ರೀಲಂಕಾ ತಂಡವನ್ನು ಎದುರಿಸಲಿದೆ.

ಟೂರ್ನಿಯ ಫೈನಲ್ ಪ್ರವೇಶದ ಕನಸು ಜೀವಂತವಾಗಿರಿಸಿಕೊಳ್ಳಬೇಕಾದರೆ, ದುಬೈನಲ್ಲಿ ನಡೆಯಲಿರುವ 'ಸೂಪರ್ 4' ಹಂತದ ಈ ಪಂದ್ಯದಲ್ಲಿ ರೋಹಿತ್ ಶರ್ಮ ಬಳಗಕ್ಕೆ ಗೆಲುವು ಅನಿವಾರ್ಯ. ತಪ್ಪುಗಳನ್ನು ತಿದ್ದಿಕೊಂಡು, ಶಿಸ್ತಿನ ಆಟವಾಡುವ ಸವಾಲು ತಂಡದ ಮುಂದಿದೆ.

ಪಾಕ್ ಎದುರಿನ ಪಂದ್ಯದಲ್ಲಿ ಬೌಲರ್‌ಗಳು ನಿರೀಕ್ಷಿತ ಪ್ರದರ್ಶನ ನೀಡಿರಲಿಲ್ಲ. ಇದು ಚಿಂತೆಗೆ ಕಾರಣವಾಗಿದೆ. ಜಸ್‌ಪ್ರೀತ್ ಬೂಮ್ರಾ ಮತ್ತು ಹರ್ಷಲ್ ಪಟೇಲ್ ಅವರ ಅನುಪಸ್ಥಿತಿಯಿಂದ ಭಾರತದ ಬೌಲಿಂಗ್ ವಿಭಾಗ ಟೂರ್ನಿಗೆ ಮುನ್ನವೇ ಬಲ ಕಳೆದುಕೊಂಡಿತ್ತು. ಆಲ್‌ರೌಂಡರ್ ರವೀಂದ್ರ ಜಡೇಜ ಗಾಯದಿಂದ ಹೊರಬಿದ್ದಿರುವುದು ಸಂಕಷ್ಟವನ್ನು ಹೆಚ್ಚಿಸಿದೆ.

ಲೀಗ್ ಹಂತದ ಮೊದಲ ಪಂದ್ಯದಲ್ಲಿ ಪಾಕ್ ಎದುರು ಪ್ರಭಾವಿ ದಾಳಿ ನಡೆಸಿದ್ದ ಹಾರ್ದಿಕ್ ಪಾಂಡ್ಯ, ಬಳಿಕ ಕಳೆಗುಂದಿದ್ದಾರೆ. ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರ ಕೈಚಳಕ ನಡೆಯುತ್ತಿಲ್ಲ. ಅನಾರೋಗ್ಯದ ಕಾರಣ ಆವೇಶ್ ಖಾನ್, ಪಾಕ್ ಎದುರು ಆಡಿರಲಿಲ್ಲ. ಅವರು ಮಂಗಳವಾರ ಕಣಕ್ಕಿಳಿಯುವ ಸಾಧ್ಯತೆಯಿದೆ.

ರಿಷಭ್ ಪಂತ್ ಮತ್ತು ದಿನೇಶ್ ಕಾರ್ತಿಕ್ ಅವರಲ್ಲಿ ಯಾರಿಗೆ ಅವಕಾಶ ನೀಡಬೇಕು ಎಂಬ ಚರ್ಚೆ ಮುಂದುವರಿದಿದೆ. ಅಂತಿಮ ಇಲೆವನ್‌ನಲ್ಲಿ ಇಬ್ಬರಿಗೂ ಅವಕಾಶ ಲಭಿಸುವ ಸಾಧ್ಯತೆ ಕಡಿಮೆ. ಭಾನುವಾರದ ಪಂದ್ಯದಲ್ಲಿ ಕಾರ್ತಿಕ್ ಬದಲು ದೀಪಕ್ ಹೂಡಾಗೆ ಅವಕಾಶ ನೀಡಲಾಗಿತ್ತು.

ಪಾಕ್ ಎದುರಿನ ಪಂದ್ಯದಲ್ಲಿ ಸೋತರೂ ಭಾರತ ಕೆಲವು ಸಕಾರಾತ್ಮಕ ಅಂಶಗಳನ್ನು ಕಂಡುಕೊಂಡಿತ್ತು. ರೋಹಿತ್ ಶರ್ಮ, ಕೆ.ಎಲ್.ರಾಹುಲ್ ಮತ್ತು ವಿರಾಟ್ ಕೊಹ್ಲಿ ಅವರ ಆಟ ಅದರಲ್ಲಿ ಪ್ರಮುಖವಾದದ್ದು. ರೋಹಿತ್ ಮತ್ತು ರಾಹುಲ್ ತಂಡಕ್ಕೆ ಬಿರುಸಿನ ಆರಂಭ ನೀಡಿದ್ದರು. ಸತತ ಎರಡನೇ ಅರ್ಧಶತಕ ಗಳಿಸಿದ ಕೊಹ್ಲಿ, ಟೀಕಾಕಾರರ ಬಾಯಿಯನ್ನು ಕೆಲದಿನಗಳ ಮಟ್ಟಿಗೆ ಮುಚ್ಚಿಸಿದ್ದಾರೆ. ಲಂಕಾ ವಿರುದ್ಧವೂ ಈ ಮೂವರು ಆಕ್ರಮಣಕಾರಿ ಆಟವಾಡುವ ನಿರೀಕ್ಷೆಯಿದೆ.

ಪೈಪೋಟಿ ಸಾಧ್ಯತೆ: ಸತತ ಎರಡು ಗೆಲುವಿನ ಆತ್ಮವಿಶ್ವಾಸದಲ್ಲಿರುವ ಶ್ರೀಲಂಕಾ ತಂಡ ಭಾರತಕ್ಕೆ ಪ್ರಬಲ ಪೈಪೋಟಿ ನೀಡುವ ಸಾಧ್ಯತೆಯಿದೆ. ದಸುನ್ ಶನಕ ಬಳಗ ಲೀಗ್ ಹಂತದಲ್ಲಿ ಬಾಂಗ್ಲಾದೇಶ ತಂಡವನ್ನು ಹಾಗೂ 'ಸೂಪರ್ 4'ನ ಮೊದಲ ಪಂದ್ಯದಲ್ಲಿ ಅಫ್ಗಾನಿಸ್ತಾನವನ್ನು ಮಣಿಸಿತ್ತು.

ಚರಿತ ಅಸಲಂಕಾ ಹೊರತುಪಡಿಸಿದರೆ, ಅಗ್ರ ಕ್ರಮಾಂಕದ ಎಲ್ಲ ಬ್ಯಾಟರ್‌ಗಳು ಉತ್ತಮ ಲಯದಲ್ಲಿದ್ದಾರೆ. ದಸುನ್ ಶನಕ ಮತ್ತು ಕುಸಾಲ್ ಮೆಂಡಿಸ್ ಅವರು ಬಾಂಗ್ಲಾ ಎದುರು ಮಿಂಚಿದ್ದರೆ, ಧನುಷ್ಕಾ ಗುಣತಿಲಕ ಹಾಗ ಭಾನುಕ ರಾಜಪಕ್ಸ ಅವರು ಅಫ್ಗನ್ ವಿರುದ್ಧ ಉತ್ತಮ ಆಟವಾಡಿದ್ದರು.

ಧೋನಿ ಒಬ್ಬರೇ ಸಂದೇಶ ಕಳುಹಿಸಿದ್ದು: ಕೊಹ್ಲಿ

ವಿರಾಟ್ ಕೊಹ್ಲಿ ಹಾಗೂ ಮಹೇಂದ್ರ ಸಿಂಗ್ ದೋನಿ

ದುಬೈ (ಪಿಟಿಐ): 'ಭಾರತದ ಟೆಸ್ಟ್ ಕ್ರಿಕೆಟ್ ತಂಡದ ನಾಯಕತ್ವ ತ್ಯಜಿಸಿದಾಗ ಮಹೇಂದ್ರ ಸಿಂಗ್ ಧೋನಿ ಮಾತ್ರ ನನಗೆ ಸಂದೇಶ ಕಳುಹಿಸಿ ವಿಚಾರಿಸಿದ್ದರು' ಎಂಬುದನ್ನು ಕ್ರಿಕೆಟಿಗ ವಿರಾಟ್ ಕೊಹ್ಲಿ ಬಹಿರಂಗಪಡಿಸಿದ್ದಾರೆ.

ದಕ್ಷಿಣ ಆಫ್ರಿಕಾ ಎದುರಿನ ಸರಣಿಯಲ್ಲಿ ಸೋತ ಬಳಿಕ ಕೊಹ್ಲಿ ಅವರು ಜನವರಿ ತಿಂಗಳಲ್ಲಿ ಟೆಸ್ಟ್ ನಾಯಕತ್ವ ತ್ಯಜಿಸಿ, ಅಚ್ಚರಿ ಉಂಟುಮಾಡಿದ್ದರು.

'ನಾನು ಟೆಸ್ಟ್ ನಾಯಕತ್ವ ತ್ಯಜಿಸಿದಾಗ ಒಬ್ಬ ವ್ಯಕ್ತಿ ಮಾತ್ರ ನನಗೆ ಸಂದೇಶ ಕಳುಹಿಸಿದ್ದರು. ಅದು ಎಂ.ಎಸ್.ಧೋನಿ' ಎಂದು ಭಾನುವಾರ ನಡೆದ ಟಿವಿ ಟಾಕ್ ಶೋದಲ್ಲಿ ಅವರು ಹೇಳಿದ್ದಾರೆ.

'ಹಲವು ಮಂದಿಯಲ್ಲಿ ನನ್ನ ಮೊಬೈಲ್ ಸಂಖ್ಯೆ ಇದೆ. ಟಿ.ವಿ ಸಂವಾದದಲ್ಲಿ ಮಾತನಾಡುವಾಗ ಅನೇಕ ಮಂದಿ ನನಗೆ ಸಲಹೆ ನೀಡುತ್ತಿರುತ್ತಾರೆ. ಧೋನಿ ಹೊರತುಪಡಿಸಿ ನನ್ನ ಮೊಬೈಲ್ ಸಂಖ್ಯೆ ಹೊಂದಿರುವ ಬೇರೆ ಯಾರಿಂದಲೂ ಆ ಸಮಯದಲ್ಲಿ ಸಂದೇಶ ಬಂದಿರಲಿಲ್ಲ' ಎಂದಿದ್ದಾರೆ.

'ನಾನು ಯಾರಿಗಾದರೂ ಏನನ್ನಾದರೂ ಹೇಳಲು, ಸಲಹೆ ನೀಡಲು ಬಯಸಿದರೆ, ವೈಯಕ್ತಿಕವಾಗಿ ಅವರನ್ನು ಸಂಪರ್ಕಿಸುತ್ತೇನೆ. ಟಿ.ವಿಯಲ್ಲಿ ಬಂದು ಇಡೀ ಜಗತ್ತು ನೋಡುವಂತೆ ಸಲಹೆಗಳನ್ನು ನೀಡಿದರೆ ಅದಕ್ಕೆ ನಾನು ಯಾವುದೇ ಬೆಲೆ ಕೊಡುವುದಿಲ್ಲ. ನನ್ನ ಆಟದಲ್ಲಿ ಸುಧಾರಣೆ ತರಲು ಏನಾದರೂ ಸಲಹೆ ನೀಡುವುದಾದರೆ ನೇರವಾಗಿ ಸಂಪರ್ಕಿಸಿ' ಎಂದೂ ಹೇಳಿದ್ದಾರೆ.

'ಮಾಜಿ ಆಟಗಾರರು ನನ್ನ ಬಗ್ಗೆ ಹಲವು ಅಭಿಪ್ರಾಯಗಳನ್ನು ಹೇಳುತ್ತಾರೆ. ಅದಕ್ಕೆ ಆಭ್ಯಂತರವಿಲ್ಲ. ಆದರೆ ಅಂತಹ ಅಭಿಪ್ರಾಯಗಳು ವೈಯಕ್ತಿಕವಾಗಿ ನನ್ನ ಮೇಲೆ ಯಾವುದೇ ಪರಿಣಾಮ ಬೀರದು' ಎಂದು ಸ್ಪಷ್ಟಪಡಿಸಿದ್ದಾರೆ.

ಸುದ್ದಿ 2 ನಿಮಿಷ

ರೇಸ್: ಭಾರತದ ಅರ್ಜುನ್ ಮೈನಿಗೆ ಎರಡನೇ ಸ್ಥಾನ

ಹಾಕೆನೀಮ್, ಜರ್ಮನಿ (ಪಿಟಿಐ): ಭಾರತದ ಅರ್ಜುನ್ ಮೈನಿ ಅವರು ಇಲ್ಲಿ ನಡೆದ ಫನಾಟೆಕ್ ಜಿಟಿ ವಿಶ್ವ ಚಾಲೆಂಜ್ ಯೂರೋಪ್ ಟೂರ್ನಿಯ ಗೋಲ್ಡ್ ಕ್ಲಾಸ್ ವಿಭಾಗದಲ್ಲಿ ಎರಡನೇ ಸ್ಥಾನ ಗಳಿಸಿದರು.

ಮರ್ಸಿಡಿಸ್ –ಎಎಂಜಿ ಪ್ರತಿನಿಧಿಸುವ ಬೆಂಗಳೂರು ಮೂಲದ ಕಾರು ರೇಸರ್ ಅರ್ಜುನ್, ಹ್ಯೂಬರ್ಟ್ ಹಾಪ್ಟ್ ಮತ್ತು ಫ್ಲೋರಿನಾ ಸೊಲ್ಜ್ ಅವರನ್ನು ಒಳಗೊಂಡ ಎಚ್‌ಆರ್‌ಟಿ ತಂಡವು 'ಪೋಡಿಯಂ ಫಿನಿಶ್' ಮಾಡಿತು.

ರೇಸ್‌ಗೆ ಸುರಕ್ಷಾ ಕಾರುಗಳಿಂದ ಹಲವು ಬಾರಿ ಅಡೆತಡೆಗಳು ಉಂಟಾದವು. ಇದರಿಂದಾಗಿ ಒಂದು ಹಂತದಲ್ಲಿ ಅರ್ಜುನ್ ಅವರಿದ್ದ ಕಾರು, ಆರನೇ ಸ್ಥಾನದಲ್ಲಿತ್ತು.

ಅರ್ಜುನ್ ಅವರ ತಂಡವು ಸದ್ಯ ಚಾಂಪಿಯನ್‌ಷಿಪ್‌ನಲ್ಲಿ ಒಟ್ಟಾರೆ ನಾಲ್ಕನೇ ಸ್ಥಾನದಲ್ಲಿದೆ.

'ಸ್ಥಿರ ಸಾಮರ್ಥ್ಯ ಮೂಡಿಬರುತ್ತಿರುವುದು ಸಂತಸದ ವಿಷಯ. ಈ ವರ್ಷಾಂತ್ಯದಲ್ಲಿ ನಡೆಯುವ ಕೊನೆಯ ಸುತ್ತಿನ ಸ್ಪರ್ಧೆಗೆ ಕಾತರನಾಗಿರುವೆ. ತಂಡದ ಯಶಸ್ಸಿನಲ್ಲಿ ಎಲ್ಲ ಮೂವರು ಚಾಲಕರ ಕೊಡುಗೆಯೂ ಇದೆ. ಎಚ್‌ಆರ್‌ಟಿ ತಂಡವು ಉತ್ತಮ ಸೌಲಭ್ಯ ನೀಡಿದ್ದರಿಂದ ಈ ಸಾಧನೆ ಮೂಡಿಬಂದಿದೆ' ಎಂದು ಅರ್ಜುನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾಕಿ: ಭಾರತಕ್ಕೆ ಕೆನಡಾ ಎದುರಾಳಿ

ಲಾಸನ್ (ಪಿಟಿಐ): ಭಾರತ ಮಹಿಳಾ ಹಾಕಿ ತಂಡವು ಎಫ್‌ಐಎಚ್ ನೇಷನ್ಸ್ ಕಪ್ ಟೂರ್ನಿಯ ಮೊದಲ ಪಂದ್ಯದಲ್ಲಿ ಕೆನಡಾ ಸವಾಲು ಎದುರಿಸಲಿದೆ. ಸ್ಪೇನ್‌ನ ವೆಲೆನ್ಸಿಯಾದಲ್ಲಿ ಡಿಸೆಂಬರ್ 11ರಿಂದ 17ರವರೆಗೆ ಈ ಟೂರ್ನಿ ನಡೆಯಲಿದೆ.

ಭಾರತ ತಂಡವು ಬಿ ಗುಂಪಿನಲ್ಲಿದೆ. ಕೆನಡಾ, ಜಪಾನ್ ಮತ್ತು ದಕ್ಷಿಣ ಆಫ್ರಿಕಾ ಈ ಗುಂಪಿನ ಇನ್ನುಳಿದ ತಂಡಗಳು. ಎಂಟು ರಾಷ್ಟ್ರಗಳು ಪಾಲ್ಗೊಳ್ಳುವ ಈ ಟೂರ್ನಿಯು ಮುಂದಿನ ಆವೃತ್ತಿಯ ಎಫ್‌ಐಎಚ್ ಪ್ರೊ ಲೀಗ್‌ಗೆ ಅರ್ಹತಾ ಟೂರ್ನಿಯಾಗಿದೆ. ಮೊದಲ ದಿನ ಕೆನಡಾ ವಿರುದ್ಧ ಆಡಲಿರುವ ಭಾರತ, 12 ಮತ್ತು 14ರಂದು ಕ್ರಮವಾಗಿ ಜಪಾನ್ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧ ಸೆಣಸಲಿದೆ.

ರಾಷ್ಟ್ರೀಯ ಈಜು ಇಂದಿನಿಂದ: ಪದಕ ನಿರೀಕ್ಷೆಯಲ್ಲಿ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಈಜುಪಟುಗಳು, ಕೆಲವು ಸವಾಲುಗಳ ನಡುವೆಯೂ ಶ್ರೇಷ್ಠ ಸಾಮರ್ಥ್ಯವನ್ನು ಮುಂದುವರಿಸುವ ಛಲದಲ್ಲಿದ್ದು, ಗುವಾಹಟಿಯಲ್ಲಿ ಮಂಗಳವಾರ ಆರಂಭವಾಗುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಗುವಾಹಟಿಯ ಡಾ. ಜಾಕೀರ್ ಹುಸೇನ್ ಈಜು ಸಂಕೀರ್ಣದಲ್ಲಿ ಈಜು, ಡೈವಿಂಗ್ ಮತ್ತು ವಾಟರ್‌ಪೋಲೊ ಸ್ಪರ್ಧೆಗಳು ನಡೆಯಲಿವೆ.

ಕರ್ನಾಟಕದ ಪ್ರಮುಖ ಈಜುಪಟುಗಳಾದ ಒಲಿಂಪಿಯನ್ ಶ್ರೀಹರಿ ನಟರಾಜ್, ರಿಧಿಮಾ ವೀರೇಂದ್ರ ಕುಮಾರ್ ಈ ಚಾಂಪಿಯನ್‌ಷಿಪ್‌ಗೆ ಲಭ್ಯವಾಗುವ ಸಾಧ್ಯತೆಯಿಲ್ಲ. ಸಜನ್ ಪ್ರಕಾಶ್, ಆರ್ಯನ್ ನೆಹ್ರಾ, ಕುಶಾಗ್ರ ರಾವತ್ ಮತ್ತು ವೇದಾಂತ್ ಮಾಧವನ್ ಕೂಡ ಕಣಕ್ಕಿಳಿಯುತ್ತಿಲ್ಲ.

ಅಪೇಕ್ಷಾ ಫರ್ನಾಂಡೀಸ್, ಅನೀಶ್ ಗೌಡ ಮತ್ತು ಸಂಭವ್ ಆರ್. ಪೆರುವಿನಲ್ಲಿ ನಡೆದ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಿ ವಾಪಸಾಗುತ್ತಿದ್ದು ಈ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವ ಸಾಧ್ಯತೆಯಿದೆ. ಶಿವ ಎಸ್. ಮತ್ತು ಉತ್ಕರ್ಷ್ ಪಾಟೀಲ್ ಕೂಟದಲ್ಲಿ ಪಾಲ್ಗೊಳ್ಳಲಿರುವ ಕರ್ನಾಟಕ ಪ್ರಮುಖ ಈಜು ಪಟುಗಳಾಗಿದ್ದು, ಪದಕದ ಭರವಸೆ ಮೂಡಿಸಿದ್ದಾರೆ.

'ನಡಾಲ್‌ಗೆ ನಿಕ್ ಸವಾಲಾಗಬಲ್ಲರು'

ಪ್ರಜಾವಾಣಿ ವಾರ್ತೆ

ರಫೆಲ್ ನಡಾಲ್

ಬೆಂಗಳೂರು: ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಪ್ರಶಸ್ತಿ ರೇಸ್‌ನಲ್ಲಿ ರಫೆಲ್ ನಡಾಲ್ ಅವರಿಗೆ ನಿಕ್ ಕಿರ್ಗಿಯೋಸ್ ಬಹುದೊಡ್ಡ ಸವಾಲಾಗಬಲ್ಲರು ಎಂದು ಭಾರತದ ಟೆನಿಸ್ ಆಟಗಾರ ವಿಷ್ಣು ವರ್ಧನ್ ಅಭಿಪ್ರಾಯಪಟ್ಟರು.

ಸೋನಿ ಸ್ಪೋರ್ಟ್ಸ್ ಸೋಮವಾರ ವರ್ಚುವಲ್ ಆಗಿ ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

'ಪುರುಷರ ಸಿಂಗಲ್ಸ್‌ನಲ್ಲಿ ಸ್ಪೇನ್‌ನ ನಡಾಲ್ ಫೇವರೀಟ್ ಆಗಿದ್ದರೂ, ಆಕ್ರಮಣಕಾರಿ ಆಟ ಆಡುತ್ತಿರುವ ಆಸ್ಟ್ರೇಲಿಯಾ ಆಟಗಾರ ನಿಕ್, ಅವರಿಗೆ ತೀವ್ರ ಪೈಪೋಟಿ ನೀಡಬಲ್ಲರು' ಎಂದರು.

ಟೂರ್ನಿಯ ಪಂದ್ಯಗಳು ಸೋನಿ ಸ್ಪೋರ್ಟ್ಸ್‌ನಲ್ಲಿ ನೇರಪ್ರಸಾರವಾಗಲಿವೆ.

ಮಾಸ್ಟರ್‌ಕಾರ್ಡ್‌ಗೆ ಪ್ರಾಯೋಜಕತ್ವ

ನವದೆಹಲಿ (ಪಿಟಿಐ): ಭಾರತದೊಳಗೆ ನಡೆಯುವ ಅಂತರರಾಷ್ಟ್ರೀಯ ಮತ್ತು ದೇಶಿ ಕ್ರಿಕೆಟ್ ಟೂರ್ನಿಗಳಿಗೆ ಮಾಸ್ಟರ್‌ಕಾರ್ಡ್ ಕಂಪನಿ ಟೈಟಲ್ ಪ್ರಾಯೋಜಕತ್ವ ವಹಿಸಿಕೊಂಡಿದೆ. ಬಿಸಿಸಿಐನ ಪ್ರಕಟಣೆಯಲ್ಲಿ ಈ ಕುರಿತು ತಿಳಿಸಲಾಗಿದೆ.

ತಾನು ಹೊಂದಿರುವ ಟೈಟಲ್ ಪ್ರಾಯೋಜಕತ್ವ ಹಕ್ಕುಗಳನ್ನು ಬೇರೆ ಕಂಪೆನಿಗೆ ವರ್ಗಾಯಸಬೇಕೆಂದು ಪೇಟಿಎಂ ಸಂಸ್ಥೆಯು ಬಿಸಿಸಿಐಗೆ ಈ ಹಿಂದೆ ಮನವಿ ಸಲ್ಲಿಸಿತ್ತು. ಹೀಗಾಗಿ ಈ ಹಸ್ತಾಂತರ ಪ್ರಕ್ರಿಯೆ ನಡೆದಿದೆ.

ಅಮೆರಿಕ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿ: ಕೊಕೊ ಗಫ್, ಆನ್ಸ್ ಜಬೇರ್ ಮುನ್ನಡೆ

ನಿಕ್ ಕಿರ್ಗಿಯೊಸ್‌ಗೆ ಮಣಿದ ಮೆಡ್ವೆಡೆವ್

ಕೊಕೊ ಗಫ್ ಆಟದ ರೀತಿ– ಎಎಫ್‌ಪಿ ಚಿತ್ರಗಳು

ನಿಕ್ ಕಿರ್ಗಿಯೊಸ್

ಇದೊಂದು ಅದ್ಭುತ ಪಂದ್ಯವಾಗಿತ್ತು. ಹಾಲಿ ಚಾಂಪಿಯನ್ ಆಗಿದ್ದ ಮೆಡ್ವೆಡೆವ್ ಮೇಲೆ ಬಹಳ ಒತ್ತಡ ಇತ್ತು. ಕಳೆದ ಕೆಲವು ತಿಂಗಳುಗಳಿಂದ ನಾನು ಉತ್ತಮವಾಗಿ ಆಡುತ್ತಿದ್ದೇನೆ.
ಕಿರ್ಗಿಯೊಸ್, ಆಸ್ಟ್ರೇಲಿಯಾ ಆಟಗಾರ

ನ್ಯೂಯಾರ್ಕ್ (ಎಎಫ್‌ಪಿ): ಹಾಲಿ ಚಾಂಪಿಯನ್ ಡೇನಿಯಲ್ ಮೆಡ್ವೆಡೆವ್ ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಆಘಾತ ಅನುಭವಿಸಿದ್ದಾರೆ. ಅಮೆರಿಕದ ಯುವ ಆಟಗಾರ್ತಿ ಕೊಕೊ ಗಫ್ ಮೊದಲ ಬಾರಿ ಕ್ವಾರ್ಟರ್‌ಫೈನಲ್ ತಲುಪಿದ ಶ್ರೇಯ ಗಳಿಸಿದರು.

ಅರ್ಥರ್ ಆ್ಯಶ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ನಾಲ್ಕನೇ ಸುತ್ತಿನ ಹಣಾಹಣಿಯಲ್ಲಿ ಆಸ್ಟ್ರೇಲಿಯಾದ ನಿಕ್ ಕಿರ್ಗಿಯೊಸ್ 7-6 (13/11), 3-6, 6-3, 6-2ರಿಂದ ರಷ್ಯಾ ಆಟಗಾರ, ವಿಶ್ವ ರ್‍ಯಾಂಕಿಂಗ್‌ನಲ್ಲಿ ಮೊದಲ ಸ್ಥಾನದಲ್ಲಿರುವ ಮೆಡ್ವೆಡೆವ್ ಅವರಿಗೆ ಸೋಲುಣಿಸಿ ಎಂಟರಘಟ್ಟಕ್ಕೆ ಲಗ್ಗೆಯಿಟ್ಟರು.

ಜುಲೈನಲ್ಲಿ ನಡೆದ ವಿಂಬಲ್ಡನ್ ಟೂರ್ನಿಯ ಫೈನಲ್‌ನಲ್ಲಿ ನಡಾಲ್ ಎದುರು ಎಡವಿದ್ದ ಕಿರ್ಗಿಯೊಸ್ ಇಲ್ಲಿ ದಿಟ್ಟ ಆಟದ ಮೂಲಕ ಗಮನಸೆಳೆದರು. ಶಾಟ್‌ಗಳ ಆಯ್ಕೆಯಲ್ಲಿ ಜಾಣತನ ತೋರಿದ ಅವರು, ಮೊದಲ ಸೆಟ್‌ನಲ್ಲಿ ಮೂರು ಸೆಟ್ ಪಾಯಿಂಟ್ಸ್ ಉಳಿಸಿಕೊಂಡರು. ಟೈಬ್ರೇಕ್‌ವರೆಗೆ ಸಾಗಿದ ಈ ಸೆಟ್‌ನಲ್ಲಿ ಒತ್ತಡವನ್ನು ಮೀರಿನಿಂತು ಗೆಲುವು ಕಂಡರು.

ಎರಡನೇ ಸೆಟ್‌ನಲ್ಲಿ ಮೆಡ್ವೆಡೆವ್ ತಿರುಗೇಟು ನೀಡಿದರೂ ನಿಕ್ ಛಲ ಕಳೆದುಕೊಳ್ಳಲಿಲ್ಲ. ಮೂರು ಮತ್ತು ನಾಲ್ಕನೇ ಸೆಟ್‌ನಲ್ಲಿ ಜಯ ಸಾಧಿಸುವ ಮೂಲಕ ಎರಡು ತಾಸು 53 ನಿಮಿಷಗಳಲ್ಲಿ ಪಂದ್ಯ ಗೆದ್ದ ಸಂತಸದಲ್ಲಿ ಅಲೆಯಲ್ಲಿ ತೇಲಿದರು.

ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕಿರ್ಗಿಯೊಸ್ ಅವರಿಗೆ ರಷ್ಯಾದ ಇನ್ನೋರ್ವ ಆಟಗಾರ ಕರೆನ್ ಕಚನೊವ್ ಸವಾಲು ಎದುರಾಗಿದೆ. ಪ್ರೀ-ಕ್ವಾರ್ಟರ್‌ನ ಮತ್ತೊಂದು ಸೆಣಸಾಟದಲ್ಲಿ ಕರೆನ್ 4-6, 6-3, 6-1, 4-6, 6-3ರಿಂದ ಸ್ಪೇನ್‌ನ ಪ್ಯಾಬ್ಲೊ ಕರೆನೊ ಬುಸ್ಟಾ ಸವಾಲು ಮೀರಿದರು. ಮೂರು ತಾಸು 21 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಉಭಯ ಆಟಗಾರರ ಮಧ್ಯೆ ತುರುಸಿನ ಪೈಪೋಟಿ ನಡೆಯಿತು.

ಪ್ರೀಕ್ವಾರ್ಟರ್‌ಫೈನಲ್‌ನ ಇನ್ನುಳಿದ ಪಂದ್ಯಗಳಲ್ಲಿ ಇಟಲಿಯ ಮ್ಯಾಟಿಯೊ ಬೆರೆಟಿನಿ 3-6, 7-6 (7/2), 6-3, 4-6, 6-2ರಿಂದ ಸ್ಪೇನ್‌ನ ಅಲೆಜಾಂಡ್ರೊ ಫೊಕಿನಾ ಎದುರು, ನಾರ್ವೆಯ ಕಾಸ್ಪರ್ ರೂಡ್ 6-1, 6-2, 6-7 (4/7), 6-2ರಿಂದ ಕೊರೆಂಟಿನ್ ಮೌಟೆಟ್ ಅವರನ್ನು ಪರಾಭವಗೊಳಿಸಿದರು.

ಮುಖ್ಯಾಂಶಗಳು
- ಇಟಲಿಯ ಮ್ಯಾಟಿಯೊ ಬೆರೆಟಿನಿ ಜಯಭೇರಿ
- ಕೊರೆಂಟಿನ್ ಸವಾಲು ಮೀರಿದ ಕಾಸ್ಪರ್ ರೂಡ್
- ಅಲಿಸನ್ ರಿಸ್ಕೆ ಪರಾಭವ

ಗಫ್ ಗೆಲುವಿನ ಓಟ: ಉದಯೋನ್ಮುಖ ಆಟಗಾರ್ತಿ ಕೊಕೊ ಗಫ್, ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ 7-5, 7-5ರಿಂದ ಚೀನಾದ ಜಾಂಗ್ ಶುವಾಯಿ ಅವರನ್ನು ಮಣಿಸಿದರು. 18 ವರ್ಷದ ಗಫ್, ಮುಂದಿನ ಪಂದ್ಯದಲ್ಲಿ ಫ್ರಾನ್ಸ್‌ನ ಕರೋಲಿನಾ ಗಾರ್ಸಿಯಾ ಅವರಿಗೆ ಮುಖಾಮುಖಿಯಾಗುವರು.

16ರ ಘಟ್ಟದ ಇನ್ನುಳಿದ ಪಂದ್ಯಗಳಲ್ಲಿ ಗಾರ್ಸಿಯಾ 6-4, 6-1ರಿಂದ ಅಮೆರಿಕದ ಅಲಿಸನ್ ರಿಸ್ಕೆ ಅಮೃತರಾಜ್ ಎದುರು, ಟ್ಯೂನಿಷಿಯಾದ ಆನ್ಸ್ ಜಬೇರ್ 7-6 (7/1), 6-4ರಿಂದ ವೆರೊನಿಕಾ ಕುದರ್ಮೆಟೊವಾ ವಿರುದ್ಧ, ಆಸ್ಟ್ರೇಲಿಯಾದ ಆಯ್ಲಾ ಟೊಮ್ಲಾನೊವಿಚ್ 7-6 (10/8), 6-1ರಿಂದ ಲ್ಯೂಡ್‌ಮಿಲಾ ಸಮ್ಸೊನೊವಾ ಎದುರು ಜಯ ಸಾಧಿಸಿದರು.

ತೇಶುಭ್ ದಿನೇಶ್ ಮತ್ತು ನೀತಿ ಅಗರವಾಲ್

ಟಿಟಿ: ತೇಶುಭ್, ನೀತಿಗೆ ಪ್ರಶಸ್ತಿ

ಬೆಂಗಳೂರು: ತೇಶುಭ್ ದಿನೇಶ್ ಮತ್ತು ನೀತಿ ಅಗರವಾಲ್ ಅವರು ಇಲ್ಲಿ ನಡೆಯುತ್ತಿರುವ ಎಂ.ಎಸ್.ರಾಮಯ್ಯ ಸ್ಮಾರಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 15 ವರ್ಷದೊಳಗಿನ ಬಾಲಕ ಹಾಗೂ ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆದರು.

ಬಾಲಕರ ವಿಭಾಗದ ಫೈನಲ್‌ನಲ್ಲಿ ಚೆಕ್‌ಮೇಟ್‌ನ ತೇಶುಭ್ 11-7, 11-5, 10-12, 11-3, 7-11, 12-10 ರಲ್ಲಿ ಕೆ.ಆಯುಷ್ ಅವರನ್ನು ಮಣಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ತೇಶುಭ್ 11-8, 14-12, 11-4, 11-9 ರಲ್ಲಿ ಅಥರ್ವ ನವರಂಗೆ ವಿರುದ್ಧ; ಆಯುಷ್ 11-6, 11-3, 11-4, 11-6 ರಲ್ಲಿ ಸಿದ್ಧಾಂತ್ ವಾಸನ್ ವಿರುದ್ಧ ಗೆದ್ದಿದ್ದರು.

ಬಾಲಕಿಯರ ಫೈನಲ್‌ನಲ್ಲಿ ಚೆಕ್‌ಮೇಟ್‌ನ ನೀತಿ 11-3, 13-11, 10-12, 9-11, 9-11, 11-8, 12-10 ರಲ್ಲಿ ಪ್ರಣವಿ ಎದುರು ಗೆದ್ದರು.

ಸೆಮಿಫೈನಲ್‌ನಲ್ಲಿ ಪ್ರಣವಿ 9-11, 8-11, 13-11, 11-7, 11-9, 11-7 ಸಾನ್ವಿ ವಿರುದ್ಧ; ನೀತಿ 11-3, 13-11, 11-4, 6-11, 14-12 ರಲ್ಲಿ ಆಯುಷಿ ಗೋಡ್ಸೆ ಎದುರು ಜಯಿಸಿದ್ದರು.

ಕಂಠೀರವ ಒಳಾಂಗಣ ಕ್ರೀಡಾಂಗಣಕ್ಕೆ ನುಗ್ಗಿದ ಮಳೆನೀರು

ಬ್ಯಾಸ್ಕೆಟ್‌ಬಾಲ್ ಪಂದ್ಯಗಳು ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಕ್ರೀಡಾಂಗಣದ ಸಿಬ್ಬಂದಿ ನೆಲಹಾಸು ಸ್ವಚ್ಛಗೊಳಿಸಿದರು(ಎಡ) ಕೊಠಡಿಗೆ ನುಗ್ಗಿದ್ದ ನೀರನ್ನು ಹೊರಹಾಕಲಾಯಿತು– ಪ್ರಜಾವಾಣಿ ಚಿತ್ರಗಳು / ಬಿ.ಎಚ್. ಶಿವಕುಮಾರ್

ಬೆಂಗಳೂರು: ಫಿಬಾ 18 ವರ್ಷದೊಳಗಿನ ಮಹಿಳಾ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯಗಳು ನಡೆಯಬೇಕಿದ್ದ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಸೋಮವಾರ ಮಳೆನೀರಿನದ್ದೇ ಆಟ.

ಭಾನುವಾರ ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ಕ್ರೀಡಾಂಗಣಕ್ಕೆ ನೀರು ನುಗ್ಗಿದ್ದು, ಮೊದಲ ದಿನ ನಡೆಯಬೇಕಿದ್ದ 4 ಪಂದ್ಯಗಳನ್ನು ರದ್ದುಗೊಳಿಸಲಾಯಿತು.

ಕ್ರೀಡಾಂಗಣದ ಪಕ್ಕದಲ್ಲಿರುವ ಚರಂಡಿ ತುಂಬಿ ಹರಿದು, ನೀರು ಒಳಭಾಗಕ್ಕೆ ಬಂದಿದೆ. ಮರದ ನೆಲಹಾಸಿನ ಮೇಲೆ ಸುಮಾರು ಮೂರು ಅಡಿಯಷ್ಟು ನೀರು ನಿಂತಿತ್ತು. ಡ್ರೆಸಿಂಗ್ ಕೊಠಡಿ ಒಳಗೊಂಡಂತೆ, ನೆಲಮಹಡಿಯಲ್ಲಿರುವ ಎಲ್ಲ ಕೊಠಡಿಗಳೂ ನೀರಿನಿಂದ ಆವೃತವಾಗಿದ್ದವು.

ಸೋಮವಾರ ಬೆಳಿಗ್ಗೆಯಿಂದಲೇ ನೀರು ಹೊರಹಾಕುವ ಕೆಲಸ ನಡೆಯಿತು. ಕ್ರೀಡಾಂಗಣದ ಸಿಬ್ಬಂದಿಯ ಜತೆ ಡಿವೈಇಎಸ್ ಹಾಸ್ಟೆಲ್‌ನ ಕ್ರೀಡಾಪಟುಗಳೂ ಈ ಕೆಲಸ ದಲ್ಲಿ ಕೈಜೋಡಿಸಿದರು.

ಭಾರತ– ಆಸ್ಟ್ರೇಲಿಯಾ ಪಂದ್ಯ ಸೇರಿದಂತೆ ಮೊದಲ ದಿನ 'ಎ' ಡಿವಿಷನ್‌ನ 4 ಪಂದ್ಯಗಳು ನಡೆಯಬೇಕಿತ್ತು. ಈ ಪಂದ್ಯಗಳನ್ನು ಮಂಗಳವಾರಕ್ಕೆ ಮುಂದೂಡಲಾಗಿದೆ. ಸೆ.8ರ ವಿಶ್ರಾಂತಿ ದಿನವನ್ನು ರದ್ದುಪಡಿಸಿ, ಆ ದಿನವೂ ಪಂದ್ಯ ನಡೆಸಲು ನಿರ್ಧರಿಸಲಾಗಿದೆ.

'ಕ್ರೀಡಾಂಗಣದೊಳಗೆ ಸೇರಿದ್ದ ಎಲ್ಲ ನೀರನ್ನೂ ಹೊರಹಾಕಲಾಗಿದೆ. ಮರದ ನೆಲಹಾಸು ಹಾಗೂ ಕೊಠಡಿಗಳನ್ನು ಸ್ವಚ್ಛಗೊಳಿಸಲಾಗಿದೆ. ಫಿಬಾ ಅಧಿಕಾರಿಗಳು ಪರಿಶೀಲನೆ ನಡೆ ಸಿದ್ದು, ಮಂಗಳವಾರದಿಂದ ಆಟ ಮುಂದುವರಿಸುವಂತೆ ಸೂಚಿಸಿದ್ದಾರೆ' ಎಂದು ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಕೆ.ಗೋವಿಂದರಾಜ್ ತಿಳಿಸಿದರು.

ಜನರೇಟರ್ ಕೊಠಡಿಗೆ ನೀರು: ಇದೇ ಚಾಂಪಿಯನ್‌ಷಿಪ್‌ನ 'ಬಿ' ಡಿವಿಷನ್‌ನ ಪಂದ್ಯಗಳಿಗೆ ವೇದಿಕೆಯೊದಗಿಸಿರುವ ಕೋರಮಂಗಲ ಒಳಾಂಗಣ ಕ್ರೀಡಾಂಗಣದ ಜನರೇಟರ್ ಕೊಠಡಿಗೆ ಮಳೆ ನೀರು ನುಗ್ಗಿದೆ. ಇದರಿಂದ ಇಲ್ಲಿನ ಪಂದ್ಯಗಳು ತಡವಾಗಿ ಆರಂಭವಾದವು.

ಫಿಲಿಪ್ಪೀನ್ಸ್‌ಗೆ ಗೆಲುವು

ಕೋರಮಂಗಲ ಕ್ರೀಡಾಂಗಣದಲ್ಲಿ ನಡೆದ 'ಬಿ' ಡಿವಿಷನ್‌ನ ಪಂದ್ಯದಲ್ಲಿ ಫಿಲಿಪ್ಪೀನ್ಸ್ 65–50 ರಲ್ಲಿ ಥಾಯ್ಲೆಂಡ್ ತಂಡವನ್ನು ಮಣಿಸಿತು. 22 ಪಾಯಿಂಟ್ಸ್ ಗಳಿಸಿದ ಕೇಟ್ ಕಾಲಿನ್ ಅವರು ಫಿಲಿಪ್ಪೀನ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಎರಡನೇ ಪಂದ್ಯದಲ್ಲಿ ಜೋರ್ಡಾನ್ ತಂಡ 40–36 ರಲ್ಲಿ ಮಲೇಷ್ಯಾ ಎದುರು ಗೆದ್ದಿತು. ವಿಜಯಿ ತಂಡದ ಫಿಯೊನಾ ಡಾಸನ್ 12 ಪಾಯಿಂಟ್ಸ್ ಸಂಗ್ರಹಿಸಿದರು.

ಟಿಟಿ: ದಿಗ್ಗಜ ಆಟಗಾರ್ತಿ ಉಷಾ ಸುಂದರ್‌ರಾಜ್ ನಿಧನ

ಉಷಾ

ಬೆಂಗಳೂರು: ಕರ್ನಾಟಕದ ಟೇಬಲ್ ಟೆನಿಸ್‌ನ ದಿಗ್ಗಜ ಆಟಗಾರ್ತಿ ಎನಿಸಿಕೊಂಡಿದ್ದ ಉಷಾ ಸುಂದರ್‌ರಾಜ್ (80) ಸೋಮವಾರ ವಯೋಸಹಜ ಅನಾರೋಗ್ಯದ ಕಾರಣ ನಿಧನರಾದರು. ಅವಿವಾಹಿತರಾಗಿದ್ದ ಅವರು ಸಹೋದರಿಯರ ಜತೆ ವಾಸವಿದ್ದರು.

ಮಹಿಳಾ ವಿಭಾಗದಲ್ಲಿ ರಾಷ್ಟ್ರೀಯ ಚಾಂಪಿಯನ್ ಆದ ಕರ್ನಾಟಕದ ಮೊದಲ ಆಟಗಾರ್ತಿ ಎನಿಸಿಕೊಂಡಿದ್ದರು. ಅವರು ಒಟ್ಟು ಐದು ಬಾರಿ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ಕರ್ನಾಟಕದ ಬೇರೆ ಯಾರೂ ಈ ಸಾಧನೆ ಮಾಡಿಲ್ಲ.

1966 ರಲ್ಲಿ ಅವರಿಗೆ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. 1968 ರಲ್ಲಿ ಕೊನೆಯದಾಗಿ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಆಡಿದ್ದರು.

ಉಷಾ ಸುಂದರ್‌ರಾಜ್ ಅವರು ಕೊನೆಯ ಬಾರಿ ರಾಷ್ಟ್ರೀಯ ಚಾಂಪಿಯನ್ ಆದ ಬಳಿಕ ಸುಮಾರು 50 ವರ್ಷಗಳ ಕಾಲ ಕರ್ನಾಟಕ ಪ್ರಶಸ್ತಿ ಬರ ಎದುರಿಸಿತ್ತು. 2019ರಲ್ಲಿ ಅರ್ಚನಾ ಕಾಮತ್ ಅವರು ಗೆದ್ದು ಬರ ನೀಗಿಸಿದ್ದರು.

ಉಷಾ, ಮಲ್ಲೇಶ್ವರಂ ಸಂಸ್ಥೆಯ ಅಂಗಣದಿಂದ ಕ್ರೀಡಾ ಪಯಣ ಆರಂಭಿಸಿದ್ದರು. ಆ ಸಂದರ್ಭದಲ್ಲಿ ಮಹಿಳಾ ಆಟಗಾರ್ತಿಯರು ಇಲ್ಲದ ಕಾರಣ ಹಲವು ವರ್ಷಗಳ ಅವಧಿಗೆ ಪುರುಷ ಆಟಗಾರರೊಂದಿಗೆ ಅಭ್ಯಾಸ ನಡೆಸುತ್ತಿದ್ದರು. ಅವರ ಆಟದಲ್ಲಿ ಹೆಚ್ಚು ರಕ್ಷಣಾತ್ಮಕ ಕೌಶಲಗಳ ಬಳಕೆಯಿತ್ತು.

ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ಉದ್ಯೋಗದಲ್ಲಿದ್ದ ಅವರು ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಆಗಿ ನಿವೃತ್ತಿಯಾಗಿದ್ದರು.

ಟೆನ್‌ಪಿನ್ ಬೌಲಿಂಗ್: ಶಬ್ಬೀರ್ ಮುನ್ನಡೆ

ಬೆಂಗಳೂರು: ತಮಿಳುನಾಡಿನ ಶಬ್ಬೀರ್ ಧನ್‌ಕೋಟ್ ಅವರು ಇಲ್ಲಿನ ಅಮೀಬಾದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಟೆನ್‌ಪಿನ್ ಬೌಲಿಂಗ್ ಚಾಂಪಿಯನ್‌ಷಿಪ್‌ನ ಮೊದಲ ಸುತ್ತಿನ ಮೊದಲ ಮೂರು ಸ್ಕ್ವಾಡ್‌ಗಳಲ್ಲಿ ಅಗ್ರಸ್ಥಾನ ಗಳಿಸಿದರು.

ಮಂಗಳವಾರ ಶಬ್ಬೀರ್ ಅವರು ದಿನದ ಆರು ಗೇಮ್‌ಗಳಲ್ಲಿ ಒಟ್ಟು 1260 ಪಿನ್‌ಪಾಲ್ ಗಳಿಸಿದರು.

ಹಾಲಿ ಚಾಂಪಿಯನ್ ಕರ್ನಾಟಕದ ಆಕಾಶ್ ಅಶೋಕ್ ಕುಮಾರ್ ಎರಡನೇ ಸ್ಥಾನದಲ್ಲಿದ್ದರು.

ಲೈಂಗಿಕ ಸಮಸ್ಯೆ

ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ. ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ. ದಾಂಪತ್ಯ ಜೀವನದ ಅಸಲಿ ಆನಂದ ಪಡೆಯಿರಿ.

ನಿಮ್ಮ ಸಮಸ್ಯೆಗೆ ಸತ್ಯ ಹಾಗೂ ಆಯುರ್ವೇದಿಕ ಔಷಧಿ ಪಡೆಯಿರಿ ಮತ್ತು ಆನಂದಮಯ ಜೀವನ ನಿಮ್ಮದಾಗಿಸಿಕೊಳ್ಳಿ.

8006973372
7506062785